₹ 6 @vishwavaninews epaper.vishwavani.news vishwavani.news
ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ
ಗುರುವಾರ 18.07.2024 ಸಂಪುಟ: 09 ಸಂಚಿಕೆ: 204 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಜಲ ವಯ್ಯಾರ

ಕಾವೇರಿ ನದಿಯಲ್ಲಿ 30 ಸಾ.ಕ್ಯೂಸೆಕ್‌ಗೂ ಹೆಚ್ಚು ನೀರು ಹರಿದು ಹೋಗುತ್ತಿದ್ದು ತಮಿಳುನಾಡು-ಕರ್ನಾಟಕ ಗಡಿ ಭಾಗದ ಹೊಗೇನಕಲ್ ಜಲಪಾತ ಮೈದುಂಬಿ ಧುಮ್ಮಿಕ್ಕುತ್ತಿದ್ದು, ಕಲ್ಲು-ಬಂಡೆಗಳ ನಡುವೆ ಜಲ ವಯ್ಯಾರ ನೋಡುಗರ ಮನಸೂರೆಗೊಳ್ಳುತ್ತಿದೆ.

ಪುಟ ತೆರೆದಂತೆ...

ಹಲವು ಭಾವ ವಿವರಿಸಲು ಪದಗಳ ಅಭಾವ
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
ಸಂ.ಪುಟ | 6



ಮಿಥ್ಯಗಳ ಅಬ್ಬರದಲ್ಲಿ ಮಂಕಾಗುತ್ತಿರುವ ತಥ್ಯಗಳು
ಪ್ರಚಲಿತ
ಗಣೇಶ್ ಭಟ್ ವಾರಣಾಸಿ
ಸಂ.ಗಮ | 7

ಮಾತಂದ್ರೆ ಮಾತು

ನಾನು ರಾಷ್ಟ್ರೀಯವಾದಿ ಮುಸ್ಲಿಮರ ಪರವಾಗಿಯೂ ಮಾತನಾಡುತ್ತಿದ್ದೇನೆ. ನಾವೆಲ್ಲರೂ ಸಬ್ ಕಾ ಸಾಥ್-ಸಬ್ ಕಾ ವಿಕಾಸ್ ಎನ್ನುತ್ತೇವೆ. ಆದರೆ ಇನ್ನು ಮುಂದೆ ನಾನು ಅದನ್ನು ಹೇಳುವುದಿಲ್ಲ. ನಮ್ಮೊಂದಿಗೆ ಇರುವವರೊಂದಿಗೆ ನಾವು ಇರುತ್ತೇವೆ. ಅಲ್ಪಸಂಖ್ಯಾತ ಮೋರ್ಚಾದ ಅಗತ್ಯವೂ ಇಲ್ಲ.

- ಸುವೇಂದು ಅಧಿಕಾರಿ
ಬಿಜೆಪಿ ಹಿರಿಯ ನಾಯಕ

ದಾರಿದೀಪೋಕ್ತಿ

ನಿಮ್ಮ ಜತೆ ಅತ್ಯಂತ ಬುದ್ಧಿವಂತರು, ಮಹಾಮೇಧಾವಿಗಳು, ವಿಷಯ ಪರಿಣತರು, ಉತ್ತಮ ವ್ಯಕ್ತಿಗಳೇ ಇರಬೇಕು ಎಂದು ಭಾವಿಸಬೇಕಿಲ್ಲ. ಸರಿಯಾದವರು, ಯೋಗ್ಯರಾದವರು, ವಿಶ್ವಾಸಿಗರು ಇದ್ದರೆ ಸಾಕು. ಅಂಥವರನ್ನು ಹುಡುಕಿ ಇಟ್ಟುಕೊಳ್ಳುವುದು ಸುಲಭವಲ್ಲ.

ವಕ್ರತುಂಡೋಕ್ತಿ

ಗಡ್ಡ-ಮೀಸೆ ತೆಗೆದರೆ ಗಂಡಸರು ಹತ್ತು ವರ್ಷ ಹಿಂದಕ್ಕೆ ಹೋಗ್ತಾರೆ. ಮೇಕಪ್ ತೆಗೆದರೆ ಹೆಂಗಸರು ಹತ್ತು ವರ್ಷ ಮುಂದಕ್ಕೆ ಹೋಗ್ತಾರೆ.

ಶಿರೂರಿನಲ್ಲಿ ಮುಂದುವರಿದ ರಕ್ಷಣಾ ಕಾರ್ಯಾಚರಣೆ, ಮಣ್ಣಿನಡಿ ಇನ್ನಷ್ಟು ಜನ ಸಿಲುಕಿರುವ ಭೀತಿ | ಶಿರಾಡಿ ಹೆದ್ದಾರಿಯಲ್ಲೂ ಕುಸಿತ
ಕರಾವಳಿಯಲ್ಲಿ ಮುಂದುವರಿದ ಮಳೆ, ರೆಡ್ ಅಲರ್ಟ್ ಘೋಷಣೆ

ನಿಲ್ಲದ ಮಳೆ ಆರ್ಭಟ

ಬೆಂಗಳೂರು: ರಾಜ್ಯದ ಕರಾವಳಿ ಮತ್ತು ಕರಾವಳಿ ಭಾಗದಲ್ಲಿ ವರುಣಾರ್ಭಟ ಮುಂದುವರಿದಿದೆ. ಹಲವೆಡೆ ನದಿಗಳು ಉಕ್ಕಿ ಹರಿಯುತ್ತಿದ್ದು ಗ್ರಾಮಗಳು ಜಲಾವೃತಗೊಂಡಿವೆ. ಉತ್ತರ ಕನ್ನಡ, ಉಡುಪಿ, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ನಿರಂತರ ಮಳೆಯಿಂದ ಜನಜೀವನ ಅಸ್ತವ್ಯಸ್ತಗೊಂಡಿದೆ. ಮಳೆ ನೀರಿನ ರಭಸಕ್ಕೆ ಹಲವೆಡೆ ಸೇತುವೆಗಳು ಮುಳುಗಡೆಯಾಗಿವೆ. ಸಕಲೇಶಪುರ ಬಳಿ ಶಿರಾಡಿ ಘಾಟ್ ರಸ್ತೆಯಲ್ಲಿ ಗುಡ್ಡ ಕುಸಿದ ಕಾರಣ ರಾಷ್ಟ್ರೀಯ ಹೆದ್ದಾರಿ ಹಲವು ಗಂಟೆಗಳ ಕಾಲ ಬಂದ್ ಆಗಿತ್ತು. ಮಡಿಕೇರಿ-ಬಂಟ್ವಾಳ ಹೆದ್ದಾರಿ ಮತ್ತು ಆಗುಂಬೆ ಘಾಟ್ ರಸ್ತೆಯಲ್ಲೂ ರಸ್ತೆ ಬಿರುಕು ಬಿಟ್ಟ ವರದಿಗಳು ಬಂದಿವೆ.

ಇದೇ ವೇಳೆ ಮಂಗಳೂರು- ಗೋವಾ ಹೆದ್ದಾರಿಯ ಅಂಕೋಲಾದ ಶಿರೂರು ಬಳಿ ಗುಡ್ಡ ಕುಸಿದು 10 ಜನರನ್ನು ಬಲಿ ತೆಗೆದುಕೊಂಡ ಪ್ರದೇಶದಲ್ಲಿ ಮಣ್ಣಿನ ತೆರವು ಕಾರ್ಯಾಚರಣೆ ಮುಂದುವರಿದಿದೆ. ಘಟನೆ ಬಳಿಕ ನಾಪತ್ತೆಯಾಗಿರುವ ಕಾರಿನಲ್ಲಿದ್ದ ಕುಟುಂಬ ಮತ್ತು ಲಾರಿ ಚಾಲಕರೊಬ್ಬರ ಮೊಬೈಲ್ ಲೊಕೇಶನ್ ಇದೇ ಜಾಗದಲ್ಲಿ ಪತ್ತೆಯಾಗಿದ್ದು, ಇನ್ನಷ್ಟು ಮಂದಿ ಮಣ್ಣಿನಡಿ ಸಿಲುಕಿದ್ದಾರೆಂದು ಶಂಕಿಸಲಾಗಿದೆ. ಮಂಗಳವಾರ ಒಂದೇ ಕುಟುಂಬದ ನಾಲ್ವರು ಸೇರಿ ಆರು ಜನರ ಶವ ಪತ್ತೆಯಾಗಿತ್ತು. ನಿರಂತರ ಮಳೆಯಿಂದ ಗುಡ್ಡ ಇನ್ನಷ್ಟು ಕುಸಿಯುವ ಆತಂಕವಿದ್ದು ತ್ವರಿತ ಕಾರ್ಯಾಚರಣೆಗೆ ಅಡ್ಡಿಯಾಗಿದೆ. ಇನ್ನೊಂದೆಡೆ ಗಂಗಾವಳಿ ನದಿಯಲ್ಲಿ ಬಿದ್ದಿರುವ ಗ್ಯಾಸ್ ಟ್ಯಾಂಕರ್ ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿಸಿದೆ. ಟ್ಯಾಂಕರ್‌ನಿಂದ ಅನಿಲ ಸೋರಿಕೆಯಾಗದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ. ಆದರೆ ಮಳೆ ನೀರಿನ ರಭಸಕ್ಕೆ ಟ್ಯಾಂಕರ್ ಕೊಚ್ಚಿ ಹೋಗಿ ಬಂಡೆಗೆ ಅಪ್ಪಳಿಸುವ ಆತಂಕ ಎದುರಾಗಿದೆ.

ಈ ಹೆದ್ದಾರಿಯಲ್ಲಿ ಸಾಗುವ ವಾಹನಗಳಿಗೆ ಬದಲಿ ಮಾರ್ಗದಲ್ಲಿ ಕಲ್ಪಿಸಲಾಗಿದೆ. ಸಾರ್ವಜನಿಕರ ಓಡಾಟಕ್ಕೆ ನಿಷೇಧ ಹೇರಲಾಗಿದೆ. → 4

- ಸಕಲೇಶಪುರ ತಾಲೂಕಿನ ದೊಡ್ಡತಪ್ಪಲು ಬಳಿ ಗುಡ್ಡ ಕುಸಿತ. ಒಂದುಗಂಟೆಗೂ ಹೆಚ್ಚು ಹೆದ್ದಾರಿ ಸ್ಥಗಿತ
- ಚಿಕ್ಕಮಗಳೂರಿನಲ್ಲಿ ಭಾರಿ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಶೃಂಗೇರಿಯಲ್ಲಿ ನೆರೆ ಪರಿಸ್ಥಿತಿ ಸೃಷ್ಟಿ
- ಶೃಂಗೇರಿ ತಾಲೂಕಿನ ಕೆರೆ ಗ್ರಾಮ ಪಂಚಾಯತಿಯ ನೆಮ್ಮಾರು ಗ್ರಾಮದ ತೂಗು ಸೇತುವೆ ಕುಸಿತ
- ಕಳಸ ತಾಲೂಕಿನ ಹೆಬ್ಬಾಳೆ ಸೇತುವೆ ಮುಳುಗಡೆಯಿಂದಾಗಿ ಹೊರನಾಡು-ಕಳಸ ಸಂಪರ್ಕ ಕಡಿತ
- ನದಿ, ಸಮುದ್ರ ತೀರದ ಜನಕ್ಕೆ ಉಡುಪಿ ಜಿಲ್ಲಾಡಳಿತ ಕಟ್ಟೆಚ್ಚರ, ಎರಡು ದಿನ ಮೀನುಗಾರಿಕೆ ನಿಷೇಧ
- ತುಂಗಾ ನದಿಯಿಂದ 75 ಸಾವಿರ ಕ್ಯುಸೆಕ್‌ಗೂ ಹೆಚ್ಚು ನೀರು ಹರಿವು; ಹೊನ್ನಾಳಿ, ಹರಿಹರ ಮುಳುಗಡೆ
- ಕಬಿನಿಯಿಂದ 36 ಸಾವಿರ ಕ್ಯುಸೆಕ್ ಹೊರಕ್ಕೆ; ನಂಜನ ಗೂಡಿನ ಪರಶುರಾಮ ದೇವಸ್ಥಾನ ಮುಳುಗಡೆ

6 ಜಿಲ್ಲೆಗಳಿಗೆ ರೆಡ್ ಅಲರ್ಟ್

ರಾಜ್ಯದ ವಿವಿಧೆಡೆ ಗುರುವಾರವೂ ಭಾರಿ ಮಳೆ ಮುಂದುವರಿಯುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು ಆರು ಜಿಲ್ಲೆಗಳಿಗೆ ರೆಡ್ ಅಲರ್ಟ್ ಘೋಷಿಸಿದೆ. ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಕೊಡಗು, ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗೆ ರೆಡ್ ಅಲರ್ಟ್ ನೀಡಲಾಗಿದೆ. ಬೆಳಗಾವಿ ಹಾಗೂ ಹಾಸನ ಜಿಲ್ಲೆಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಕನ್ನಡಿಗರಿಗೆ ಉದ್ಯೋಗ ಮೀಸಲು ವಿಧೇಯಕ ಮಂಡಿಸಲು ಸಜ್ಜಾಗಿದ್ದ ರಾಜ್ಯ ಸರಕಾರ | ಉದ್ಯಮಿಗಳ ವಿರೋಧ, ಪರಾಮರ್ಶೆಗೆ ನಿರ್ಧಾರ

ಖಾಸಗಿ ಉದ್ಯೋಗ ಮೀಸಲು ವಿಧೇಯಕಕ್ಕೆ ತಾತ್ಕಾಲಿಕ ತಡೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕರ್ನಾಟಕದಲ್ಲಿರುವ ಖಾಸಗಿ ವಲಯದಲ್ಲಿಯೂ ಕನ್ನಡಿಗರಿಗೆ ಉದ್ಯೋಗ ಮೀಸಲು ನೀಡಬೇಕು ಎನ್ನುವ ವಿಧೇಯಕ ತರಲು ಸರಕಾರ ಸಜ್ಜಾಗಿದ್ದ ಸರಕಾರಕ್ಕೆ ಕನ್ನಡ ಸಂಘ- ಸಂಸ್ಥೆಗಳು, ಸಾರ್ವಜನಿಕರು ಪ್ರಶಂಸೆ ವ್ಯಕ್ತಪಡಿಸುತ್ತಿದ್ದರು. ಆದರೆ ಕೈಗಾರಿಕೋದ್ಯಮಿಗಳು ವು ಕೈಗಾರಿಕೋದ್ಯಮಿಗಳು ವಿರೋಧ ವ್ಯಕ್ತಪಡಿಸಿದ್ದರಿಂದ ವಿಧೇಯಕಕ್ಕೆ ತಾತ್ಕಾಲಿಕ ತಡೆ ನೀಡಿದೆ.

ಕಾರ್ಮಿಕ ಇಲಾಖೆಯಿಂದ ಮಂಡನೆಯಾಗಬೇಕಿದ್ದ ಈ ವಿಧೇಯಕಕ್ಕೆ ಕಳೆದ ಸೋಮವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿತ್ತು. ಆದರೆ ಈ ವಿಧೇಯಕಕ್ಕೆ ಕೈಗಾರಿಕಾ ವಲಯದಲ್ಲಿ ಭಾರಿ ವಿರೋಧ ವ್ಯಕ್ತವಾಗಿದ್ದರಿಂದ ಸದ್ಯಕ್ಕೆ ಈ ವಿಧೇಯಕವನ್ನು ಮಂಡಿಸದೇ, ಖಾಸಗಿ ಸಂಸ್ಥೆಗಳು, ಕೈಗಾರಿಕೋದ್ಯಮಿಗಳು ಹಾಗೂ ಕ್ಷೇತ್ರದ ಪ್ರಮುಖರೊಂದಿಗೆ ಚರ್ಚಿಸಿ, ವಿಧೇಯಕದ ಉದ್ದೇಶವನ್ನು ತಿಳಿಸಿ ಬಳಿಕ ಮಂಡಿಸಲು ರಾಜ್ಯ ಸರಕಾರ ತೀರ್ಮಾನಿಸಿದೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಚೇರಿಯಿಂದ ಅಧಿಕೃತ ಪ್ರಕಟಣೆ ಹೊರಬಿದ್ದಿದೆ.

ಈ ರೀತಿ ಖಾಸಗಿ ವಲಯದಲ್ಲಿ ಮೀಸಲು ನೀಡಲು ಶುರುವಾದರೆ, ಕಂಪನಿಗಳ ಪ್ರೊಡಕ್ಟಿವಿಟಿ, ಬೆಳವಣಿಗೆಗೆ ಹೊಡೆತ ಬೀಳಲಿದೆ. ಕಂಪನಿಗಳು ನಿರೀಕ್ಷಿಸುವ ಕೌಶಲ್ಯವಿರುವವರು ಸಿಕ್ಕರೆ ಪರವಾಗಿಲ್ಲ, ಸಿಗದಿದ್ದರೆ, ತರಬೇತಿ ಕೊಟ್ಟು ಅವರನ್ನು ಸಿದ್ಧಪಡಿಸಬೇಕಾಗುತ್ತದೆ. ಇದು ಖಾಸಗಿ ಸಂಸ್ಥೆಗಳಿಗೆ ಹೆಚ್ಚುವರಿ ಹೊರೆಯಾಗುತ್ತದೆ ಎಂದು ಕೈಗಾರಿಕೋದ್ಯಮಿಗಳು ವಿರೋಧ ವ್ಯಕ್ತಪಡಿಸಿದ್ದರು.

- ಖಾಸಗಿ ಕ್ಷೇತ್ರಗಳಲ್ಲಿ ದುಡಿಯುವ ಕನ್ನಡಿಗರಿಗೆ ಉದ್ಯೋಗ ಮೀಸಲು ನೀಡುವ ವಿಧೇಯಕಕ್ಕೆ ಸೋಮವಾರ ಒಪ್ಪಿಗೆ ಕೊಟ್ಟಿದ್ದ ಸಚಿವ ಸಂಪುಟ
- ಇದೇ ಅಧಿವೇಶನದಲ್ಲಿ ವಿಧೇಯಕವನ್ನು ಮಂಡಿಸಿ ಅಂಗೀಕಾರ ಪಡೆಯುವುದಾಗಿ ಕಾರ್ಮಿಕ ಸಚಿವರಾದ ಸಂತೋಷ್ ಲಾಡ್ ತಿಳಿಸಿದ್ದರು
- ಕೈಗಾರಿಕೋದ್ಯಮಿಗಳಿಂದ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಪರಾಮರ್ಶಿಸಿ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದ ಸಿಎಂ ಸಿದ್ದರಾಮಯ್ಯ

ವಿವಾದಕ್ಕೆ ಕಾರಣವೇನು?

ಈ ರೀತಿ ಒಂದು ರಾಜ್ಯದಲ್ಲಿ ಶುರುವಾಗಿ, ಮುಂದಿನ ದಿನದಲ್ಲಿ ಎಲ್ಲ ರಾಜ್ಯಗಳಲ್ಲಿ ಮೀಸಲಿಗೆ ಆಗ್ರಹಿಸಿದರೆ ಉದ್ಯಮ ನಡೆಸುವುದು ಕಷ್ಟವಾಗುತ್ತದೆ. ಇದರೊಂದಿಗೆ ಕೌಶಲವಿಲ್ಲದ ಅಭ್ಯರ್ಥಿ ಗಳು ಖಾಸಗಿ ವಲಯಕ್ಕೆ ಬಂದರೆ, ಅವರಿಗೆ ತರಬೇತಿ ನೀಡುವುದು ಕಂಪನಿಗಳಿಗೆ ಹೊರೆಯಾಗಲಿದೆ. ಈ ರೀತಿ ಕಠಿಣ ನಿಯಮ ವಿಧಿಸಲು ಶುರುಮಾಡಿದರೆ, ಕರ್ನಾಟಕದಿಂದಲೇ ಹಲವು ಕಂಪನಿಗಳು ಹೊರನಡೆಯುವ ಸಾಧ್ಯತೆಯಿದೆ ಎಂದು ಕೈಗಾರಿಕೋದ್ಯಮಿಗಳು ಎಚ್ಚರಿಸಿದ್ದಾರೆ. ಆದ್ದರಿಂದ ಸರಕಾರವು ವಿಧೇಯಕವನ್ನು ಪರಾಮರ್ಶಿಸಲು ನಿರ್ಧರಿಸಿದೆ.

ಚರ್ಚಿಸಿದ ಬಳಿಕ ತೀರ್ಮಾನ: ಸಿಎಂ

ಕನ್ನಡಿಗರಿಗೆ ಖಾಸಗಿ ವಲಯದ ಸಂಸ್ಥೆಗಳು, ಕೈಗಾರಿಕೆಗಳು ಹಾಗೂ ಉದ್ದಿಮೆಗಳಲ್ಲಿ ಮೀಸಲಾತಿ ಕಲ್ಪಿಸುವ ಸಂಬಂಧ ಸಂಪುಟ ಅನುಮೋದನೆ ನೀಡಲಾಗಿದ್ದ ವಿಧೇಯಕವನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ. ಮುಂದಿನ ಸಂಪುಟ ಸಭೆಯಲ್ಲಿ ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಪಷ್ಟಪಡಿಸಿದ್ದಾರೆ.



ಖಾಸಗಿ ಕಂಪನಿಗಳು ಭಾಷೆ, ಜಾತಿ, ಲಿಂಗವನ್ನು ನೋಡಿ ಕೆಲಸ ಕೊಡುವುದಿಲ್ಲ. ಅರ್ಹತೆ ನೋಡಿ ಉದ್ಯೋಗ ಕೊಡುತ್ತಿವೆ. ಒಂದು ವೇಳೆ ಪೂರ್ತಿ ಕನ್ನಡಿಗರಿಗೆ ಮೀಸಲು ಕಲ್ಪಿಸುವುದಿದ್ದರೆ, ಅದಕ್ಕೆ ತಕ್ಕಂತೆ ತರಬೇತಿ ಕೊಡಿ, ಉನ್ನತ ಶಿಕ್ಷಣಕ್ಕೆ ಹಣ ಖರ್ಚು ಮಾಡಿ. ಮೂಲ ಸೌಕರ್ಯಗಳ ಅಭಿವೃದ್ಧಿಗೆ ಖರ್ಚು ಮಾಡಿ. ಈ ರೀತಿ ಕನ್ನಡಿಗರಿಗೆ ಮೀಸಲು ಎಂದರೆ ಇನ್ನೂ ಹೆಚ್ಚಿನ ಸೌಕರ್ಯವಿರುವ ಹೈದರಾಬಾದ್ ಹಾಗೂ ತಮಿಳುನಾಡಿಗೆ ಕಂಪನಿಗಳು ಹೋಗುತ್ತವೆ.

- ಮೋಹನ್‌ದಾಸ್ ಪೈ ಕೈಗಾರಿಕೋದ್ಯಮಿ

ಬಿ. ನಾಗೇಂದ್ರ ಪತ್ನಿ ವಿಚಾರಣೆ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮ ಹಗರಣಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಬಿ.ನಾಗೇಂದ್ರ ಅವರ ಪತ್ನಿ ಮಂಜುಳಾ ಅವರನ್ನು ಇಡಿ ಅಧಿಕಾರಿಗಳು ಬುಧವಾರ ವಿಚಾರಣೆ ಕರೆದುಕೊಂಡು ಹೋಗಿ, ವಿಚಾರಣೆ ಬಳಿಕ ವಾಪಸ್ ಮನೆಗೆ ತಂದು ಬಿಟ್ಟಿದ್ದಾರೆ. ಮಂಜುಳಾ ಅವರ ಹೆಸರಲ್ಲಿ ಹಣದ ವಹಿವಾಟು ನಡೆದಿರುವ ಹಿನ್ನೆಲೆಯಲ್ಲಿ ಅವರನ್ನು ವಶಕ್ಕೆ ಪಡೆಯಲಾಗಿತ್ತು. ಅವ್ಯವಹಾರ ನಡೆದ ವೇಳೆ ಮಂಜುಳಾ ಅವರ ಬ್ಯಾಂಕ್ ಖಾತೆಗೂ ಹಣ ಬಂದಿರುವುದರಿಂದ ಅಧಿಕಾರಿಗಳು ಇದರ ಮೂಲವನ್ನು ಪ್ರಶ್ನಿಸಿದ್ದಾರೆ ಎನ್ನಲಾಗಿದೆ.



ಸೆಪ್ಟೆಂಬರ್‌ನಲ್ಲಿ ಅಮೆರಿಕಕ್ಕೆ ಮೋದಿ

ವಿಶ್ವಸಂಸ್ಥೆ: ಪ್ರಧಾನಿ ನರೇಂದ್ರ ಮೋದಿ ಸೆಪ್ಟೆಂಬರ್‌ನಲ್ಲಿ ಅಮೆರಿಕ ಪ್ರವಾಸ ಕೈಗೊಳ್ಳಲಿದ್ದು, ಸೆ.26ರಂದು ವಿಶ್ವಸಂಸ್ಥೆಯ 79ನೇ ಮಹಾ ಅಧಿವೇಶನದಲ್ಲಿ ಭಾಷಣ ಮಾಡಲಿದ್ದಾರೆ ಎಂದು ಹೇಳಲಾಗಿದೆ. ಮೋದಿ 3 ನೇ ಬಾರಿಗೆ ಪ್ರಧಾನಿಯಾದ ಬಳಿಕ ಮೊದಲ ಬಾರಿಗೆ ಅಮೆರಿಕ ಪ್ರವಾಸ ಕೈಗೊಳ್ಳಲಿದ್ದಾರೆ. ವಿಶ್ವಸಂಸ್ಥೆಯ ಸಾಮಾನ್ಯ ಅಧಿವೇಶನ ಸೆ.24ರಿಂದ ಸೆ.30ರ ವರೆಗೆ ನಡೆಯಲಿದೆ. 2023ರ ಜೂನ್‌ನಲ್ಲಿ ಮೋದಿ, ವಿಶ್ವಸಂಸ್ಥೆಯಲ್ಲಿ ವಿಶ್ವ ಯೋಗ ದಿನದ ಪ್ರಧಾನ ಕಾರ್ಯಕ್ರಮದಲ್ಲಿ ಭಾಗವಹಿದ್ದರು. ಸೆಪ್ಟೆಂಬರ್ 2021ರಲ್ಲಿ ವಿಶ್ವಸಂಸ್ಥೆಯ ಮಹಾಸಭೆಯಲ್ಲಿ ಭಾಗವಹಿಸಿ ಮಾತನಾಡಿದ್ದರು.

ಬಿಜೆಪಿ ಅವಧಿಯ ಅಕ್ರಮ ಕೆದಕಿದರೆ ಎನ್ನುವ ಆತಂಕ ಟರ್ಮಿನಲ್ ಹಗರಣದಲ್ಲಿ ಜೈಲು ಸೇರಿರುವ ವೀರಯ್ಯ ವಾಲ್ಮೀಕಿ ನಿಗಮ, ಮುಡಾ ಬಗ್ಗೆ ಮಾತಾಡೋಕೆ ಹಿಂದೇಟು

ಬಿಜೆಪಿಯ ಬಳಿ ಇರುವ ಬ್ರಹ್ಮಾಸ್ತ್ರವೇ ತಿರುಗೇಟು?

ಬೆಂಗಳೂರು: ಮಳೆಗಾಲದ ಅಧಿವೇಶನ ಆರಂಭಕ್ಕೂ ಮೊದಲು ಬಿಜೆಪಿ ಬಳಿಯಿದ್ದ ಬಹುತೇಕ 'ಬ್ರಹ್ಮಾಸ್ತ್ರ' ಇದೀಗ ತಿರುಗುಬಾಣವಾಗುವ ಸಾಧ್ಯತೆ ನಿಚ್ಚಳವಾಗಿದೆ. ಆದ್ದರಿಂದ ಕಾಂಗ್ರೆಸ್ ವಿರುದ್ಧ ದೊಡ್ಡ ಮಟ್ಟದಲ್ಲಿ ಮುಗಿಬೀಳಬೇಕು ಎನ್ನುವ ಲೆಕ್ಕಾಚಾರದಲ್ಲಿದ್ದ ಬಿಜೆಪಿಗರಿಗೆ ಬಹುದೊಡ್ಡ ಹಿನ್ನಡೆಯಾಗುವ ಸಾಧ್ಯತೆಯಿದೆ.

ಅಧಿವೇಶನ ಆರಂಭಕ್ಕೂ ಮೊದಲು ಪ್ರಮುಖವಾಗಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ 187 ಕೋಟಿ ರು. ಅಕ್ರಮ ವರ್ಗಾವಣೆ ಹಾಗೂ ಮುಡಾದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿಗೆ ಹಂಚಿಕೆಯಾ ಗಿರುವ ನಿವೇಶನದ ವಿಷಯವನ್ನು ಮುಂದಿಟ್ಟುಕೊಂಡು ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಬಿಜೆಪಿ ಚಿಂತನೆ ನಡೆಸಿತ್ತು. ಮೊದಲ ಎರಡು ದಿನ, ವಾಲ್ಮೀಕಿ ಅಭಿವೃದ್ಧಿ ಹಗರಣದ ವಿಷಯದಲ್ಲಿ ಉಭಯ ಸದನದಲ್ಲಿ ರೋಷಾವೇಷದ ಮಾತುಗಳೊಂದಿಗೆ ಚರ್ಚೆ ನಡೆಸಿತ್ತು.

ಆದರೀಗ ಬಹಿರಂಗಗೊಂಡಿರುವ ದಾಖಲೆಗಳ ಪ್ರಕಾರ ಬಿಜೆಪಿ ಅವಧಿಯಲ್ಲಿ ಹಾಗೂ ಜೆಡಿಎಸ್ ಅವಧಿಯಲ್ಲಿ ಒಂದು ನಿಗಮದಲ್ಲಿ ಅಕ್ರಮವಾಗಿದ್ದು, ಈ ಎಲ್ಲ ಅಕ್ರಮ ವರ್ಗಾವಣೆಯ ಮೊತ್ತ 220 ಕೋಟಿ ರು. ದಾಟಲಿದೆ. ಈಗಾಗಲೇ ಬಿಜೆಪಿಯ ಮಾಜಿ ಪರಿಷತ್ ಸದಸ್ಯ ಡಿ.ಎಸ್.ವೀರಯ್ಯ ಅವರನ್ನು ಸಿಐಡಿ ಅಧಿಕಾರಿಗಳು ಬಂಧಿಸಿದ್ದಾರೆ.

ದಾಖಲೆ ಬಿಡುಗಡೆಯಾಗುತ್ತಿದ್ದಂತೆ ಇದೀಗ ಬಿಜೆಪಿ ಹಾಗೂ ಜೆಡಿಎಸ್ ವಿರುದ್ಧ ಮುಗಿಬೀಳಲು ಕಾಂಗ್ರೆಸ್ ನಾಯಕರು ಸಿದ್ಧತೆ ನಡೆಸಿಕೊಂಡಿದ್ದಾರೆ. → 4

ಬಿಜೆಪಿಗೆ ಹಿನ್ನಡೆ

ಸದನ ಆರಂಭಕ್ಕೂ ಮೊದಲು ವಾಲ್ಮೀಕಿ ಅಭಿವೃದ್ಧಿ ನಿಗಮ ಹಾಗೂ ಮುಡಾ ಹಗರಣವನ್ನು ಮುಂದಿಟ್ಟುಕೊಂಡು ಹೋರಾಟ ನಡೆಸಲು ಬಿಜೆಪಿ ಭರ್ಜರಿ ತಯಾರಿ ನಡೆಸಿತ್ತು. ಆದರೆ ಸದನ ಆರಂಭಕ್ಕೂ ಕೆಲ ದಿನಗಳ ಹಿಂದೆ ಮೈಸೂರು ಭಾಗದ ಬಿಜೆಪಿ ಹಾಗೂ ಜೆಡಿಎಸ್‌ನ ಮಾಜಿ, ಹಾಲಿ ಶಾಸಕರು 'ವಸ್ತುಸ್ಥಿತಿ' ವಿವರಿಸಿದಾಗ, ಈ ವಿಷಯಕ್ಕೆ ಹೆಚ್ಚು ಒತ್ತು ನೀಡದಿರಲು ತೀರ್ಮಾನಿಸಿದರು. ಬಳಿಕ ಇದೀಗ ಬಿಜೆಪಿ ಅವಧಿಯಲ್ಲಿ ನಿಗಮಗಳಿಂದ ಅಕ್ರಮವಾಗಿ ವರ್ಗಾವಣೆಯಾಗಿರುವ ಪಟ್ಟಿ ಬಹಿರಂಗವಾಗುತ್ತಿದ್ದಂತೆ ಈ ವಿಷಯದಲ್ಲಿಯೂ ಬಿಜೆಪಿಗೆ ಹಿನ್ನಡೆಯಾಗುವುದು ನಿಶ್ಚಿತ ಎನ್ನಲಾಗಿದೆ.

ತಿರುಗೇಟು ಖಚಿತ

ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರನ್ನು ಇಕ್ಕಟ್ಟಿಗೆ ಸಿಲುಕಿಸಲು ಬಿಜೆಪಿ ನಾಯಕರು ಸದನದ ಹೊರಗೆ ಹೋರಾಟ ನಡೆಸುತ್ತಿದ್ದಾರೆ. ಒಂದು ವೇಳೆ ವಿಷಯವನ್ನು ಸದನದೊಳಗೆ ಎತ್ತಿಕೊಂಡರೆ, ನಿಶ್ಚಿತವಾಗಿ ಸಿದ್ದರಾಮಯ್ಯ ಅವರ ಪತ್ನಿ ಅವರಿಗೆ ನಿವೇಶನ ಮಂಜೂರಾಗಿರುವ ಕಾಲಘಟ್ಟದಲ್ಲಿಯೇ ಬಿಜೆಪಿ ಹಾಗೂ ಜೆಡಿಎಸ್‌ನ ಹಲವು ಹಾಲಿ ಹಾಗೂ ಮಾಜಿ ಶಾಸಕರಿಗೆ ನಿವೇಶನ ಮಂಜೂರಾಗಿದೆ. ಇದೇ ಅವಧಿಯಲ್ಲಿ ಕುಮಾರಸ್ವಾಮಿ ಅವರಿಗೂ ದೊಡ್ಡ ಪ್ರಮಾಣದಲ್ಲಿ ನಿವೇಶನ ಮಂಜೂರಾಗಿರುವ ದಾಖಲೆ ಮುಂದಿಡಲು ಸಿದ್ದರಾಮಯ್ಯ ಅವರು ತಯಾರಾಗಿದ್ದಾರೆ.

ನೀತಿ ಆಯೋಗದಲ್ಲಿ ಎಚ್‌ಡಿಕೆಗೂ ಸ್ಥಾನ



ದೆಹಲಿ: ಕೇಂದ್ರದ ಎನ್‌ಡಿಎ ಸರಕಾರ ನೀತಿ ಆಯೋಗವನ್ನು ಪುನರ್ ರಚಿಸಿದೆ. ವಿಜ್ಞಾನಿ ವಿ.ಕೆ. ಸಾರಸ್ವತ್, ಕೃಷಿ ಅರ್ಥಶಾಸ್ತ್ರಜ್ಞ ರಮೇಶ್ ಚಂದ್, ಮಕ್ಕಳ ತಜ್ಞ ಡಾ.ವಿ.ಕೆ.ಪಾಲ್ ಮತ್ತು ಮ್ಯಾಕ್ರೋ-ಎಕನಾಮಿಸ್ಟ್ ಅರವಿಂದ ವೀರಮಾನಿ ಅವರು ಆಯೋಗದ ಪೂರ್ಣಾವಧಿ ಸದಸ್ಯರಾಗಿ ಮುಂದುವರಿಯಲಿದ್ದಾರೆ.

ಜಾರಿ ಬಿದ್ದ ರೇವಣ್ಣ: ಪಕ್ಕೆಲುಬಿನಲ್ಲಿ ಬಿರುಕು

ಹೊಳೆನರಸೀಪುರ: ಆಷಾಢ ಏಕಾದಶಿಯ ಪ್ರಯುಕ್ತ ಹರದನಹಳ್ಳಿಯ ಶಿವನ ದೇವಾಲಯದಲ್ಲಿ ಬುಧವಾರ ಬೆಳಗಿನ ಜಾವ ಪೂಜೆ ಸಲ್ಲಿಸಲು ಬಂದಿದ್ದ ಎಚ್.ಡಿ.ರೇವಣ್ಣ ಮೆಟ್ಟಿಲಿನ ಮೇಲೆ ಕಾಲು ಜಾರಿಬಿದ್ದಿದ್ದಾರೆ. ಪರಿಣಾಮ ಬಲಪಕ್ಕೆಯ 6ನೇ ಮೂಳೆಯಲ್ಲಿ ಸಣ್ಣ ಬಿರುಕು ಬಿಟ್ಟಿದೆ. 7ನೇ ಮೂಳೆಗೆ ಹೆಚ್ಚು ಹಾನಿಯಾಗಿದೆ.

ಅಮೆರಿಕದಲ್ಲಿ ಕೋವಿಡ್ ಹೆಚ್ಚಳ



ವಾಷಿಂಗ್ಟನ್: ಅಮೆರಿಕದ ಏಳು ರಾಜ್ಯಗಳು ಕರೋನಾ ವೈರಾಣು ಸೋಂಕಿನ ಹೊಸ ರೂಪಾಂತರದಿಂದ ತೊಂದರೆಗೆ ಒಳಗಾಗಿವೆ. ಈ ಏಳೂ ರಾಜ್ಯಗಳಲ್ಲಿ ಸೋಂಕಿತರ ಸಂಖ್ಯೆಯಲ್ಲಿ ದಿನೇ ದಿನೆ ಏರಿಕೆ ಆಗುತ್ತಿದೆ. ಜುಲೈ 3ನೇ ವಾರದಲ್ಲಿ ದಿನದಲ್ಲಿ 300ಕ್ಕೂ ಅಧಿಕ ಪ್ರಕರಣ ದಾಖಲಾಗುತ್ತಿವೆ.

12 ನಕಲರ ಹತ್ಯೆ; ಅಪಾರ ಶಸ್ತ್ರಾಸ್ತ್ರ ವಶ

ಗಡ್ಚಿರೋಲಿ: ಛತ್ತೀಸ್‌ಗಢ-ಮಹಾರಾಷ್ಟ್ರ ಗಡಿಯಲ್ಲಿರುವ ಗಡ್ಚಿರೋಲಿ ಪ್ರದೇಶದಲ್ಲಿ ಬುಧವಾರ ಮಧ್ಯಾಹ್ನ ನಡೆದ ಗುಂಡಿನ ಚಕಮಕಿಯಲ್ಲಿ 12 ನಕ್ಸಲರನ್ನು ಭದ್ರತಾ ಪಡೆ ಸಿಬ್ಬಂದಿ ಹೊಡೆದುರುಳಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಇಬ್ಬರು ಸಿ60 ಕಮಾಂಡೋಗಳು ಗಾಯಗೊಂಡಿದ್ದಾರೆ. ಹತ್ಯೆಯಾದ ನಕ್ಸಲರ ಪೈಕಿ ಒಬ್ಬನನ್ನು ಟಿಪಾಗಢ ದಳದ ಉಸ್ತುವಾರಿ ಡಿವಿಸಿಎಂ ಲಕ್ಷ್ಮಣ ಅತ್ರಾಮ್ ಅಲಿಯಾಸ್ ವಿಶಾಲ್ ಎಂದು ಗುರುತಿಸಲಾಗಿದೆ. ನಕ್ಸಲರು ಇದ್ದ ಸ್ಥಳದಲ್ಲಿ ದೊರೆತ ಶಸ್ತ್ರಾಸ್ತ್ರಗಳನ್ನು ವಶಕ್ಕೆ ಪಡೆಯಲಾಗಿದೆ.

ಉ.ಪ್ರದೇಶ ಸಚಿವ ಸಂಪುಟಕ್ಕೆ ಸರ್ಜರಿ?

ಲಖನೌ: ಯೋಗಿ ಆದಿತ್ಯನಾಥ್ ನೇತೃತ್ವದ ಉತ್ತರ ಪ್ರದೇಶ ಬಿಜೆಪಿ ಸರಕಾರದಲ್ಲಿ ಬಿರುಕು ಮೂಡಿದ್ದು, ಸಂಪುಟದಲ್ಲಿ ಬದಲಾವಣೆ ಸಾಧ್ಯತೆ ಇದೆ ಎಂಬ ಸುದ್ದಿ ಹರಿದಾಡುತ್ತಿವೆ. ಸಿಎಂ ಯೋಗಿ ಜತೆಗಿನ ಡಿಸಿಎಂ ಕೇಶವ ಪ್ರಸಾದ್ ಮೌರ್ಯ ಮುನಿಸು, ಮನಸ್ತಾಪ ಪಕ್ಷದ ವರಿಷ್ಠರ ಅಂಗಳದಲ್ಲಿ ಬುಧವಾರ ಚರ್ಚೆಯಾಗಿವೆ.

13 ಭಾರತೀಯರು ಸೇರಿ 16 ಜನ ನಾಪತ್ತೆ

ಓಮನ್‌ನಲ್ಲಿ ಮುಳುಗಿದ ತೈಲ ಟ್ಯಾಂಕರ್

ದೆಹಲಿ: ಓಮನ್ ಕರಾವಳಿಯಲ್ಲಿ ತೈಲ ಟ್ಯಾಂಕರ್ ಮುಳುಗಡೆಯಾಗಿ 13 ಭಾರತೀಯರು, ಇಬ್ಬರು ಶ್ರೀಲಂಕನ್ನರು ಸೇರಿ ಒಟ್ಟು 16 ಸಿಬ್ಬಂದಿ ಸಮುದ್ರದಲ್ಲಿ ನಾಪತ್ತೆಯಾಗಿದ್ದಾರೆ. ಈ ಘಟನೆ ಸೋಮವಾರ ಸಂಭವಿಸಿದ್ದು, ನಾಪತ್ತೆಯಾದವರ ಪತ್ತೆಗೆ ಮೂರು ದಿನಗಳಿಂದ ಕಾರ್ಯಾಚರಣೆ ನಡೆಯುತ್ತಿದೆ. ಆದರೆ ಬುಧವಾರ ಸಂಜೆವರೆಗೂ ನಾಪತ್ತೆಯಾದವರ ಬಗ್ಗೆ ಯಾವುದೇ ಮಾಹಿತಿ ಸಿಕ್ಕಿಲ್ಲ.

ಕೊಮೊರೊಸ್ ಧ್ವಜ ಹೊಂದಿರುವ ಆಯಿಲ್ ಟ್ಯಾಂಕರ್ 'ಪ್ರೆಸ್ಟೀಜ್ ಫ್ಯಾಲ್ಕನ್' ದುಕ್ಮಾ ಬಂದರು ಬಳಿಯ ರಾಸ್ ಮದ್ರಕಾದಿಂದ ಆಗ್ನೇಯ ದಿಕ್ಕಿಗೆ 25 ನಾಟಿಕಲ್ ಮೈಲಿ ದೂರದಲ್ಲಿ ಪಲ್ಟಿಯಾಗಿ ಮುಳುಗಡೆಯಾಗಿದ್ದು, ಎಲ್ಲ 16 ಸಿಬ್ಬಂದಿ ನಾಪತ್ತೆಯಾಗಿದ್ದಾರೆ.

ಓಮಾನ್ ನೈರುತ್ಯ ಕರಾವಳಿಯಲ್ಲಿರುವ ಡುಕ್ಮಾ ಬಂದರು ದೇಶದ ಪ್ರಮುಖ ತೈಲ ಮತ್ತು ಅನಿಲ ಗಣಿಗಾರಿಕೆ ಯೋಜನೆಗಳ ಕೇಂದ್ರವಾಗಿದೆ. ಆಯಿಲ್ ಟ್ಯಾಂಕರ್‌ನ್ನು ಏಡನ್‌ನ ಯೆಮಿನಿ ಪೋರ್ಟ್ ಸಿಟಿಗೆ ಸಾಗಿಸಲಾಗುತ್ತಿತ್ತು. 2007ರಲ್ಲಿ ಈ 117 ಮೀಟರ್ ಉದ್ದದ ತೈಲ ಉತ್ಪಾದಕಗಳ ಟ್ಯಾಂಕರ್ ನಿರ್ಮಾಣಗೊಂಡಿದೆ.

- ನಾಪತ್ತೆಯಾದವರ ಪತ್ತೆಗೆ ಮೂರು ದಿನಗಳಿಂದ ಕಾರ್ಯಾಚರಣೆ
- ಬುಧವಾರ ಸಂಜೆವರೆಗೂ ನಾಪತ್ತೆಯಾದವರ ಬಗ್ಗೆ ಮಾಹಿತಿ ಸಿಕ್ಕಿಲ್ಲ

ಗಾಜಾ ಮೇಲೆ ಇಸ್ರೇಲ್ ವಿಮಾನ ದಾಳಿ; 60 ಸಾವು

ಗಾಜಾಪಟ್ಟಿ: ಸುರಕ್ಷಿತ ವಲಯ ಎಂದು ಘೋಷಿಸಿದ್ದ ಇಸ್ರೇಲ್ ಇದೀಗ ಮಂಗಳವಾರ ರಾತ್ರಿ ಸೆಂಟ್ರಲ್ ಗಾಜಾಪಟ್ಟಿ ಮೇಲೆ ವೈಮಾನಿಕ ದಾಳಿ ನಡೆಸಿದ್ದು 60ಕ್ಕೂ ಅಧಿಕ ಪ್ಯಾಲೆಸ್ತೇನಿಯರು ಸಾವಿಗೀಡಾದರು. ಮೆಡಿಟರೇನಿಯನ್ ಕರಾವಳಿ ಪ್ರದೇಶದ ಸೇರಿದಂತೆ 23 ಚದರ ಮೈಲಿಗಳನ್ನು ಒಳಗೊಂಡಿರುವ ಸುರಕ್ಷಿತ ವಲಯದ ಮೇಲೆ ಇಸ್ರೇಲ್ ಪ್ರತಿದಿನ ವೈಮಾನಿಕ ದಾಳಿ ನಡೆಸುತ್ತಿದೆ. ಸುರಕ್ಷಿತ ವಲಯದಿಂದ ಪರಾರಿ ಯಾಗುವ ಪ್ಯಾಲೆಸ್ತೇನಿಯನ್‌ರನ್ನು ವಶಕ್ಕೆ ಪಡೆದು ನಿರಾಶ್ರಿತ ಶಿಬಿರದಲ್ಲಿ ಕೂಡಿ ಹಾಕಿಡಲಾಗುತ್ತಿರುವುದಾಗಿ ವರದಿ ವಿವರಿಸಿದೆ.

ಮೂಲತಃ ಕ್ರಿಶ್ಚಿಯನ್ ಅನ್ನೋದೇ ಛಲವಾದಿ ನಾರಾಯಣಸ್ವಾಮಿಗೆ ಅಡ್ಡಿ | ರವಿಕುಮಾರ್‌ಗೆ ಒಲಿಯುವುದೇ ಅವಕಾಶ?

ಛಲವಾದಿ ಕೈತಪ್ಪಿದ ಪರಿಷತ್ ನಾಯಕ ಸ್ಥಾನ?

ವಿಶ್ವವಾಣಿ ವಿಶೇಷ

ಬೆಂಗಳೂರು: ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಸ್ಥಾನಕ್ಕೆ ಮೂವರ ನಡುವೆ ಭಾರಿ ರೇಸ್ ಇದ್ದು, ಈ ಮೂವರಲ್ಲಿ ಒಬ್ಬರು ರೇಸ್‌ನಿಂದ ಹೊರಬೀಳುವುದು ಬಹುತೇಕ ಖಚಿತವಾಗಿದೆ.

ಕೋಟ ಶ್ರೀನಿವಾಸ್ ಪೂಜಾರಿ ಅವರ ರಾಜೀನಾಮೆಯಿಂದ ತೆರವಾಗಿರುವ ಪ್ರತಿಪಕ್ಷ ಸ್ಥಾನಕ್ಕೆ ದಲಿತ ಸಮುದಾಯಕ್ಕೆ ಸೇರಿದ ಛಲವಾದಿ ನಾರಾಯಣಸ್ವಾಮಿ ಹಾಗೂ ಎನ್.ರವಿಕುಮಾರ್ ಹೆಸರು ಕೇಳಿಬರುತ್ತಿದ್ದರೆ, ಇನ್ನೊಂದೆಡೆ ಒಕ್ಕಲಿಗ ಕೋಟಾದಲ್ಲಿ ಸಿ.ಟಿ.ರವಿ ಹೆಸರು ಮುನ್ನೆಲೆಗೆ ಬಂದಿದೆ. ಆದರೀಗ ಛಲವಾದಿ ನಾರಾಯಣಸ್ವಾಮಿ ಅವರ 'ಧರ್ಮ'ದ ವಿಷಯಕ್ಕೆ ರೇಸ್‌ನಿಂದ ಹಿಂದೆ ಬಿದಿದ್ದಾರೆ ಎನ್ನುವ ಮಾತುಗಳು ಕೇಳಿಬರುತ್ತಿದೆ. ನಾರಾಯಣಸ್ವಾಮಿ ಅವರು ಛಲವಾದಿ ಕಾರ್ಡ್ ಅನ್ನು ಮುಂದಿಟ್ಟುಕೊಂಡು ದಲಿತ ಕೋಟಾದಲ್ಲಿ ಪ್ರತಿಪಕ್ಷ ನಾಯಕ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ. ಆದರೆ ಅವರ ಪತ್ನಿ ಕ್ರಿಶ್ಚಿಯನ್ ಆಗಿದ್ದರು. ವಿವಾಹವೂ ಕ್ರಿಶ್ಚಿಯನ್ ಸಂಪ್ರದಾಯದಂತೆ ಆಗಿದ್ದರು. ನಾರಾಯಣಸ್ವಾಮಿ ಅವರ ಪುತ್ರನ ವಿವಾಹವೂ ಕ್ರಿಶ್ಚಿಯನ್ ಸಂಪ್ರದಾಯದಂತೆ ಆಗಿದೆ. → 4

ಕ್ರಿಶ್ಚಿಯನ್, ಬುದ್ಧಿಸ್ಟ್ ನಡುವೆ...

ಕಾಂಗ್ರೆಸ್‌ನಿಂದ ಬಿಜೆಪಿಗೆ 'ದಲಿತ' ಕಾರ್ಡ್ ಪ್ಲೇ ಮಾಡಿಕೊಂಡು ಬಂದಿರುವ ನಾರಾಯಣಸ್ವಾಮಿ ಅವರು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿದ್ದರು. ಅವರ ಧರ್ಮಪತ್ನಿ ಮೂಲತಃ ಕ್ರಿಶ್ಚಿಯನ್ ಧರ್ಮದವರು. ನಾರಾಯಣಸ್ವಾಮಿ ಅವರ ಪುತ್ರ ಈಗಲೂ ಕ್ರಿಶ್ಚಿಯನ್ ಧರ್ಮದಲ್ಲಿದ್ದಾರೆ. ಈ ಬಗ್ಗೆ ಕೆಲ ವೇದಿಕೆಯಲ್ಲಿ ನಾರಾಯಣಸ್ವಾಮಿ ಅವರು ಬಹಿರಂಗವಾಗಿಯೇ ಹೇಳಿಕೊಂಡಿದ್ದಾರೆ. ಇನ್ನು ಕಾಂಗ್ರೆಸ್‌ನಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಆಪ್ತರಾಗಿದ್ದಾಗ ಬೌದ್ಧ ಧರ್ಮವನ್ನು ಪಾಲಿಸುವ ಮಾತುಗಳಲ್ಲಿ ಆಡಿದ್ದಾರೆ. ಇದೀಗ 'ದಲಿತ' ಎನ್ನುವ ಮಾತನ್ನುಹೇಳಿಕೊಂಡು, ವಿಧಾನಪರಿಷತ್ ಪ್ರತಿಪಕ್ಷ ನಾಯಕ ಸ್ಥಾನ ಪಡೆಯುವ ಲೆಕ್ಕಾಚಾರದಲ್ಲಿದ್ದಾರೆ. ಆದರೆ ಮೂಲತಃ ಕ್ರಿಶ್ಚಿಯನ್ ಆಗಿರುವ ನಾರಾಯಣಸ್ವಾಮಿ ಅವರಿಗೆ ಈ ಸಾಂವಿಧಾನಿಕ ಹುದ್ದೆ ನೀಡಲು ಸಂಘ-ಪರಿವಾರದ ಭಾರಿ ವಿರೋಧವಿದೆ ಎನ್ನಲಾಗಿದೆ.

ಮೂಲ ಬಿಜೆಪಿಗರಿಗೆ ಅವಕಾಶ ನೀಡಿ

ಕೆಲ ವರ್ಷಗಳ ಹಿಂದೆ ಕಾಂಗ್ರೆಸ್‌ನಿಂದ ಬಿಜೆಪಿಗೆ ಬಂದಿರುವ ಛಲವಾದಿ ನಾರಾಯಣಸ್ವಾಮಿ ಅವರು ಈ ಹಿಂದೆ ಪಕ್ಷದ ನಾಯಕರ ವಿರುದ್ಧ ಟೀಕಿಸಿರುವುದು, ಪಕ್ಷದ ನಿಲುವನ್ನು ಖಂಡಿಸಿರುವ ಅನೇಕ ಉದಾಹರಣೆಗಳಿವೆ. ಇದೀಗ ಬಿಜೆಪಿ ಸೇರಿ ಪರಿಷತ್ ಸದಸ್ಯರಾದ ಬಳಿಕ ಬಿಜೆಪಿ ಸಿದ್ಧಾಂತಕ್ಕೆ ಪೂರಕವಾಗಿ ಮಾತನಾಡುತ್ತಿದ್ದಾರೆ. ಆದರೆ ಮೂಲತಃ ಅವರು ಕಾಂಗ್ರೆಸ್‌ನಿಂದ ಬಂದಿರುವುದರಿಂದ ವಲಸಿಗರಿಗೆ ಅವಕಾಶ ನೀಡುವ ಬದಲು ಮೂಲ ಬಿಜೆಪಿಗರಿಗೆ ಅವಕಾಶ ನೀಡಬೇಕು. ದಲಿತ ಸಮುದಾಯಕ್ಕೆ ಸೇರಿರುವ, ಎಬಿವಿಪಿ ಸಂಘಟನೆಯಿಂದ ಗುರುತಿಸಿಕೊಂಡಿರುವ ಎನ್.ರವಿಕುಮಾರ್ ಅವರಿಗೆ ಪ್ರತಿಪಕ್ಷ ನಾಯಕ ಸ್ಥಾನ ನೀಡಿದರೆ, ದಲಿತರಿಗೆ ಸ್ಥಾನ ನೀಡಲಾಗಿದೆ ಎನ್ನುವ ಸಂದೇಶ ರವಾನೆಯಾಗುವುದರೊಂದಿಗೆ, ಮೂಲ ಬಿಜೆಪಿಗರಿಗೆ ಅವಕಾಶ ನೀಡಿದಂತಾಗುತ್ತದೆ ಎನ್ನುವ ಚರ್ಚೆ ನಡೆದಿದೆ ಎನ್ನಲಾಗಿದೆ.

ರೇಣುಕಾಸ್ವಾಮಿ ಕೊಲೆ ಪ್ರಕರಣ ಜಾರ್ಜ್‌ಶೀಟ್ ಸಲ್ಲಿಕೆಗೆ ಸಿದ್ಧತೆ



ಖಳ ನಾಯಕ

ಬೆಂಗಳೂರು: ನಟ ದರ್ಶನ್ ಆ್ಯಂಡ್ ಗ್ಯಾಂಗ್‌ನಿಂದ ನಡೆದ ರೇಣುಕಾಸ್ವಾಮಿ ಕೊಲೆ ಪ್ರಕರಣದ ತನಿಖೆ ತೀವ್ರಗತಿಯಲ್ಲಿ ಸಾಗಿದೆ. ಕೊಲೆ ಸಂಬಂಧ ಪೊಲೀಸರು ಹಲವು ಆಯಾಮ ಗಳಲ್ಲಿ ತನಿಖೆ ಕೈಗೊಂಡಿದ್ದು, ಶೀಘ್ರದಲ್ಲೇ ಚಾರ್ಜ್‌ಶೀಟ್ ಸಲ್ಲಿಕೆಗೆ ತಯಾರಿ ನಡೆಸಿದ್ದಾರೆ. ನಟ ದರ್ಶನ್ ಆ್ಯಂಡ್ ಗ್ಯಾಂಗ್‌ಗೆ ಅಸಲಿ ಅಗ್ನಿ ಪರೀಕ್ಷೆ ಈಗ ಶುರುವಾಗಿದೆ.

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ತನಿಖೆಯನ್ನು ಕಾಮಾಕ್ಷಿಪಾಳ್ಯ ಪೊಲೀಸರು ಮತ್ತಷ್ಟು ತೀವ್ರಗೊಳಿಸಿದ್ದು, ಆದಷ್ಟು ಬೇಗ ತನಿಖೆ ಪೂರ್ಣಗೊಳಿಸುವ ಉಮೇದಿನಲ್ಲಿದ್ದಾರೆ. ರೇಣುಕಾಸ್ವಾಮಿ ಕೊಲೆಯಾಗಿ 37 ದಿನ ಕಳೆದಿದೆ. ಪೊಲೀಸರು ದರ್ಶನ್, ಸ್ನೇಹಿತೆ ಪವಿತ್ರಾಗೌಡ ಸೇರಿ 17 ಆರೋಪಿಗಳನ್ನು ಬಂಧಿಸಿ ವಿಚಾರಣೆ ನಡೆಸಿ ಜೈಲಿಗೆ ಕಳುಹಿಸಲಾಗಿದೆ. ಸದ್ಯ ಪ್ರಕರಣಕ್ಕೆ ಬೇಕಾದ ಪ್ರತ್ಯಕ್ಷ ಹಾಗೂ ಪರೋಕ್ಷ ಸಾಕ್ಷಿಗಳ ಹೇಳಿಕೆ ದಾಖಲಿಸಲು ಪ್ರಾರಂಭಿಸಿದ್ದಾರೆ. ಈಗಾಗಲೇ ಕೊಲೆ ಬಗ್ಗೆ 30ಕ್ಕೂ ಹೆಚ್ಚು ಮಂದಿ ಹೇಳಿಕೆ ಪಡೆದಿದ್ದಾರೆ. 33 ಸಿಸಿಟಿವಿ ದೃಶ್ಯ, 180 ಕ್ಕೂ ಹೆಚ್ಚು ಸಾಕ್ಷ್ಯ ಕಲೆ ಹಾಕಿದ್ದು, ಕೋರ್ಟ್‌ಗೆ ದೋಷಾರೋಪಣಾ ಪಟ್ಟಿ ಸಲ್ಲಿಕೆಗೆ ಮುಂದಾಗಿದ್ದಾರೆ.

- ಪ್ರಕರಣದಲ್ಲಿ ದರ್ಶನ್, ಪವಿತ್ರಾಗೌಡ ಸೇರಿ 17 ಆರೋಪಿಗಳ ಬಂಧನ
- 30ಕ್ಕೂ ಹೆಚ್ಚು ಪ್ರತ್ಯಕ್ಷ, ಪರೋಕ್ಷ ಸಾಕ್ಷಿಗಳ ಹೇಳಿಕೆ ಪಡೆದು ದಾಖಲು
- 33 ಸಿಸಿಟಿವಿ ದೃಶ್ಯ, 180ಕ್ಕೂ ಹೆಚ್ಚು ಸಾಕ್ಷ್ಯ ಕಲೆ ಹಾಕಿದ ಪೊಲೀಸರು

ಪೊಲೀಸರು ತನಿಖೆ ತೀವ್ರಗೊಳಿಸಿದ್ದು, ಹಲವು ಆಯಾಮಗಳಲ್ಲಿ ತನಿಖೆ ನಡೆಸಿದ್ದಾರೆ. ತನಿಖೆ ಪೂರ್ಣಗೊಳಿಸಿ ಶೀಘ್ರದಲ್ಲೆ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಲಾಗುವುದು.

- ಬಿ.ದಯಾನಂದ್
ಪೊಲೀಸ್ ಕಮಿಷನರ್

ಫನ್‌ತರಂಗ

- ರಘುಪತಿ ಶೃಂಗೇರಿ -

ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮೇಲೆ ಗುಂಡಿನ ದಾಳಿ, ಕಿವಿಗೆ ಗಾಯ
ಸುದ್ದಿ



ಸಮಾಚಾರ ಸಣ್ಣದಲ್ಲ

ಗಂಧದ ಮರ ಕಳವು: ಅಪರಾಧಿಗೆ 5 ವರ್ಷ ಶಿಕ್ಷೆ

ಬೆಂಗಳೂರು: ಗಂಧದ ಮರ ಕಳವು ಮಾಡಿದ್ದ ಆರೋಪದಲ್ಲಿ ಆರೋಪಿಯೊಬ್ಬರಿಗೆ ವಿಚಾರಣಾ ನ್ಯಾಯಾಲಯ ವಿಧಿಸಿದ್ದ 5 ವರ್ಷಗಳ ಶಿಕ್ಷೆಯನ್ನು ಎತ್ತಿಹಿಡಿದಿರುವ ಹೈಕೋರ್ಟ್, 1 ಲಕ್ಷ ರೂಪಾಯಿ ದಂಡ ವಿಧಿಸಿ ಆದೇಶಿಸಿದೆ. ವಿಚಾರಣಾ ನ್ಯಾಯಾಲಯ ವಿಧಿಸಿದ್ದ ದಂಡದ ಪ್ರಮಾಣ ಹೆಚ್ಚಳ ಮಾಡುವಂತೆ ಕೋರಿದ್ದ ರಾಜ್ಯ ಸರಕಾರ ಮತ್ತು ಶಿಕ್ಷೆ ರದ್ದು ಕೋರಿ ಮಂಡ್ಯ ಜಿಲ್ಲೆ ಬಲ್ಲೇನಹಳ್ಳಿಯ ಆರೋಪಿ ದೇವರಾಜಚಾರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾ. ಶಿವಶಂಕರ್ ಅಮರಣ್ಣನವರ್ ಅವರಿದ್ದ ನ್ಯಾಯಪೀಠ, ಸರಕಾರ ಸಲ್ಲಿಸಿರುವ ಮೇಲ್ಮನವಿ ಎತ್ತಿಹಿಡಿದಿದೆ. ಆರೋಪಿ ಸಲ್ಲಿಸಿದ್ದ ಮೇಲ್ಮನವಿಯನ್ನು ವಜಾಗೊಳಿಸಿದೆ. ವಿಚಾರಣಾ ನ್ಯಾಯಾಲಯ ಸೆಕ್ಷನ್ 86ರಂತೆ 5 ವರ್ಷ ಶಿಕ್ಷೆ ವಿಧಿಸಿದ್ದು, 10 ಸಾವಿರ ರು. ದಂಡ ವಿಧಿಸಿತ್ತು. ಸೆಕ್ಷನ್ 87ರಲ್ಲಿ ತಿಳಿಸಿರುವಂತೆ 50 ಸಾವಿರಕ್ಕೂ ಹೆಚ್ಚಿನ ಮೊತ್ತದ ದಂಡವನ್ನು ವಿಧಿಸಿಲ್ಲ. ಆದ್ದರಿಂದ ವಿಚಾರಣಾ ನ್ಯಾಯಾಲಯ ವಿಧಿಸಿರುವ ಶಿಕ್ಷೆ ಖಾಯಂಗೊಳಿಸಿದ್ದು, ದಂಡದ ಮೊತ್ತವನ್ನು ಹೆಚ್ಚಳ ಮಾಡುತ್ತಿರುವುದಾಗಿ ಪೀಠ ತನ್ನ ಆದೇಶದಲ್ಲಿ ತಿಳಿಸಿದೆ. ಅಲ್ಲದೆ, ಅರಣ್ಯ ಸಂರಕ್ಷಣಾ ಕಾಯಿದೆ ಸೆಕ್ಷನ್ 86 ಮತ್ತು 87ರ ಅಡಿಯಲ್ಲಿ ಶಿಕ್ಷೆಯನ್ನು ಎತ್ತಿಹಿಡಿದಿದ್ದು, ಎರಡೂ ಆರೋಪಗಳಿಗೆ ತಲಾ 50 ಸಾವಿರದಂತೆ 1 ಲಕ್ಷ ರು.ಗಳ ದಂಡ ವಿಧಿಸಿ ಆದೇಶ ಹೊರಡಿಸಿದೆ.

ರಾಜ್ಯದಲ್ಲಿ ಮುಂದುವರಿದ ಮಳೆ; ಆರು ಜಿಲ್ಲೆಗಳಿಗೆ ರೆಡ್ ಅಲರ್ಟ್

ಬೆಂಗಳೂರು: ರಾಜ್ಯದಲ್ಲಿ ನೈರುತ್ಯ ಮುಂಗಾರು ಮಳೆ ಆರ್ಭಟ ಮುಂದುವರೆದಿದ್ದು, ಹವಾಮಾನ ಇಲಾಖೆಯು ಎರಡು ದಿನಗಳ ಕಾಲ ಕರಾವಳಿ ಮತ್ತು ಮಲೆನಾಡಿನ ಆರು ಜಿಲ್ಲೆಗಳಿಗೆ ರೆಡ್ ಅಲರ್ಟ್ ನೀಡಲಾಗಿದೆ.

ಕರಾವಳಿ ಜಿಲ್ಲೆಗಳಾದ ಉಡುಪಿ, ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಮಲೆನಾಡು ಜಿಲ್ಲೆಗಳಾದ ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ ಜಿಲ್ಲೆಗಳಿಗೆ ಜುಲೈ.18ರಂದು ರೆಡ್ ಅಲರ್ಟ್ ಹಾಗೂ ಉತ್ತರ ಒಳನಾಡಿನ ಬೆಳಗಾವಿ, ದಕ್ಷಿಣ ಒಳನಾಡಿನ ಹಾಸನ ಜಿಲ್ಲೆಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಕರಾವಳಿ ಜಿಲ್ಲೆಗಳಾದ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಅತಿ ಭಾರೀ ಮಳೆಯಾಗುವ ಸಾಧ್ಯತೆಯಿದೆ. ನಿರಂತರ ಗಾಳಿಯ ವೇಗವು ಪ್ರತಿ ಗಂಟೆಗೆ 30 ರಿಂದ 40 ಕಿಮೀ ತಲುಪುವ ಸಾಧ್ಯತೆಯಿದೆ. ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಜಿಲ್ಲೆಗಳಲ್ಲಿ ಸಹ ಅತ್ಯಂತ ಭಾರೀ ಮಳೆಯಾಗುಲಿದೆ ಮತ್ತು ಅಲ್ಲಿನ ಜಿಲ್ಲೆಗಳಿಗೆ ನಿರಂತರ ಗಾಳಿಯ ವೇಗ 40 ರಿಂದ 50 ಕಿಮೀ ತಲುಪುವ ಸಾಧ್ಯತೆಯಿದೆ. ಒಳನಾಡಿನ ಬೆಳಗಾವಿ ಮತ್ತು ಹಾಸನ ಜಿಲ್ಲೆಗಳಲ್ಲಿ ಸಹ ಭಾರಿ ಗಾಳಿ ಮಳೆಯಾಗಲಿದೆ. ದಕ್ಷಿಣ ಒಳನಾಡಿನ ಮತ್ತು ಉತ್ತರ ಒಳನಾಡಿನ ಉಳಿದ ಜಿಲ್ಲೆಗಳ ಬಹುತೇಕ ಸ್ಥಳಗಳಲ್ಲಿ ಹಗುರದಿಂದ ಸಾಧಾರಣ ಗಾಳಿ ,ಮಳೆ ಬೀಳಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ನಗರದಲ್ಲಿ ಹಗುರದಿಂದ ಸಾಧಾರಣ ಮಳೆ: ಬೆಂಗಳೂರು ನಗರ ಮತ್ತು ಸುತ್ತಮುತ್ತ ಸ್ಥಳಗಳಲ್ಲಿ ಮುಂದಿನ 48 ಗಂಟೆಗಳ ಕಾಲ ಸಾಮಾನ್ಯವಾಗಿ ಮೋಡ ಕವಿದ ಆಕಾಶ ಇರಲಿದೆ. ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ನಿರಂತರ ಗಾಳಿಯ ವೇಗ ಇರಲಿದೆ. ಗರಿಷ್ಠ ಮತ್ತು ಕನಿಷ್ಠ ತಾಪಮಾನವು ಕ್ರಮವಾಗಿ 27 ಡಿಗ್ರಿ ಮತ್ತು 21 ಡಿಗ್ರಿ ದಾಖಲಾಗಲಿದೆ ಎಂದಿದೆ. 45 ರಿಂದ 55 ಕಿ.ಮೀ ವೇಗದಲ್ಲಿ ಬಿರುಗಾಳಿಬೀಸಲಿದೆ. ಕರ್ನಾಟಕ ಕರಾವಳಿಯ ಉದ್ದಕ್ಕೂ ಮತ್ತು ಹೊರಗೆ ಮೇಲ್ಮೈ ಸಾಧಿಸುವ ಸಾಧ್ಯತೆಯಿದೆ. ಆದ್ದರಿಂದ ಮೀನುಗಾರರಿಗೆ ಎಚ್ಚರಿಕೆಯಿಂದ ಇರುವಂತೆ ಹವಾಮಾನ ಇಲಾಖೆ ಸೂಚಿಸಿದೆ.

ನೈರುತ್ಯ ಮುಂಗಾರು ದಕ್ಷಿಣ ಅಂತರಿಕ ಕರ್ನಾಟಕದ ಮೇಲೆ ಸಕ್ರಿಯವಾಗಿದೆ, ಕರಾವಳಿಯಲ್ಲಿ ಸಾಧಾರಣವಾಗಿದೆ. ಕರಾವಳಿ ಮತ್ತು ಪಕ್ಕದ ಪಶ್ಚಿಮ ಘಟ್ಟಗಳ ಜಿಲ್ಲೆಗಳಲ್ಲಿ ಬಲವಾದ ಗಾಳಿ ಒಮ್ಮುಖವಾಗಿದೆ ಕರಾವಳಿಯ ಬಹುತೇಕ ಸ್ಥಳಗಳಲ್ಲಿ ಹಾಗೂ ದಕ್ಷಿಣ ಒಳನಾಡಿನ ಮತ್ತು ಉತ್ತರ ಒಳನಾಡಿನ ಹಲವು ಸ್ಥಳಗಳಲ್ಲಿ ಸ್ಥಳಗಳಲ್ಲಿ ಮಳೆಯಾಗಿದೆ. ಮಂಗಳವಾರದಿಂದ ಅತಿಹೆಚ್ಚು ಮಳೆ 21 ಸೆಂ.ಮೀ.ಶಿವಮೊಗ್ಗ ಜಿಲ್ಲೆಯ ಆಗುಂಬೆಯಲ್ಲಿ ದಾಖಲಾಗಿದೆ.

-ಸಿ.ಎಸ್ ಪಾಟೀಲ್, ನಿರ್ದೇಶಕ ,ಬೆಂಗಳೂರು ಹವಾಮಾನ ಕೇಂದ್ರ

ಪಂಚೆಯುಟ್ಟ ರೈತನಿಗೆ ಪ್ರವೇಶ ನಿರಾಕರಣೆ ಜಿ.ಟಿ.ಮಾಲ್ ವಿರುದ್ಧ ಭುಗಿಲೆದ್ದ ಆಕ್ರೋಶ

ಜಿ.ಟಿ ಮಾಲ್ ಮುಂಭಾಗ ಕನ್ನಡ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಬೆಂಗಳೂರು: ಪಂಚೆಯುಟ್ಟ ಬಂದಿದ್ದಕ್ಕೆ ರೈತನನ್ನು ಒಳಗೆ ಬಿಡದ ಜಿ.ಟಿ ಮಾಲ್ ಸಿಬ್ಬಂದಿ ದರ್ಪ ತೋರಿದ ಘಟನೆ ಬುಧವಾರ ನಡೆದಿದೆ.

ಹಾವೇರಿ ಮೂಲದ ನಾಗರಾಜ್ ಮಂಗಳವಾರ (ಜುಲೈ 16) ತಮ್ಮ ತಂದೆ ತಾಯಿಗೆ ಸಿನಿಮಾ ತೋರಿಸಲು ಬೆಂಗಳೂರಿನ ಮಾಗಡಿ ರಸ್ತೆ ಜಿ.ಟಿ ಮಾಲ್ ಕರೆದೊಯ್ದಿದ್ದು ಘಟನೆ ಬೆಳಕಿಗೆ ಬಂಡ ಬಳಿಕ ಕೋಲಾಹಲ ಸೃಷ್ಟಿಯಾಗಿತ್ತು. ಇದೀಗ ಮಾಲ್ ಮಾಲೀಕರು ಕ್ಷಮೆ ಯಾಚಿಸಿದ ಕಾರಣ ಪ್ರತಿಭಟನೆ ಹಿಂಪಡೆಯಲಾಯಿತು.

ನಾಗರಾಜ್ ತಂದೆ ಪಂಚೆ ಹಾಕಿಕೊಂಡು ತಲೆಗೆ ಪೇಟ ಸುತ್ತಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಸಿಬ್ಬಂದಿ ಅವರನ್ನು ಮಾಲ್ ಒಳಗೆ ಪ್ರವೇಶಿಸಲು ನಿರಾಕರಿಸಿದ್ದಾರೆ. ಪುತ್ರ ನಾಗರಾಜ್ ಎಂಬುವರು ಒಳಗೆ ಬಿಡಿ ಎಂದು ಎಷ್ಟು ಬಾರಿ ಕೇಳಿದರು ಪಂಚೆ ಹಾಕೊಂಡಿದ್ದಾರೆ. ಮಾಲ್ ನಲ್ಲಿ ಪಂಚೆ ಹಾಕಿದವರನ್ನು ಬಿಡುವುದಿಲ್ಲ ಎಂದು ಸಿಬ್ಬಂದಿ ತಮ್ಮದೇ ಮೊಂಡು ವಾದ ಮಾಡಿದ್ದಾರೆ. ಅಲ್ಲದೇ ನಮ್ಮ ಮಾಲಿನಲ್ಲಿ ಈ ರೀತಿ ರೂಲ್ಸ್ ಇದೆ ಎಂದು ಪ್ರವೇಶ ದ್ವಾರದಲ್ಲಿ ಅರ್ಧ ಗಂಟೆಗೂ ಹೆಚ್ಚು ಕಾಲ ಮಾಲ್ ಮುಂದೆ ಕೂರಿಸಿರುವುದು ಅಸಮಾಧಾನಕ್ಕೆ ಕಾರಣವಾಗಿತ್ತು.

ಜಿಟಿ ಮಾಲ್‌ನಲ್ಲಿ ಪಂಚೆಯಲ್ಲಿ ಬಂದ ರೈತನಿಗೆ ಪ್ರವೇಶ ಕೊಡದೆ ರೈತನಿಗೆ ಅಪಮಾನ ಮಾಡಿರುವುದು ಖಂಡನೀಯ. ರೈತರ ಅನ್ನ ತಿನ್ನುವ ಯಾರೇ ಆದರೂ ಇನ್ನು ಮುಂದೆ ಇಂಥ ನಡವಳಿಕೆ ತೋರಿಸಿದರೆ ತಕ್ಕಪಾಠ ಕಲಿಸಬೇಕಾಗುತ್ತದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಪಂಚೆಯಲ್ಲಿ ಬರುತ್ತಾರೆ , ಅವರಿಗೂ ಪ್ರವೇಶ ನೀಡದೆ ನಿಲ್ಲಿಸುತ್ತಾರೆಯೇ. ನಡೆದಿರುವ ಘಟನೆ ರಾಜ್ಯದ ರೈತರಿಗೆ ಮಾಡಿದ ಅಪಮಾನವಾಗಿದೆ. ರೈತನ ಅನ್ನ ತಿನ್ನುವ , ಆತ ಬೆಳೆದ ಹಣ್ಣು ತರಕಾರಿ ಧಾನ್ಯಗಳನ್ನು ಬೆಳೆಯನ್ನು ಮಾರಾಟ ಮಾಡುವ ಈ ಮಾಲ್ ಮಾಲೀಕ ಕೂಡಲೆ ಕ್ಷಮಾಪಣೆ ಕೇಳಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಇಲಾಖೆ ಕಠಿಣ ಕಾನೂನು ಕ್ರಮ ಕೈಗೊಳ್ಳಲಿ.ಇಲ್ಲದಿದ್ದರೆ, ಸಾವಿರಾರು ರೈತರು ಬಾರುಕೋಲುಗಳೊಂದಿಗೆ ಚಡ್ಡಿಯಲ್ಲಿ ಮೆರವಣಿಗೆ ಮೂಲಕ ಮಾಲ್‌ಗೆ ಪ್ರವೇಶಿಸ ಬೇಕಾಗುತ್ತದೆ ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಟೀಕಿಸಿದ್ದರು.

ಹಾವೇರಿ ಮೂಲದ ರೈತರೊಬ್ಬರನ್ನು ಪಂಚೆ ಉಟ್ಟಿದ್ದ ಎಂಬ ಕಾರಣಕ್ಕಾಗಿ ಒಳಬಿಡದೆ ಅವಮಾನ ಮಾಡಿದ ಜಿಟಿ ವರ್ಲ್ಡ್ ಮಾಲ್ ಮುಂದೆ ರೈತ ಸಂಘಟನೆಗಳ ಹಾಗೂ ಕನ್ನಡ ಸಂಘಟನೆಗಳ ಸದಸ್ಯರು ಪಂಚೆ ಉಟ್ಟು ಪ್ರತಿಭಟನೆ ನಡೆಸಿದ್ದರು. ಇದೀಗ ರೈತರಿಗೆ ನ್ಯಾಯ ಸಲ್ಲಿಸಲು ಹೋರಾಟ ನಡೆಸಿದ ಹಾಗೂ ಸಾರ್ವಜನಿಕರ ಮುಂದೆ ರೈತನಿಗೆ ಮಾಡಿದ ಅಪಮಾನಕ್ಕೆ ಮಾಲ್ ಮಾಲಿಕರು ಕ್ಷಮೆ ಯಾಚಿಸಿದ್ದರಿಂದ ಪ್ರತಿಭಟನೆಯನ್ನು ಹಿಂಪಡೆಯಲಾಗಿದೆ. ಈ ನಡುವೆ ಮಾಲ್ ಆಡಳಿತದ ವರ್ತನೆಯ ಬಗ್ಗೆ ಸ್ಪಷ್ಟನೆ ಕೇಳಿ ನೋಟೀಸ್ ನೀಡಲು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ ಮುಂದಾಗಿದೆ. ಕನ್ನಡ ಒಕ್ಕೂಟದ ವಾಟಾಳ್ ನಾಗರಾಜ್ ಅವರು ಪ್ರತಿಭಟನೆ ನಡೆಸುವ ಕುರಿತು ಚಿಂತನೆ ನಡೆಸಿದ್ದಾರೆ. ಅಲ್ಲದೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯಾಧ್ಯಕ್ಷರಾದ ಕೋಡಿಹಳ್ಳಿ ಚಂದ್ರಶೇಖರ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಘಟನೆಯನ್ನು ಖಂಡಿಸಿದ್ದರು.

ರೈತನಿಗೆ ಸನ್ಮಾನ: ಕನ್ನಡಪರ ಹೋರಾಟಗಾರರು, ರೈತರು, ಕೆಲ ಸಚಿವರು ಘಟನೆಯನ್ನು ಖಂಡಿಸಿ ವಿರೋಧಿಸಿದ ಬೆನ್ನಲ್ಲೇ ಇದೀಗ ಮಾಲ್ ಸಿಬ್ಬಂದಿ ತಾವು ಮಾಡಿದ್ದು ತಪ್ಪು ಅಂತಾ ಒಪ್ಪಿಕೊಂಡು, ಪಂಚೆಯಲ್ಲೇ ಬಂದ ರೈತ ಫಕೀರಪ್ಪನಿಗೆ ಮಾಲ್‌ನ ಆಡಳಿತಾಧಿಕಾರಿಗಳು ಒಳಗೆ ಕರೆಸಿ ಸನ್ಮಾನ ಮಾಡಿ ಕ್ಷಮೆಯಾಚಿಸಿದ್ದಾರೆ.

ಕ್ಷಮೆ ಕೇಳಿದ ಸೆಕ್ಯೂರಿಟಿ: ರೈತರನ್ನು ತಡೆದ ಸೆಕ್ಯುರಿಟಿ ಸಿಬ್ಬಂದಿ ಕೂಡ ತಮ್ಮ ಕೃತ್ಯಕ್ಕಾಗಿ ಕ್ಷಮೆ ಯಾಚಿಸಿದ್ದಾರೆ. ಮಂಗಳವಾರ ಮಧ್ಯಾಹ್ನ ವ್ಯಕ್ತಿಯೊಬ್ಬರು ಪಂಚೆಯಲ್ಲಿ ಮಾಲ್‌ಗೆ ಬಂದಿದ್ದರು. ಪಂಚೆಯನ್ನು ಮೊಣಕಾಲಿನ ತನಕ ಧರಿಸಿ ನಿಂತಿದ್ದರು. ಕೆಳಗಿನ ಮಹಡಿಯಲ್ಲಿ ಹುಟ್ಟುಹಬ್ಬದ ಕಾರ್ಯಕ್ರಮ ನಡೆಯುತ್ತಿತ್ತು. ವಿಚಾರವನ್ನು ಮ್ಯಾನೇಜ್‌ಮೆಂಟ್ ಗಮನಕ್ಕೆ ತರಲಾಗಿತ್ತು. ಸಂಜೆ ಮತ್ತೆ ರೈತರೊಬ್ಬರು ಪಂಚೆ ಧರಿಸಿ ಬಂದಿದ್ದರು. ಈ ಸಮಯದಲ್ಲಿ ನಾವು ತಡೆದು, ಮ್ಯಾನೇಜ್‌ಮೆಂಟ್ ಗಮನಕ್ಕೆ ತಂದಿದ್ದೆವು. ಆದರೆ ಉದ್ದೇಶಪೂರ್ವಕವಾಗಿ ತಡೆದಿಲ್ಲ, ಮ್ಯಾನೇಜ್‌ಮೆಂಟ್‌ನಿಂದ ಉತ್ತರ ಬರುವ ತನಕ ಕಾಯಿಸಿದೆವು ಅಷ್ಟೆ ಎಂದು ಸೆಕ್ಯುರಿಟಿ ಅರುಣ್ ಸ್ಪಷ್ಟನೆ ನೀಡಿದ್ದಾರೆ.

> ಪಂಚೆ ಧರಿಸಿಕೊಂಡೇ ಏಳು ವರ್ಷಗಳ ಕಾಲ ಸಿಎಂ ಆಗಿ ಸಿದ್ದರಾಮಯ್ಯ ರಾಜ್ಯದ ಆಡಳಿತ ಮಾಡುತ್ತಿದ್ದಾರೆ. ಇದರಿಂದ ಅವರು ಪಾಠ ಕಲಿಯಬೇಕು. ಜಿ.ಟಿ ಮಾಲ್ ನಡೆಸುತ್ತಿರುವವರಿಗೆ ಬುದ್ಧಿ ಕಡಿಮೆ ಇರಬೇಕು. ನಮ್ಮ ಇಲಾಖೆ ಇಲ್ಲವೇ ಪೊಲೀಸ್ ಇಲಾಖೆಯಿಂದ ಈ ಬಗ್ಗೆ ಪತ್ರ ಬರೆಯುತ್ತೇವೆ.
> -ಸಂತೋಷ್ ಲಾಡ್ ಕಾರ್ಮಿಕ ಸಚಿವ

> ಕೆಲ ವರ್ಷಗಳ ಹಿಂದೆ ಪಂಚೆ ಕಟ್ಟಿಕೊಂಡು ಹೋದರೆ ಕ್ಲಬ್‌ಗಳಲ್ಲಿ ಬಿಡುತ್ತಿರಲಿಲ್ಲ. ಶೂ ಇಲ್ಲದೇ ಪಂಚೆ ಹಾಕಿಕೊಂಡು ಕ್ಲಬ್‌ಗೆ ಹೋಗಬಹುದು ಅಂತ ನಮ್ಮ ಸರಕಾರ ನಿರ್ಧಾರ ಮಾಡಿತ್ತು. ಇದನ್ನು ನಾವು ಅಂದು ಅಧಿವೇಶನದಲ್ಲಿ ಚರ್ಚೆ ಮಾಡಿದ್ದೆವು. ಈಗಲೂ ಇದಕ್ಕೆ ಸರಕಾರ ನಿಯಮ ತರಬೇಕು.
> -ಚೆಲುವರಾಯಸ್ವಾಮಿ ಕೃಷಿ ಸಚಿವ

ಪೊಲೀಸರ ಮೇಲೆ ತಲ್ವಾರ್: ಡ್ರಗ್ಸ್ ಪೆಡ್ಲರ್‌ಗೆ ಗುಂಡೇಟು

ಅಪರಾಧ ಸುದ್ದಿಗಳು

ಬೆಂಗಳೂರು: ಡ್ರಗ್ಸ್ ಪೆಡ್ಲರ್‌ನನ್ನು ಪೊಲೀಸರು ಹಿಡಿಯಲು ಮುಂದಾದಾಗ ಆತ ಪೊಲೀಸರ ಮೇಲೆಯೇ ತಲ್ವಾರ್‌ನಿದ ಹಲ್ಲೆ ನಡೆಸಲು ಯತ್ನಿಸಿದ ಘಟನೆ ನಡೆದಿದೆ. ಟೋಲ್ ಪ್ಲಾಜಾ ಸಮೀಪ ಮೂವರು ವ್ಯಕ್ತಿಗಳು ಮಾದಕವ ಸ್ತುಗಳನ್ನು ಮಾರಾಟ ಮಾಡುತ್ತಿರುವ ಮಾಹಿತಿ ಪಡೆದ ಹೊಸಕೋಟೆ ಇನ್ಸ್‌ಪೆಕ್ಟರ್ ಅಶೋಕ್ ನೇತೃತ್ವದ ತಂಡ ಸ್ಥಳಕ್ಕೆ ತೆರಳುತ್ತಿದ್ದಂತೇ ಸ್ಕೂಟರ್‌ನಲ್ಲಿ ಬಂದಿದ್ದ ಡ್ರಗ್‌ಪೆಡ್ಲರ್ ಸೈಯದ್ ಸುಹೇಲ್ ತನ್ನಲ್ಲಿದ್ದ ಮಾರಕಾಸ್ತ್ರದಿಂದ ಪೊಲೀಸರ ಮೇಲೆ ಹಲ್ಲೆಗೆ ಮುಂದಾಗಿದ್ದಾನೆ. ಈ ವೇಳೆ ಆತ್ಮರಕ್ಷಣೆಗಾಗಿ ಇನ್ಸ್‌ಪೆಕ್ಟರ್ ಅಶೋಕ್, ಆರೋಪಿಯ ಮೇಲೆ ಗುಂಡು ಹಾರಿಸಿದ್ದಾರೆ ಎಂದು ಬೆಂಗಳೂರು ಗ್ರಾಮಾಂತರ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನಾಗರಾಜ್ ತಿಳಿಸಿದ್ದಾರೆ. ಆರೋಪಿ ಕಾಲಿಗೆ ಗುಂಡು ಹಾರಿಸಿ ವಶಕ್ಕೆ ಪಡೆಯಲಾಗಿದೆ. ತಕ್ಷಣ ಆತನನ್ನು ಹೊಸಕೋಟೆ ಸರಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಸರಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಲಾಗಿದೆ. ಹೆಚ್ಚಿನ ಚಿಕಿತ್ಸೆಗಾಗಿ ಎಂ.ವಿ.ಜೆ ಆಸ್ಪತ್ರೆಗೆ ಕರೆದೊಯ್ಯಲಾಯಿತು ಬಂಧಿತ ಡ್ರಗ್ಸ್ ಪೆಡ್ಲರ್ ಈ ಹಿಂದೆ ಯಲಹಂಕ ಪೊಲೀಸರ ಮೇಲೂ ಹಲ್ಲೆ ನಡೆಸಿ ಪರಾರಿಯಾಗಿದ್ದ ಎಂದು ಮಾಹಿತಿ ನೀಡಿದರು. ಪೊಲೀಸರು ಬಂಧಿಸಲು ಹೋದ ವೇಳೆ ಹಲ್ಲೆ ನಡೆಸುವ ಚಾಳಿ ಇಟ್ಟುಕೊಂಡಿದ್ದ. ಆತನ ಮೇಲೆ ಹೊಸಕೋಟೆ ಠಾಣೆಯಲ್ಲಿ ರೌಡಿ ಶೀಟರ್ ತೆರೆಯಲಾಗಿದೆ. ಈ ಹಿಂದೆ 10 ಬೈಕ್‌ಗಳನ್ನು ಕೂಡ ವಶಕ್ಕೆ ಪಡೆದುಕೊಳ್ಳಲಾಗಿದೆ. ಈತ ಹೊರರಾಜ್ಯಗಳಿಂದ ಗಾಂಜಾ ಖರೀದಿಸಿ ಹೊಸಕೋಟೆ ಟೋಲ್ ಬಳಿ ಮಾರಾಟ ಮಾಡುತ್ತಿದ್ದ ಎಂದು ತಿಳಿಸಿದರು.

ವರದಕ್ಷಿಣೆ ಕಿರುಕುಳ: ನೇಣಿಗೆ ಶರಣು

ಬೆಂಗಳೂರು: ಪತಿಯ ವರದಕ್ಷಿಣೆ ಕಿರುಕುಳ ತಾಳಲಾರದೆ 17 ವರ್ಷದ ಅಪ್ರಾಪ್ತೆಯೊಬ್ಬಳು ನೇಣು ಬಿಗಿದುಕೊಂಡು ಅಸುನೀಗಿದ ಘಟನೆ ಬೆಂಗಳೂರಿನ ಬಾಗಲಗುಂಟೆಯಲ್ಲಿ ನಡೆದಿದೆ. ಬಾಗಣ್ಣ ಎಂಬುವವನು 8 ತಿಂಗಳ ಹಿಂದೆ 17 ವರ್ಷದ ಅಪ್ರಾಪ್ತೆಯನ್ನು ಮದುವೆಯಾಗಿದ್ದ. ಆಕೆಯನ್ನು ಮೊದಲು ದೈಹಿಕವಾಗಿ ಬಳಸಿಕೊಂಡು ನಂತರ ವರದಕ್ಷಿಣೆಗಾಗಿ ಕಿರುಕುಳ ನೀಡಲು ಆರಂಭಿಸಿದ ಎಂದು ಮೃತ ಬಾಲಕಿಯ ತಾಯಿ ಸವಿತಾ ಪೊಲೀಸರಿಗೆ ದೂರು ನೀಡಿದ್ದಾರೆ. ಒಂದೇ ಕುಟುಂಬದ ಐವರು ಸದಸ್ಯರ ವಿರುದ್ಧ ಪ್ರಕರಣ ದಾಖಲಾಗಿದೆ.

ವಿದ್ಯಾಭಾರತಿ ಕರ್ನಾಟಕ ಸಂಕುಲ ಹಾಗೂ ಆನೇಕಲ್ಲಿನ ಗುರೂಜಿ ವಿದ್ಯಾನಿಕೇತನ ಸಹಯೋಗದಲ್ಲಿ ನಡೆದ ಜಿಲ್ಲಾ ಶೈಕ್ಷಣಿಕ ಸಹಮಿಲನ ಕಾರ್ಯಕ್ರಮದಲ್ಲಿ ಸಮಸ್ತ ವಿಕಾಸ ಶಿಕ್ಷಣ ಕಾರ್ಯಾಗಾರ ನಡೆಸಲಾಯಿತು. ವೇದವಿಜ್ಞಾನ ಶೋಧ ಸಂಸ್ಥಾನದ ರಾಮಚಂದ್ರ ಭಟ್ ಉಪನ್ಯಾಸ ನೀಡಿದರು. ಈ ವೇಳೆ ಬಿಇಒ ಜಯಲಕ್ಷ್ಮೀ, ಸರಸ್ವತಿ ವಿದ್ಯಾಮಂದಿರದ ಸುರೇಶ್, ನರಸಪ್ಪ, ಚಂದ್ರಣ್ಣ, ನಾಗರಾಜು, ಗೋಪಾಲಕೃಷ್ಣ ಪಾಲ್ಗೊಂಡಿದ್ದರು.

ವಿರಾಮ
ಪ್ರತಿ ಭಾನುವಾರ

CreditAccess Grameen

ಕ್ರೆಡಿಟ್‌ಆ್ಯಕ್ಸೆಸ್ ಗ್ರಾಮೀಣ್ ಲಿಮಿಟೆಡ್
ನಂ. 49, 46ನೇ ಕ್ರಾಸ್, 8ನೇ ಬ್ಲಾಕ್, ಜಯನಗರ, ಬೆಂಗಳೂರು 560070
ಟೆಲಿಫೋನ್: +91 80 22637300 / ಫ್ಯಾಕ್ಸ್: +91 80 26643433
ಈಮೇಲ್: cs@cagrameen.in ವೆಬ್‌ಸೈಟ್: www.creditaccessgrameen.in
CIN: L51216KA1991PLC053425

33ನೇ ವಾರ್ಷಿಕ ಸಾಮಾನ್ಯ ಸಭೆ ಮತ್ತು ಇ-ಮತದಾನದ ಸೂಚನೆ

ಜುಲೈ 05, 2024 ರಂದು ಹೊರಡಿಸಿರುವ, ವಾರ್ಷಿಕ ಸರ್ವಸದಸ್ಯರ ಸಭೆಯನ್ನು (ಎಜಿಎಂ) ಕರೆಯುವ ಸೂಚನೆಯಲ್ಲಿ ಹೇಳಿರುವಂತಹ ವ್ಯವಹಾರಗಳನ್ನು ನಡೆಸುವ ಸಲುವಾಗಿ ಸೋಮವಾರ, ಆಗಸ್ಟ್ 12, 2024 ರಂದು ಬೆಳಗ್ಗೆ 11.00 ಗಂಟೆಗೆ (ಭಾ.ಕಾ.) ಕ್ರೆಡಿಟ್‌ಆ್ಯಕ್ಸೆಸ್ ಗ್ರಾಮೀಣ್ ಲಿಮಿಟೆಡ್‌ನ ("ಕಂಪನಿ") 33ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು (ಎಜಿಎಂ) ವಿಡಿಯೋ ಕಾನ್ಫರೆನ್ಸಿಂಗ್/ಇತರ ಶ್ರವಣ-ದೃಶ್ಯ ವಿಧಾನಗಳ ("ವಿ.ಸಿ.") ಮೂಲಕ ನಡೆಸಲಾಗುವುದು ಎಂದು ಈ ಮೂಲಕ ಸೂಚನೆ ನೀಡಲಾಗುತ್ತಿದೆ. ಕಾರ್ಪೊರೇಟ್ ವ್ಯವಹಾರಗಳ ಮಂತ್ರಾಲಯವು (ಎಂಸಿಎ) ಹೊರಡಿಸಿರುವ 14/2020, 17/2020, 20/2020/ 02/2021 2/2022, 10/2022 ಮತ್ತು 09/2023 ಸುತ್ತೋಲೆಗಳು ಮತ್ತು ಭಾರತೀಯ ಸೆಕ್ಯುರಿಟೀಸ್ ಎಕ್ಸ್‌ಚೇಂಜ್ ಬೋರ್ಡ್ ಹೊರಡಿಸಿರುವ SEBI/HO/CFD/PoD-2/P/CIR/2023/4 ಮತ್ತು SEBI/HO/CFD/CFD-PoD-2/P/CIR/2023/167 ಸುತ್ತೋಲೆಗಳ ಅನುಸಾರ (ಇನ್ನು ಮುಂದೆ ಒಟ್ಟಾಗಿ "ಸುತ್ತೋಲೆಗಳು"), ಕಂಪನಿಗಳು ಎಜಿಎಂ ಗಳನ್ನು ಒಂದು ಸಾಮಾನ್ಯ ಸ್ಥಳದಲ್ಲಿ ಸದಸ್ಯರು ಭೌತಿಕವಾಗಿ ಸೇರುವ ಅಗತ್ಯವಿಲ್ಲದೆಯೇ ವಿ.ಸಿ. ಮೂಲಕ ನಡೆಸಬಹುದಾಗಿದೆ.

ಸದರಿ ಸುತ್ತೋಲೆಗಳಿಗೆ ಅನುಸಾರವಾಗಿ, ಕಂಪನಿ/ಡಿಪಾಸಿಟರಿ ಪಾರ್ಟಿಸಿಪೆಂಟರು/ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರೊಂದಿಗೆ ತಮ್ಮ ಇಮೇಲ್ ಐಡಿಗಳನ್ನು ನೋಂದಾಯಿಸಿಕೊಂಡಿರುವ ಎಲ್ಲ ಸದಸ್ಯರಿಗೂ ಎಜಿಎಂ ಸೂಚನೆಯನ್ನು ಮತ್ತು 2023-24 ಸಾಲಿನ ವಾರ್ಷಿಕ ವರದಿಯ ವಿದ್ಯುನ್ಮಾನ ಪ್ರತಿಗಳನ್ನು ಕಳುಹಿಸಲಾಗಿದೆ. ಈ ದಾಖಲೆಗಳು ಕಂಪನಿಯ ವೆಬ್‌ಸೈಟ್ www.creditaccessgrameen.in, ಸ್ಟಾಕ್ ಎಕ್ಸ್‌ಚೇಂಜ್‌ಗಳ www.bseindia.com ಮತ್ತು www.nseindia.com, ಮತ್ತು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ (RTA) ಆಗಿ ನೇಮಕಗೊಂಡಿರುವ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ (ಕೆಫಿನ್‌ಟೆಕ್) ನ https://evoting.kfintech.com ವೆಬ್‌ಸೈಟ್‌ಗಳಲ್ಲಿ ಲಭ್ಯವಿರುತ್ತವೆ. ಇಮೇಲ್‌ಗಳ ಮೂಲಕ ಎಜಿಎಂ ಸೂಚನೆಯ ರವಾನೆ ಮಾಡುವ ಕೆಲಸ ಜುಲೈ 17, 2024 ರಂದು ಪೂರ್ಣಗೊಂಡಿದೆ.

ಅಂತಿಮ ದಿನಾಂಕವಾದ ಆಗಸ್ಟ್ 05, 2024 ರಂದು ಭೌತಿಕ ಅಥವಾ ಡೀಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು, ಆರ್‌ಟಿಎ ನ ವಿದ್ಯುನ್ಮಾನ ಮತದಾನ ವ್ಯವಸ್ಥೆ ('ರಿಮೋಟ್ ಇ-ವೋಟಿಂಗ್') ಮೂಲಕ ಎಜಿಎಂ ಸೂಚನೆಯಲ್ಲಿ ಸೂಚಿಸಿರುವಂತಹ ವ್ಯವಹಾರಗಳ ಮೇಲೆ ವಿದ್ಯುನ್ಮಾನವಾಗಿ ಮತ ಚಲಾಯಿಸಬಹುದು. ಸದಸ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ:

1) ಎಜಿಎಂ ಸೂಚನೆಯಲ್ಲಿ ಸೂಚಿಸಲಾದ ವ್ಯವಹಾರಗಳನ್ನು ರಿಮೋಟ್ ಇ-ವೋಟಿಂಗ್ ಅಥವಾ ಎಜಿಎಂ ನಲ್ಲಿನ ಇ-ವೋಟಿಂಗ್ ವ್ಯವಸ್ಥೆ ಮೂಲಕ ನಡೆಸಬಹುದು;
2) ಡಿವಿಡೆಂಡಿಗೆ ರೆಕಾರ್ಡ್ ದಿನಾಂಕ: ಶುಕ್ರವಾರ, ಜುಲೈ 26, 2024ರಂದು ನಿಗದಿಪಡಿಸಲಾಗಿದೆ.
3) ಪುಸ್ತಕ ಮುಚ್ಚುವ ದಿನಾಂಕ: ಜುಲೈ 27, 2024 ರಿಂದ ಆಗಸ್ಟ್ 12, 2024 (ಎರಡೂ ದಿನಗಳು ಸೇರುತ್ತವೆ)
4) ಡಿವಿಡೆಂಡ್ ಪ್ರಕಟವಾದರೆ ಅದನ್ನು ಶುಕ್ರವಾರ, ಆಗಸ್ಟ್ 23, 2024 ರಂದು ಅಥವಾ ಮುಂಚಿತವಾಗಿ ಪಾವತಿಸಲಾಗುತ್ತದೆ
5) ರಿಮೋಟ್ ಇ-ವೋಟಿಂಗ್ ಅಥವಾ ಎಜಿಎಂ ನಲ್ಲಿ ಇ-ವೋಟಿಂಗ್ ವ್ಯವಸ್ಥೆ ಮೂಲಕ ಮತ ಚಲಾಯಿಸಲು ಅರ್ಹತೆಯನ್ನು ನಿರ್ಧರಿಸಲು ಸೋಮವಾರ, ಆಗಸ್ಟ್ 05, 2024, ಕೊನೆಯ ದಿನಾಂಕವಾಗಿರುತ್ತದೆ;
6) ರಿಮೋಟ್ ಇ-ವೋಟಿಂಗ್ ಗುರುವಾರ, ಆಗಸ್ಟ್ 08, 2024 ರಂದು ಬೆಳಗ್ಗೆ 09.00 (ಭಾ.ಕಾ) ಕ್ಕೆ ಪ್ರಾರಂಭವಾಗುತ್ತದೆ;
7) ರಿಮೋಟ್ ಇ-ವೋಟಿಂಗ್ ಭಾನುವಾರ, ಆಗಸ್ಟ್ 11, 2024 ರಂದು ಸಂಜೆ 05.00 (ಭಾ.ಕಾ) ಕ್ಕೆ ಕೊನೆಗೊಳ್ಳುತ್ತದೆ;
8) ರಿಮೋಟ್ ಇ-ವೋಟಿಂಗ್ ಮಾಡ್ಯೂಲನ್ನು ಆಗಸ್ಟ್ 11, 2024 ರಂದು ಸಂಜೆ 05.00 (ಭಾ.ಕಾ) ಕ್ಕೆ ನಿಷ್ಕ್ರಿಯಗೊಳಿಸಲಾಗುತ್ತದೆ;
9) ಅಂತಿಮ ದಿನಾಂಕದಂದು ಯಾರೆಲ್ಲ ಸದಸ್ಯರ ಹೆಸರು ಸದಸ್ಯರ ರಿಜಿಸ್ಟರಿನಲ್ಲಿ ಅಥವಾ ಫಲಾನುಭವಿಗಳ ರಿಜಿಸ್ಟರಿನಲ್ಲಿ ಇರುವುದೋ ಅಂತಹ ಸದಸ್ಯರು ಮಾತ್ರವೇ ರಿಮೋಟ್ ಇ-ವೋಟಿಂಗ್ ಮತ್ತು ಎಜಿಎಂ ನಲ್ಲಿ ವೋಟಿಂಗ್ ಸೌಲಭ್ಯಕ್ಕೆ ಅರ್ಹರಾಗಿರುತ್ತಾರೆ;
10) ಎಜಿಎಂ ಸೂಚನೆಯ ನಂತರ ಕಂಪನಿಯ ಷೇರುಗಳನ್ನು ಪಡೆದುಕೊಂಡು ಕಂಪನಿಯ ಸದಸ್ಯರಾಗುವ ಮತ್ತು ಅಂತಿಮ ದಿನಾಂಕವಾದ ಸೋಮವಾರ, ಆಗಸ್ಟ್ 05, 2024 ರಂದು ಷೇರುಗಳನ್ನು ತನ್ನ ಹೆಸರಲ್ಲಿ ಹೊಂದಿರುವ ಯಾವುದೇ ವ್ಯಕ್ತಿ, einward.ris@kfintech.com ಗೆ ವಿನಂತಿಯನ್ನು ಕಳುಹಿಸಿ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಗಳನ್ನು ಪಡೆಯಬಹುದು. ಒಂದೊಮ್ಮೆ ಸದಸ್ಯರು ಈಗಾಗಲೇ ಇ-ವೋಟಿಂಗ್‌ಗಾಗಿ ಆರ್.ಟಿ.ಎ. ನಲ್ಲಿ ನೋಂದಾಯಿಸಿಕೊಂಡಿದ್ದರೆ, ಅಸ್ತಿತ್ವದಲ್ಲಿರುವ ಬಳಕೆದಾರ ಐಡಿ ಮತ್ತು ಪಾಸ್‌ವರ್ಡ್ ಬಳಸಿಕೊಂಡು ಮತ ಚಲಾಯಿಸಬಹುದು.
11) ಸದಸ್ಯರ ಗಮನಕ್ಕೆ: ಎ) ಸದಸ್ಯರೊಬ್ಬರು ಒಮ್ಮೆ ನಿರ್ಣಯದ ಮೇಲೆ ಮತ ಚಲಾಯಿಸಿದ ನಂತರ ಅದನ್ನು ಬದಲಾಯಿಸಲು ಸದಸ್ಯರಿಗೆ ಅವಕಾಶವಿರುವುದಿಲ್ಲ; ಬಿ) ಎಜಿಎಂ ಸಮಯದಲ್ಲಿ ಇ-ಮತದಾನದ ಸೌಲಭ್ಯ ಸಹ ಲಭ್ಯವಿರುತ್ತದೆ ಮತ್ತು ವಿಸಿ ಸೌಲಭ್ಯದ ಮೂಲಕ ಎಜಿಎಂನಲ್ಲಿ ಹಾಜರಿರುವ, ರಿಮೋಟ್ ಇ-ವೋಟಿಂಗ್ ಮೂಲಕ ನಿರ್ಣಯಗಳ ಮೇಲೆ ತಮ್ಮ ಮತವನ್ನು ಚಲಾಯಿಸಿರದ ಸದಸ್ಯರು ಮತ್ತು ಹಾಗೆ ಮತ ಚಲಾಯಿಸಲು ಯಾವುದೇ ನಿರ್ಬಂಧಕ್ಕೆ ಒಳಗಾಗದವರು, ಎಜಿಎಂ ನಲ್ಲಿ ಇ-ವೋಟಿಂಗ್ ವ್ಯವಸ್ಥೆ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ. ಸಿ) ಎಜಿಎಂ ಗೆ ಮೊದಲು ರಿಮೋಟ್ ಇ-ವೋಟಿಂಗ್ ಮೂಲಕ ಮತ ಚಲಾಯಿಸಿರುವ ಸದಸ್ಯರು ಸಹ ಎಜಿಎಂ ಗೆ ಹಾಜರಾಗಬಹುದು ಆದರೆ ಮತ್ತೆ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ;
12) ಡೀಮ್ಯಾಟ್ ವಿಧಾನದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರಿಗೆ ಮತ್ತು ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿರದ ಸದಸ್ಯರು ರಿಮೋಟ್ ವೋಟಿಂಗ್ ಮಾಡುವ ವಿಧಾನವನ್ನು ಎಜಿಎಂ ಸೂಚನೆಯಲ್ಲಿ ತಿಳಿಸಲಾಗಿದೆ. ವಿವರಗಳು ಕಂಪನಿಯ ವೆಬ್‌ಸೈಟ್ www.creditaccessgrameen.in ನಲ್ಲಿಯೂ ಲಭ್ಯವಿರುತ್ತವೆ;
13) ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸಿರದ ಮತ್ತು ಅದರ ಪರಿಣಾಮವಾಗಿ ವಾರ್ಷಿಕ ವರದಿ, ಇ-ಎಜಿಎಂ ಸೂಚನೆಯನ್ನು ಸ್ವೀಕರಿಸಿರದ ಷೇರುದಾರರು, https://ris.kfintech.com/email_registration/.In ನಲ್ಲಿ ಒದಗಿಸಲಾದ ಸೂಚನೆಗಳನ್ನು ಅನುಸರಿಸುತ್ತ ತಮ್ಮ ಇಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ಕಂಪನಿಯ ಆರ್.ಟಿ.ಎ. ಜೊತೆ ತಾತ್ಕಾಲಿಕವಾಗಿ ನೋಂದಾಯಿಸಬಹುದು. ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ಸಂಬಂಧಪಟ್ಟ ವಿವರಗಳ ಸಹಿತ, ಐಎಸ್‌ಆರ್-1 ನಮೂನೆಯಲ್ಲಿ ತಮ್ಮ ಇಮೇಲ್ ವಿಳಾಸ ಹಾಗೂ ಸಂಪರ್ಕ ವಿವರಗಳನ್ನು einward.ris@kfintech.com ಗೆ ಕಳುಹಿಸಬೇಕಾಗಿ ವಿನಂತಿ; ಯಾವುದೇ ಪ್ರಶ್ನೆಗಳಿದ್ದಲ್ಲಿ, ಷೇರುದಾರರು einward.ris@kfintech.com ಗೆ ಬರೆಯಬಹುದು;
14) ವಾರ್ಷಿಕ ವರದಿ ಮತ್ತು ಇ-ಎಜಿಎಮ್ ಸೂಚನೆಯನ್ನು ಡೌನ್‌ಲೋಡ್ ಮಾಡಲು ಷೇರುದಾರರು ಕಂಪನಿಯ ವೆಬ್‌ಸೈಟ್ www.creditaccessgrameen.in ಅಥವಾ ಆರ್.ಟಿ.ಎ ವೆಬ್‌ಸೈಟ್ https://evoting.kfintech.com/ ಗೆ ಭೇಟಿ ನೀಡಬಹುದು;
15) ಯಾವುದೇ ಪ್ರಶ್ನೆಗಳಿದ್ದಲ್ಲಿ, ಷೇರುದಾರರು einward.ris@kfintech.com ಗೆ ಬರೆಯಬಹುದು ಅಥವಾ ಶ್ರೀ ಬಾಲಮುರಳಿ ಶ್ರೀಧರ್, ಮ್ಯಾನೇಜರ್, ಕೆಫಿನ್‌ಟೆಕ್ ಇವರನ್ನು ಸಂಪರ್ಕಿಸಬಹುದು – ನಿಶುಲ್ಕ ಸಂಪರ್ಕ ಸಂ. 1800 345 4001.
16) ಪರ್ಯಾಯವಾಗಿ ಸದಸ್ಯರು ವಾರ್ಷಿಕ ವರದಿ, ಎಜಿಎಂ ಸೂಚನೆ ಮತ್ತು ಅದರ ಜೊತೆಗೆ ರಿಮೋಟ್ ಇ-ವೋಟಿಂಗ್ ಸೂಚನೆಗಳನ್ನು ಸ್ವೀಕರಿಸಲು einward.ris@kfintech.com ಗೆ ವಿನಂತಿಯನ್ನು ಕಳುಹಿಸಬಹುದು; ಅದರೊಂದಿಗೆ ಸಹಿ ಮಾಡಿದ ವಿನಂತಿಯ ಪತ್ರದ ಸ್ಕ್ಯಾನ್ ಮಾಡಿದ ಪ್ರತಿ, ಇಮೇಲ್ ವಿಳಾಸ, ಮೊಬೈಲ್ ಸಂಖ್ಯೆ, ಸ್ವಯಂ-ದೃಢೀಕರಿಸಿದ ಪಾನ್ ನಕಲು ಮತ್ತು ಕ್ಲೈಂಟ್ ಮಾಸ್ಟರ್ ಪ್ರತಿಯನ್ನು ಕಳುಹಿಸಬೇಕು.

ಕ್ರೆಡಿಟ್‌ಆ್ಯಕ್ಸೆಸ್ ಗ್ರಾಮೀಣ್ ಲಿಮಿಟೆಡ್ ಗಾಗಿ
ಸಹಿ/-
ಸ್ಥಳ: ಬೆಂಗಳೂರು
ದಿನಾಂಕ: ಜುಲೈ 17, 2024
ಎಂ.ಜೆ. ಮಹದೇವ್ ಪ್ರಕಾಶ್
ಕಂಪನಿ ಸೆಕ್ರೆಟರಿ ಮತ್ತು ಚೀಫ್ ಕಂಪ್ಲಯನ್ಸ್ ಆಫೀಸರ್

S.J.S. ENTERPRISES LIMITED

Registered and Corporate Office: Sy No 28/P16 of Agra Village and Sy No 85/P6 of B.M Kaval Village, Kengeri Hobli, Bangalore 560 082, Karnataka, India
Website: www.sjsindia.com | E-mail: compliance@sjsindia.com
Tel: +91 80 6194 0777 | CIN: L51909KA2005PLC036601

INFORMATION TO SHAREHOLDERS' REGARDING 19TH ANNUAL GENERAL MEETING AND FINAL DIVIDEND

Annual General Meeting through Video Conferencing / Other Audio Visual Means:

The Nineteenth (19th) Annual General Meeting ('AGM') of the Members of **S.J.S. Enterprises Limited ('Company') will be held on Tuesday, 20th August, 2024 at 03:30 p.m. (IST) through Video Conferencing ('VC') or Other Audio Visual Means ('OAVM')** to transact the businesses as set out in the Notice of AGM which is being circulated for convening the AGM.

The AGM will be convened through VC or OAVM in accordance with the Companies Act, 2013 and the Rules made thereunder read with the General Circular No. 20/2020 dated May 5, 2020 read with General Circular No. 14/2020 dated April 8, 2020 and General Circular No. 17/2020 dated April 13, 2020, General Circular No. 02/ 2021 dated January 13, 2021, General Circular No. 19/ 2021 dated December 8, 2021, General Circular No. 21/ 2021 dated December 14, 2021, General Circular No. 02/ 2022 dated May 5, 2022, General Circular No. 10/ 2022 dated December 28, 2022, General Circular No. 09/ 2023 dated September 25, 2023 , ("MCA Circulars")

In accordance with the aforesaid MCA Circulars and Circular Nos. SEBI/HO/CFD/CMD1/CIR/P/2020/79 dated May 12, 2020, SEBI/HO/CFD/CMD2/CIR/P/2021/11 dated January 15, 2021, SEBI/HO/CFD/PoD-2/P/CIR/2023/4 dated January 05, 2023 and SEBI/HO/CFD/CFD-PoD-2/P/ CIR/2023/167 dated October 7, 2023 ("SEBI Circulars").

The Notice of the AGM along with the Explanatory Statement under Section 102 of the Companies Act, 2013 and Annual Report 2023-24 will be sent to the Members of the Company through electronic means whose e-mail addresses are registered with the Company/ Registrar and Share Transfer Agent ('RTA')/ Depository Participants ('DPs').

Dissemination on the Website:

An electronic copy of the Annual Report 2023-24 of the Company, inter alia, containing the Notice and the Explanatory Statement of the AGM will be available on the website of the Company at www.sjsindia.com, websites of the Stock Exchanges viz. BSE Limited at www.bseindia.com and National Stock Exchange of India Limited at www.nseindia.com and on the website of Link Intime India Private Limited ('LIIPL') at https://instavote.linkintime.co.in.

Manner of registration of e-mail address:

Members who have not registered their e-mail address with the Company are requested to follow the below process to register their e-mail address:

Demat Shareholders	The shareholders are requested to register their e-mail address, in respect of demat holdings with the respective DP by following the procedure prescribed by the DP.
Physical Shareholders	Write an e-mail with a request letter mentioning name, folio number, scan copy of self-attested PAN, cancelled cheque leaf bearing name of the Member and copy of physical share certificate to LIIPL at rnt.helpdesk@linkintime.co.in.

Manner of Casting Votes:

The Company is pleased to offer the e-Voting facility before the AGM through remote e-Voting and during the AGM to its shareholders in respect of the businesses to be transacted at the AGM and for this purpose, the Company has appointed LIIPL for facilitating voting through electronic means.

In case e-mail ID is registered with the Company/ RTA/ DP	Detailed procedure w.r.t. e-Voting will be sent to the registered e-mail ID and also will be available in the Notice of AGM.
In case holding shares in physical form or e-mail ID is not registered with the Company/ RTA/ DP	Detailed procedure w.r.t. e-Voting will be available in the Notice of AGM.

A person, whose name is recorded in the register of members of the Company, as on the cut-off date i.e. 13th August 2024, only shall be entitled to avail the facility of e-Voting, either through remote e-Voting or voting at the AGM.

Record Date and Dividend:

Members may note that the board of Directors of the Company at its meeting held on 20th May 2024 has recommended a dividend of Rs. 2 (20%) per Ordinary (Equity) Share of the face value of Rs. 10 per share. The dividend, if declared at the AGM, will be paid, subject to deduction of tax at source. Pursuant to Regulation 42 of the SEBI (Listing Obligations and Disclosure Requirements) Regulations 2015, the Board has fixed Tuesday, 13th August 2024, as Record Date for determining the Members entitled to receive the dividend for the financial year ended on March 31, 2024.

Process for updating bank account details to receive dividend

Members who have not updated their bank account details for receiving the dividend directly in their bank accounts through Electronic Clearing Service or any other means may follow the below instructions:

Members holding shares in physical form	Register/update the details in the prescribe Form ISR – 1 and other relevant forms with RTA and said form is available on the website of the RTA at https://liiplweb.linkintime.co.in/KYC-downloads.html Please note: Pursuant to applicable SEBI circulars, with effect from April 1, 2024, dividend to shareholders holding shares in physical form shall be paid by the Company only through electronic mode. Such payments shall be made to eligible shareholders only after they have furnished their PAN, contact details (postal address with PIN and mobile number), bank account details, specimen signature, etc for their corresponding physical folios with the Company or RTA.
Members holding shares in demat form	Register/Update the details in your demat account, as per the process advised by your Depository Participant

Tax on Dividend:

It may be noted by Members that according to the Income Tax Act, 1961, as amended by the Finance Act, 2020, any dividends paid or distributed by the Company after April 01, 2020, shall be subject to tax in the hands of the Members, and the Company will be required to deduct Tax at Source ("TDS") at the rates prescribed by the law. To explain the process of withholding tax from dividends paid to shareholders at the prescribed rates, the Company has sent an email communication dated 08th July 2024, to all the Members whose email IDs are registered with the Company/ Depositories. The communication also includes necessary annexures.

For S.J.S. Enterprises Limited
Sd/-
Date: 17th July, 2024
Place: Bangalore
Thabraz Hushain W
Company Secretary & Compliance Officer
CONCEPT

ನಮೂನೆ-ಎ
ಸಾರ್ವಜನಿಕ ಪ್ರಕಟಣೆ
(ನಿಯಂತ್ರಣ 14 ರ ಇನ್‌ಸಾಲ್ವೆನ್ಸಿ ಮತ್ತು ಬ್ಯಾಂಕ್‌ರಪ್ಸಿ ಬೋರ್ಡ್ ಆಫ್ ಇಂಡಿಯಾ ಅಡಿಯಲ್ಲಿ (ಸ್ವಯಂ ದಿವಾಳಿತನ ಪ್ರಕ್ರಿಯೆ) ನಿಯಮಗಳು, 2017)
ಟೂಲ್‌ಬಾಕ್ಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಇದರ ಸ್ಟೇಕ್‌ಹೋಲ್ಡರ್‌ಗಳ ಗಮನಕ್ಕೆ

1	ಕಾರ್ಪೊರೇಟ್ ವ್ಯಕ್ತಿಯ ಹೆಸರು	ಟೂಲ್‌ಬಾಕ್ಸ್ ಟೆಕ್ನಾಲಜೀಸ್‌ಪ್ರೈವೇಟ್ ಲಿಮಿಟೆಡ್
2	ಕಾರ್ಪೊರೇಟ್ ವ್ಯಕ್ತಿಯ ಪ್ರಾರಂಭದ ದಿನ	30ನೇ ನವೆಂಬರ್ 2021
3	ಯಾವ ಅಥಾರಿಟಿಯ ಕೆಳಗೆ ಕಾರ್ಪೊರೇಟ್ ವ್ಯಕ್ತಿಯ ಆರಂಭ / ನೋಂದಣೆ ಆಗಿರುವುದು	ರಿಜಿಸ್ಟ್ರಾರ್ ಆಫ್ ಕಂಪನೀಸ್– ಬೆಂಗಳೂರು
4	ಕಾರ್ಪೊರೇಟ್ ವ್ಯಕ್ತಿಯ ಗುರುತು ಸಂಖ್ಯೆ/ ಸೀಮಿತ ಬಾಧ್ಯತಾ ಗುರುತು ಸಂಖ್ಯೆ	U72900KA2021PTC155011
5	ಕಾರ್ಪೊರೇಟ್ ವ್ಯಕ್ತಿಯ ನೋಂದಾಯಿತ ಕಛೇರಿ ಮತ್ತು ಮುಖ್ಯ ಕಛೇರಿ (ಯಾವುದಾದರೂ ಇದ್ದಲ್ಲಿ) ಅದರ ವಿಳಾಸ	ಸಲಾರ್‌ಪುರಿಯ ಗ್ರೀನೇಜ್, ಫ್ಲ್ಯಾಟ್ ಎ101 1ನೇ ಮಹಡಿ, ಜೆ ಬ್ಲಾಕ್, ಹೊಸೂರು ಮುಖ್ಯ ರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು ಕರ್ನಾಟಕ, ಭಾರತ–560068.
6	ಕಾರ್ಪೊರೇಟ್ ಸಾಲಗಾರನ ಲಿಕ್ವಿಡೇಶನ್ ಪ್ರಕ್ರಿಯೆ ಆರಂಭದ ದಿನಾಂಕ	13ನೇ ಜುಲೈ 2024
7	ಲಿಕ್ವಿಡೇಟರ್‌ರವರ ಹೆಸರು, ವಿಳಾಸ, ದೂರವಾಣಿ ಸಂಖ್ಯೆ ಮತ್ತು ಇ-ಮೇಲ್ ಐಡಿ ಹಾಗೂ ನೋಂದಣಿ ಸಂಖ್ಯೆ	ಹೆಸರು : ಅನಘ ಅನಸಿಂಗರಾಜು ವಿಳಾಸ : 1–2, ಐಶ್ವರ್ಯ ಸಂಕುಲ್ 17 ಜಿ.ಎ. ಕುಲಕರ್ಣಿ ಪಾತ್, ಜೋಶೀಸ್ ರೈಲ್ವೆ ಮ್ಯೂಸಿಯಂ ಎದುರು, ಕೊತ್ರೂಡ್ ಪುಣೆ–411038 ಇ–ಮೇಲ್ : rp.anagha@kanjcs.com ದೂರವಾಣಿ ಸಂ. : 020-25466265/ 25461561 ನೋಂದಣಿ ಸಂ.: IBBI/IPA-002/ IP-N00247/2017-18/10732
8	ಕ್ಲೈಮುಗಳನ್ನು ಸಲ್ಲಿಸಲು ಕೊನೆಯ ದಿನಾಂಕ	12ನೇ ಆಗಸ್ಟ್ 2024

ಟೂಲ್‌ಬಾಕ್ಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ 13ನೇ ಜುಲೈ 2024 ರಂದು ತನ್ನ ಸ್ವಯಂ ದಿವಾಳಿತನ ಪ್ರಕ್ರಿಯೆಯನ್ನು ಆರಂಭಿಸಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ.
ಟೂಲ್‌ಬಾಕ್ಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ನ ಎಲ್ಲ ಸ್ಟೇಕ್‌ಹೋಲ್ಡರ್‌ಗಳಿಗೆ 12ನೇ ಆಗಸ್ಟ್2024 ರಂದು ಅಥವಾ ಅದಕ್ಕೂ ಮೊದಲು ತಮ್ಮ ಹಕ್ಕುಗಳನ್ನು ಪುರಾವೆಗಳೊಂದಿಗೆ ವಸ್ತು ಸಂಖ್ಯೆ 7ರಲ್ಲಿ ನೀಡಿರುವ ಲಿಕ್ವಿಡೇಟರ್‌ರವರ ವಿಳಾಸಕ್ಕೆ ಸಲ್ಲಿಸಲು ಕರೆ ನೀಡಲಾಗಿದೆ.
ಹಣಕಾಸು ಸಾಲಗಾರರು ತಮ್ಮ ಹಕ್ಕುಗಳನ್ನು ಎಲೆಕ್ಟ್ರಾನಿಕ್ ವಿಧಾನದಿಂದ ಮಾತ್ರ ಪುರಾವೆಯೊಂದಿಗೆ ಸಲ್ಲಿಸಬೇಕು. ಉಳಿದ ಎಲ್ಲಾ ಸ್ಟೇಕ್ ಹೋಲ್ಡರ್‌ಗಳು ಪುರಾವೆಗಳೊಂದಿಗೆ ಖುದ್ದಾಗಿ, ಅಂಚೆ ಮೂಲಕ ಅಥವಾ ಎಲೆಕ್ಟ್ರಾನಿಕ್ ಮಾಧ್ಯಮ ಮೂಲಕ ತಮ್ಮ ಕ್ಲೈಮುಗಳನ್ನು ಸಲ್ಲಿಸಬೇಕು.
ಹಕ್ಕಿನ ಸುಳ್ಳು ಅಥವಾ ದಾರಿ ತಪ್ಪಿಸುವ ಪುರಾವೆಗಳನ್ನು ಸಲ್ಲಿಸಿದಲ್ಲಿ ದಂಡ ತೆರಬೇಕಾಗುವುದು
ದಿನಾಂಕ: 15ನೇ ಜುಲೈ 2024
ಸ್ಥಳ: ಪುಣೆ
ಅನಘ ಅನಸಿಂಗರಾಜು
ಲಿಕ್ವಿಡೇಟರ್

ನಮೂನೆ-ಎ
ಸಾರ್ವಜನಿಕ ಪ್ರಕಟಣೆ
(ನಿಯಂತ್ರಣ 14 ರ ಇನ್‌ಸಾಲ್ವೆನ್ಸಿ ಮತ್ತು ಬ್ಯಾಂಕ್‌ರಪ್ಸಿ ಬೋರ್ಡ್ ಆಫ್ ಇಂಡಿಯಾ ಅಡಿಯಲ್ಲಿ (ಸ್ವಯಂ ದಿವಾಳಿತನ ಪ್ರಕ್ರಿಯೆ) ನಿಯಮಗಳು, 2017)
ಸಿಗ್ನಲಕ್ಸ್ ರಿಸರ್ಚ್ ಪ್ರೈವೇಟ್ ಲಿಮಿಟೆಡ್ ಇದರ ಸ್ಟೇಕ್‌ಹೋಲ್ಡರ್‌ಗಳ ಗಮನಕ್ಕೆ

1	ಕಾರ್ಪೊರೇಟ್ ವ್ಯಕ್ತಿಯ ಹೆಸರು	ಸಿಗ್ನಲಕ್ಸ್ ರಿಸರ್ಚ್ ಪ್ರೈವೇಟ್ ಲಿಮಿಟೆಡ್
2	ಕಾರ್ಪೊರೇಟ್ ವ್ಯಕ್ತಿಯ ಪ್ರಾರಂಭದ ದಿನ	12ನೇ ಎಪ್ರಿಲ್ 2022
3	ಯಾವ ಅಥಾರಿಟಿಯ ಕೆಳಗೆ ಕಾರ್ಪೊರೇಟ್ ವ್ಯಕ್ತಿಯ ಆರಂಭ / ನೊಂದಣೆ ಆಗಿರುವುದು	ರಿಜಿಸ್ಟ್ರಾರ್ ಆಫ್ ಕಂಪನೀಸ್– ಬೆಂಗಳೂರು
4	ಕಾರ್ಪೊರೇಟ್ ವ್ಯಕ್ತಿಯ ಗುರುತು ಸಂಖ್ಯೆ/ ಸೀಮಿತ ಬಾಧ್ಯತಾ ಗುರುತು ಸಂಖ್ಯೆ	U67100KA2022PTC159986
5	ಕಾರ್ಪೊರೇಟ್ ವ್ಯಕ್ತಿಯ ನೋಂದಾಯಿತ ಕಛೇರಿ ಮತ್ತು ಮುಖ್ಯ ಕಛೇರಿ (ಯಾವುದಾದರೂ ಇದ್ದಲ್ಲಿ) ಅದರ ವಿಳಾಸ	2ನೇ ಮಹಡಿ, ಪ್ರೆಸ್ಟೀಜ್ ಪಿನಾಕಲ್ ನಂ. 113, ಕೋರಮಂಗಲ ಕೈಗಾರಿಕಾ ಲೇಔಟ್ ಬೆಂಗಳೂರು, ಬೆಂಗಳೂರು ಕರ್ನಾಟಕ, ಭಾರತ, 560095.
6	ಕಾರ್ಪೊರೇಟ್ ಸಾಲಗಾರನ ಲಿಕ್ವಿಡೇಶನ್ ಪ್ರಕ್ರಿಯೆ ಆರಂಭದ ದಿನಾಂಕ	13ನೇ ಜುಲೈ 2024
7	ಲಿಕ್ವಿಡೇಟರ್‌ರವರ ಹೆಸರು, ವಿಳಾಸ, ದೂರವಾಣಿ ಸಂಖ್ಯೆ ಮತ್ತು ಇ-ಮೇಲ್ ಐಡಿ ಹಾಗೂ ನೋಂದಣಿ ಸಂಖ್ಯೆ	ಹೆಸರು : ಅನಘ ಅನಸಿಂಗರಾಜು ವಿಳಾಸ : 1–2, ಐಶ್ವರ್ಯ ಸಂಕುಲ್ 17 ಜಿ.ಎ. ಕುಲಕರ್ಣಿ ಪಾತ್, ಜೋಶೀಸ್ ರೈಲ್ವೆ ಮ್ಯೂಸಿಯಂ ಎದುರು, ಕೊತ್ರೂಡ್ ಪುಣೆ–411038 ಇ–ಮೇಲ್ : rp.anagha@kanjcs.com ದೂರವಾಣಿ ಸಂ. : 020-25466265/ 25461561 ನೋಂದಣಿ ಸಂ.: IBBI/IPA-002/ IP-N00247/2017-18/10732
8	ಕ್ಲೈಮುಗಳನ್ನು ಸಲ್ಲಿಸಲು ಕೊನೆಯ ದಿನಾಂಕ	12ನೇ ಆಗಸ್ಟ್ 2024

ಸಿಗ್ನಲಕ್ಸ್ ರಿಸರ್ಚ್ ಪ್ರೈವೇಟ್ ಲಿಮಿಟೆಡ್ 13ನೇ ಜುಲೈ 2024 ರಂದು ತನ್ನ ಸ್ವಯಂ ದಿವಾಳಿತನ ಪ್ರಕ್ರಿಯೆಯನ್ನು ಆರಂಭಿಸಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ.
ಸಿಗ್ನಲಕ್ಸ್ ರಿಸರ್ಚ್ ಪ್ರೈವೇಟ್ ಲಿಮಿಟೆಡ್ ನ ಎಲ್ಲ ಸ್ಟೇಕ್‌ಹೋಲ್ಡರ್‌ಗಳಿಗೆ 12ನೇ ಆಗಸ್ಟ್2024 ರಂದು ಅಥವಾ ಅದಕ್ಕೂ ಮೊದಲು ತಮ್ಮ ಹಕ್ಕುಗಳನ್ನು ಪುರಾವೆಗಳೊಂದಿಗೆ ವಸ್ತು ಸಂಖ್ಯೆ 7ರಲ್ಲಿ ನೀಡಿರುವ ಲಿಕ್ವಿಡೇಟರ್‌ರವರ ವಿಳಾಸಕ್ಕೆ ಸಲ್ಲಿಸಲು ಕರೆ ನೀಡಲಾಗಿದೆ.
ಹಣಕಾಸು ಸಾಲಗಾರರು ತಮ್ಮ ಹಕ್ಕುಗಳನ್ನು ಎಲೆಕ್ಟ್ರಾನಿಕ್ ವಿಧಾನದಿಂದ ಮಾತ್ರ ಪುರಾವೆಯೊಂದಿಗೆ ಸಲ್ಲಿಸಬೇಕು. ಉಳಿದ ಎಲ್ಲಾ ಸ್ಟೇಕ್ ಹೋಲ್ಡರ್‌ಗಳು ಪುರಾವೆಗಳೊಂದಿಗೆ ಖುದ್ದಾಗಿ, ಅಂಚೆ ಮೂಲಕ ಅಥವಾ ಎಲೆಕ್ಟ್ರಾನಿಕ್ ಮಾಧ್ಯಮ ಮೂಲಕ ತಮ್ಮ ಕ್ಲೈಮುಗಳನ್ನು ಸಲ್ಲಿಸಬೇಕು.
ಹಕ್ಕಿನ ಸುಳ್ಳು ಅಥವಾ ದಾರಿ ತಪ್ಪಿಸುವ ಪುರಾವೆಗಳನ್ನು ಸಲ್ಲಿಸಿದಲ್ಲಿ ದಂಡ ತೆರಬೇಕಾಗುವುದು
ದಿನಾಂಕ: 15ನೇ ಜುಲೈ 2024
ಸ್ಥಳ: ಪುಣೆ
ಅನಘ ಅನಸಿಂಗರಾಜು
ಲಿಕ್ವಿಡೇಟರ್

ಸಮಾಚಾರ ಸಣ್ಣದಲ್ಲ

ಪ್ರಧಾನಿ ವಿರುದ್ಧದ ಖಾಸಗಿ ದೂರು ರದ್ದು

ಬೆಂಗಳೂರು: ಕಾಂಗೆಸ್ ಪಕ್ಷ ಅಧಿಕಾರಕ್ಕೆ ಬಂದರೆ, ಅದು ದೇಶದ ಜನರ ಸಂಪತ್ತನ್ನು ಮುಸ್ಲಿಮರಿಗೆ ಮರು ಹಂಚಿಕೆ ಮಾಡುತ್ತದೆ ಎಂಬುದಾಗಿ ಪ್ರಧಾನಿ ಮೋದಿ ಪ್ರಚೋದನಾಕಾರಿ ಭಾಷಣ ಮಾಡಿದ್ದು, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ದಾಖಲಿಸಿದ್ದ ಖಾಸಗಿ ದೂರನ್ನು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ವಜಾಗೊಳಿಸಿದೆ. ಪ್ರಧಾನಿ ಭಾಷಣದಿಂದ ಹಿಂದೂ - ಮುಸ್ಲಿಮರ ನಡುವೆ ಗೊಂದಲಕ್ಕೆ ಕಾರಣವಾಗಲಿದ್ದು, ಅವರ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕು ಎಂದು ಕೋರಿ ಬೆಂಗಳೂರಿನ ಜಿಯಾವುರ್ ರಹಮಾನ್ ನೊಮಾನಿ ಬ42ನೇ ಎಸಿಎಂಎಂ ನ್ಯಾಯಾಲಯದಲ್ಲಿ ಖಾಸಗಿ ದೂರು ಸಲ್ಲಿಸಿದ್ದರು.ವಿಚಾರಣೆ ನಡೆಸಿದ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಕೆ. ಎನ್ ಶಿವಕುಮಾರ್ ,ಪ್ರಕರಣವನ್ನು ತನಿಖೆಗೆ ವಹಿಸುವುದಕ್ಕೆ ಅರ್ಹವಿಲ್ಲ ಎಂದು ಅಭಿಪ್ರಾಯಪಟ್ಟು ದೂರನ್ನು ವಜಾಗೊಳಿಸಿ ಆದೇಶಿಸಿದ್ದಾರೆ.

ರೈತರಿಗೆ ಸಹಾಯಧನ ಒದಗಿಸಿ: ಎಎಪಿ ಪತ್ರ

ಬೆಂಗಳೂರು: ಚುನಾವಣಾ ಪ್ರಣಾಳಿಕೆಯಲ್ಲಿ ಹನಿ ನೀರಾವರಿ ಪದ್ಧತಿ ಅಳವಡಿಸಿಕೊಂಡಿರುವ ರೈತರಿಗೆ ಶೇ. 90ರಷ್ಟು ಸಹಾಯಧನ ನೀಡುವುದಾಗಿ ಘೋಷಿಸಿದ್ದು, ಆದರೆ ಪ್ರಸ್ತುತ ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ ಸಹಾಯಧನವನ್ನು ಹೆಚ್ಚಿಸುವ ಬದಲು ಶೇ. 75ರಿಂದ ಶೇ. 55ಕ್ಕೆ ಇಳಿಸಿ ರೈತರಿಗೆ ಅನ್ಯಾಯ ಮಾಡುತ್ತಿದೆ ಎಂದು ಆಮ್ ಆದ್ಮಿ ಪಕ್ಷದ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬರೆದಿರುವ ಅವರು, 2023-24ನೇ ಸಾಲಿನಲ್ಲಿ ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯಿಂದ ರೈತರಿಗೆ ಶೇ. 75ರಷ್ಟು ಸಹಾಯಧನ ದೊರೆತ್ತಿದ್ದು, ಆದರೆ ಪ್ರಸಕ್ತ ಸಾಲಿನಲ್ಲಿ ಶೇ. 55ರಷ್ಟು ಮಾತ್ರ ಸಹಾಯಧನ ನೀಡುವುದಾಗಿ ಇಲಾಖೆ ಸುತ್ತೋಲೆ ಹೊರಡಿಸಿದ್ದು, ಇದರಿಂದ ಸಾವಿರಾರು ರೈತರಿಗೆ ಅನ್ಯಾಯವಾಗುತ್ತಿದೆ ಎಂದು ಹೇಳಿದ್ದಾರೆ. ರೈತರಿಗೆ ಮೋಸ ಮಾಡುವ ಈ ಆದೇಶವನ್ನು ತಕ್ಷಣವೇ ಹಿಂಪಡೆದು, ರೈತರಿಗೆ ಸೇರಬೇಕಾದ ಶೇ. 90ರಷ್ಟು ಸಹಾಯಧನವನ್ನು ಒದಗಿಸಲು ಸರಕಾರ ಆದೇಶ ಹೊರಡಿಸಬೇಕು. ಇಲ್ಲವಾದರೆ ರೈತ ಸಂಘಟನೆಗಳೊಂದಿಗೆ ಸೇರಿ ಆಮ್ ಆದ್ಮಿ ಪಕ್ಷ ಪ್ರತಿಭಟನೆ ಕೈಗೊಳ್ಳುವುದು ಅನಿವಾರ್ಯವಾಗುತ್ತದೆ ಎಂದು ಪತ್ರದ ಮೂಲಕ ಮುಖ್ಯಮಂತ್ರಿ ಚಂದ್ರು ಎಚ್ಚರಿಕೆ ನೀಡಿದ್ದಾರೆ.

ಮಕ್ಕಳ ಅಶ್ಲೀಲ ಚಿತ್ರಗಳ ವೀಕ್ಷಣೆ ಅಪರಾಧವಲ್ಲ

ಬೆಂಗಳೂರು: ಅಂತರ್ಜಾಲದ ಮೂಲಕ ಮಕ್ಕಳ ಅಶ್ಲೀಲ ಚಿತ್ರಗಳ ವೀಕ್ಷಣೆ ಮಾಡುವುದು ಮಾಹಿತಿ ತಂತ್ರಜ್ಞಾನ ಕಾಯಿದೆಯಡಿ ಅಪರಾಧವಾಗುವುದಿಲ್ಲ ಎಂದು ಹೈಕೋರ್ಟ್ ತಿಳಿಸಿದೆ. ಮಕ್ಕಳ ಅಶ್ಲೀಲ ಚಿತ್ರಗಳ ವೀಕ್ಷಣೆ ಮಾಡಿದ ಆರೋಪದಲ್ಲಿ ದಾಖಲಾದ ಪ್ರಕರಣ ರದ್ದು ಕೋರಿ ಹೊಸಕೋಟೆಯ ಎನ್.ಇನಾಯತುಲ್ಲಾ ಎಂಬುವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದ್ದು, ಪ್ರಕರಣವನ್ನು ರದ್ದುಪಡಿಸಿ ಆದೇಶಿಸಿದೆ. ಮಾಹಿತಿ ತಂತ್ರಜ್ಞಾನ ಕಾಯಿದೆ ಸೆಕ್ಷನ್ 67ಬಿ ಯಲ್ಲಿ ತಿಳಿಸಿರುವಂತೆ, ಯಾವುದೇ ವ್ಯಕ್ತಿಯು ಮಕ್ಕಳ ಅಶ್ಲೀಲ ಚಿತ್ರಗಳನ್ನು ಸಿದ್ಧಪಡಿಸುವುದು ಮತ್ತು ಅದನ್ನು ವಿದ್ಯುನ್ಮಾನ ಉಪಕರಣಗಳ ಮೂಲಕ ಹಂಚಿಕೊಳ್ಳುವುದಕ್ಕೆ ಶಿಕ್ಷೆ ವಿಧಿಸಲು ಅವಕಾಶವಿದೆ. ಅರ್ಜಿದಾರರು ಮಕ್ಕಳ ಅಶ್ಲೀಲ ಚಿತ್ರಗಳನ್ನು ಸಿದ್ಧಪಡಿಸಿಲ್ಲ. ಜತೆಗೆ, ಅದನ್ನು ಯಾರೊಂದಿಗೂ ಹಂಚಿಕೊಂಡಿಲ್ಲ, ಕೇವಲ ವೀಕ್ಷಿಸಿದ್ದಾರೆ. ಹೀಗಾಗಿ, ಸೆಕ್ಷನ್ 67ಬಿ ಅಡಿ ಅಪರಾಧವಾಗುವುದಿಲ್ಲ ಎಂದು ನ್ಯಾಯಪೀಠ ತಿಳಿಸಿದೆ.

ಕನ್ನಡಿಗರಿಗೆ ಉದ್ಯೋಗ ಖಾತ್ರಿ: ಎಂ.ಬಿ ಪಾಟೀಲ್

ಬೆಂಗಳೂರು: ಖಾಸಗಿ ಉದ್ಯಮಗಳಲ್ಲಿ ಕನ್ನಡಿಗರಿಗೆ ಕೆಲವು ಶ್ರೇಣಿಯ ಹುದ್ದೆಗಳನ್ನು ನೂರಕ್ಕೆ ನೂರರಷ್ಟು ಮೀಸಲಿಟ್ಟು, ಉದ್ಯಮಗಳ ಹಿತಾಸಕ್ತಿಗಳನ್ನು ಸಹ ಕಾಪಾಡಲಾಗುವುದು ಎಂದು ಕೈಗಾರಿಕೆ ಸಚಿವ ಎಂ.ಬಿ ಪಾಟೀಲ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಸಂಬಂಧ ಸರಕಾರ ವಿಧೇಯಕಕ್ಕೆ ಅನುಮೋದನೆ ನೀಡಿದ್ದು, ಈ ವಿಚಾ ರವಾಗಿ ಸದ್ಯದಲ್ಲೇ ಮುಖ್ಯಮಂತ್ರಿ ಸಿದ್ದರಾಮ ಯ್ಯ, ಐಟಿ-ಬಿಟಿ, ಕಾನೂನು ಮತ್ತು ಕಾರ್ಮಿಕ ಸಚಿವರೊಂದಿಗೆ ಚರ್ಚಿಸಿ, ಗೊಂದಲಗಳಿಗೆ ತೆರೆ ಎಳೆಯಲಾಗು ವುದು ಎಂದರು. ಕರ್ನಾಟಕದಲ್ಲಿ ಕನ್ನಡಿಗರಿಗೆ ಉದ್ಯೋಗ ಸಿಗಲೇಬೇಕು ಎನ್ನುವುದ ರಲ್ಲಿ ಎರಡು ಮಾತಿಲ್ಲ. ಕೌಶಲಗಳಿಲ್ಲದ ಕನ್ನಡಿಗರಿಗೆ ಕೌಶಲ್ಯ ನೀಡಿ ಸಜ್ಜುಗೊಳಿಸುವ ಕೆಲಸವನ್ನೂ ಸರಕಾ ರವೇ ಮಾಡಲಿದೆ. ತಯಾರಿಕಾ ವಲಯ ಮತ್ತು ಕೈಗಾರಿಕಾ ಕ್ರಾಂತಿಯ ಉಜ್ವಲ ಅವಕಾಶಗಳನ್ನು ನಾವು ಕಳೆದುಕೊಳ್ಳುವಂತಿಲ್ಲ, ಸ್ಥಳೀಯರ ಹಿತಾಸಕ್ತಿ ಕಾಪಾಡಲು ಸರಕಾರ ಬದ್ಧವಾಗಿದೆ ಎಂದರು.

{ ರಾಮಲಿಂಗಾರೆಡ್ಡಿ } ಸಚಿವರು

ಕನ್ನಡಿಗರಿಗೆ ಉದ್ಯೋಗದ ವಿಧೇಯಕ ಜಾರಿಯಿಂದ ಒಳ್ಳೆಯದಾಗಲಿದೆ. ನಿರುದ್ಯೋಗ ಸಮಸ್ಯೆ ರಾಜ್ಯ, ದೇಶದಲ್ಲೂ ಹೆಚ್ಚಾಗಿದೆ. ಉದ್ಯಮಗಳು ಕನ್ನಡಿಗರಿಗೆ ಉದ್ಯೋಗ ಕೊಟ್ಟಿದ್ದರೆ ಈ ಸಮಸ್ಯೆ ಬರುತ್ತಿರಲಿಲ್ಲ.

ರಾಗಿಗುಡ್ಡ-ಸಿಲ್ಕ್‌ಬೋರ್ಡ್ ಡಬಲ್ ಡೆಕ್ಕರ್ ಮಾರ್ಗಕ್ಕೆ ಡಿ.ಕೆ.ಶಿವಕುಮಾರ್‌ಚಾಲನೆ

ಡಬಲ್ ಡೆಕ್ಕರ್ ಮಾದರಿಯಲ್ಲಿ ಹೊಸ ಮೆಟ್ರೋ ಮಾರ್ಗಗಳ ನಿರ್ಮಾಣ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಗರದಲ್ಲಿ ಮುಂದಿನ ದಿನಗಳಲ್ಲಿ ಹೊಸ ಮೆಟ್ರೋ ಮಾರ್ಗಗಳನ್ನು ಡಬಲ್ ಡೆಕ್ಕರ್ ಮಾದರಿಯಲ್ಲಿ ನಿರ್ಮಾಣ ಮಾಡಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಜಯನಗರದ ರಾಗಿಗುಡ್ಡದಿಂದ ಸಿಲ್ಕ್ ಬೋರ್ಡ್ ವರೆಗೆ ಡಬಲ್ ಡೆಕ್ಕರ್ ಮಾರ್ಗದಲ್ಲಿ ವಾಹನಗಳ ಪ್ರಾಯೋಗಿಕ ಸಂಚಾರಕ್ಕೆ ಚಾಲನೆ ನೀಡುವ ವೇಳೆ ಮಾತನಾಡಿ, ಇಂದಿನ ದಿನಗಳಲ್ಲಿ ಭೂಸ್ವಾಧೀನ ಮಾಡಿಕೊಳ್ಳುವುದು ಕಷ್ಟದ ಕೆಲಸ. ಡಬಲ್ ಡೆಕ್ಕರ್ ಮಾದರಿಯಿಂದ ಸಂಚಾರ ದಟ್ಟಣೆ ಸೇರಿದಂತೆ ಅನೇಕ ಉಪಯೋಗಗಳಿವೆ. ಹೆಚ್ಚು ಖರ್ಚಾದರೂ ಈ ಮಾದರಿ ಬೆಂಗಳೂರಿಗೆ ಅನುಕೂಲ. 5 ಕಿ.ಮೀ ಉದ್ದದ ಡಬಲ್ ಡೆಕ್ಕರ್ ನಿರ್ಮಾಣಕ್ಕೆ ಸುಮಾರು 450 ಕೋಟಿ ರು.ಮ ಖರ್ಚಾಗಿದೆ. ಈಗಿನ ಲೆಕ್ಕಾಚಾರ ನೋಡಿದರೆ ಹೆಚ್ಚೇನಿಲ್ಲ ನಾನು, ಮುಖ್ಯಮಂತ್ರಿಗಳು ಹಾಗೂ ಸಚಿವ ರಾಮಲಿಂಗಾರೆಡ್ಡಿ ಅವರು ಅನೇಕ ವಿಚಾರಗಳನ್ನು ಚರ್ಚೆ ನಡೆಸಿದ್ದೇವೆ ಎಂದರು.

ಸಿಗ್ನಲ್‌ಮುಕ್ತ ಕಾರಿಡಾರ್‌ಗೆ 120-150 **ಕೋಟಿ**

ಬೆಂಗಳೂರಿನಲ್ಲಿ 100 ಕಿ.ಮೀ ಉದ್ದ ಸಿಗ್ನಲ್‌ಮುಕ್ತ ಕಾರಿಡಾರ್ ನಿರ್ಮಾಣ ಮಾಡಲು 120- 150 ಕೋಟಿ ರು. ಖರ್ಚಾಗುತ್ತದೆ ಎಂದು ಅಧಿಕಾರಿಗಳು ಅಂದಾಜು ವೆಚ್ಚ ತಿಳಿಸಿದ್ದಾರೆ. ವಿಶ್ವದರ್ಜೆ ಗುಣಮಟ್ಟದ ಡಬಲ್ ಡೆಕ್ಕರ್ ನಿರ್ಮಾಣ ಮಾಡಿದ್ದೇವೆ. ಬಿಬಿಎಂಪಿ ಮತ್ತು ನಮ್ಮ ಮೆಟ್ರೋ ಈ ಯೋಜನೆಯ ವೆಚ್ಚವನ್ನು ಹಂಚಿಕೊಳ್ಳುತ್ತಾರೆ ಎಂದರು. ಹೊಸೂರು ರಸ್ತೆ ಕಡೆ ತೆರಳುವ ಶೇ 30 ರಷ್ಟು ನಾಗರಿಕರಿಗೆ ಡಬಲ್ ಡೆಕ್ಕರ್‌ನಿಂದ ಉಪಯೋಗವಾಗಲಿದೆ. ಎಲೆಕ್ಟ್ರಾನಿಕ್ ಸಿಟಿ, ಎಚ್‌ಎಸ್‌ಆರ್ ಲೇಔಟ್, ಮಹದೇವಪುರ ವಾಸಿಗಳಿಗೆ ಬಹಳ ಅನುಕೂಲವಾಗಲಿದೆ. 5 ಪಥಗಳಿರುವ ಸುಮಾರು 9.5 ಕಿಮೀ ಉದ್ದವಿರುವ 5,745 ಕೋಟಿ ವೆಚ್ಚದಲ್ಲಿ ಆರ್‌ವಿ ನಗರ ಮಹದೇವಪುರ ಎಲಿವೇಟೆಡ್ ಫೇಸ್ 2 ಯೋಜನೆ ಯನ್ನು ಜಾರಿಗೆ ಕಾರ್ಯಕ್ರಮ ರೂಪಿಸಲಾಗಿದೆ ಎಂದರು.

ಕೇಂದ್ರ ಸಚಿವರಿಗೆ ಯೋಜನೆ ವೀಕ್ಷಿಸಲು ಮನವಿ: ಡಬಲ್ ಡೆಕ್ಕರ್ ಯೋಜನೆಯ ಉಪಯೋಗ ತಿಳಿಯಲು ಜನರು ಮೇಲೆ ಹಾಗೂ ಕೆಳಗೆ ಸಂಚರಿಸಿ ಅನುಭವ ಪಡೆಯಬೇಕು. ಈ ಯೋಜನೆ ವೀಕ್ಷಿಸಲು ನೂತನ ಕೇಂದ್ರ ಸಚಿವ ಮನೋಹರ್ ಲಾಲ್ ಖಟ್ಟರ್ ಅವರಿಗೂ ಮನವಿ ಮಾಡಲಾಗುವುದು. ಪ್ರಾಯೋಗಿಕ ಸಂಚಾರ ನಡೆಸಿದ ಮೇಲೆ ಒಂದಷ್ಟು ಕುಂದುಕೊರತೆಗಳು ತಿಳಿಯುತ್ತವೆ. ಇದೆಲ್ಲವನ್ನು ಬಗೆಹರಿಸಿ ಜನರ ಓಡಾಟಕ್ಕೆ ಮುಕ್ತಗೊಳಿಸಲಾಗುವುದು ಎಂದರು.

ಯಾವುದೇ ಯೋಜನೆ ಇದ್ದರೂ ಸಣ್ಣ, ಪುಟ್ಟ ನ್ಯೂನತೆಗಳು ಕಂಡುಬರುವುದು ಸಹಜ. ಇಳಿಯುವಾಗ, ಹತ್ತುವಾಗ ಅನುಕೂಲ, ಅನಾನುಕೂಲ ಎಲ್ಲವನ್ನು ತಿಳಿಯಬೇಕಾಗುತ್ತದೆ. ಇದೀಗ ಎಲ್ಲಾ ಮಾದರಿಯ ವಾಹನಗಳು ಸಂಚರಿಸಬಹುದು ಯಾವುದೇ ನಿರ್ಬಂಧ ವಿಲ್ಲ. ಸುರಂಗ ರಸ್ತೆ ವಿಚಾರವಾಗಿ ಮುಂದಿನ ಸಂಪುಟ ಸಭೆಯಲ್ಲಿ ಚರ್ಚಿಸಿ ನಿಮ್ಮ ಮುಂದಿಡುತ್ತೇನೆ ಎಂದರು.

ಡಬಲ್ ಡೆಕ್ಕರ್ ಮೇಲ್ಸೇತುವೆ ಮೇಲೆ ಕಾರು ಚಲಾಯಿಸುವ ಮೂಲಕ ಪ್ರಾಯೋಗಿಕ ವಾಹನ ಸಂಚಾರಕ್ಕೆ ಚಾಲನೆ ನೀಡಿದ ಡಿ.ಕೆ.ಶಿವಕುಮಾರ್

ಡಿ.ಕೆ.ಶಿವಕುಮಾರ್ ಅವರಿಂದ ಬ್ರ್ಯಾಂಡ್ ಬೆಂಗಳೂರು ಮಾಡಲು ಸಾಧ್ಯವೇ ಇಲ್ಲ ಎನ್ನುವ ಮಾತನ್ನು ಕುಮಾರಸ್ವಾಮಿ ಅವರು ಹೇಳಿದ್ದಾರೆ. ಆದರೆ ಅವರ ಹೇಳಿಕೆಗೆ ಪ್ರತಿಕ್ರಿಯಿಸುವಷ್ಟು ದೊಡ್ಡವನಲ್ಲ. ನಾನು ಹಳ್ಳಿಯಿಂದ ಬಂದವನು, ನನಗೆ ತಿಳಿದಂತೆ ನಿಮ್ಮಂಥವರಿಂದ (ಮಾಧ್ಯಮ) ಅನುಭವ ಪಡೆದು ಕೆಲಸ ಮಾಡುತ್ತಿದ್ದೇನೆ.

- ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ರಾಮಲಿಂಗಾರೆಡ್ಡಿ ಮಾದರಿ ಜಾರಿ

ಡಬಲ್ ಡೆಕ್ಕರ್ ಮಾದರಿಯನ್ನು ಅಧ್ಯಯನ ಮಾಡಲು ರಾಜ್ಯದಿಂದ ಅಧಿಕಾರಿಗಳ ತಂಡವನ್ನು ನಾಗ್ಪುರಕ್ಕೆ ಕಳುಹಿಸಿ ಈ ರಾಗಿಗುಡ್ಡೆ ನಿರ್ಮಾಣವಾಗಲು ಹಿಂದಿನ ಶಕ್ತಿ ರಾಮಲಿಂಗಾರೆಡ್ಡಿ ಅವರು. ಬೆಂಗಳೂರಿನಲ್ಲಿ ಎಲ್ಲೆಲ್ಲಿ ಈ ಯೋಜನೆ ಜಾರಿಯಾದರೂ ಅದನ್ನು ರಾಮಲಿಂಗಾರೆಡ್ಡಿ ಮಾದರಿ ಎಂದು ಹೇಳುತ್ತೇನೆ. ಬೆಂಗಳೂರು ಅಭಿವೃದ್ಧಿ ಸಚಿವನಾಗಿದ್ದೇನೆ. ಈ ಸ್ಥಾನದಲ್ಲಿ ಕಳೆದ ಆಡಳಿತ ಅವಧಿಯಲ್ಲಿ ರಾಮಲಿಂಗಾರೆಡ್ಡಿ ಅವರು ಹಾಗು ನಮ್ಮ ಮೆಟ್ರೋದ ಎಂ.ಡಿ.ಯಾಗಿ ಖರೋಲಾ ಇದ್ದರು. ಇವರಿಬ್ಬರೂ ಚರ್ಚೆ ನಡೆಸಿ ಹೊಸತನದ ಡಬಲ್ ಡೆಕ್ಕರ್ ಮಾಡಲ್ ಪರಿಚಯಿಸಿದರು. ಇದನ್ನು ಉದ್ಘಾಟಿಸಿದ ಭಾಗ್ಯ ನನ್ನದಾಗಿದೆ. ನಾನು ನಾಗಪುರದಲ್ಲಿ ಈ ಮಾದರಿಯನ್ನು ನೋಡಿದ್ದೇನೆ ಎಂದರು.

ಕನ್ನಡಿಗರಿಗೆ ಉದ್ಯೋಗ ಮೀಸಲು: ಮರುಪರಿಶೀಲಿಸಿ

ಬೆಂಗಳೂರು: ಕನ್ನಡಿಗರಿಗೆ ವಿಶೇಷವಾಗಿ ಮ್ಯಾನೇಜ್‌ಮೆಂಟ್ ವರ್ಗದಲ್ಲಿ ಉದ್ಯೋಗದಲ್ಲಿ ಶೇ.25ರಷ್ಟು ಮೀಸಲಾತಿ ನೀಡಬೇಕು ಎಂದು ಎಫ್‌ಕೆಸಿಸಿಐ ಅಧ್ಯಕ್ಷ ರಮೇಶ್ ಚಂದ್ರ ಲಹೋಟಿ ಆಗ್ರಹಿಸಿದರು.

ಕನ್ನಡಿಗರಿಗಾಗಿ ಉದ್ಯೋಗ ಕೋಟಾದ ಕುರಿತಾದ ಬಿಲ್ ಕುರಿತು ಎಫ್‌ಕೆಸಿಸಿಐನ ಅಭಿಪ್ರಾಯ ಹಂಚಿಕೊಂಡಿರುವ ಅವರು, ಕೈಗಾರಿಕೆಗಳು ಮತ್ತು ರಾಜ್ಯವು ಅಭಿವೃದ್ಧಿ ಹೊಂದಬೇಕಾಗಿರುವುದರಿಂದ, ಕನ್ನಡಿಗರಿಗೆ ಉದ್ದೇಶಿತ ಉದ್ಯೋಗ ಕೋಟಾ ನಿರ್ವಹಣಾ ವರ್ಗಕ್ಕೆ ಶೆ.50ರಷ್ಟು ಮತ್ತು ನಿರ್ವಹಣೇತರ ವರ್ಗಕ್ಕೆ ಶೇ.75 ರಷ್ಟು ನೀಡಲು ಮುಂದಾಗಿರುವ ವಿಧೇಯಕವನ್ನು ಮರುಪರಿಶೀಲಿಸುವ ಅಗತ್ಯವಿದೆ. ಗ್ರೂಪ್ 'ಸಿ' ಮತ್ತು 'ಡಿ' ಗಾಗಿ ಶೇ.100 ರಷ್ಟು ಮೀಸಲಾತಿಯು ಸಾಂವಿಧಾನಿಕ ನಿಬಂಧನೆಗಳನ್ನು ಉಲ್ಲಂಘಿಸಿದಂತಾಗುತ್ತದೆ. ಹೀಗಾಗಿ ಕನ್ನಡಿಗರಿಗೆ ವಿಶೇಷವಾಗಿ ಮ್ಯಾನೇಜ್‌ಮೆಂಟ್ ವರ್ಗದಲ್ಲಿ ಉದ್ಯೋಗ ಸುಮಾರು ಶೇ.25ರಷ್ಟು ಮೀಸಲಾತಿ ನೀಡಬೇಕು ಎಂದು ಆಗ್ರಹಿಸಿದ್ದು, ಇದು ಕೈಗಾರಿಕೆಗಳಿಗೆ ಮತ್ತು ಕನ್ನಡಿಗರ ಹಿತಾಸಕ್ತಿಗೆ ಅನುಕೂಲಕರವಾಗಿದೆ ಎಂದರು.

ಕೈಗಾರಿಕೆ, ವಾಣಿಜ್ಯ ಮತ್ತು ಸೇವಾ ವಲಯಗಳಿಗೆ ಅಂಗ ಸಂಸ್ಥೆಗಾಗಿ ಎಫ್‌ಕೆಸಿಸಿಐ, ಖಾಸಗಿ ಕಂಪನಿಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಕೋಟಾದ ಕರಡು ಮಸೂದೆಯ ಬಗ್ಗೆ ಹೆಚ್ಚಿನ ಕಾಳಜಿ ವಹಿಸುತ್ತದೆ. ಸ್ಥಳೀಯರಿಗೆ ಉದ್ಯೋಗಗಳನ್ನು ಒದಗಿಸುವ ಸರಕಾರದ ಗುರಿಯನ್ನು ಸ್ವಾಗತಿಸುತ್ತದೆ. ನಮ್ಮ ವಾಣಿಜ್ಯ, ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳ ಸ್ಥಾಪನೆಯಲ್ಲಿ ಕನ್ನಡಿಗರಿಗೆ ಅವರ ಉದ್ಯೋಗಕ್ಕಾಗಿ ಉತ್ತೇಜಿಸಲು ಸಿದ್ಧವಾಗಿದ್ದು, ಕರ್ನಾಟಕವು ತಂತ್ರಜ್ಞಾನದಲ್ಲಿ ಮುಂದಿದೆ ಮತ್ತು ನಿರ್ದಿಷ್ಟವಾಗಿ ಬೆಂಗಳೂರು ದೇಶದಲ್ಲಿಯೇ ಪ್ರಮುಖ ಸ್ಥಾನವನ್ನು ಹೊಂದಿದೆ. ಸಾಮಾನ್ಯವಾಗಿ ರಾಜ್ಯವು ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿರುವುದರಿಂದ ತಾಂತ್ರಿಕಮ ಕ್ಷೇತ್ರದಲ್ಲಿ ಮುಂದುವರಿದು ರಾಷ್ಟ್ರದ ಪ್ರಮುಖ ಕೈಗಾರಿಕೀಕರಣಗೊಂಡ ರಾಜ್ಯವಾಗಲು ನುರಿತ ಪ್ರತಿಭಾವಂತರ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ರಾಜಾಜಿನಗರದ ಶ್ರೀ ಚೈತನ್ಯ ಟೆಕ್ನೋ ಶಾಲೆಯಲ್ಲಿ ವಿದ್ಯಾರ್ಥಿ ನಾಯಕರ ಪದಗ್ರಹಣ ಸಮಾರಂಭ ನೆರವೇರಿತು. ಈ ವೇಳೆ ಬಿಬಿಎಂಪಿ ಮಾಜಿ ಸದಸ್ಯೆ ದೀಪ ನಾಗೇಶ್, ಶಾಲೆಯ ಪ್ರಾಂಶುಪಾಲೆ ವಿದ್ಯಾ ಸೇರಿದಂತೆ ಶಿಕ್ಷಕರು ಪೋಷಕರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಜಯನಗರದ ಐದನೇ ಬಡಾವಣೆಯಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ಆಷಾಢ ಶುದ್ಧ ಪ್ರಥಮ ಏಕಾದಶಿ ಪ್ರಯುಕ್ತ ಮಂತ್ರಾಲಯದ 108 ಶ್ರೀ ಸುಬುಧೇಂದ್ರತೀರ್ಥರು ಮೂಲರಾಮಚಂದ್ರದೇವರ ಸಂಸ್ಥಾನ ಪೂಜೆಯನ್ನು ನೆರವೇರಿಸಿ, ತಾವು ತಪ್ತಮುದ್ರಾಧಾರಣೆ ಮಾಡಿ, ಶ್ರೀಮಠದ ಶಿಷ್ಯರಿಗೆ ಮತ್ತು ಭಕ್ತರಿಗೆ ತಪ್ತಮುದ್ರಾಧಾರಣವನ್ನು ನೆರವೇರಿಸಿದರು.

ಜಾಗ ನಿಗದಿಯಾಗದೇ ಟೆಂಡರ್ ಅಸಾಧ್ಯ: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

ಕಪ್ಪುಪಟ್ಟಿಗೆ ಸೇರಿರುವ ಕಂಪನಿಗೆ ಗುತ್ತಿಗೆ ಇಲ್ಲ

ಬೆಂಗಳೂರು: ಬೆಂಗಳೂರಿನ ಘನತ್ಯಾಜ್ಯ ವಿಲೇವಾರಿ ಕೇಂದ್ರಗಳನ್ನು ನಗರದ ಹೊರ ಭಾಗದಲ್ಲಿ ಸ್ಥಳಾಂತರ ಮಾಡಲು ಇನ್ನು ಜಾಗವೇ ನಿಗದಿಯಾಗಿಲ್ಲ. ಹೀಗಿರುವಾಗ 30 ವರ್ಷಗಳಿಗೆ ಕಪ್ಪುಪಟ್ಟಿಗೆ ಸೇರಿರುವ ಕಂಪನಿಗೆ ಗುತ್ತಿಗೆ ನೀಡಲು ಅಸಾಧ್ಯ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದ್ದಾರೆ.

ಸದಾಶಿವನಗರ ನಿವಾಸದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿ, ಕಸದ ವಿಲೇವಾರಿ ಟೆಂಡರ್ ವಿಚಾರದಲ್ಲಿ ಕೇಂದ್ರದ ಮಂತ್ರಿಯೊಬ್ಬರು ನಾನು 15 ಸಾವಿರ ಕೋಟಿ ಲಂಚ ಪಡೆದಿರುವ ಆರೋಪದ ಬಗ್ಗೆ ಪತ್ರಿಕೆಗಳಲ್ಲೂ ವರದಿಯಾಗಿದ್ದು, ಕಸ ವಿಲೇವಾರಿ ಮಾಡುವ ಜಾಗದ ಹುಡುಕಾಟದಲ್ಲಿದ್ದು, ಜಾಗ ನಿಗದಿ ಮಾಡಲು ನ್ಯಾಯ ಪಂಚಾಯಿತಿ ಮಾಡುತ್ತಾ ಒದ್ದಾಡುತ್ತಿದ್ದರೆ, ಟೆಂಡರ್ ಕರೆಯದೇ ಕಪ್ಪುಪಟ್ಟಿಗೆ ಸೇರಿರುವ ಕಂಪನಿಗೆ ಗುತ್ತಿಗೆ ನೀಡಲು ಹೇಗೆ ಸಾಧ್ಯ? ಈ ವಿಚಾರ ಕೋರ್ಟ್‌ನಲ್ಲಿದೆ. ಕಳೆದ ಮೂರು ದಿನಗಳಲ್ಲಿ ಮಂಡೂರಿನಲ್ಲಿ ಕಸ ವಿಲೇವಾರಿ ಪ್ರಕ್ರಿಯೆ ನಿಲ್ಲಿಸಿದ್ದು, ಇದಕ್ಕೆ ಪರ್ಯಾಯ ಜಾಗ ಹುಡುಕುತ್ತಿದ್ದು, ನೈಸ್‌ರಸ್ತೆ ಬಳಿ ಜಾಗಕ್ಕೆ ಮಾತನಾಡುತ್ತಿರುವುದಾಗಿ ತಿಳಿಸಿದ್ದಾರೆ. ಇನ್ನೂ ಕೆಲವು ಕಸ ವಿಲೇವಾರಿ ಘಟಕಗಳನ್ನು ಬೆಂಗಳೂರಿನಿಂದ ಹೊರಗೆ ಸ್ಥಳಾಂತರ ಮಾಡಬೇಕಿದ್ದು, ಈ ಸಮಸ್ಯೆ ಹೇಗೆ ನಿಭಾಯಿಸಬೇಕು ಎಂದು ಕೆಲವು ರಾಜ್ಯಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡಿದ್ದೇನೆ ಎಂದರು.

ಕರ್ನಾಟಕದಲ್ಲಿ ಕನ್ನಡಿಗರ ಸ್ವಾಭಿಮಾನವನ್ನು ಎತ್ತಿ ಹಿಡಿ ಯಲು ಕಾಂಗ್ರೆಸ್ ಸರಕಾರ ಬದ್ಧವಾಗಿದ್ದು, ಖಾಸಗಿ ಮಳಿಗೆಗಳಲ್ಲಿ ಕನ್ನಡ ನಾಮಫಲಕ ವಿಚಾರ ಹಾಗೂ ನಮ್ಮ ಧ್ವಜ, ಭಾಷೆ, ಸಂಸ್ಕೃತಿ, ಕಡತಗಳಲ್ಲಿ ಕನ್ನಡ ಬಳಕೆ ಸೇರಿದಂತೆ ರಾಜ್ಯದಲ್ಲಿ ಮುಂದೆ ಸೃಷ್ಟಿಯಾಗುವ ಉದ್ಯೋಗಗಳಲ್ಲಿ ಕನ್ನಡಿಗರಿಗೆ ಇಂತಿಷ್ಟು ಉದ್ಯೋಗ ಮೀಸಲಿಡುವವರೆಗೂ ಸರಕಾರ ಕೆಲಸ ಮಾಡುತ್ತದೆ. ಈ ಬಗ್ಗೆ ನಿಟ್ಟನಲ್ಲಿ ಮಸೂದೆ ತಂದಿದೆ.

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಬೆಂಗಳೂರಿನ ಯೋಜನೆಗಳ ಬಗ್ಗೆ ಸಿಎಂ ನೇತೃತ್ವದಲ್ಲಿ ಚರ್ಚೆ

ಬೆಂಗಳೂರು ನಗರದ ಅನೇಕ ಯೋಜನೆಗಳ ಬಗ್ಗೆ ಪ್ರಸ್ತಾಪ ಇಟ್ಟಿದ್ದು, ಈ ವಿಚಾರವಾಗಿ ಸಚಿವ ಸಂಪುಟದಲ್ಲಿ ಪ್ರಸ್ತಾಪಿಸುವ ಮುನ್ನ ಮುಖ್ಯಮಂತ್ರಿಗಳು ಹಾಗೂ ಬೆಂಗಳೂರಿನ ಸಚಿವರ ಜತೆ ಚರ್ಚೆ ಮಾಡಬೇಕಿದೆ. ಪೆರಿಫೆರಲ್ ರಿಂಗ್‌ರಸ್ತೆ, ಘನತ್ಯಾಜ್ಯ ನಿರ್ವಹಣೆ ಯೋಜನೆ, ಮೇಲ್ಸೇತುವೆ, ತೆರಿಗೆ, ಹೊಸರಸ್ತೆಗಳ ನಿರ್ಮಾಣ ವಿಚಾರವಾಗಿ ಬ್ರ್ಯಾಂಡ್ ಬೆಂಗಳೂರು ಮೂಲಕ ಬಂದಿರುವ ಸಲಹೆಗಳನ್ನು ಚರ್ಚೆ ಮಾಡಲಾಗುವುದು. ಏಕಾಏಕಿ ನಿರ್ಧಾರ ಕೈಗೊಳ್ಳಲು ಆಗುವುದಿಲ್ಲ. ಎಲ್ಲರ ಜತೆ ಚರ್ಚಿಸಿ ತೀರ್ಮಾನ ಮಾಡಬೇಕು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಮಾಹಿತಿ ನೀಡಿದರು.

ಕನ್ನಡಿಗರಿಗೆ ಉದ್ಯೋಗ ಮೀಸಲಾತಿ ವಿಧೇಯಕ ಜಾರಿಗೆ ತರುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡ ಭೇಟಿ ಮಾಡಿ ಅಭಿನಂದಿಸಿದರು. ಈ ವೇಳೆ ಕರವೇ ರಾಜ್ಯ ಉಪಾಧ್ಯಕ್ಷ ಅಶ್ವಿನಿ ಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ಸಣ್ಣೀರಪ್ಪ, ರಾಜ್ಯ ಸಂಘಟನಾ ಕಾರ್ಯದರ್ಶಿ ಅಬ್ಬಿಗೆರೆ ವಿನೋದ್ ಉಪಸ್ಥಿತರಿದ್ದರು.

ವೈಜ್ಞಾನಿಕ ಘನತ್ಯಾಜ್ಯ ವಿಲೇವಾರಿಗೆ ಕ್ರಮ । ಸಂಚಾರ ದಟ್ಟಣೆ ನಿವಾರಣೆಗೆ ಟನೆಲ್ ರಸ್ತೆ ನಿರ್ಮಾಣ । ರಾಜಕಾಲುವೆ ಬಫರ್ ಜೋನ್‌ನಲ್ಲಿ ರಸ್ತೆ ನಿರ್ಮಾಣ

ಆಸ್ತಿ ತೆರಿಗೆ, ನೀರಿನ ದರ ಹೆಚ್ಚಳ ಚರ್ಚೆ?

ಬೆಂಗಳೂರು: ಆಸ್ತಿ ತೆರಿಗೆ ಪರಿಷ್ಕರಣೆ, ಕಸ ವಿಲೇವಾರಿ, ಸಂಚಾರ ದಟ್ಟಣೆ ನಿರ್ವಹಣೆ ಸೇರಿದಂತೆ ಬ್ರ್ಯಾಂಡ್ ಬೆಂಗಳೂರಿಗೆ ಪೂರಕವಾಗಿ ಮಹತ್ವದ ಯೋಜನೆಗಳ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರು ನಗರದ ಸಚಿವರು ಹಾಗೂ ಬಿಬಿಎಂಪಿ ಹಿರಿಯ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿದರು.

ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಸಭೆಯಲ್ಲಿ ಪೆರಿಫೆರಲ್ ರಿಂಗ್ ರಸ್ತೆ, ಸ್ಕೈಡೆಕ್ ನಿರ್ಮಾಣ, ಘನ ತ್ಯಾಜ್ಯದ ವೈಜ್ಞಾನಿಕ ವಿಲೇವಾರಿ, ಬೆಂಗಳೂರು ನಗರದ ಸಂಚಾರದಟ್ಟಣೆ ನಿವಾರಣೆಗಾಗಿ ಟನೆಲ್ ರಸ್ತೆ ನಿರ್ಮಾಣ ಹಾಗೂ ಹೈ ಡೆನ್ಸಿಟಿ ಕಾರಿಡಾರ್ ಸೇರಿದಂತೆ ಅಭಿವೃದ್ಧಿ ಮೊದಲಾದ ವಿಷಯಗಳ ಕುರಿತು ಚರ್ಚಿಸಿ ಮಹತ್ವದ ತೀರ್ಮಾಣ ಕೈಗೊಂಡಿದ್ದಾರೆ ಎನ್ನಲಾಗಿದೆ. ಬೆಂಗಳೂರಿನಲ್ಲಿ ಹಲವಾರು ವರ್ಷಗಳಿಂದ ಆಸ್ತಿ ತೆರಿಗೆಯ ಪರಿಷ್ಕರಣೆ ಆಗಿಲ್ಲ. ಕಳೆದ ವರ್ಷ ಕಂದಾಯ ಇಲಾಖೆ ಆಸ್ತಿಗಳ ಮಾರ್ಗಸೂಚಿ ದರವನ್ನು 25 ರಿಂದ 30 ರಷ್ಟು ಹೆಚ್ಚಳ ಮಾಡಿತ್ತು. ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಆಸ್ತಿ ತೆರಿಗೆ ಹೆಚ್ಚಳದ ಪ್ರಸ್ತಾವವನ್ನು ಸರಕಾರ ತಡೆಹಿಡಿದಿದ್ದು, ಮುಂದಿನ ದಿನಗಳಲ್ಲಿ ತೆರಿಗೆ ಹೆಚ್ಚಳ ಮಾಡುವುದು ಅನಿವಾರ್ಯ ಎಂಬ ಮಾತು ಕೇಳಿ ಬರುತ್ತಿದೆ. ಪ್ರಸ್ತುತ ಜಾರಿಯಲ್ಲಿರುವ ಸ್ವಯಂಘೋಷಿತ ಆಸ್ತಿ ತೆರಿಗೆಯನ್ನು ಬದಲಾವಣೆ ಮಾಡಿ ಆಸ್ತಿಗಳ ಮೌಲ್ಯದ ಮೇಲೆ ತೆರಿಗೆ ವಿಧಿಸುವ ಹೊಸ ವ್ಯವಸ್ಥೆಯನ್ನು ಜಾರಿಗೆ ತರುವ ಬಗ್ಗೆ ಪ್ರಸ್ತಾವನೆಗಳಿದ್ದು, ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿಯಿಂದ ನಿರೀಕ್ಷಿತ ಪ್ರಮಾಣದ ಆದಾಯ ಬರುತ್ತಿಲ್ಲ. ಬಹಳಷ್ಟು ಮಂದಿ ತಪ್ಪು ಮಾಹಿತಿ ನೀಡಿ ತೆರಿಗೆ ವಂಚಿಸುತ್ತಿದ್ದಾರೆ ಎಂಬ ಆರೋಪಗಳಿದ್ದು, ಈ ಹಿನ್ನೆಲೆಯಲ್ಲಿ ತೆರಿಗೆ ವ್ಯವಸ್ಥೆಯ ಬಗ್ಗೆಯೂ ಚರ್ಚೆಗಳಾಗಿವೆ.

ಸಂಚಾರ ದಟ್ಟಣೆಗೆ ಪ್ರಸ್ತಾವನೆ : ಸಂಚಾರ ದಟ್ಟಣೆ ನಿರ್ವಹಣೆಗೆ ಬೆಂಗಳೂರಿನಲ್ಲಿ ಮೇಲ್ಸೆತುವೆ, ಕೆಳ ಸೇತುವೆ ಹಾಗೂ ಸುರಂಗ ಮಾರ್ಗದ ರಸ್ತೆ ನಿರ್ಮಾಣ ಸೇರಿದಂತೆ ಕೇಂದ್ರ ಸರ್ಕಾರದ ಸಹಯೋಗದಲ್ಲಿ ಅತೀ ಉದ್ದನೆಯ ಸುರಂಗ ಮಾರ್ಗ ರಸ್ತೆ ನಿರ್ಮಾಣ. ಬೆಂಗಳೂರಿನಲ್ಲಿ 200 ಕಿ.ಮೀ. ಹೊಸ ರಸ್ತೆ ನಿರ್ಮಾಣಕ್ಕೆ ತಯಾರಿ. ಈ ಸಂದರ್ಭದಲ್ಲಿ ನಾಲ್ಕೈದು ಬಾರಿ ಟೆಂಡರ್ ಕರೆದು ವಿಫಲವಾಗಿರುವ ಪೆರಿಪರಲ್ ರಿಂಗ್ ರಸ್ತೆ ಅಭಿವೃದ್ಧಿಗೆ ವಿವಿಧ ಸಾಧ್ಯತೆ ಹಾಗೂ ಸಂಪನ್ಮೂಲ ಕ್ರೋಢೀಕರಣದ ಅವಕಾಶ ಪರಿಶೀಲಿಸಿ ವಿವರವಾದ ಪ್ರಸ್ತಾವನೆ ಸಚಿವ ಸಂಪುಟದ ಮುಂದೆ ಮಂಡಿಸುವಂತೆ ಸೂಚಿಸಲಾಗಿದೆ.

ವೈಜ್ಞಾನಿಕ ಕಸ ವಿಲೇವಾರಿ: ಬೆಂಗಳೂರಿನಲ್ಲಿ ವೈಜ್ಞಾನಿಕವಾಗಿ ಕಸ ವಿಲೇವಾರಿ ಮಾಡಲು ವಿದ್ಯುತ್ ಉತ್ಪಾದನೆಯಂತಹ ಉಪಕ್ರಮಗಳ ಅವಶ್ಯಕತೆ. ತ್ಯಾಜ್ಯ ವಿಲೇವಾರಿ ಘಟಕಗಳು ತುಂಬಿ ಹೋಗಿ ಬದಲಿ ಜಾಗದ ಹುಡುಕಾಟದ ಜೊತೆಗೆ ತ್ಯಾಜ್ಯವನ್ನೆ ಬಳಸಿಕೊಂಡು ವಿದ್ಯುತ್ ಉತ್ಪಾದನೆ ಮಾಡುವ ಸಾಧಕ-ಬಾಧಕಗಳು ಹಾಗೂ ಯೋಜನೆಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದೆ.

ಮುಖ್ಯಮಂತ್ರಿ ಸಿದ್ದಾರಾಮಯ್ಯ ಅವರ ನೇತೃತ್ವದಲ್ಲಿ ಬ್ರ್ಯಾಂಡ್ ಬೆಂಗಳೂರಿಗೆ ಸಂಬಂಧಿಸಿದಂತೆ ಸಭೆ ನಡೆಯಿತು. ಈ ವೇಳೆ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್, ಸಚಿವ ರಾಮಲಿಂಗಾರೆಡ್ಡಿ, ಕೆ.ಜೆ ಚಾರ್ಜ್, ಕೃಷ್ಣ ಬೈರೇಗೌಡ, ಬೈರತಿ ಸುರೇಶ್, ದಿನೇಶ್ ಗುಂಡೂರಾವ್, ಸರಕಾರದ ಮುಖ್ಯ ಕಾರ್ಯದರ್ಶಿ ಡಾ. ರಜನೀಶ್ ಗೋಯೆಲ್ ಸೇರಿದಂತೆ ಅನೇಕರಿದ್ದರು.

ಸಂಪನ್ಮೂಲ ಕ್ರೋಢೀಕರಣಕ್ಕೆ ಒತ್ತು

ಸಂಪನ್ಮೂಲ ಕ್ರೋಢೀಕರಣ, ಮೂಲ ಸೌಲಭ್ಯ ಹೆಚ್ಚಳ ಹಾಗೂ ಅಂತಾರಾಷ್ಟ್ರಿಯ ಮಟ್ಟದ ಬ್ರ್ಯಾಂಡ್ ಬೆಂಗಳೂರಿಗಾಗಿ ಕಠಿಣ ನಿರ್ಧಾರ ತೆಗೆದುಕೊಳ್ಳುವ ಅನಿವಾರ್ಯತೆ ಬಗ್ಗೆ ನಗರಾಭಿವೃದ್ಧಿ ಹಾಗೂ ಬಿಬಿಎಂಪಿ ಅಧಿಕಾರಿಗಳು ಹಲವು ಸೂಚನೆ ನೀಡಿದ್ದಾರೆ ಎನ್ನಲಾಗಿದೆ. ಆದರೆ ಬಿಬಿಎಂಪಿ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ತೆರಿಗೆ ಹೆಚ್ಚಳ ದರ ಏರಿಕೆ ಪ್ರಸ್ತಾವನೆ ಬಗ್ಗೆ ಸಿಎಂ ನಕಾರಾತಕ ಪ್ರತಿಕ್ರಿಯೆ ವ್ಯಕ್ತಪಡಿಸಿರುವುದಾಗಿ ತಿಳಿದುಬಂದಿದೆ.

ಸಮಾಚಾರ ಸಣ್ಣದಲ್ಲ

ಮುಡಾ ಹಗರಣಕ್ಕೆ ತಾರ್ಕಿಕ ಅಂತ್ಯ: ಶ್ರೀವತ್ಸ



ಮೈಸೂರು: ಮುಡಾ ಹಗರಣಕ್ಕೆ ತಾರ್ಕಿಕ ಅಂತ್ಯ ಸಿಗಲಿದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದ್ದಾರೆ.

ಕೆ.ಆರ್.ಕ್ಷೇತ್ರದ ಆಶ್ರಯ ಬಡಾವಣೆ ನಿವಾಸಿಗಳಿಗೆ ಹಕ್ಕು ಪತ್ರ, ಹಕ್ಕು ಖುಲಾಸೆ ಹಾಗೂ ಎನ್‌ಒಸಿ ವಿತರಣೆ ಕಾರ್ಯಕ್ರಮದ ಬಳಿಕ ಮಾಧ್ಯಮಗಳೊಂದಿಗೆ ಅವರು ಮಾತನಾಡಿದರು. ಮುಡಾ ಬಹುಕೋಟಿ ಹಗರಣ ಕುರಿತು ವಿಧಾನಮಂಡಲ ಅಧಿವೇಶನದಲ್ಲಿ ಇದರ ಬಗ್ಗೆ ಚರ್ಚೆ ಆಗುತ್ತದೆ. ಸದ್ಯಕ್ಕೆ ವಾಲ್ಮೀಕಿ ನಿಗಮದ ಹಗರಣ ಬಗ್ಗೆ ಚರ್ಚೆ ಆಗುತ್ತಿದೆ. ಶುಕ್ರವಾರ ಅಥವಾ ಸೋಮವಾರ ಮುಡಾ ಬಗ್ಗೆ ಮಾತನಾಡುತ್ತೇವೆ. ಈ ಹಗರಣಕ್ಕೆ ತಾರ್ಕಿಕ ಅಂತ್ಯ ಸಿಗಲಿದೆ ಎಂದರು. ಮುಡಾ ಹಗರಣ ಕುರಿತು ನಿವೃತ್ತ ನ್ಯಾಯಾದೀಶರ ಆಯೋಗ ರಚನೆ ಬಗ್ಗೆ ಪ್ರತಿಕ್ರಿಯಿಸಿದ ಅವರು, ಈ ಹಿಂದೆ ಹಿರಿಯ ಐಎಎಸ್ ಅಧಿಕಾರಿಗಳ ತಂಡ ರಚಿಸಲಾಗಿತ್ತು. ತಿಂಗಳ ಒಳಗೆ ವರದಿ ನೀಡಲು ಸೂಚಿಸಲಾಗಿತ್ತು. ಇದೀಗ ನಿವೃತ್ತ ನ್ಯಾಯಾಧೀಶರ ನೇತೃತ್ವದ ಆಯೋಗ ರಚಿಸಿ, ಆರು ತಿಂಗಳ ಕಾಲಾವಕಾಶ ನೀಡಿದೆ. ಇದನ್ನೆಲ್ಲಾ ಗಮನಿಸಿದರೆ ಈ ಪ್ರಕರಣವನ್ನು ಮುಂದೂಡುವ ತಂತ್ರ ಅಡಗಿದೆ ಎಂದು ಶ್ರೀವತ್ಸ ಆರೋಪಿಸಿದರು. ಮುಡಾಗೆ ಜನಪ್ರತಿನಿಧಿಗಳನ್ನು ಸದಸ್ಯರನ್ನಾಗಿ ನೇಮಕ ಮಾಡಬಾರದು. ಸಚಿವ ಮಹದೇವಪ್ಪ ನಿರ್ಧಾರಕ್ಕೆ ನನ್ನ ಸಹಮತವಿದೆ. ಮುಡಾ ಕೂಡ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ. ನಿಯಮನುಸಾರ ಅಧಿಕಾರಿಗಳು ಕರ್ತವ್ಯ ನಿರ್ವಹಿಸಿದರೆ ಸಾಕು. ಇದರಿಂದ ಜನಪ್ರತಿನಿಧಿಗಳ ಮಧ್ಯಪ್ರವೇಶ ತಪ್ಪಲಿದೆ ಎಂದು ಶ್ರೀವತ್ಸ ಹೇಳಿದರು.

45 ದಿನದಲ್ಲಿ ಟೆಂಡರ್ : ಸೋಮಣ್ಣ

ಮಂಗಳೂರು: ಇಲ್ಲಿನ ಸೆಂಟ್ರಲ್ ರೈಲ್ವೆ ನಿಲ್ದಾಣದ ಮೇಲ್ದರ್ಜೆಗೆ ಒಂದೂವರೆ ತಿಂಗಳಲ್ಲಿ ಟೆಂಡರ್ ಕರೆಯಲಾಗುವುದು ಎಂದು ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರೈಲ್ವೆ ನಿಲ್ದಾಣದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಕೆಲಸಗಳಾಗುತ್ತಿಲ್ಲ. ಹೀಗಾಗಿ ನಿಲ್ದಾಣದ ಕಟ್ಟಡ ಒಡೆದುಹಾಕಿ ನೀಲನಕಾಶೆ ಸಿದ್ಧಪಡಿಸಿ ಹೊಸ ಟೆಂಡರ್ ಕರೆಯಲು ಸೂಚನೆ ನೀಡಲಾಗುವುದು ಎಂದರು. ಮಂಗಳೂರು ನಿಲ್ದಾಣವನ್ನು ಬಹಳಷ್ಟು ವರ್ಷಗಳಿಂದ ಆಧುನೀಕರಣಗೊಳಿಸಲಾಗುತ್ತಿದೆ ಎಂದು ಹೇಳಲಾಗುತ್ತಿದೆ.

ಕಬಿನಿಯಿಂದ ಹೆಚ್ಚಿನ ನೀರು ಬಿಡುಗಡೆ | ಕೃಷಿ ಸಚಿವ ಎನ್.ಚಲುವರಾಯಸ್ವಾಮಿ

ಡ್ಯಾಂಗಳು ಭರ್ತಿ, ತಮಿಳುನಾಡಿಗೆ ನೀರು

ನಾಗಮಂಗಲ: ರಾಜ್ಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗುತ್ತಿರುವುದರಿಂದ ಜಲಾಶಯಗಳು ಭರ್ತಿಯಾಗುತ್ತಿದ್ದು, ತಮಿಳುನಾಡಿಗೆ ನೀರು ಬಿಡಲಾಗುತ್ತಿದೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.

ಪಟ್ಟಣದಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿದ ಅವರು, ಪ್ರತಿನಿತ್ಯ 1 ಟಿಎಂಸಿಯಂತೆ 20 ದಿನಗಳ ಕಾಲ 20 ಟಿಎಂಸಿ ನೀರನ್ನು ತಮಿಳುನಾಡಿಗೆ ಬಿಡಲು ಕಾವೇರಿ ನೀರು ನಿಯಂತ್ರಣಾ ಸಮಿತಿ ಶಿಫಾರಸ್ಸು ಮಾಡಿದೆ. ಸಮಿತಿಯ ಶಿಫಾರಸ್ಸಿನ ನಂತರ ಸರ್ವಪಕ್ಷದ ಸಭೆ ನಡೆಸಿ 7 ರಿಂದ 8 ಕ್ಯುಸೆಕ್ ನೀರು ಬಿಡಲು ತೀರ್ಮಾನಿಸಿದ್ದೆವು. ಆದರೆ ಸಮಿತಿಯ ಶಿಫಾರಸ್ಸಿಗಿಂತ ಹೆಚ್ಚಿನ ಪ್ರಮಾಣದ ನೀರನ್ನು ಈಗಾಗಲೇ ಕಬಿನಿ ಡ್ಯಾಂನಿಂದ ಹರಿಸಲಾಗುತ್ತಿದೆ. ಕೆಆರ್‌ಎಸ್ ಡ್ಯಾಂ ಈಗ 111.5 ಅಡಿ ತುಂಬಿದೆ. ಮುಂದಿನ ದಿನಗಳಲ್ಲಿ 115 ಅಡಿ ತುಂಬುವ ನಿರೀಕ್ಷೆಯಿದೆ. ಕೆಆರ್‌ಎಸ್ ಅಚ್ಚುಕಟ್ಟು ರೈತರು ಆತಂಕಪಡುವ ಅಗತ್ಯವಿಲ್ಲ. ರೈತರು ಮೊದಲನೆ ಬೆಳೆ ಬೆಳೆಯಲು ಯಾವುದೇ ತೊಂದರೆಯಿಲ್ಲ. ಕಟ್ಟು ಪದ್ಧತಿಯಲ್ಲಿ ನೀರು ಬಿಡಲಾಗುವುದು ಎಂದರು.

ವಿರೋಧ ಪಕ್ಷದವರಿಗೆ ಜಿಲ್ಲೆಯ ಭವಿಷ್ಯಕ್ಕಿಂತ ರಾಜಕೀಯ ಲಾಭವೇ ಮುಖ್ಯವಾಗಿದೆ. ಅವರು ಗಂಭೀರವಾಗಿ ಹೇಳುವ ಸುಳ್ಳನ್ನು ಜನ ನಂಬುತ್ತಿದ್ದಾರೆ. ನಾಗೇಗೌಡರ ನಂತರವೂ ನಾಲೆಗಳನ್ನು ದುರಸ್ತಿ ಮಾಡಿದ್ದೇವೆ. ಡ್ಯಾಂನಿಂದ ನೀರು ಬಿಟ್ಟ 24 ಗಂಟೆಯಲ್ಲಿ ಮಳವಳ್ಳಿಯ ಕೊನೆಯಭಾಗಕ್ಕೆ ನೀರು ತಲುಪುತ್ತಿದೆ ಎಂದರು.

ನಾಗಮಂಗಲ ಪಟ್ಟಣದ ಬ್ಲಾಕ್ ಕಾಂಗ್ರೆಸ್ ಕಚೇರಿಯಲ್ಲಿ ಸಚಿವ ಎನ್.ಚಲುವರಾಯಸ್ವಾಮಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು.

ನಾವು ಸಭೆಯಲ್ಲಿ ದ್ರಾಕ್ಷಿ, ಗೋಡಂಬಿ ಕೊಟ್ಟಿಲ್ಲ: ಮಂಡ್ಯದ ಸಂಸದರಾಗಿ ಕಾವೇರಿ ನೀರಿನ ಸಂಬಂಧ ಸರ್ವಪಕ್ಷಗಳ ಸಭೆಗೆ ಬಾರದೆ, ಅವರು ಕೊಡುವ ಗೋಡಂಬಿ ತಿನ್ನಲು ಹೋಗಬೇಕಾ ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಮಾತನಾಡಿದ್ದು ಶೋಭೆಯಲ್ಲ. ಅವರು ಸಿಎಂ ಆಗಿದ್ದಾಗ ಸರ್ವಪಕ್ಷಗಳ ಸಭೆಯಲ್ಲಿ ಏನು ಕೊಟ್ಟಿದ್ರು, ಅಂತ ಮೆನು ಕೊಟ್ಟರೆ, ಅದನ್ನೇ ಕೊಡುತ್ತೇವೆ. ನಾವು ದ್ರಾಕ್ಷಿ,ಗೋಡಂಬಿ ಕೊಟ್ಟಿಲ್ಲ. ಚಹಾ ಅಷ್ಟೇ ಕೊಟ್ಟಿದ್ದೇವೆ. ಎಚ್ಡಿಕೆಗೆ ವಿಳ್ಯದೆಲೆ ಕೊಟ್ಟು ಸಭೆಗೆ ಕರೆಯೊದಿಕ್ಕೆ ಆಗಲ್ಲ, ಯಾರು ಬಾರದಿದ್ದರೂ ನಡೆಯುತ್ತದೆ. ನಮ್ಮ ಸರಕಾರ ಸುಭದ್ರವಾಗಿದೆ. ಸುಪ್ರಿಂಕೋರ್ಟಿಗೆ ಹೋಗಿ ಬರ ಪರಿಹಾರದ ಹಣ ಪಡೆದಿದ್ದೇವೆ ಎಂದು ಎಚ್ಡಿಕೆ ವಿರುದ್ಧ ಕಿಡಿಕಾರಿದರು.

ಸರಕಾರಿ ಕಾರ್ಯಕ್ರಮ ಪ್ರಾಮಾಣಿಕವಾಗಿ ಜನರಿಗೆ ತಲುಪಿಸಿ

ಬೆಂಗಳೂರು: ಸರಕಾರದ ಕಾರ್ಯಕ್ರಮಗಳನ್ನು ಪ್ರಾಮಾಣಿಕವಾಗಿ ಜನರಿಗೆ ತಲುಪಿಸುವ ಕಾರ್ಯ ಮಾಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಸರಕಾರಿ ನೌಕರರ ವೇತನ ಪರಿಷ್ಕರಣೆ ಕುರಿತಾಗಿ 7ನೇ ವೇತನ ಆಯೋಗದ ಶಿಫಾರಸನ್ನು ಅಂಗೀಕರಿಸಿರುವ ಹಿನ್ನೆಲೆಯಲ್ಲಿ ರಾಜ್ಯ ಸರಕಾರಿ ನೌಕರರ ಸಂಘದಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಸರ್ಕಾರದ ಯೋಜನೆಗಳನ್ನು ಸಮರ್ಪಕವಾಗಿ ಜನರಿಗೆ ತಲುಪಿಸುವ ಜೊತೆಗೆ ಸರ್ಕಾರದ ನಿಲುವುಗಳಿಗೆ ತಕ್ಕಂತೆ ಕಾರ್ಯ ನಿರ್ವಹಿಸಬೇಕು ಎಂದು ಕಿವಿಮಾತು ಹೇಳಿದರು. 7ನೇ ವೇತನ ಆಯೋಗದ ಶಿಫಾರಸುಗಳನ್ನು ಸರಕಾರ ಪೂರ್ಣವಾಗಿ ಒಪ್ಪಿಕೊಂಡಿದ್ದು, ಇದರಿಂದ ಸರಕಾರಕ್ಕೆ 20ಸಾವಿರ ಕೋಟಿ ರು. ಹೆಚ್ಚಿನ ಹೊರೆಯಾಗಲಿದೆ ಎಂದು ತಿಳಿಸಿದ್ದಾರೆ.

ಸರಕಾರಿ ನೌಕರರ 7ನೇ ವೇತನ ಆಯೋಗದ ಶಿಫಾರಸನ್ನು ಅಂಗೀಕರಿಸಿರುವ ಹಿನ್ನೆಲೆಯಲ್ಲಿ ನೌಕರರ ಸಂಘ ಪದಾಧಿಕಾರಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಅಭಿನಂದನೆ ಸಲ್ಲಿಸಿದರು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಂಘದ ಅಧ್ಯಕ್ಷ ಷಡಕ್ಷರಿ, ಪದಾಧಿಕಾರಿಗಳು ಹಾಜರಿದ್ದರು.

ಸರಕಾರಿ ಗೌರವಗಳೊಂದಿಗೆ ಡಾ.ಪಾಟೀಲ ಅಂತ್ಯಸಂಸ್ಕಾರ

ಹಿರಿಯ ಕೃಷಿ ವಿಜ್ಞಾನಿಗೆ ಅಂತಿಮ ನಮನ

ಕಲಬುರಗಿ: ಜಿಲ್ಲೆಯ ಜೇವರ್ಗಿ ತಾಲೂಕಿನ ಬಿರಾಳ ಗ್ರಾಮದ ರೈತಸ್ನೇಹಿ, ಕೃಷಿ ವಿಜ್ಞಾನಿ, ಧಾರವಾಡ ಕೃಷಿ ವಿಶ್ವವಿದ್ಯಾಲಯ ಮಾಜಿ ಕುಲಪತಿ ಡಾ.ಎಸ್.ಎ ಪಾಟೀಲ್ ಅವರಿಗೆ ಬುಧವಾರ ಸಕಲ ಸರಕಾರಿ ಗೌರವಗಳೊಂದಿಗೆ ಅವರ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ ಹಾಗೂ ಜೇವರ್ಗಿ ಶಾಸಕ ಡಾ.ಅಜಯ ಸಿಂಗ್ ಬಿರಾಳ ಗ್ರಾಮಕ್ಕೆ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ನೀಡಿ ಸಕಲ ಸರಕಾರಿ ಗೌರವಗಳೊಂದಿಗೆ ಅಂತ್ಯಸಂಸ್ಕಾರ ಕ್ರಿಯೆಯಲ್ಲಿ ಪಾಲ್ಗೊಂಡು ಹಾಗೂ ನುಡಿ ನಮನ ಸಲ್ಲಿಸಿದರು. ಇದಕ್ಕೂ ಮೊದಲು ನುಡಿನಮನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ರೈತರ ಮನವನ್ನು ಗೆದ್ದಿದ್ದ ಇವರು ಕುಲಪತಿಯ ಅವಧಿಯಲ್ಲಿ ಧಾರವಾಡ ಕೃಷಿ ವಿಶ್ವವಿದ್ಯಾಲಯವನ್ನು ದೇಶದಲ್ಲಿಯೇ ಅತ್ಯುನ್ನತ ವಿಶ್ವವಿದ್ಯಾಲಯವೆಂದು ಬೆಳೆಸಿ ಧಾರವಾಡದಲ್ಲಿ ಅನೇಕ ಸಂಶೋಧನಾ ಮತ್ತು ಶಿಕ್ಷಣ ಸಂಸ್ಥೆಗಳನ್ನು ಹುಟ್ಟುಹಾಕಿ ದೇಶದಲ್ಲಿಯೇ ಪ್ರಥಮ ಬಾರಿಗೆ ಬೀಜ ಗ್ರಾಮ ಯೋಜನೆಯನ್ನು ಹುಟ್ಟುಹಾಕಿದ್ದರು ಎಂದರು.

ರೈತರಿಗೆ ಉತ್ತಮ ಬೀಜಗಳನ್ನು ಒದಗಿಸುವಲ್ಲಿ ನಿರಂತರ ಶ್ರಮಿಸಿದ ಧೀಮಂತ ವಿಜ್ಞಾನಿಯನ್ನು ಕಳೆದುಕೊಂಡಿದ್ದು ಕೃಷಿ ಕ್ಷೇತ್ರವು ಬಳಲಿದಂತಾಗಿದೆ. ಕೃಷಿ ವಿಜ್ಞಾನಿ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತೇನೆ ಎಂದರು.

ಈ ಸಂದರ್ಭದಲ್ಲಿ ಶಾಸಕ ಬಿ.ಆರ.ಪಾಟೀಲ, ಅಲ್ಲಮಪ್ರಭು ಪಾಟೀಲ, ವಿಧಾನ ಪರಿಷತ್ ಸದಸ್ಯ ಶಶೀಲ್ ನಮೋಶಿ, ಮುಖಂಡರಾದ ನೀಲಕಂಠರಾವ ಮೂಲೆಗೆ, ದೊಡ್ಡಪ್ಪಗೌಡ ಪಾಟೀಲ್ ಸೇರಿದಂತೆ ಸೇರಿದಂತೆ ಹಲವು ಪಕ್ಷದ ಹಿರಿಯ ಮುಖಂಡರು ಹಾಗೂ ಕುಟುಂಬ ಸದಸ್ಯರು ಉಪಸ್ಥಿತರಿದ್ದರು.

ನಿಲ್ಲದ ಮಳೆ ಆರ್ಭಟ

← ಮೊದಲಪುಟದಿಂದ

ಗೋಕರ್ಣದಲ್ಲೂ ಭೂಕುಸಿತ: ಉತ್ತರಕನ್ನಡ ಜಿಲ್ಲೆಯಲ್ಲಿ ಮಳೆಯ ಅಬ್ಬರ ಸ್ವಲ್ಪ ತಗ್ಗಿದೆಯಾದರೂ, ಗುಡ್ಡ ಕುಸಿತ ಪ್ರಕರಣಗಳು ನಿಂತಿಲ್ಲ. ಕುಮಟಾ ತಾಲೂಕಿನ ಗೋಕರ್ಣದಲ್ಲಿ ಬುಧವಾರ ಬೆಳಗ್ಗೆ ಗುಡ್ಡ ಕುಸಿದಿದೆ. ಗೋಕರ್ಣ ಮುಖ್ಯ ಕಡಲತೀರದ ಹತ್ತಿರದ ರಾಮಮಂದಿರ ಬಳಿ ಗುಡ್ಡ ಕುಸಿತವಾಗಿದೆ. ಅದೃಷ್ಟವಶಾತ್ ದೇವಸ್ಥಾನದಲ್ಲಿ ಯಾರೂ ಇಲ್ಲದ ಹಿನ್ನೆಲೆಯಲ್ಲಿ ಅನಾಹುತ ತಪ್ಪಿದೆ.

ಸಕಲೇಶಪುರ ಬಳಿ ಹೆದ್ದಾರಿಯ ತಡೆಗೋಡೆ ಕುಸಿತ: ಹಾಸನ ಜಿಲ್ಲೆಯ ಮಲೆನಾಡು ಭಾಗದಲ್ಲಿ ಭಾರಿ ಮಳೆ ಮುಂದುವರಿದಿದ್ದು, ರಾಷ್ಟ್ರೀಯ ಹೆದ್ದಾರಿ-75 ರಲ್ಲಿ ಮತ್ತೆ ಭೂ ಕುಸಿತ ಸಂಭವಿಸಿದೆ. ಸಕಲೇಶಪುರ ತಾಲೂಕಿನ ಕೊಲ್ಲಹಳ್ಳಿ ಬಳಿ ಹೆದ್ದಾರಿಯ ತಡೆಗೋಡೆ ಕುಸಿದಿದೆ. ಸುಮಾರು 500 ಮೀಟರ್ ಉದ್ದಕ್ಕೂ ರಸ್ತೆಗೆ ಹೊಂದಿಕೊಂಡಿದ್ದ ತಡೆ ಗೋಡೆ ಕುಸಿಯುತ್ತಿದೆ.

ಮಡಿಕೇರಿ ಸಮೀಪ ಬಿರುಕು ಬಿಟ್ಟ ಗುಡ್ಡ: ಮಡಿಕೇರಿ ಸಮೀಪದ ಮದೆನಾಡು ಸಮೀಪ ರಾಷ್ಟ್ರೀಯ 275ರಲ್ಲಿ ಗುಡ್ಡ ಕುಸಿಯುವ ಆತಂಕ ಉಂಟಾಗಿದೆ. ರಸ್ತೆ ಬದಿ ಇರುವ ಗುಡ್ಡದಲ್ಲಿ ಅಲ್ಲಲ್ಲಿ ಬಿರುಕು ಕಾಣಿಸಿಕೊಂಡಿದ್ದು, ಯಾವ ಕ್ಷಣದಲ್ಲಾದರೂ ಗುಡ್ಡ ಕುಸಿದು ಬೀಳುವ ಸಾಧ್ಯತೆ ಇದೆ.

ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳನ್ನು ನಿರ್ಲಕ್ಷಿಸದಿರಿ

ಬೆಂಗಳೂರು: ರಾಜ್ಯ ಹೈಕೋರ್ಟ್‌ನ ನ್ಯಾಯಮೂರ್ತಿಗಳನ್ನು ನಿರ್ಲಕ್ಷಿಸದೇ ಇತರೆ ರಾಜ್ಯಗಳ ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳಾಗಿ(ಸಿಜೆ) ನೇಮಕ ಮಾಡಬೇಕು ಎಂದು ಕೋರಿ ಬೆಂಗಳೂರು ವಕೀಲರ ಸಂಘದ ಮಾಜಿ ಅಧ್ಯಕ್ಷ ಎ.ಪಿ.ರಂಗನಾಥ್ ಅವರು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ(ಸಿಜೆಐ) ಡಿ.ವೈ. ಚಂದ್ರಚೂಡ್ ಅವರಿಗೆ ಪತ್ರ ಬರೆದಿದ್ದಾರೆ. ಪತ್ರದ ವಿವರ: ದೇಶದ ಇತರೆ ಹೈಕೋರ್ಟ್‌ಗಳಲ್ಲಿ ಮುಖ್ಯ ನ್ಯಾಯಮೂರ್ತಿಗಳನ್ನು ಪರಿಗಣಿಸಿದರೆ ಕರ್ನಾಟಕ ಹೈಕೋರ್ಟ್‌ನ ಪ್ರಾತಿನಿಧ್ಯ ಅತ್ಯಂತ ಕಡಿಮೆ. ಕರ್ನಾಟಕ ಹೈಕೋರ್ಟ್ ಹಲವು ವರ್ಷಗಳಿಂದ ಸಮರ್ಥ ಮತ್ತು ಅನುಭವಿ ನ್ಯಾಯಾಧೀಶರನ್ನು ಸೃಷ್ಟಿಸಿದೆ. ನ್ಯಾಯಾಂಗ ಮನೋಧರ್ಮ ಮತ್ತು ಸಂವಿಧಾನವನ್ನು ಎತ್ತಿ ಹಿಡಿಯುವ ಬದ್ಧತೆಯ ಮೂಲಕ ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ದೇಶದ ಇತರೆ ಹೈಕೋರ್ಟ್‌ಗಳಲ್ಲಿ ಮುಖ್ಯ ನ್ಯಾಯಮೂರ್ತಿಗಳ ನೇಮಕಾತಿಗಾಗಿ ಕರ್ನಾಟಕದ ನ್ಯಾಯಾಧೀಶರನ್ನು ಸತತವಾಗಿ ಕಡೆಗಣಿಸಲಾಗುತ್ತಿದೆ. ವೃತ್ತಿಯಲ್ಲಿ ಹಿರಿಯರಾಗಿದ್ದು, ಅರ್ಹತೆಗಳಿದ್ದರೂ ಸೂಕ್ತ ಸ್ಥಾನಮಾನ, ಅವಕಾಶ ನೀಡಲಾಗುತ್ತಿಲ್ಲ. ನ್ಯಾಯಾಂಗ ನೇಮಕಾತಿಗಳ ಪ್ರಕ್ರಿಯೆಯು ಹಿರಿತನ, ಅರ್ಹತೆ ಮತ್ತು ಪ್ರಾದೇಶಿಕ ಸಮತೋಲನದ ಪರಿಗಣನೆಗಳನ್ನು ಒಳಗೊಂಡಿರುವ ಒಂದು ವ್ಯವಸ್ಥೆಯಾಗಿದೆ ಎಂದು ಅವರು ಪತ್ರದಲ್ಲಿ ಕೋರಿದ್ದಾರೆ.

IN THE COURT OF XLIII ADDL. CITY CIVILAND SESSIONS JUDGE (CCH-44) AT BENGALURU

O.S. 4680 / 2024

BETWEEN:

1. PHONEPE PRIVATE LIMITED, Office 2, Floor 5, Wing A, Block A, Salarpuria Softzone, Service Road, Green Glen Layout, Bellandur, Bengaluru, Karnataka - 560103
And Others. ...PLAINTIFFS

AND:

CONTACTOUT LIMITED, **A Company incorporated in Hong Kong,** Having its registered office at, Flat/Rm 606, 6/F Hollywood Centre, 77-91 Queen's Road West, Sheung Wan, Hong Kong - 0.

Having its headquarters at, 934 Howard St, San Francisco, California, United States - 94103. Represented by its Directors.
E: sales@contactout.com, support@contactout.com, ...DEFENDANT NO. 1

2. M/S GODADDY.COM, LLC, **A Company incorporated in the United States of America, A wholly owned subsidiary of GoDaddy Inc.,** Having its registered office at, 2155 E. GoDaddy Way Tempe, AZ 85284 USA

Also at, 4th Floor, Statesman House, Barakhamba Road, Connaught Place, Central Delhi, New Delhi - 110001 E: legal@godaddy.com ...DEFENDANT NO. 2

3. ASHOK KUMAR
Age unknown
Residence unknown ...DEFENDANT NO. 3

NOTICE

PhonePe Private Limited, and others are the **Plaintiffs**, and have instituted the above Suit against (1) ContactOut Limited, (2) M/S Godaddy.Com, LLC, and (3) Ashok Kumar (against unknown persons in the nature of a John Doe Order), the **Defendants**, seeking , inter alia, prohibitory and mandatory injunctive reliefs against the publication of personal, private and confidential information (including personal phone numbers, photos and email addresses) of the employees, management, founders, board of Directors of the 'PhonePe Group', and more specifically on the website 'www.contactout.com'.

The Hon'ble Court, vide order dated 02.07.2024, issued ad interim temporary injunction restraining the Defendants (including persons not named in the suit but having access to the said information) from publishing, re-publishing, sharing, selling, disclosing, diverging personal information over the internet till the next date of hearing.

Since temporary injunction is sought against unknow persons, the Hon'ble Court had directed the Plaintiffs to issue a paper publication regarding filing of the above Suit. The present notice is issued in compliance with the orders of the Hon'ble Court.

The Suit is scheduled to be listed next on **20.07.2024.**

Given under the hand and seal of the court on this day of 10 th July, 2024.

By Order of the court

PHONEPE PRIVATE LIMITED Office 2, Floor 5, Wing A, Block A, Salarpuria Softzone, Service Road, Green Glen Layout, Bellandur, Bengaluru, Karnataka - 560103

Senior Sheristedar
City Civil Court, Bengaluru

PLACE : BENGALURU
DATE :

ADVOCATE FOR THE PLAINTIFFS

ಬಿಜೆಪಿಯ ಬಳಿ ಇರುವ ಬ್ರಹ್ಮಾಸ್ತ್ರವೇ ತಿರುಗೇಟು?

← ಮೊದಲಪುಟದಿಂದ

ಸದನದಲ್ಲಿ ಬಿಜೆಪಿಯವರು ಮತ್ತೊಮ್ಮೆ ಈ ವಿಷಯವನ್ನು ಪ್ರಸ್ತಾಪಿಸಿದರೆ, ಬಿಜೆಪಿ ಅವಧಿಯಲ್ಲಿನ ಎಲ್ಲ ಹಗರಣವನ್ನು ಬಹಿರಂಗಪಡಿಸಲು ಸಿದ್ಧತೆ ನಡೆಸಿಕೊಂಡಿದೆ. 69ರಡಿ ಚರ್ಚೆಯಾಗಿರುವ ವಾಲ್ಮೀಕಿ ಹಗ ರಣಕ್ಕೆ ಸಂಬಂಧಿಸಿದಂತೆ ಉತ್ತರಿಸುವಾಗಲೂ, ಸಿದ್ದರಾಮಯ್ಯ ಅವರು ಏಳು ನಿಗಮಗಳ ಅಕ್ರಮ ವನ್ನು ಪ್ರಸ್ತಾಪಿಸುವ ಸಾಧ್ಯತೆಯಿದೆ. ಇದಕ್ಕೂ ಮೊದಲು ಸರಕಾರದ ವಕ್ತಾರರಾಗಿರುವ ಕೃಷ್ಣಬೈರೇ ಗೌಡ, ದಿನೇಶ್ ಗುಂಡೂರಾವ್, ಪ್ರಿಯಾಂಕ್ ಖರ್ಗೆ ಹಾಗೂ ಸಂತೋಷ್ ಲಾಡ್ ಗುರುವಾರ ಬೆಳಗ್ಗೆ ಸುದ್ದಿಗೋಷ್ಠಿ ನಡೆಸಿ ಇದೇ ವಿಷಯವನ್ನು ಮಾತನಾ ಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಜಿ.ಟಿ.ಮಾಲ್ ವಿರುದ್ಧ ಚಳವಳಿ

ಮೈಸೂರು: ಬೆಂಗಳೂರಿನ ಜಿ.ಟಿ.ಮಾಲ್‌ಗೆ ಪಂಚೆ ಹಾಕಿಕೊಂಡು ಬಂದ ರೈತರಿಗೆ ಪ್ರವೇಶವಿಲ್ಲ ಎಂದು ಹೇಳಿರುವುದು ಮಾಲ್ ವ್ಯವಸ್ಥೆಯ ಉದ್ಧಟತನ ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕಟುವಾಗಿ ಟೀಕಿಸಿದ್ದಾರೆ.ಜಿ.ಟಿ.ಮಾಲ್ ವಿರುದ್ಧ ಮೈಸೂರು ಜಿಲ್ಲಾಧಿಕಾರಿ ಕಚೇರಿ ಬಳಿ ನಡೆದ ಪೊರಕೆ ಚಳವಳಿಯಲ್ಲಿ ಮಾತನಾಡಿದ ಅವರು, ರೈತ ಈ ದೇಶದ ಬೆನ್ನೆಲುಬು. ಈ ದೇಶಕ್ಕೆ ಅನ್ನ ನೀಡುವ ಅನ್ನದಾತನನ್ನು ಪಂಚೆ ಹಾಕಿಕೊಂಡು ಬಂದರೆ ಮಾಲ್ ನ ಒಳಗೆ ಪ್ರವೇಶವಿಲ್ಲ ಎಂಬುದು ನಾಚಿಕೆಗೇಡಿನ ಸಂಗತಿ ಎಂದರು.

ರೈತರ ಬಗ್ಗೆ ಕೀಳುವರ್ತನೆ ಸಲ್ಲ: ಮಾಲ್ ವ್ಯವಸ್ಥೆಯ ಈ ನಿಲುವು ಪಂಚೆ ಹಾಕಿಕೊಂಡು ಪ್ರಮಾಣವಚನ ಸ್ವೀಕರಿಸುವ ಪ್ರಧಾನ ಮಂತ್ರಿಯಿಂದ ಹಿಡಿದು ಮುಖ್ಯಮಂತ್ರಿ ಎಂಎಲ್ಎ, ಎಂಪಿ ಗಳಿಗೂ ಸಹ ಮಾಡಿದ ಅವಮಾನವಿದು. ಬಂಡವಾಳಶಾಹಿಗಳು ಮತ್ತು ರಾಜಕಾರಣಿಗಳು ಪಂಚೆ ಹಾಕಿಕೊಂಡು ಬಂದರೂ ಚಕಾರ ಎತ್ತದ ಮಾಲ್‌ಗಳು ರೈತರ ಬಗ್ಗೆ ಈ ರೀತಿ ಕೀಳು ವರ್ತನೆ ಸರಿಯಲ್ಲ ಎಂದರು.

(ಕರ್ನಾಟಕ ಸರ್ಕಾರ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ, ಹಾಸನ-573201
Ph:08172-261640 Email ID:eerdwsd.hsn@gmail.com

ಏಕ-ಲಕೋಟೆ ಪದ್ಧತಿಯಲ್ಲಿ ಅಲ್ಪಾವದಿ ಟೆಂಡರ್ ಪ್ರಕಟಣೆ: 03/2024-25 ದಿನಾಂಕ:15.07.2024

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ, ಮತ್ತು ಉಪವಿಭಾಗ ಕಛೇರಿಗಳಿಗೆ ತಾತ್ಕಾಲಿಕವಾಗಿ ಪಿ.ಎಂ.ಸಿ ಮೂಲಕ ಪೂರಕ ಮಾನವ ಸಂಪನ್ಮೂಲವನ್ನು ಇಲಾಖೆಯ ಸೇವೆಗೆ ಪಡೆಯುವ ಬಗ್ಗೆ ಹೊರಗುತ್ತಿಗೆ ಆಧಾರದ ಮೇಲೆ ಕಾಮಗಾರಿಗಳು ಈ ಕೆಳಕಂಡಂತೆ ಟೆಂಡರ್‌ಅನ್ನು ಆಹ್ವಾನಿಸಲಾಗಿರುತ್ತದೆ. ದ್ವಿ-ಲಕೋಟೆ ಪದ್ದತಿ ಕಾಮಗಾರಿಗಳು ಹಾಸನ 1 ಕಾಮಗಾರಿ(Service) ಸದರಿ ಕಾಮಗಾರಿಗಳಿಗೆ ದ್ವಿ-ಲಕೋಟೆ ಪದ್ದತಿಯಲ್ಲಿ ಸ್ಪರ್ಧಾತ್ಮಕ ಟೆಂಡರ್‌ನ್ನು e-procurement portal ಅಂತರ್ಜಾಲದಲ್ಲಿ ಕರೆಯಲಾಗಿದ್ದು, ಟೆಂಡರ್‌ನ್ನು ನಿಗಧಿತ ನಮೂನೆಗಳನ್ನು ದಿನಾಂಕ: 15-07-2024ರ ಸಂಜೆ 17:00 ರಿಂದ https://kppp.karnataka.gov.in ನಲ್ಲಿ Download ಮಾಡಿ ಅವಶ್ಯಕ ಮಾಹಿತಿಗಳೊಂದಿಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ದಿನಾಂಕ 18-07-2024ರ ಸಂಜೆ 17:00 ರವರೆಗೆ ಗುತ್ತಿಗೆದಾರರು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿನಾಂಕ:23-07-2024 ರಂದು ಪೂರ್ವಾಹ್ನ 11:00 ಘಂಟೆಯ ನಂತರ ತಾಂತ್ರಿಕ ಬಿಡ್‌ನ್ನು ತೆರೆಯಲಾಗುವುದು. ಅರ್ಹರಾದ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು ದಿನಾಂಕ:24.07.2024ರ ಸಂಜೆ 11:00 ಗಂಟೆಯ ನಂತರ ತೆರೆಯಲಾಗುವುದು. ಒಂದು ವೇಳೆ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಎಲ್ಲಾ ಟೆಂಡರ್‌ಗಳನ್ನು ಅಥವಾ ಯಾವುದಾದರೂ ಒಂದು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ, ಹಾಸನ
ವಾಸಾಸಂಇ/ಹಿಸನಿ/ಹಾಸನ/197/ಕೆಎಸ್ಎಂಸಿಎ/2024-25

ಛಲವಾದಿ ಕೈತಪ್ಪಿದ ಪರಿಷತ್ ನಾಯಕ ಸ್ಥಾನ?

← ಮೊದಲಪುಟದಿಂದ

ಇದೀಗ ಅವರು ಹಿಂದೂ ಧರ್ಮವನ್ನು ಪಾಲಿಸುತ್ತಿದ್ದರೂ, ಕ್ರಿಶ್ಚಿಯನ್ ಧರ್ಮವನ್ನು ಪಾಲಿಸುತ್ತಿದ್ದರು. ಚರ್ಚ್‌ಗೆ ಹೋಗಿ ಪ್ರಾರ್ಥನೆ ಮಾಡುತ್ತಿದ್ದರು. ಆದ್ದರಿಂದ ಅವರಿಗೆ ಇಂತಹ ಜವಾಬ್ದಾರಿಯುತ ಸ್ಥಾನ ನೀಡಬಾರದು ಎನ್ನುವ ಒತ್ತಡ ಪಕ್ಷದಲ್ಲಿ ಹೆಚ್ಚಾಗಿದೆ.

ಒಕ್ಕಲಿಗೆ ಮತ್ತೊಂದು ಸ್ಥಾನ ಡೌಟು: ಇತ್ತೀಚೆಗೆ ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ಆಯ್ಕೆಯಾಗಿರುವ ಸಿ.ಟಿ.ರವಿ ಅವರೇ ಪ್ರತಿಪಕ್ಷ ನಾಯಕನಾಗುವ ಸಾಧ್ಯತೆಯಿದೆ ಎನ್ನುವ ಮಾತುಗಳು ಕೇಳಿಬರುತ್ತಿದೆ. ಆದರೆ ವಿಧಾನಸಭೆಗೆ ಈಗಾಗಲೇ ಪ್ರತಿಪಕ್ಷ ನಾಯಕರಾಗಿರುವ ಆರ್.ಅಶೋಕ ಅವರು ಒಕ್ಕಲಿಗ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಇದೀಗ ಮತ್ತೊಂದು ಸಾಂವಿಧಾನಿಕ ಹುದ್ದೆಯನ್ನು ಒಕ್ಕಲಿಗ ಸಮುದಾಯಕ್ಕೆ ನೀಡಿದರೆ, ಹಿಂದುಳಿದ ವರ್ಗ ಹಾಗೂ ದಲಿತರ ಅಸಮಾಧಾನಕ್ಕೆ ಕಾರಣವಾಗಲಿದೆ. ಆದ್ದರಿಂದ ದಲಿತ ಸಮುದಾಯದ ಎನ್.ರವಿಕುಮಾರ್ ಅವರನ್ನೇ ಪ್ರತಿಪಕ್ಷ ನಾಯಕನನ್ನಾಗಿ ಮಾಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

> ಬಂಡವಾಳ ಹೂಡಿಕೆಗೆ ನಷ್ಟವಾಗಬಾರದು. ಉದ್ಯೋಗ ಸೃಷ್ಟಿಗೂ ನಷ್ಟವಾಗಬಾರದು. ಆ ರೀತಿಯಲ್ಲಿ ಸಾಧಕ ಬಾಧಕ ನೋಡಿಕೊಂಡು ತೀರ್ಮಾನ ಮಾಡುತ್ತೇವೆ. ಈ ವಿಧೇಯಕ ಕಾರ್ಮಿಕ ಇಲಾಖೆಯಿಂದ ಬಂದಿರುವ ಪ್ರಸ್ತಾವನೆ. ಕನ್ನಡಿಗರು ಕರ್ನಾಟಕಕ್ಕೆ ಸೀಮಿತವಾಗಿಲ್ಲ, ವಿಶ್ವದ ಬೇರೆ ಬೇರೆ ಭಾಗಗಳಲ್ಲಿದ್ದಾರೆ. ಅದಕ್ಕೆ ತಕ್ಕಂತೆ ಕೌಶಲ ತರಬೇತಿ ನೀಡಬೇಕಿದೆ. ಎಲ್ಲ ನೀತಿಗಳಿಗೂ ಪರ, ವಿರೋಧ ಇದ್ದೇ ಇರುತ್ತೆ. ಈ ಬಗ್ಗೆ ಚರ್ಚಿಸಿ ತೀರ್ಮಾನಿಸುತ್ತೇವೆ.
>
> - **ಪ್ರಿಯಾಂಕ್ ಖರ್ಗೆ** ಐಟಿ-ಬಿಟಿ ಸಚಿವ

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು
Telephone No: 9448994705

CHAMUNDESHWARI ELECTRICITY SUPPLY CORPORATION LIMITED
(A Government of Karnataka Undertaking)
Corporate Office, Procurement Section, CESC, Mysuru-570017.
Website: www.cescmysore.org
E-mail ID: gmpurc@cescmysore.org
Company Identity Number(CIN): U40109KA2004SGC035177

ಚಾವಿಸನಿನಿ/ಪ್ರವ್ಯ/ಉ.ಪ್ರವ್ಯ(ಖ)/ಸ.ಪ್ರವ್ಯ(ಖ-2)/2024-25/7186 ದಿನಾಂಕ: 10.07.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)
ಚಾ.ವಿ.ಸ.ನಿ.ನಿ ವತಿಯಿಂದ ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಸೇವೆಗಳಿಗೆ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ.

ಕ್ರ.ಸಂ	ಸೇವೆಗಳು	ವಿಚಾರಣೆ ಸಂಖ್ಯೆ/ದಿನಾಂಕ
1	ಹೊರ ಗುತ್ತಿಗೆ ಏಜೆನ್ಸಿಯವರಿಂದ ಪೂರ್ಣ ಗುತ್ತಿಗೆ ಆಧಾರದ ಮೇಲೆ ಚಾವಿಸನಿನಿ ವ್ಯಾಪ್ತಿಯಲ್ಲಿ 12 ತಿಂಗಳ ಅವಧಿಗೆ 788 ಜನ ಲೈನ್ ಹೆಲ್ಪರ್‌ಗಳನ್ನು ಒದಗಿಸಲು	ಸಿ2-5734/10-07-2024

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ದಿ: 19.07.2024ರ ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೆಲ್ಪ್‌ಲೈನ್ +91-8046010000, +91-8068948777 ಅಥವಾ ಇ-ಮೇಲ್ ವಿಳಾಸ support@eprochelpdesk.com ವ್ಯವಹರಿಸಲು ಕೋರಲಾಗಿದೆ.

ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ: 1912

DIPR/DDMYS-257/KSMCA-178/2024-25
ಸಹಿ/- ಪ್ರಧಾನ ವ್ಯವಸ್ಥಾಪಕರು (ಖರೀದಿ), ಚಾ.ವಿ.ಸ.ನಿನಿ., ಮೈಸೂರು

ಯುವತಿ ಮೇಲೆ ಅತ್ಯಾಚಾರ ಯತ್ನ



ಬೆಳಗಾವಿ: ಅಪ್ರಾಪ್ತ ವಯಸ್ಸಿನ ಬುದ್ಧಿಮಾಂದ್ಯ ಯುವತಿಯ ಮೇಲೆ ಅನ್ಯಕೋಮಿನ ಯುವಕ ಅತ್ಯಾಚಾರಕ್ಕೆ ಯತ್ನಿಸಿದ ಘಟನೆ ಬೆಳಗಾವಿ ತಾಲೂಕಿನ ಕಾಕತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು ಗ್ರಾಮದಲ್ಲಿ ಪ್ರಕ್ಷುಬ್ಧ ವಾತಾರಣ ನಿರ್ಮಾಣವಾಗಿದೆ. ಬುಧವಾರ ಬೆಳಗಾವಿ ತಾಲೂಕಿನ ಸಮೀರ್ ಅಬ್ಬಾಸ್ ಧಾಮಣೇಕರ (30) ಅತ್ಯಾಚಾರಕ್ಕೆ ಯತ್ನಿಸಿದ ವ್ಯಕ್ತಿ. ಈ ಘಟನೆಯಿಂದ ಆಕ್ರೋಶಗೊಂಡ ಯುವತಿಯ ಮನೆಯವರು ಅದೇ ಓಣಿಯಲ್ಲಿರುವ ಸಮೀರ್ ಮನೆಗೆ ತೆರಳಿ ಕುಟುಂಬಸ್ಥರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಹಿರಿಯ ಪೊಲೀಸ್ ಅಧಿಕಾರಿಗಳು ತೆರಳಿ ಪರಿಸ್ಥಿತಿ ತಿಳಿಗೊಳಿಸಿದ್ದಾರೆ.

ಟ್ವೀಟೂ-ಖಾರಾ

ಮಲ್ಲಿಕಾರ್ಜುನ ಖರ್ಗೆ,
ಎಐಸಿಸಿ ಅಧ್ಯಕ್ಷ

ದೇಶದ 16 ಲಕ್ಷ ಮಕ್ಕಳಿಗೆ ಲಸಿಕೆ ಹಾಕದೆ ಮೋದಿ ಸರಕಾರ ಭಾರಿ ತಪ್ಪು ಮಾಡಿದೆ. ಮಕ್ಕಳ ರೋಗನಿರೋಧಕತೆ ಬಗ್ಗೆ ನಿರ್ಲಕ್ಷ್ಯ ತಾಳಿದೆ ಎಂದರೆ ಅಮೂಲ್ಯ ಜೀವಗಳ ನಷ್ಟ ಎಂದರ್ಥ. 2023ರಲ್ಲಿ ಡಿಫ್ತೀರಿಯಾ, ಟೆಟಾನಸ್, ದಡಾರ ಸೇರಿದಂತೆ ಪ್ರಮುಖ ಕಾಯಿಲೆಗಳಿಗೆ ಲಸಿಕೆ ಹಾಕದೆ ನಿರ್ಲಕ್ಷ್ಯ ವಹಿಸಲಾಗಿದೆ. ಕಾಂಗ್ರೆಸ್ ಹಾಕಿಕೊಟ್ಟ ಪ್ರಬಲ ರೋಗನಿರೋಧಕ ಬುನಾದಿಯ ಲಾಭ ಪಡೆದುಕೊಳ್ಳುವಲ್ಲಿ ಕೇಂದ್ರ ವಿಫಲವಾಗಿದೆ.

ಡಾ. ವಿಷ್ಣು ರಾಜಗಡಿಯಾ,
ಮಾಧ್ಯಮ ಹೋರಾಟಗಾರ

16 ಲಕ್ಷ ಮಕ್ಕಳಿಗೆ ಲಸಿಕೆ ಹಾಕದಿರುವುದು ನಿಜಕ್ಕೂ ಆತಂಕದ ಸಂಗತಿ.ಇದರಿಂದಾಗಿ ಮಕ್ಕಳು ಮುಂದೆ ತೀವ್ರ ಆರೋಗ್ಯ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಜೊತೆಗೆ ಅನಾರೋಗ್ಯ ಸಮಾಜ ಸೃಷ್ಟಿಯಾಗಲಿದೆ. ಇದಕ್ಕೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು.

ಸಮಾಚಾರ ಸಣ್ಣದಲ್ಲ

ಪ್ರಬಂಧ ಮಂಡನೆ

ಬೆಂಗಳೂರು: ದೆಹಲಿಯಲ್ಲಿ ಜುಲೈ 19 ಮತ್ತು 20ರಂದು ನಡೆಯಲಿರುವ ಸಮಾಜ ವಿಜ್ಞಾನಗಳಲ್ಲಾದ ಬದಲಾವಣೆಗಳ ಕುರಿತು ಎರಡು ದಿನ ಪ್ರಬಂಧ ಮಂಡನಾ ಕಾರ್ಯಕ್ರಮ ನಡೆಯಲಿದೆ. ವಿಶೇಷ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಲು ಆರ್ಥಿಕ ತಜ್ಞ ಡಾ ಜಿ.ವಿ.ಜೋಶಿ ತೆರಳಲಿದ್ದಾರೆ. ರಾಷ್ಟ್ರೀಯ ಸಮಾಜ ವಿಜ್ಞಾನ ಪರಿಷತ್ತು ಮತ್ತು ಭಾರತೀಯ ಸಮಾಜ ವಿಜ್ಞಾನ ಸಂಶೋಧನಾ ಮಂಡಳಿ ಜಂಟಿಯಾಗಿ ಏರ್ಪಡಿಸಿದ ಚಿಂತನೆಯಲ್ಲಿ ಪಾಲ್ಗೊಳ್ಳಲು ಅವರು ಆಮಂತ್ರಣ ಪಡೆದಿದ್ದಾರೆ ಎಂದು ತಿಳಿಸಿದ್ದಾರೆ.

ಹಗರಣಗಳ ಸರಕಾರ: ವಿಜಯೇಂದ್ರ ಟೀಕೆ

ಬೆಂಗಳೂರು: ಕಾಂಗ್ರೆಸ್ ಸರಕಾರ ಮೊದಲ ಬಾರಿಗೆ ಹಗರಣಗಳ ಸರಮಾಲೆಯಲ್ಲಿ ಸಿಲುಕಿಕೊಂಡಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ಈಗಾಗಲೇ ಸದನದ ಹೊರಗೆ ಮತ್ತು ಒಳಗಡೆ ಹಗರಣಗಳ ವಿರುದ್ಧ ಹೋರಾಟ ಮಾಡುತ್ತಿದ್ದು, ಪರಿಶಿಷ್ಟ ಜಾತಿ, ಪಂಗಡಗಳಿಗೆ ಮೀಸಲಿಟ್ಟ ಹಣ ಲೂಟಿ ಹೊಡೆದು ಲೋಕಸಭಾ ಚುನಾವಣೆಯಲ್ಲಿ ಬಳಸಿಕೊಂಡಿದೆ ಎಂದು ದೂರಿದರು.

ಆಸ್ತಿ ವಿಚಾರಕ್ಕೆ ಮಹಿಳೆಯ ಕೊಲೆ

ಚಳ್ಳಕೆರೆ: ಆಸ್ತಿ ವಿಚಾರವಾಗಿ ಈರಮ್ಮ ಎಂಬ 45 ವರ್ಷದ ಮಹಿಳೆಯ ಬರ್ಬರ ಕೊಲೆಯಾದ ಘಟನೆ ಚಳ್ಳಕೆರೆ ತಾಲೂಕಿನ ಹಾಲಗೊಂಡನಹಳ್ಳಿಯಲ್ಲಿ ಬುಧವಾರ ನಡೆದಿದೆ. ಈ ಕೃತ್ಯ ಮಹಿಳೆಯ ಗಂಡನ ಅಣ್ಣ ಗಂಗಾಧರಪ್ಪ ಮತ್ತು ಮಗ ಚಂದ್ರಪ್ಪನಿಂದ ನಡೆದಿದೆ ಎನ್ನಲಾಗಿದೆ. ಮಹಿಳೆಯ ಗಂಡ 15 ವರ್ಷದ ಹಿಂದೆ ತೀರಿಕೊಂಡಿದ್ದು, ಆಕೆಯ ವಿರುದ್ಧ ಗಂಗಾಧರಪ್ಪ ಮತ್ತು ಚಂದ್ರಪ್ಪ ಜಮೀನು ವಿಚಾರವಾಗಿ ನ್ಯಾಯಾಲಯದ ಮೆಟ್ಟಿಲೇರಿದ್ದರು ಆದರೆ ಪ್ರಕರಣದ ವಿಚಾರಣೆ ನಡೆಯುತ್ತಿರುವಾಗಲೇ ಈರಮ್ಮನನ್ನು ಮನೆ ಮುಂದೆ ಬರ್ಬರವಾಗಿ ಕೊಲೆಗೈಯಲಾಗಿದೆ, ಗಲಾಟೆ ಬಿಡಿಸಲು ಹೋದ ಈರಮ್ಮನ ತಂಗಿ ಮಮತಾ ಮೇಲೂ ಮಚ್ಚಿನಿಂದ ಹಲ್ಲೆ ಮಾಡಲಾಗಿದೆ. ಮಮತಾಳನ್ನು ಚಳ್ಳಕೆರೆ ಸರಕಾರಿ ಆಸ್ಪತ್ರೆಗೆ ದಾಖಲಿಸಲಗಿದೆ. ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಅತ್ಯಾಚಾರ: ದಂತ ವೈದ್ಯನ ಬಂಧನ

ತುಮಕೂರು: ನಗರದ ಶೆಟ್ಟಿಹಳ್ಳಿ ಗೇಟ್ ಬಳಿಯ ಚಿಕಿತ್ಸೆ ಪಡೆಯಲು ಬಂದ ಯುವತಿಯ ಮೇಲೆ ದಂತವೈದ್ಯ ಡಾ.ಸಂಜಯ್ ನಾಯಕ್ ಅತ್ಯಾಚಾರ ಎಸಗಿರುವುದಾಗಿ ಮಹಿಳಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿ ವೈದ್ಯ ಶುಕ್ರವಾರ ಸಂಜೆ ಯುವತಿಯ ಮೇಲೆ ಅತ್ಯಾಚಾರ ಎಸಗಿರುವುದು ತಡವಾಗಿ ಬೆಳಕಿಗೆ ಬಂದಿದೆ.

{ ಚಲುವರಾಯಸ್ವಾಮಿ } ಸಚಿವ

ಕಬಿನಿ ಜಲಾಶಯದಿಂದ 30 ಸಾವಿರ ಕ್ಯುಸೆಕ್ ನೀರು ತಮಿಳುನಾಡಿಗೆ ಹರಿದುಹೋಗುತ್ತಿರುವುದರಿಂದ ಕೆಆರ್‌ಎಸ್‌ನಿಂದ ಬಿಡುಗಡೆ ಮಾಡುವ ಪ್ರಶ್ನೆಯೇ ಇಲ್ಲ. ಹೀಗಾಗಿ ರೈತರು ಆತಂಕ ಪಡುವ ಅಗತ್ಯವಿಲ್ಲ. ಈ ವಿಚಾರದಲ್ಲಿ ರಾಜಕೀಯ ಲಾಭ ಪಡೆಯಲು ಅನಗತ್ಯವಾಗಿ ಟೀಕೆ ಮಾಡಲಾಗುತ್ತಿದೆ.

ಮಳೆಯಿಂದ ಅಣೆಕಟ್ಟುಗಳಿಗೆ ಒಳಹರಿವು ಹೆಚ್ಚಳ | **ಕೆಆರ್‌ಎಸ್‌ಗೆ ಒಂದೇ ದಿನ 3 ಟಿಎಂಸಿ ನೀರು** | **ನಾರಾಯಣಪುರ: ಭಾರಿ ಪ್ರಮಾಣದಲ್ಲಿ ನೀರು ಬಿಡುಗಡೆ** | **ಶಿರಾಡಿಘಾಟ್‌ನಲ್ಲಿ ಭೂಕುಸಿತ: ಹೆದ್ದಾರಿ ಸಂಚಾರ ಬಂದ್** | **ಮಳೆ: ಧುಮ್ಮಿಕ್ಕಿ ಹರಿಯುತ್ತಿರುವ ಹೊಗೇನಕಲ್**

ಭಾರಿ ಮಳೆ: ಕರಾವಳಿ ರೆಡ್ ಅಲರ್ಟ್

ಬೆಂಗಳೂರು: ರಾಜ್ಯದ ಕರಾವಳಿ ಮತ್ತು ಮಲೆನಾಡಿನಲ್ಲಿ ಮುಂಗಾರು ಮಳೆ ಮತ್ತಷ್ಟು ಚುರುಕಾಗಿದೆ. ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ಮೂರು ದಿನ ರೆಡ್ ಅಲರ್ಟ್ ಘೋಷಿಸಲಾಗಿದ್ದು, ಶಿವಮೊಗ್ಗ ಮತ್ತು ಹಾಸನದಲ್ಲಿ ಆರೆಂಜ್‌ಅಲರ್ಟ್ ಘೋಷಿಸಲಾಗಿದೆ. ವರುಣನ ಅಬ್ಬರದಿಂದಾಗಿ ಒಳಹರಿವು ಹೆಚ್ಚಳವಾಗಿ ಕೆಆರ್‌ಎಸ್, ಕಬಿನಿ ಮೊದಲಾದ ಜಲಾಶಯಗಳಿಗೆ ವ್ಯಾಪಕ ಪ್ರಮಾಣದಲ್ಲಿ ನೀರು ಹರಿದುಬರುತ್ತಿದೆ. ಶಿರಾಡಿಘಾಟ್‌ನಲ್ಲಿ ಮತ್ತೊಂದು ಭೂಕುಸಿತದ ಭೀತಿ ಎದುರಾಗಿದೆ.

ನಾಗಾಲಯ ನೀರಿನಲ್ಲಿ ಮುಳುಗಡೆ: ಉಡುಪಿ ಜಿಲ್ಲೆಯಲ್ಲಿ ಪಾಪನಾಶಿನಿ, ಅಘನಾಶಿನಿ, ಸೀತಾನದಿ ಸೇರಿದಂತೆ ಬಹುತೇಕ ನದಿಗಳು ಧಾರಾಕಾರ ಮಳೆಯಿಂದಾಗಿ ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ನೀಲಾ ವರದ ಪಂಚಮಿ ನಾಗಾಲಯ ದೇಗುಲ ಮುಳುಗಡೆ ಯಾಗಿದ್ದು, ತೀರ್ಥಸ್ನಾನ ಕೈಗೊಳ್ಳುವ ಪ್ರದೇಶ ಜಲಾವೃತವಾಗಿದೆ. ಹೀಗಾಗಿ ಭಕ್ತರು ಈ ಪ್ರದೇಶಕ್ಕೆ ತೆರಳದಂತೆ ಸೂಚಿಸಲಾಗಿದೆ.

ಪಾವುರು ಅಣೆಕಟ್ಟಿನ ಎಲ್ಲ ಗೇಟ್‌ಗಳನ್ನು ತೆರೆದು ಭಾರಿ ಪ್ರಮಾಣದಲ್ಲಿ ನೀರು ಹೊರಬಿಡಲಾಗುತ್ತಿದೆ. ಮಂಗಳೂರು ಹೊರವಲಯದ ಉಳ್ಳಾಲ ಮೊದಲಾದೆಡೆ ಕಡಲ್ಕೊರೆತದ ಭೀತಿ ಹೆಚ್ಚಾಗಿದೆ.

ಈ ಮಧ್ಯೆ, ಶಿರಾಡಿಘಾಟ್‌ನಲ್ಲಿ ಮತ್ತೊಂದು ಭೂಕುಸಿತದ ಭೀತಿ ಎದುರಾಗಿದ್ದು, ಅಧಿಕಾರಿಗಳು ಕಟ್ಟೆಚ್ಚರ ವಹಿಸಿದ್ದಾರೆ.

ಸಂಚಾರ ನಿರ್ಬಂಧ: ಈ ಮಧ್ಯೆ, ಭೂಕುಸಿತದ ಹಿನ್ನೆಲೆಯಲ್ಲಿ ಚಿಕ್ಕಮಗಳೂರು ತಾಲೂಕಿನ ಸೀತಾಳಯ್ಯನ ಗಿರಿ ಮತ್ತು ಮುಳ್ಳಯ್ಯನಗಿರಿ ಪ್ರದೇಶದಲ್ಲಿ ಜು. 22 ರವರೆಗೆ ವಾಹನಗಳ ಸಂಚಾರಕ್ಕೆ ನಿರ್ಬಂಧ ಹೇರಲಾಗಿದೆ. ಕೊಪ್ಪ ತಾಲೂಕಿನಲ್ಲಿ ಎರಡು ಕಡೆ ಭೂಕುಸಿತ ಸಂಭವಿಸಿದ್ದು, ಚಿಕ್ಕ ಮಗಳೂರು ಜಿಲ್ಲೆಯಲ್ಲಿ 24 ಗಂಟೆಯಲ್ಲಿ 24 ಮಿ.ಮೀ ಮಳೆ ಬಿದ್ದಿದೆ. ಭದ್ರಾ ಜಲಾಶಯದಿಂದ ವ್ಯಾಪಕ ಪ್ರಮಾಣದಲ್ಲಿ ನೀರು ಹೊರಬಿಡಲಾಗುತ್ತಿದೆ. ಶಿವಮೊಗ್ಗ- ಹಾಸನದಲ್ಲಿ ಮಳೆ ಮುಂದುವರಿದಿದ್ದು, ಆರೆಂಜ್ ಅಲರ್ಟ್ ನೀಡಲಾಗಿದೆ. ಸೀಳಿ ಫಾಲ್ಸ್ ಸೇರಿದಂತೆ ಎಲ್ಲ ಜಲಪಾತಗಳು ಧುಮ್ಮಿಕ್ಕಿ ಹರಿಯುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸುತ್ತಿವೆ.

ಶೋಧನೆ ಮುಂದುವರಿಕೆ

ಉತ್ತರ ಕನ್ನಡ ಜಿಲ್ಲೆಯ ಶಿರೂರು ಬಳಿ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಭೀಕರ ಗುಡ್ಡ ಕುಸಿತದಿಂದಾಗಿ ಹತ್ತು ಜನರನ್ನು ಬಲಿತೆಗೆದುಕೊಂಡ ಸ್ಥಳದಲ್ಲಿ ಬುಧವಾರ ಬೆಳಗ್ಗೆ ಶೋಧನೆ ಕಾರ್ಯಾಚರಣೆ ಪುನರಾರಂಭಗೊಂಡಿದೆ. ಈ ವರೆಗೆ ಶೇ.30ರಷ್ಟು ಮಣ್ಣು ತೆರವುಗೊಳಿಸಲಾಗಿದ್ದು, ಒಂದು ಬೆಂಜ್, ಎರಡು ಲಾರಿಗಳು ಮಣ್ಣಿನಲ್ಲಿ ಸಿಲುಕಿಕೊಂಡಿರುವುದು ಪತ್ತೆಯಾಗಿದೆ. ಲಾರಿಯಲ್ಲಿ ಚಾಲಕನಿದ್ದು, ಕಾರಿನಲ್ಲಿ ಎಷ್ಟು ಜನರಿದ್ದಾರೆ ಎಂಬ ಬಗ್ಗೆ ಮಾಹಿತಿಯಿಲ್ಲ. ಹಾಗಾಗಿ ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಈ ವರೆಗೆ ಐವರ ಶವಗಳು ದೊರೆತಿದ್ದು, ದುಃಖತಪ್ತ ಬಂಧುಗಳ ಸಮ್ಮುಖದಲ್ಲಿ ಅಂತ್ಯಸಂಸ್ಕಾರ ನಡೆದಿದೆ.

ಕಲ್ಲುಗಣಿ ತಡೆಗೋಡೆ ಕುಸಿತ

ಕಲಬುರಗಿ ಜಿಲ್ಲೆಯಲ್ಲೂ ಮಳೆ, ಪ್ರವಾಹ ಪರಿಸ್ಥಿತಿ ಮುಂದುವರಿದಿದೆ. ಚಿಂಚೋಳಿ ತಾಲೂಕಿನ ಮಲಕಾಪುರದಲ್ಲಿ ವ್ಯಾಪಕ ಮಳೆಯಿಂದಾಗಿ ಕಲ್ಲುಗಣಿಯ ತಗ್ಗು ಪ್ರದೇಶದಲ್ಲಿ ಭಾರಿ ಪ್ರಮಾಣದಲ್ಲಿ ನೀರು ತುಂಬಿದೆ. ಪ್ರವಾಹದ ಒತ್ತಡದಿಂದಾಗಿ ಬೃಹತ್ ಕಲ್ಲಿನ ತಡೆಗೋಡೆ ಕುಸಿದು ಅಪಾರ ಪ್ರಮಾಣದಲ್ಲಿ ನೀರು ಹರಿಯುತ್ತಿದೆ. ಅದರೆ ಗಣಿಯಲ್ಲಿ ದೊಡ್ಡ ಅನಾಹುತ ತಪ್ಪಿದೆ.

28.560 ಕ್ಯುಸೆಕ್ ನೀರು ಬಿಡುಗಡೆ

ಯಾದಗಿರಿ ಜಿಲ್ಲೆಯಲ್ಲಿ ವ್ಯಾಪಕ ಮಳೆಯಿಂದಾಗಿ ಹುಣಸಗಿ ತಾಲೂಕಿನ ನಾರಾಯಣಪುರ ಜಲಾಶಯಕ್ಕೆ 55 ಸಾವಿರ ಕ್ಯುಸೆಕ್ ನೀರು ಹರಿದುಬರುತ್ತಿದ್ದು, 28.560 ಕ್ಯುಸೆಕ್ ನೀರನ್ನು ಕೃಷ್ಣಾ ನದಿಗೆ ಹರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಎಚ್ಚರಿಕೆಯಿಂದಿರುವಂತೆ ನದಿ ಪಾತ್ರದ ಜನರಿಗೆ ಸೂಚಿಸಲಾಗಿದೆ.33.3 ಟಿಎಂಸಿ ಸಾಮರ್ಥ್ಯದ ನಾರಾಯಣಪುರ ಜಲಾಶಯದಲ್ಲಿ ಈಗ 30.3348 ಟಿಎಂಸಿ ನೀರು ಸಂಗ್ರಹವಾಗಿದೆ. ನಿರಂತರ ಮಳೆಯಿಂದಾಗಿ ಒಳಹರಿವು ಮತ್ತಷ್ಟು ಹೆಚ್ಚಳವಾಗುವ ಸಾಧ್ಯತೆಯಿದ್ದು, ಹೊರಹರಿವಿನ ಪ್ರಮಾಣ ಹೆಚ್ಚಾಗಬಹುದು ಎಂದು ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ನಿರಂತರ ಮಳೆಯಿಂದಾಗಿ ತುಂಬಿ ಹರಿಯುತ್ತಿರುವ ಅಘನಾಶಿನಿ ನದಿ. ▸▸ ಚಿತ್ರ: ಗೋಪಿ ಜಾಲಿ

ಹೊಗೇನಕಲ್: ಕಾವೇರಿ ಜಲಾನಯನ ಪ್ರದೇಶದಲ್ಲಿ ವರುಣನ ಆರ್ಭಟ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಕರ್ನಾಟಕ-ತಮಿಳುನಾಡಿನ ಗಡಿಯಲ್ಲಿರುವ ಹೊಗೇನಕಲ್ ಜಲಪಾತ ಧುಮ್ಮಿಕ್ಕಿ ಹರಿಯುತ್ತಿದೆ. ಕಲ್ಲು, ಬಂಡೆಗಳ ನಡುವೆ ಹರಿಯುತ್ತಿರುವ ಜಲಪಾತದ ನಯನ ಮನೋಹರ ದೃಶ್ಯ ವೀಕ್ಷಿಸಲು ಅಪಾರ ಸಂಖ್ಯೆಯ ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ. ಮತ್ತೊಂದೆಡೆ ಕೃಷ್ಣರಾಜ ಸಾಗರ ಜಲಾಶಯಕ್ಕೆ ಒಳಹರಿವು ಹೆಚ್ಚುತ್ತಿದ್ದು, ಕಳೆದ 24 ಗಂಟೆಯಲ್ಲಿ ಮೂರು ಟಿಎಂಸಿ ನೀರು ಹರಿದುಬಂದಿದೆ.

ತುಂಗಭದ್ರಾ ಡ್ಯಾಂಗೆ ಉತ್ತಮ ಒಳಹರಿವು

ಎಡದಂಡೆ ಕಾಲುವೆಗೆ ನೀರು ಬಿಡುಗಡೆ ನಾಳೆ?

ಕೊಪ್ಪಳ: ತುಂಗಭದ್ರಾ ಜಲಾಶಯಕ್ಕೆ ಕಳೆದೊಂದು ವಾರದಿಂದ ಉತ್ತಮ ಒಳಹರಿವು ದಾಖಲಾಗುತ್ತಿದ್ದು, ಗುರುವಾರ ಬೆಳಗ್ಗೆಯಿಂದ ಭಾರಿ ಪ್ರಮಾಣದಲ್ಲಿ ಹೆಚ್ಚುವ ಸಾಧ್ಯತೆ ಇದೆ. ಈ ಹಿನ್ನೆಲೆ ಒಂದೆರಡು ದಿನದಲ್ಲಿ ಟಿಬಿ ಡ್ಯಾಂ ಅರ್ಧ ಭರ್ತಿಯಾಗುವ ನಿರೀಕ್ಷೆ ಇದ್ದು, ಜುಲೈ 19ರಿಂದ ಎಡದಂಡೆ ಕಾಲುವೆಗೆ ನೀರು ಬಿಡುಗಡೆ ಮಾಡುವ ಸಾಧ್ಯತೆ ನಿಚ್ಚಳವಾಗಿದೆ.

ಜುಲೈ 17ರ ಸಂಜೆ ವೇಳೆಗೆ ಜಲಾಶಯದಲ್ಲಿ 39.718 ಟಿಎಂಸಿ ನೀರಿನ ಸಂಗ್ರಹ ಇದೆ. ಜೊತೆಗೆ ಡ್ಯಾಂನ ಜಲಾನಯನ ಪ್ರದೇಶದಲ್ಲಿ ಮಳೆ ಮುಂದುವರೆದಿದೆ. ಈ ಹಿನ್ನೆಲೆಯಲ್ಲಿ ಜುಲೈ 17ರ ಸಂಜೆ ವೇಳೆಗೆ ಒಳಹರಿವಿನ ಪ್ರಮಾಣ 75 ಸಾವಿರ ಕ್ಯುಸೆಕ್ ಮೀರಿದೆ. ಇನ್ನು ಜುಲೈ 18ರ ಬೆಳಗ್ಗೆಯಿಂದ ಕನಿಷ್ಠ 1 ಲಕ್ಷ ಕ್ಯುಸೆಕ್ ನೀರಿನ ಒಳಹರಿವು ದಾಖಲಾಗಬಹುದು ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ. ಈಗಾಗಲೇ ತುಂಗಾ ಜಲಾಶಯ ಭರ್ತಿಯಾಗಿದ್ದು, ನೀರು ಬಿಡುಗಡೆ ಮಾಡಲಾಗುತ್ತಿದೆ. ಜೊತೆಗೆ ಭದ್ರಾ ಜಲಾಶಯ ಕೂಡ ಯಾವುದೇ ಹೊತ್ತಿಗೆ ಭರ್ತಿ ಆಗಲಿದೆ. ಇದರಿಂದ ತುಂಗಭದ್ರ ಜಲಾಶಯದ ಒಳಹರಿವು ಮತ್ತಷ್ಟು ಹೆಚ್ಚಲಿದೆ. ಮಲೆನಾಡು ಭಾಗದಲ್ಲಿ ಸುರಿಯುತ್ತಿರುವ ಮಳೆ ಟಿಬಿ ಡ್ಯಾಂ ಅಚ್ಚುಕಟ್ಟು ರೈತರಲ್ಲಿ ಆಶಾಭಾವನೆ ಮೂಡಿಸಿದೆ. ಒಟ್ಟು 133 ಟಿಎಂಸಿ ಸಾಮರ್ಥ್ಯದ ತುಂಗಭದ್ರ ಜಲಾಶಯದಲ್ಲಿ ಹೂಳು ತುಂಬಿದ್ದು, ಸದ್ಯ 105 ಟಿಎಂಸಿ ನೀರು ಮಾತ್ರ ಬಳಕೆಗೆ ಲಭ್ಯವಿದೆ.

ನಂಜನಗೂಡು ಸ್ನಾನಘಟ್ಟ, ಮಂಟಪ ಮುಳುಗಡೆ

ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆ ತಾಲೂಕಿನ ಕಬಿನಿ ಜಲಾಶಯದಿಂದ 34 ಸಾವಿರ ಕ್ಯೂಸೆಕ್ ನೀರನ್ನು ಹೊರಬಿಟ್ಟಿರುವ ಹಿನ್ನೆಲೆಯಲ್ಲಿ ನಂಜನಗೂಡು ಪಟ್ಟಣದಲ್ಲಿನ ಶ್ರೀಕಂಠೇಶ್ವರ ದೇವಾಲಯ ಮುಂಭಾಗದ ಸ್ನಾನಘಟ್ಟ, ಹದಿನಾರು ಕಾಲು ಮಂಟಪ ಸಂಪೂರ್ಣ ಮುಳುಗಡೆ ಆಗಿದೆ. ಐತಿಹಾಸಿಕ ವೆಲ್ಲೆಸ್ಲಿ ಸೇತುವೆ ಬಳಿ ನೀರು ರಭಸದಿಂದ ಹರಿಯುತ್ತಿದೆ.

ಭೂಕುಸಿತ: ಕೊಚ್ಚಿ ಹೋದ ಸೇತುವೆ

ಹಾಸನ: ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಇಂದೂ ಸಹ ಪುನರ್ವಸು ಮಳೆ ಅಕ್ಷರಶಃ ಆರ್ಭಟಿಸುತ್ತಿದೆ. ಮಲೆನಾಡು ಭಾಗದಲ್ಲಂತೂ ಎಡೆಬಿಡದೆ ಸುರಿಯುತ್ತಿದೆ. ಭಾರೀ ಮಳೆಗೆ ಸಕಲೇಶಪುರ ತಾಲೂಕು ಕೊಲ್ಲಹಳ್ಳಿ ಬಳಿ ರಾಷ್ಟ್ರೀಯ ಹೆದ್ದಾರಿ 75 ರ ತಡೆಗೋಡೆ ಕುಸಿದಿದೆ. ಸುಮಾರು 25 ಅಡಿಯಷ್ಟು ಮಣ್ಣುಹಾಕಿ ತಡೆಗೋಡೆ ನಿರ್ಮಿಸಲಾಗಿತ್ತು. ಆದರೆ ಅದು ಸೂಕ್ತವಾಗಿರದೆ ಕೊಚ್ಚಿ ಹೋಗಿದೆ. ಹೆದ್ದಾರಿಗೆ ಹೊಂದಿಕೊಂಡಂತೆ 500 ಮೀಟರ್ ಉದ್ದ ವಿರುವ ತಡೆಗೋಡೆ ಕುಸಿಯುತ್ತಿದೆ. ಮಳೆ ಹೆಚ್ಚಾದರೆ ಚತುಷ್ಪಥ ರಸ್ತೆಯ ಒಂದು ಭಾಗದ ಕಾಂಕ್ರೀಟ್ ರಸ್ತೆಯೇ ಕೊಚ್ಚಿ ಹೋಗುವ ಆತಂಕ ಎದುರಾಗಿದೆ.

ಮೈದುಂಬಿದ ಹಳ್ಳಕೊಳ್ಳ: ಮತ್ತೊಂದೆಡೆ ಜೋರು ಮಳೆಯಿಂದಾಗಿ ಹಳ್ಳ-ಕೊಳ್ಳ ಮೈದುಂಬಿಕೊಂಡಿವೆ. ಜಂಬರಡಿ ಸೇರಿ ಕೆಲವು ಕಡೆ ಮಳೆ ನೀರು ಸೇತುವೆ ಮೇಲೆಯೇ ಭಾರೀ ಪ್ರಮಾಣದಲ್ಲಿ ಉಕ್ಕಿ ಹರಿಯುತ್ತಿದೆ. ಇದರಿಂದ ಹಲವು ಗ್ರಾಮಗಳು ಸಂಪರ್ಕ ಕಡಿದುಕೊಂಡಿವೆ. ವೆಂಕಟಹಳ್ಳಿ-ರಾಗಿಗುಂಡಿ ರಸ್ತೆ ಸಂಪರ್ಕ ಕಡಿತಗೊಂಡಿದೆ.

ಕೊಚ್ಚಿಹೋದ ಸೇತುವೆ: ಏತನ್ಮಧ್ಯೆ ಹುಚ್ಚು ಮಳೆಗೆ ಸಕಲೇಶಪುರ ತಾಲೂಕು ಮಾರನಹಳ್ಳಿ ಬಳಿ ಎರಡು ತಿಂಗಳ ಹಿಂದಷ್ಟೇ ನಿರ್ಮಾಣವಾಗಿದ್ದ, ಮಾರನಹಳ್ಳಿ ಗ್ರಾಮಾಂತರ ಪೊಲೀಸ್ ಠಾಣೆ ಚೆಕ್ ಪೋಸ್ಟ್ ಮುಂಭಾಗ ರಸ್ತೆಗೆ ಅಡ್ಡಲಾಗಿ ನಿರ್ಮಿಸಿದ್ದ ಕಿರುಸೇತುವೆ, ಭಾರಿ ಮಳೆಯಿಂದ ಇಲ್ಲದಂತಾಗಿದೆ. ಗ್ರಾಮದ ಮೊಣ್ಣಪ್ಪ ಎಂಬುವವರ ಮನೆಗೆ ತೆರಳಲು ನಿರ್ಮಾಣವಾಗಿದ್ದ ಸೇತುವೆ ಇಲ್ಲದಂತೆ ಆಗಿದೆ.

ಜಲಾಶಯ	ಇಂದಿನ ಮಟ್ಟ	ಗರಿಷ್ಠ	ಒಳಹರಿವು	ಹೊರ ಹರಿವು
ಕೆಆರ್‌ಎಸ್	111.90 ಅಡಿ	124.80 ಅಡಿ	36674 ಕ್ಯುಸೆಕ್	2361 ಕ್ಯುಸೆಕ್
ಕಬಿನಿ	2286.82 ಅಡಿ	2284 ಅಡಿ	38660 ಕ್ಯುಸೆಕ್	50000 ಕ್ಯುಸೆಕ್
ಹೇಮಾವತಿ	2909 ಅಡಿ	2922 ಅಡಿ	25,862 ಕ್ಯುಸೆಕ್	
ತುಂಗಭದ್ರಾ	39.718 ಟಿಎಂಸಿ	105.788ಟಿಎಂಸಿ	49522 ಕ್ಯುಸೆಕ್	212 ಕ್ಯುಸೆಕ್
ಹಾರಂಗಿ	2853 ಅಡಿ	2859 ಅಡಿ	6900 ಕ್ಯುಸೆಕ್	10.000 ಕ್ಯುಸೆಕ್

ಜಾರಿಬಿದ್ದ ರೇವಣ್ಣ: ಪಕ್ಕೆಲುಬಿಗೆ ಪೆಟ್ಟು

ಹೊಳೆನರಸೀಪುರ: ಸ್ಥಳೀಯ ಶಾಸಕ ಹಾಗೂ ಮಾಜಿ ಸಚಿವ ಎಚ್.ಡಿ.ರೇವಣ್ಣ, ದೇವಸ್ಥಾನದಲ್ಲಿ ಜಾರಿ ಬಿದ್ದು ಪಕ್ಕೆಲುಬಿಗೆ ಪೆಟ್ಟು ಮಾಡಿಕೊಂಡಿದ್ದಾರೆ. ಕೂಡಲೇ ತಾಲೂಕು ಆಸ್ಪತ್ರೆಯಲ್ಲಿ ತುರ್ತುಚಿಕಿತ್ಸೆ ಪಡೆದು ವಿಶ್ರಾಂತಿಗಾಗಿ ಬೆಂಗಳೂರಿಗೆ ತೆರಳಿದ್ದು, ಯಾವುದೇ ಅಪಾಯ ಇಲ್ಲ ಎಂದು ವೈದ್ಯರು ತಿಳಿಸಿದ್ದಾರೆ.

ಏಕಾದಶಿ ಪ್ರಯುಕ್ತ ಬುಧವಾರ ತಮ್ಮ ಕುಟುಂಬದ ಕುಲದೇವರು ಹರದನಹಳ್ಳಿ ದೇವೇಶ್ವರ ದೇವಾಲಯದಲ್ಲಿ ಪೂಜೆ ಸಲ್ಲಿಸಲು ರೇವಣ್ಣ ತೆರಳಿದ್ದರು. ದೇವಾಲಯದಲ್ಲಿ ಪೂಜೆ ಸಲ್ಲಿಸಿ ಹೊಳೆನರಸೀಪುರದ ಲಕ್ಷ್ಮೀನರಸಿಂಹ ದೇವಾಲಯಕ್ಕೆ ಹೊರಡುವ ಮುನ್ನ ಜಾರಿ ಬಿದ್ದಿದ್ದರಿಂದ ಪಕ್ಕೆಲುಬಿಗೆ ಪೆಟ್ಟು ಬಿದ್ದಿದೆ. ಉಪವಾಸ ಹಾಗೂ ತೀವ್ರ ಪಕ್ಕೆಲುಬು ನೋವಿನಿಂದ ಸುಸ್ತಾಗಿದ್ದರು. ಕೂಡಲೇ ಅವರನ್ನು ತಾಲ್ಲೂಕು ಆಸ್ಪತ್ರೆಯ ಐಸಿಯುನಲ್ಲಿ ದಾಖಲಿಸಿ ತುರ್ತು ಚಿಕಿತ್ಸೆ ನೀಡಲಾಯಿತು. ಚಿಕಿತ್ಸೆ ಪಡೆದ ಅವರು, ನಂತರ ವಿಶ್ರಾಂತಿಗಾಗಿ ಬೆಂಗಳೂರಿಗೆ ಹೊರಟರು.

ಕಣ್ಣೀರಿಟ್ಟ ರೇವಣ್ಣ

ದೇವಾಲಯದ ಪೂಜೆ ಸಲ್ಲಿಸಿ ಹೊರಬರುವ ವೇಳೆ ಕಾಲುಜಾರಿ ಬಿದ್ದು ಪೆಟ್ಟು ಮಾಡಿಕೊಂಡಿರುವ ರೇವಣ್ಣ ಕಾರಿನಲ್ಲಿ ಕುಳಿತು ಕಣ್ಣೀರಿಟ್ಟರು. ಸರಣಿಯೋಪಾದಿಯಲ್ಲಿ ತಮಗೆ ಎದುರಾಗುತ್ತಿರುವ ಸಂಕಷ್ಟ ನೆನೆದು ಕಣ್ಣೀರು ಹಾಕಿದರು. ಸ್ಥಳೀಯರು ಹಾಗೂ ಅಭಿಮಾನಿಗಳು ಧೈರ್ಯವಾಗಿರಿ ಎಂದು ಹೇಳಿ ಆಸ್ಪತ್ರೆಗೆ ಕಳಿಸಿಕೊಟ್ಟರು.

ಹಳೇ ಸಿದ್ದರಾಮಯ್ಯ ಕಳೆದುಹೋಗಿದ್ದಾರೆ

ಮಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಕಳೆದು ಹೋಗಿದ್ದಾರೆ. ಹಳೇ ಸಿದ್ದರಾಮಯ್ಯ ಇಲ್ಲ ಎಂದು ಕೇಂದ್ರ ಜಲಶಕ್ತಿ ಮತ್ತು ರೈಲ್ವೆ ಖಾತೆಗಳ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದ್ದಾರೆ.

ಬುಧವಾರ ಮಂಗಳೂರಿನಲ್ಲಿ ವಾಲ್ಮೀಕಿ ಅಭಿವೃದ್ಧಿ ನಿಗಮ ಮತ್ತು ಮುಡಾ ಹಗರಣ ವಿಚಾರದ ಕುರಿತಂತೆ ಸುದ್ದಿಗಾರರ ಪ್ರಶ್ನೆಗೆ ಸೋಮಣ್ಣ ಅವರು ಈ ಉತ್ತರ ನೀಡಿದರು.

ನಾನು ಅವರ ಜೊತೆ ಮಂತ್ರಿಯಾಗಿ, ಶಾಸಕನಾಗಿ ಕೆಲಸ ಮಾಡಿದ್ದೇನೆ. ಆ ಸಿದ್ದರಾಮಯ್ಯ ಈಗಿಲ್ಲ. ಇಂದಿನ ಸಿದ್ದರಾಮಯ್ಯನವರ ಕುರಿತು ನನಗೂ ಒಂದು ರೀತಿ ಅನುಮಾನ ಆಗಿದೆ ಎಂದರು. 'ವಾಸ್ತವವನ್ನು ಯಾರೂ ಮುಚ್ಚಿಡಲು ಆಗಲ್ಲ. ಬೆಕ್ಕು ಕಣ್ಮುಚ್ಚಿಕೊಂಡು ಹಾಲು ಕುಡಿದರೆ ಯಾರಿಗೂ ಗೊತ್ತಾಗಲ್ಲ ಎಂದು ಯಾರೂ ತಿಳಿದುಕೊಳ್ಳಬಾರದು'

ಸಿದ್ದರಾಮಯ್ಯನವರು ಅದನ್ನು ತಿದ್ದಿಕೊಂಡು ಜನರಿಗೆ ವಾಸ್ತವಾಂಶ ಏನೆಂದು ತಿಳಿಸಲಿ. ಆಗ ಅವರು ಹಳೇ ಸಿದ್ದರಾಮಯ್ಯ ಆಗುತ್ತಾರೆ ಎಂದು ಸಚಿವ ಸೋಮಣ್ಣ ಅವರು ಹೇಳಿದರು.

ಸಹಕಾರಿ ಧುರೀಣ ರುದ್ರೇಗೌಡ ಡೆಂಘೀಗೆ ಬಲಿ

ಚಿಕ್ಕಮಗಳೂರು: ಹಿರಿಯ ಸಹಕಾರಿ ಧುರೀಣ ಮಳಲೂರು ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷ ಎಂ.ಬಿ ರುದ್ರೇಗೌಡ ಡೆಂಘೀಗೆ ಬಲಿಯಾಗಿದ್ದಾರೆ. ಕಳೆದ ರಾತ್ರಿ ಚಿಕ್ಕಮಗಳೂರು ನಗರದ ಖಾಸಗಿ ಆಸ್ಪತ್ರೆಯಲ್ಲಿ ಕೊನೆಯುಸಿರು ಎಳೆದಿರುವ ಅವರು ಕೆ.ಆರ್ ಪೇಟೆ ಸುತ್ತಮುತ್ತ ಚಿರಪರಿಚಿತರಾಗಿದ್ದು ಸಮಾಜಸೇವೆಯಲ್ಲಿ ಹೆಚ್ಚು ಗುರುತಿಸಿ ಕೊಂಡಿದ್ದರು. ತಿಮ್ಮಪ್ಪಣ್ಣ ಎಂದೇ ಕರೆಯಲ್ಪಡುತ್ತಿದ್ದ ಗೌಡರು ಮಳಲೂರು ದೇವಸ್ಥಾನದ ಕಾರ್ಯದಲ್ಲಿ ಸಕ್ರಿಯರಾಗಿದ್ದರು.ಊರಿನ ಮುಂದಾಳು ಎನಿಸಿಕೊಂಡಿದ್ದ ನಮ್ಮೂರಿನ ಹೆಮ್ಮೆ,ಗೌರವ ಯಾವುದೇ ವಿಚಾರವಿರಲಿ ನಮ್ಮೂರನ್ನು ಪ್ರತಿನಿಧಿಸುತ್ತಿದ್ದರು. ಮಳಲೂರಮ್ಮ ಜಾತ್ರೆಯ ಜವಾಬ್ದಾರಿ ತೆಗೆದುಕೊಂಡು ಅನೇಕ ವರ್ಷಗಳಿಂದ ಶ್ರಮಿಸುತ್ತಿದ್ದರು. ದೇವರ ಕೆಲಸ, ಊರಿನ ಕೆಲಸದಲ್ಲಿ ಯಾವಾಗಲೂ ಮುಂದಾಳತ್ವ ವಹಿಸುತ್ತಿದ್ದರು. ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಕುಟುಂಬಕ್ಕೆ ದೇವರು ಕರುಣಿಸಲಿ ಎಂದು ಹಿರಿಯರು ಕಂಬನಿ ಮಿಡಿದಿದ್ದಾರೆ.

ಮೈಸೂರಿನ ಕೃಷ್ಣಧಾಮದಲ್ಲಿ ಧಾರ್ಮಿಕ ಕಾರ್ಯಕ್ರಮ

ಮೈಸೂರು: ಆಷಾಢ ಮಾಸದ ಪ್ರಥಮ ಏಕಾದಶಿ ಪರ್ವಕಾಲ ನಿಮಿತ್ತ ತಪ್ತ ಮುದ್ರಾಧಾರಣೆ ಕಾರ್ಯಕ್ರಮವನ್ನು ಸರಸ್ವತಿಪುರಂ ಶ್ರೀ ಕೃಷ್ಣಧಾಮದಲ್ಲಿ ಆಯೋಜಿಸಲಾಗಿತ್ತು.

ಶ್ರೀಕೃಷ್ಣ ಮಿತ್ರ ಮಂಡಳಿ ಹಾಗೂ ಶ್ರೀಕೃಷ್ಣ ಟ್ರಸ್ಟ್ ವತಿಯಿಂದ ಉಡುಪಿ ಪಲಿಮಾರು ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದಂಗಳವರು ಹಾಗೂ ಕಿರಿಯ ಶ್ರೀಗಳಾದ ವಿದ್ಯಾ ರಾಜೇಶ್ವರ ಪಾದಂಗಳವರು ಭಕ್ತರಿಗೆ ಶಂಖ, ಚಕ್ರಗಳ ಮುದ್ರಾಧಾರಣೆ ನೆರವೇರಿಸಿದರು.

ರೋಗನಿರೋಧಕ ಶಕ್ತಿ ಹೆಚ್ಚಳ: ನಂತರ ಮಾತನಾಡಿದ ಶ್ರೀ ವಿದ್ಯಾಧೀಶ ತೀರ್ಥಶ್ರೀಪಾದಂಗಳವರು, ಆಷಾಢಮಾಸದ ಶುಕ್ಲ ಪಕ್ಷದ ಏಕಾದಶಿಯನ್ನು ಶಯನಿ ಏಕಾದಶಿ ಎಂದು ಕರೆಯಲಾಗುತ್ತದೆ. ಈ ದಿನದಿಂದ ಉತ್ಥಾನ ದ್ವಾದಶಿಯ ತನಕ ಶ್ರೀಮನ್ನಾರಯಣ ಯೋಗನಿದ್ರೆಯಲ್ಲಿ ತೊಡಗುತ್ತಾನೆ ಅನ್ನೋ ನಂಬಿಕೆ ಇದೆ. ಮಳೆಗಾಲದಲ್ಲಿ ಸೊಳ್ಳೆ, ಕ್ರಿಮಿ ಕೀಟಗಳಿಂದ ಬರುವ ರೋಗ -ರುಜಿನ ಎದುರಿಸಲು ರೋಗ ನಿರೋಧಕ ಶಕ್ತಿ ಹೆಚ್ಚಳಕ್ಕೂ ತಪ್ತ ಮುದ್ರಾಧಾರಣೆ ಪೂರಕವಾಗಲಿದೆ. ಚಾತುರ್ಮಾಸ್ಯ ಕೂರುವ ಮೊದಲು ಗೃಹಸ್ಥರು ಹಾಗೂ ಯತಿಗಳು ತಪ್ತ ಮುದ್ರಾಧಾರಣೆ ಮಾಡಿಸಿಕೊಳ್ಳಬೇಕು. ಏಕಾದಶಿ ದಿನದ ಹೊರತಾಗಿಯೂ ಮುದ್ರಾಧಾರಣೆ ಮಾಡಿಸಿಕೊಳ್ಳಬಹುದು ಎಂದು ಹೇಳಿದರು.

ಶ್ರೀ ಕೃಷ್ಣ ಟ್ರಸ್ಟ್ ಉಪಾಧ್ಯಕ್ಷ ರವಿ ಶಾಸ್ತ್ರಿ ಮಾತನಾಡಿ, ಬೆಳಿಗ್ಗೆಯಿಂದಲೇ ಮಠಕ್ಕೆ ಆಗಮಿಸಿದ ಭಕ್ತರು ಸರತಿ ಸಾಲಿನಲ್ಲಿ ನಿಂತು ತೋಳಿಗೆ, ಎದೆಯ ಭಾಗಕ್ಕೆ ಹಾಗೂ ಹೊಟ್ಟೆಯ ಮೇಲೆ ಶಂಖ ಹಾಗೂ ಚಕ್ರದ ಮುದ್ರೆ ಹಾಕಿಸಿಕೊಂಡರು. ಸುದರ್ಶನ ಹೋಮ ನಡೆಸಿ ಅದರಲ್ಲಿ ಕಾಯಿಸಿದ ಶಂಖ, ಚಕ್ರ, ಗದ, ಪದ್ಮ ಚಿಹ್ನೆಯನ್ನು ಎದೆಯ ಭಾಗ, ಎಡ ಮತ್ತು ಬಲ ತೋಳಿಗೆ ಹಾಕುವುದನ್ನೆ ತಪ್ತ ಮುದ್ರಾಧಾರಣೆ ಎನ್ನುತ್ತೇವೆ ಎಂದು ಹೇಳಿದರು

ಶ್ರೀಮಠದಲ್ಲಿ ಸುರೇಶ್ ಭಟ್ ಹಾಗೂ ಶ್ರೀಕಾಂತ್ ಆಚಾರ್ಯ ನೇತೃತ್ವದಲ್ಲಿ ಸುದರ್ಶನ ಹೋಮ ನಡೆಯಿತು. ಶ್ರೀ ಕೃಷ್ಣ ಟ್ರಸ್ಟ್ ಉಪಾಧ್ಯಕ್ಷರಾದ ರವಿಶಾಸ್ತ್ರಿ ಮತ್ತು ಪಿ. ಎಸ್.ಶೇಖರ್, ಕಾರ್ಯದರ್ಶಿ ಕೆ.ವಿ.ಶ್ರೀಧರ, ಕೃಷ್ಣ ಮಿತ್ರ ಮಂಡಳಿ ಅಧ್ಯಕ್ಷ ಪಿ.ಜಿ.ಪ್ರವೀಣ್, ಉಪಾಧ್ಯಕ್ಷ ಗೋಪಾಲಕೃಷ್ಣನ್, ವಿಜಯ ವಿಠಲ ವಿದ್ಯಾ ಸಂಸ್ಥೆಯ ಮುಖ್ಯಸ್ಥ ವಾಸುದೇವ್ ಭಟ್ ಇದ್ದರು.

ಮೈಸೂರಿನ ಸರಸ್ವತಿಪುರಂ ಶ್ರೀ ಕೃಷ್ಣಧಾಮದಲ್ಲಿ ತಪ್ತ ಮುದ್ರಾಧಾರಣೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮೊಹರಂ ಆಚರಣೆ

ಕೆಂಡಸೇವೆ ವೇಳೆ ಸಿಲುಕಿ ವ್ಯಕ್ತಿ ಸಾವು

ಮಸ್ಕಿ: ಮೊಹರಂ ಹಬ್ಬದ ನಿಮಿತ್ತ ಅಲಾಯಿ ಕುಣಿಯಲ್ಲಿ ಅಗ್ನಿ ಪ್ರವೇಶದ ವೇಳೆ ಕುಣಿಯಲ್ಲಿ ಸಿಲುಕಿಕೊಂಡು ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ತಾಲೂಕಿನ ಬೊಮ್ಮನಾಳ-ಯು ಗ್ರಾಮದಲ್ಲಿ ನಡೆದಿದೆ. ಯಮನಪ್ಪ ನಾಯಕ ಮೃತ ವ್ಯಕ್ತಿ, ಮಸ್ಕಿ ತಾಲೂಕಿನ ಬೊಮ್ಮನಾಳ-ಯು ಗ್ರಾಮದ ಬೆಂಕಿ ಹತ್ತಿ ಉರಿಯುತ್ತಿರುವ ಅಲಾಯಿ ಕುಣಿಯಲ್ಲಿ ಸೋಮವಾರ ಅಗ್ನಿ ಪ್ರವೇಶ ಮಾಡುವಾಗ ಕುಣಿಯಲ್ಲಿನ ಕಟ್ಟಿಗೆಯಲ್ಲಿ ಕಾಲು ಸಿಲುಕಿಕೊಂಡಿದ್ದು, ಹೊರಗಡೆ ಬರಲು ಒದ್ದಾಡಿದರು.

ಕುಣಿಯಿಂದ ಬರಲು ಆಗಲಿಲ್ಲ, ಇದರಿಂದ ಬೆಂಕಿಯಲ್ಲಿ ದೇಹ ಸುಟ್ಟು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎಂದು ತುರವಿಹಾಳ ಪಿಎಸ್‌ಐ ಸುಜಾತ ತಿಳಿಸಿದ್ದಾರೆ.

ವಿಶ್ವವಾಣಿ

ಸಂಪಾದಕೀಯ

ಉದ್ಯೋಗ ಮೀಸಲು ಅಗತ್ಯ

ಖಾಸಗಿ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಮೀಸಲು ಕಲ್ಪಿಸುವ ಸಂಬಂಧ ವಿಧೇಯಕ ಜಾರಿಗೆ ಕರ್ನಾಟಕ ಸರಕಾರ ಮುಂದಾದ ಬೆನ್ನಲ್ಲೇ ಉದ್ಯಮಿಗಳಿಂದ ವಿರೋಧ ವ್ಯಕ್ತವಾಗಿದೆ. ಈ ಸಂಬಂಧ ಐಟಿ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಸ್ಪಷ್ಟನೆ ನೀಡಿದ್ದು ಉದ್ಯಮ ವಲಯದ ಹಿತಾಸಕ್ತಿಯನ್ನು ಕಾಪಾಡುವುದಾಗಿ ಹೇಳಿದ್ದಾರೆ. ಕರ್ನಾಟಕದಲ್ಲಿ ಕನ್ನಡಿಗರಿಗೆ ಆದ್ಯತೆ ಮೇಲೆ ಉದ್ಯೋಗ ನೀಡಬೇಕೆಂಬ ಕೂಗು ದಶಕಗಳಷ್ಟು ಹಳೆಯದು. 1983ರಲ್ಲಿ ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಕರ್ನಾಟಕದಲ್ಲಿ ಕನ್ನಡಿಗರಿಗೆ ದೊರೆಯುತ್ತಿದ್ದ ಉದ್ಯೋಗಾವಕಾಶಗಳನ್ನು ಪರಿಶೀಲಿಸಲು ಸರೋಜಿನಿ ಮಹಿಷಿ ನೇತೃತ್ವದಲ್ಲಿ ಸಮಿತಿ ರಚಿಸಿದ್ದರು. ಈ ಕುರಿತು ಕೂಲಂಕಶ ಪರಿಶೀಲನೆ ನಡೆಸಿದ್ದ ಸಮಿತಿ 58 ಶಿಫಾರಸು ಅಂಶಗಳನ್ನು ಒಳಗೊಂಡ ವರದಿಯನ್ನು ಸಲ್ಲಿಸಿತ್ತು. ಆದರೆ ನಮ್ಮ ರಾಜಕೀಯ ನಾಯಕರ ಇಚ್ಛಾ ಶಕ್ತಿಯ ಕೊರತೆಯಿಂದ ಈ ವರದಿ ಜಾರಿಗೆ ಬರಲೇ ಇಲ್ಲ. ಬೆಂಗಳೂರು ಸೇರಿದಂತೆ ರಾಜ್ಯದ ನಾನಾ ಭಾಗಗಳಲ್ಲಿ ಸ್ಥಾಪನೆಯಾದ ಕೇಂದ್ರ ಸ್ವಾಮ್ಯದ ಉದ್ಯಮಗಳಲ್ಲೂ ಕನ್ನಡೇತರರೇ ವಿಜೃಂಭಿಸುವಂತಾಯಿತು. ಯಾವುದೇ ರಾಜ್ಯದಲ್ಲಿ ಸಿ ಮತ್ತು ಡಿ ದರ್ಜೆಯ ಹುದ್ದೆಗಳನ್ನು ಆಯಾ ಪ್ರಾದೇಶಿಕ ಭಾಷಿಕರಿಗೆ ಮೀಸಲಿಡುವುದು ಕ್ರಮ. ಆದರೆ ನಮ್ಮ ರಾಜ್ಯದಲ್ಲಿ ಈ ಹುದ್ದೆಗಳೂ ಅನ್ಯಭಾಷಿಕರ ಪಾಲಾಗುತ್ತಿವೆ. ಇದೀಗ ಹೆಚ್ಚು ಉದ್ಯೋಗಾವಕಾಶವಿರುವ ಖಾಸಗಿ ವಲಯದಲ್ಲಿ ಕನ್ನಡಿಗರಿಗೆ ಉದ್ಯೋಗ ಮೀಸಲು ಕಲ್ಪಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದಾಗಿದ್ದಾರೆ. ಕನ್ನಡಿಗರ ಹಿತದೃಷ್ಟಿಯಿಂದ ಇದು ಉತ್ತಮ ಬೆಳವಣಿಗೆ. ಆದರೆ ಇದರ ಜಾರಿ ಸುಲಭದ್ದೇನಲ್ಲ. ವಿಧೇಯಕ ಮಂಡನೆಗೆ ಮುನ್ನವೇ ಮೋಹನದಾಸ್ ಪೈ, ಕಿರಣ್ ಮಂಜುಂದಾರ್ ಶಾ ಮುಂತಾದವರು ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಖಾಸಗಿ ಉದ್ಯಮ, ಕಾರ್ಖಾನೆ ಅಥವಾ ಇತರ ಸಂಸ್ಥೆಗಳು ಮ್ಯಾನೇಜ್‌ಮೆಂಟ್ ವಿಭಾಗಗಳಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ಶೇ 50 ರಷ್ಟು ಮೀಸಲಾತಿ ನೀಡಬೇಕು. ನಾನ್ ಮ್ಯಾನೇಜ್‌ಮೆಂಟ್ ವಿಭಾಗಗಳಲ್ಲಿ ಶೇ 75ರಷ್ಟು ಮೀಸಲಾತಿ ನೀಡಬೇಕು ಎಂಬ ಅಂಶವನ್ನು ಮುಂದಿಟ್ಟು ವಿಧೇಯಕ ರೂಪಿಸಲಾಗಿದೆ. ಆದರೆ ನೂರಾರು ಬಹುರಾಷ್ಟ್ರೀಯ ಕಂಪನಿಗಳು ಕೆಲಸ ನಿರ್ವಹಿಸುವ ಬೆಂಗಳೂರಿನಲ್ಲಿ ಇಂತಹ ನಿರ್ಬಂಧ ಸಲ್ಲದು ಎನ್ನುವುದು ಉದ್ಯಮ ವರ್ಗದ ಆಕ್ಷೇಪ. ರಾಜ್ಯದಲ್ಲಿ ಕುಶಲ ಕೆಲಸಗಾರರಿಗೆ ಬರವಿಲ್ಲ. ಒಂದು ವೇಳೆ ನಿರ್ದಿಷ್ಟ ಹುದ್ದೆಗೆ ಕನ್ನಡಿಗರು ಲಭ್ಯವಿಲ್ಲದಿದ್ದರೆ ಹೊರಗಿನ ಪ್ರತಿಭೆಗಳನ್ನು ಆಯ್ಕೆ ಮಾಡಲು ವಿಧೇಯಕದಲ್ಲಿ ಅವಕಾಶ ಕಲ್ಪಿಸಲಾಗಿದೆ. ಹೀಗಿರುವಾಗ ಕೆಲವು ಉದ್ಯಮಿಗಳ ಆಕ್ಷೇಪಕ್ಕೆ ಸೊಪ್ಪು ಹಾಕದೇ ಈ ವಿಧೇಯಕ ಜಾರಿಗೆ ಸರಕಾರ ದೃಢ ನಿರ್ಧಾರ ತೆಗೆದುಕೊಳ್ಳಬೇಕು.

ಸೊಂಪಾದಕೀಯ

ಮುಡಾ ನಂಬಿಕೆ

ಕಳೆದ ಹಲವಾರು ದಿನಗಳಿಂದ ರಾಜ್ಯದಲ್ಲಿ ಜೆಡಿಎಸ್ ಪರಿವಾರಕ್ಕೆ ಅಂದರೆ ಜೆಡಿಎಸ್ ನಾಯಕ ದೇವೇಗೌಡ ಅವರ ಪರಿವಾರಕ್ಕೆ ಸಂಕಷ್ಟಗಳ ಮೇಲೆ ಸಂಕಷ್ಟ ಬಂದಿರುವುದು ಎಲ್ಲರಿಗೂ ಗೊತ್ತು. ಅಂದಹಾಗೆ ಜೆಡಿಎಸ್ ಪರಿವಾರ ಅಂದರೆ ದೇವೇಗೌಡರ ಪರಿವಾರ ಅಂತ ಸ್ಪೆಷಲ್ ಆಗಿ ಒತ್ತಿ ಹೇಳುವ ಅವಶ್ಯಕತೆ ಏನೂ ಇಲ್ಲ ಬಿಡಿ. ಆದರೂ ಮಾತಿಗೆ ಹೇಳಬೇಕಲ್ಲ. ರೇವಣ್ಣ ಅವರ ಪುತ್ರರಾದ ಸೂರಜ್ ಮತ್ತು ಪ್ರಜ್ವಲ್ ಅವರು ವಿವಾದಗಳ ಕೇಂದ್ರ ಬಿಂದುಗಳಾಗಿ ಜೈಲು ಸೇರಿರುವುದು ಜೆಡಿಎಸ್ ಪಕ್ಷಕ್ಕೆ ಕಂಟಕವಾಗಿದೆ. ಅಲ್ಲದೆ ಜೆಡಿಎಸ್ ಅನ್ನು ಮುಗಿಸಲು ಇತರ ಪಕ್ಷಗಳು ಮಾಡುತ್ತಿರುವ ಪಿತೂರಿ ಇದು ಅಂತ ಜೆಡಿಎಸ್ ನಾಯಕರು ಹೇಳುತ್ತಿದ್ದಾರೆ. ಆದರೆ ಸದ್ಯದ ಬೆಳವಣಿಗೆಗಳ ಪ್ರಕಾರ ಸಂಕಷ್ಟಗಳ ಕಾಕ ದೃಷ್ಟಿ ಈಗ ಕಾಂಗ್ರೆಸ್ ಪಕ್ಷದ ಮೇಲೆ ಬಿದ್ದ ಹಾಗಿದೆ. ಹಾಗಂತ ಇಲ್ಲಿ ಯಾವ ಕಾಂಗ್ರೆಸ್ ನಾಯಕರ ವೈಯಕ್ತಿಕ ವಿಷಯಗಳು ಬಯಲಾಗಿಲ್ಲ. ಬದಲಾಗಿ ರಾಜಕೀಯ ಹಗರಣಗಳು ಸದ್ದು ಮಾಡುತ್ತಿವೆ. ಮುಡ ಮತ್ತು ವಾಲ್ಮೀಕಿ ಹಗರಣಗಳು ಕಾಂಗ್ರೆಸ್ ಕುತ್ತಿಗೆಗೆ ಉರುಳಾಗಿವೆ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮಳೆ ಬರಲ್ಲ ಅನ್ನೋದು ಹಳೆಯ ಮೂಢನಂಬಿಕೆ. ಆದರೆ ಈಗ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಹಗರಣಗಳು ಬೆಳಕಿಗೆ ಬರುತ್ತವೆ ಅನ್ನುವುದು 'ಮುಡಾ' ನಂಬಿಕೆ ಎಂದು ಜನ ಮಾತಾಡುವ ಮಟ್ಟಕ್ಕೆ ಈ ಹಗರಣಗಳು ಸದ್ದು ಮಾಡುತ್ತಿವೆ. ವಿಶೇಷ ಎಂದರೆ ಸಿಎಂ ಸಿದ್ದರಾಮಯ್ಯ ಆಗಲಿ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ ಆಗಲಿ ಈ ಹಗರಣಗಳಲ್ಲಿ ನಮ್ಮ ತಪ್ಪಿಲ್ಲ ಎಂದು ಹೇಳುವ ಬದಲು ಬಿಜೆಪಿ ಸರ್ಕಾರದಲ್ಲಿ ಮತ್ತು ಜೆಡಿಎಸ್ ಸರ್ಕಾರದಲ್ಲಿ ಆಗಿದ್ದ ಹಗರಣಗಳನ್ನು ಉಲ್ಲೇಖಿಸಿ ನೀವು ಮಾಡಿದ್ದೀರ, ನಾವು ಮಾಡಿದ್ದೇವೆ ಅನ್ನುವ ಹಾಗೆ ಮಾತಾಡುತ್ತಿದ್ದಾರೆ ಎನ್ನುವುದು ವಿಪರ್ಯಾಸ. ಸದ್ಯಕ್ಕೆ ನಡೆಯುತ್ತಿರುವ ಅಧಿವೇಶನದಲ್ಲಂತೂ ಕಾಂಗ್ರೆಸ್‌ಗೆ ಇದು ನುಂಗಲಾರದ ತುತ್ತಾಗಿದೆ. ಸುತ್ತಮುತ್ತ ಜೆಡಿಎಸ್, ಬಿಜೆಪಿ ನಾಯಕರು ನಿಂತುಕೊಂಡು ಕಾಂಗ್ರೆಸ್ ಕಡೆ ಬೆರಳು ಮಾಡಿ ತೋರಿಸುತ್ತಿದ್ದಾರೆ. ಹಾಗಾಗಿ ಈಗ ಕಾಂಗ್ರೆಸ್ ತನ್ನ ಹಸ್ತ ಶುದ್ಧವಾಗಿದೆ ಎಂದು ಪ್ರೂವ್ ಮಾಡಬೇಕಾದ ಅನಿವಾರ್ಯತೆ ಇದೆ.

ಸಂಪಾದಕರ ಸದ್ಯಶೋಧನೆ

ಶಿವಾಯ್ ಪದದ ಕುರಿತು

ನಾನು ನನ್ನ ಅಂಕಣದಲ್ಲಿ ಆಗಾಗ 'ಶಿವಾಯ್' ಎಂಬ ಪದವನ್ನು ಬಳಸುತ್ತೇನೆ. ಹೀಗೆಂದರೇನು, ಅದರ ಅರ್ಥವೇನು ಎಂದು ಕೆಲವರು ಕೇಳಿದ್ದುಂಟು. ಯಾವ ಸಂದರ್ಭ ಮತ್ತು ಸನ್ನಿವೇಶದಲ್ಲಿ ಅದನ್ನು ಬಳಸಲಾಗಿದೆ ಎನ್ನುವ ಮೂಲಕ ಅದರ ಅರ್ಥವನ್ನು ಕಲ್ಪಿಸಿಕೊಳ್ಳುವುದು ಕಷ್ಟವೇನಲ್ಲ. ಕೆಲವರು ಈ ಪದವನ್ನು ಮೇಲಿಂದ ಮೇಲೆ ಬಳಸುವುದುಂಟು. ಅಂಥವರು ಈ ಪದಕ್ಕೆ ತಮ್ಮದೇ ಆದ ಅರ್ಥವನ್ನು ಅಂಟಿಸಿಕೊಂಡಿರುವ ಸಾಧ್ಯತೆ ಇರುತ್ತದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಪದವನ್ನು ಹೆಚ್ಚು ಬಳಸುವುದನ್ನು ಗಮನಿಸಿದ್ದೇನೆ. ಆದರೆ ಈ ಪದವನ್ನು ಯಾವ ಸಂದರ್ಭ, ಸನ್ನಿವೇಶದಲ್ಲಿ ಬಳಸಿದರೂ, ಅದನ್ನು ಅರ್ಥೈಸಿಕೊಳ್ಳುವುದು ಕಷ್ಟವೇನಲ್ಲ. ಹೆಚ್ಚಿನ ಸಂದರ್ಭಗಳಲ್ಲಿ 'ಹೊರತು' ಎಂದು ಹೇಳಲು, 'ಶಿವಾಯ್' ಪದ ಬಳಸುವುದುಂಟು. ಉದಾಹರಣೆಗೆ, 'ಈ ವರ್ಷ ಉತ್ತಮ ಮಳೆಯಾಗದ ಶಿವಾಯ್, ಅಂತರ್ಜಲ ಮೇಲೇರಲು ಸಾಧ್ಯವಿಲ್ಲ. ಇತ್ತೀಚೆಗೆ 'ವಾಗರ್ಥ' ಎಂಬ ಫೇಸ್‌ಬುಕ್ ಪೇಜಿನಲ್ಲಿ ಈ ಪದದ ಕುರಿತು ಸಣ್ಣ ಚರ್ಚೆಯಾಗಿರುವುದು ಗಮನಕ್ಕೆ ಬಂದಿತು. ಸುದರ್ಶನ್ ಸುಬ್ಬರಾವ್ ಎಂಬುವವರು 'ಶಿವಾಯಿ ಪದದ ವಿವರಣೆ ನೀಡಿದರೆ ಉಪಕೃತ' ಎಂದು ಬರೆದಿದ್ದರು. ಅದಕ್ಕೆ ಕೆಲವರು ಪ್ರತಿಕ್ರಿಯಿಸಿದ್ದರು. ಎಲ್.ಎನ್.ಗುಡೂರ್ ಅವರು, 'ಶಿವಾಯ್ – ಇದು ಮರಾಠಿ ಮತ್ತು ಸಿವಾಯ್ / ಸಿವಾ – ಉರ್ದು ಮತ್ತು ಹಿಂದಿಗಳಲ್ಲಿ ಬಳಕೆಯಲ್ಲಿರುವ ಪದ. ಉತ್ತರ ಕರ್ನಾಟಕದ ಮರಾಠಿಯ ಆಮದು ಪದಗಳಲ್ಲಿ ಒಂದು. ಇದರ ಅರ್ಥ – ಇಲ್ಲದೆ, ಬಿಟ್ಟು, other than, except ಇತ್ಯಾದಿ. ಬಳಕೆಯಲ್ಲಿ ಅವರನ್ನು ಬಿಟ್ಟು ಬೇರೆಯವರು ಈ ಕೆಲಸ ಮಾಡಲಾರರು ಅನ್ನುವ ರೀತಿ ಎಂದು ಉತ್ತರಿಸಿದ್ದರು. 'ಮರಾಠಿ ಪದ ಹೊರತಾಗಿ. ಉತ್ತರ ಭಾರತೀಯರು ಶಿವನನ್ನು ಪ್ರೀತಿಯಿಂದ ಶಿವಾಯ್ ಅಂತಲೂ ಕರೆಯುತ್ತಾರೆ' ಎಂದು ಪ್ರೇಮಾ ಗೋಪಿ ಹೇಳಿದರೆ, ಅದಕ್ಕೆ ಮಂಜುನಾಥ ಕೊಳ್ಳೇಗಾಲ ಅವರು, 'ದಯವಿಟ್ಟು ಸಂದರ್ಭ ಗಮನದಲ್ಲಿಟ್ಟು ಉತ್ತರಿಸಿ. ಶಿವಾಯ ಎಂಬುದು ಶಿವಾಯ್ ಆಗುವುದು ಹಿಂದಿಯಲ್ಲಿ, ಅದೇ ಮರಾಠಿ ಯಲ್ಲೂ ಇರಬಹುದು, ಆದರೆ ಅದು ಶಿವಾಯ (ಶಿವನಿಗೆ) ಎಂಬರ್ಥದಲ್ಲೇ ಹೊರತು ಶಿವನೇ ಎಂಬ ಅರ್ಥದಲ್ಲಲ್ಲ. ಅಲ್ಲದೇ ಇಲ್ಲಿ ಪ್ರಶ್ನೆಯಲ್ಲಿರುವ 'ಶಿವಾಯಿ' ಶಿವನೇ ಎಂಬ ಅರ್ಥದ್ದೂ ಅಲ್ಲ' ಎಂದು ಪ್ರತಿಕ್ರಿಯಿಸಿದ್ದರು. ಅಜಾದ್ ಎನ್ನುವವರು, 'ಉರ್ದು ಪದ –ಸಿವ ಮತ್ತು ಸಿವ –ಎ, ಗಳ ರೂಪ. ಪರ್ಷಿಯನ್ ಮೂಲದ ಪದವಿದು. ಬಹುಶಃ ಮರಾಠಿಗೆ ಹೋಗಿದೆ ಎಂದು ನನ್ನ ಅನಿಸಿಕೆ. ಉರ್ದು ಕವನ ಶಾಯರಿಗಳಲ್ಲಿ ಯಥೇಚ್ಛವಾಗಿ ಕಾಣಸಿಗುವ ಈ ಪದದ ಬಳಕೆ ಮರಾಠಿ ಪ್ರಭಾವ ಇರದ ಪಾಕಿಸ್ತಾನ ಮತ್ತು ಪಂಜಾಬ್ ಪ್ರಾಂತ್ಯದ ಉರ್ದು ಬಳಕೆಯಲ್ಲಿ ಕಾಣಬಹುದು' ಎಂದು ಬರೆದಿದ್ದರು. ವಿಜಯಲಕ್ಷ್ಮಿ ಸುಬ್ಬರಾವ್ ಅವರ ಪ್ರಕಾರ, ಹಿಂದಿಯ ಸಿವಾಯ್ ಕನ್ನಡದಲ್ಲಿ ಶಿವಾಯ್ ಆಗಿ ಬಳಕೆಗೆ ಬಂದಿದೆ. ಉದಾಹರಣೆಗೆ, 'ಇಸ್ಕೆ ಸಿವಾಯ್ ದೂಸರಾ ಚಾರ್ ನಹೀ ಹೈ'. ಹಿಂದಿಯಲ್ಲಿ 'ಅಲಾವಾ' ಎಂಬ ಅರ್ಥದಲ್ಲಿ ಪ್ರಯೋಗವಾಗಿದೆ. ಕನ್ನಡದಲ್ಲಿ 'ಅಲ್ಲದೇ', 'ಅದರ ಹೊರತಾಗಿ' ಎಂಬ ಅರ್ಥದಲ್ಲಿ ಬಳಕೆಗೆ ಬಂದಿದೆ ಎಂದು ವಿವರಿಸಿದ್ದರು. ಮುರಳಿ ಕೃಷ್ಣ ಮದ್ದಿಕೆರೆ ಅವರು ಹಿಂದಿಯ ಜನಪ್ರಿಯ 'ಜೀನಾ ಯಹಾ ಮರ್ನಾ ಯಹಾ, ಇಸ್ಕೆ ಸಿವಾ ಜಾನಾ ಕಹಾಂ…' ಹಾಡನ್ನು ಪ್ರಸ್ತಾಪಿಸಿದ್ದರು. ಶಿವನಿಗೂ, ಶಿವಾಯ್‌ಗೂ ಯಾವ ಸಂಬಂಧವೂ ಇರುವಂತೆ ಕಾಣುವುದಿಲ್ಲ. ಯಾವ ಸನ್ನಿವೇಶ, ಸಂದರ್ಭದಲ್ಲಿ 'ಶಿವಾಯ್' ಬಳಕೆಯಾಗಿದೆ ಎಂಬುದನ್ನು ನೋಡಿದರೆ, 'ಉಪರಾಂತ, ಹೊರತು, ವಿನಃ, ವಿನಾ' ಎಂಬ ಅರ್ಥ ಕಾಣಿಸಿಕೊಳ್ಳುತ್ತದೆ. ಶಶಿಧರನ್ ಪ್ರಕಾರ, ಈ ಪದ ಶಿವಾಯಿ, ಶಿವಾಯ, ಸಿವಾಯಿ ಆಗಿಯೂ ಬಳಕೆಯಲ್ಲಿವೆ. ಅದರ ಅರ್ಥ ಹೊರತು, ವಿನಾ. ಉದಾಹರಣೆಗೆ, ನಾನು ಹೇಳುವುದೆಲ್ಲ ಸತ್ಯ, ಶಿವಾಯಿ ಅನ್ಯಥಾ ಅಲ್ಲ. ಈ ಎಲ್ಲ ಪ್ರತಿಕ್ರಿಯೆಗಳನ್ನು ಗಮನಿಸಿದರೆ ಈ ಪದ ಹೊರತಾಗಿ, ವಿನಾ ಅರ್ಥದಲ್ಲಿ ಬಳಕೆಯಾಗಿದೆ ಎಂದು ಭಾವಿಸಬಹುದು.

ಹಲವು ಭಾವ ವಿವರಿಸಲು ಪದಗಳ ಅಭಾವ

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್
vbhat@me.com

Words are not real. They dont have meaning. We do
- John Koenig

ನೀವು ಯಾವುದೇ ಪುಸ್ತಕವನ್ನು ಓದಲು ಶುರುಮಾಡಿದರೆ ಮುಗಿಸಬಹುದಂತೆ. ಆದರೆ ಡಿಕ್ಷನರಿಯನ್ನು ಹಿಡಿದರೆ ಮುಗಿಸಲು ಆಗುವುದಿಲ್ಲವಂತೆ. ನಾನು ಈ ಡಿಕ್ಷನರಿಯನ್ನು ಸಂಪೂರ್ಣ ಓದಿ ಮುಗಿಸಿದ್ದೇನೆ ಎಂದು ಹೇಳಿದವರು ಇರಲಿಕ್ಕಿಲ್ಲ, ಅದನ್ನು ಬರೆದವರ ಹೊರತಾಗಿ. ಆದರೆ ನನಗೆ ಈ ಡಿಕ್ಷನರಿ ಓದುವ ಕಾಯಿಲೆ ಯಾವಾಗ ಅಂಟಿಕೊಂಡಿತೋ ಗೊತ್ತಿಲ್ಲ. ದಿನದಲ್ಲಿ ಕನಿಷ್ಠ ಅರ್ಧಗಂಟೆಯಾದರೂ ಈ 'ಕಾಯಿಲೆ'ಯಿಂದ ನರಳುತ್ತೇನೆ. ಒಂದೊಂದು ಪದ ಎಲ್ಲೆಲ್ಲಿಗೋ ಕರೆದುಕೊಂಡು ಹೋಗುತ್ತದೆ. ಕೊನೆಗೆ, ಇಷ್ಟೆಲ್ಲ ಪದಗಳ ಅಗತ್ಯವಿದೆಯಾ, ಯಾಕೆ ಬೇಕು ಇಷ್ಟೊಂದು ಪದಗಳು, ಇವುಗಳ ಅರ್ಥ ತಿಳಿದುಕೊಂಡು ಮಾಡುವುದಾದರೂ ಏನು, ಅಷ್ಟಕ್ಕೂ ಆ ಪದಗಳನ್ನು ನಾವು ನಮ್ಮ ಜೀವಮಾನದಲ್ಲಿಯೇ ಬಳಸುವುದಿಲ್ಲವಲ್ಲ ಎಂದು ಅನಿಸದಿರದು.

ನಾನು ಲಂಡನ್‌ನ 'ದಿ ಸನ್' ಎಂಬ ದೈನಿಕ ಟ್ಯಾಬ್ಲಾಯಿಡ್‌ನಲ್ಲಿ ಟ್ರೇನಿ ಪತ್ರಕರ್ತನಾಗಿ ಕೆಲಸ ಮಾಡುವಾಗ, ಸುದ್ದಿ ಸಂಪಾದಕ ರಿಚರ್ಡ್ ಮೂರ್ ಎಂಬಾತ, ಕಠಿಣ ಪದಗಳನ್ನು ಬಳಸಲು ಬಿಡುತ್ತಿರಲಿಲ್ಲ. ಪೊಲೀಸ್ ಎಂದು ಬರೆದರೆ Cop ಎಂದು ತಿದ್ದುತ್ತಿದ್ದ. ಮೆಟ್ರೋಪಾಲಿಟನ್ ಎಂದು ಬರೆದರೆ ಸಿಟಿ ಎಂದು ಬರೆಯುತ್ತಿದ್ದ. 'ಈ 280 ಇಂಗ್ಲಿಷ್ ಪದಗಳ ಅರ್ಥ ಮತ್ತು ಬಳಕೆ ಗೊತ್ತಿದ್ದರೆ ನೀವು ಉತ್ತಮ ಇಂಗ್ಲಿಷ್ ಪತ್ರಕರ್ತರಾಗುತ್ತೀರಿ' ಎಂದು ಮೂರ್ ಯಾವತ್ತೂ ಹೇಳುತ್ತಿದ್ದ. 'ನೀವು ಬಳಸಿದ ಪದದ ಅರ್ಥ ಓದುಗನಿಗೆ ತಿಳಿಯದೇ, ಅವನು ಅದಕ್ಕಾಗಿ ಡಿಕ್ಷನರಿ ನೋಡುವ ಕಷ್ಟ ಕೊಟ್ಟರೆ, ನೀವು ಕೆಟ್ಟ ಪತ್ರಕರ್ತರು. ಪತ್ರಿಕೆಯ ಜತೆಗೆ ಡಿಕ್ಷನರಿಯನ್ನೂ ಓದುಗರಿಗೆ ಉಚಿತವಾಗಿ ಕೊಡುವುದು ದುಬಾರಿ' ಎಂದು ಕಿಚಾಯಿಸುತ್ತಿದ್ದ. ಅವನಿಗೆ ಯಾರಾದರೂ ಡಿಕ್ಷನರಿ ತೆರೆದು ನೋಡಿದರೆ ಮೈಯೆಲ್ಲ ಉರಿದು ಹೋಗುತ್ತಿತ್ತು. 'ಡಿಕ್ಷನರಿ ಓದುವುದು ಕೆಟ್ಟ ಅಭ್ಯಾಸ' ಎಂದು ಸುದ್ದಿಮನೆಯಲ್ಲಿ ಸದಾ ವಟಗುಡುತ್ತಿದ್ದ.

ಪ್ರತಿಸಲ ಶಬ್ದಕೋಶ ಓದುವಾಗಲೆಲ್ಲ ಮೂರ್ ಹೇಳಿದ ಮಾತುಗಳು ನೆನಪಾಗುತ್ತವೆ. ಕೆಲವು ಪದಗಳನ್ನು ಪದಕೋಶದಲ್ಲಿ ಬಿಟ್ಟರೆ ಬೇರೆಲ್ಲೂ ಬಳಸಿಯೇ ಇಲ್ಲವಂತೆ. ಉದಾಹರಣೆಗೆ: Omphalos ಎಂಬ ಪದವನ್ನೇ ತೆಗೆದುಕೊಳ್ಳೋಣ. ಯಾರೂ ಈ ಪದವನ್ನು ಬಳಸಿಲ್ಲವಂತೆ. ಕಾರಣ ಈ ಪದದ ಅರ್ಥ ಮಧ್ಯಭಾಗ ಅಥವಾ ಹೊಕ್ಕಳು. ಹೊಕ್ಕಳಿಗೆ ಇಂಗ್ಲಿಷಿನಲ್ಲಿ navel ಎಂಬ ಪದವಿದೆ. ಹೀಗಾಗಿ ಯಾರೂ omphalos ಎಂದು ಹೇಳುವುದಿಲ್ಲ. ಒಂದು ಅರ್ಥವನ್ನು ಹೇಳುವ ಪದಗಳಿರುವಾಗ ಅದೇ ಅರ್ಥವನ್ನು ವಿವರಿಸುವ ಒಂದಕ್ಕಿಂತ ಹೆಚ್ಚು ಅಥವಾ ಹತ್ತಾರು ಪದಗಳ ಅಗತ್ಯವಿದೆಯಾ ಎಂಬ ಪ್ರಶ್ನೆಯೂ ಉದ್ಭವಿಸುತ್ತದೆ. ಕೆಲವ ರಿಗೆ ಯಾರಿಗೂ ಅರ್ಥವಾಗದ, ದೊಡ್ಡ ದೊಡ್ಡ ಪದಗಳನ್ನು ಬಳಸುವ ಖಯಾಲಿ ಇರುತ್ತದೆ. ಅಂಥ ಪದಗಳನ್ನು ಬಳಸಿದರೆ ತಮ್ಮನ್ನು ಮಹಾಬುದ್ಧಿವಂತ ಎಂದು ಭಾವಿಸುತ್ತಾರೆಂದು ಭ್ರಮಿಸುತ್ತಾರೆ. 'ನಾನು ನಿನಗೆ ಒಂದು ಬಿಲ್ಲೆಯನ್ನೂ ಕೊಡೊಲ್ಲ, I will not give you a penny ಎಂಬುದನ್ನು I will not give you farthing ಎಂದು ಹೇಳುತ್ತಾರೆ. ನೀವು farthing ಅಂದ್ರೆ ಏನು ಎಂಬುದನ್ನು ತಿಳಿಯಲು ಮಣಭಾರದ ಪದಕೋಶವನ್ನೇ ಎತ್ತಿಕೊಳ್ಳಬೇಕು. ಆ ಆಯಾಸವನ್ನು ನೆನೆದು ಅದರ ಅರ್ಥ ತಿಳಿಯುವ ಗೋಜಿಗೆ ಹೋಗುವುದಿಲ್ಲ. ಹೀಗಾಗಿ ಆ ಪದ ಕೊನೆ ತನಕ ನಮ್ಮದಾಗುವುದೇ ಇಲ್ಲ. ಇಂಥ ಅಸಂಖ್ಯ ಪದಗಳ ಸಂಗ್ರಹವೇ ಪದಕೋಶ.

ಭಾಷೆ ಅಂದ್ರೆ ನದಿ ಇದ್ದಂತೆ. ಅದು ಸದಾ ಹರಿಯುತ್ತಲೇ ಇರುತ್ತದೆ. ಪದಕೋಶ ಅಂದ್ರೆ ಅಣೆಕಟ್ಟು ಇದ್ದಂತೆ. ಅದು ಒಂದೆಡೆ ನಿಶ್ಚಲವಾಗಿ ಸಂಗ್ರಹವಾಗಿರುತ್ತದೆ. ನಿಶ್ಚಲವಾಗಿರುವುದು ಕ್ರಮೇಣ ಜಡವಾಗುತ್ತಾ ಹೋಗುತ್ತದೆ. ಈ ಕಾರಣದಿಂದ ಪದಕೋಶದ ಮುಕ್ಕಾಲು ಪಾಲು ಪದಗಳು ವಾಕ್ಯದಲ್ಲಾಗಲಿ, ಮಾತಿನಲ್ಲಾಗಲಿ ಬಂದು ನಲಿಯುವುದೂ ಇಲ್ಲ, ನುಲಿಯುವುದೂ ಇಲ್ಲ. ಕನಿಷ್ಠಪಕ್ಷ 'ನುಡಿ'ಯಾಗಿಯೂ ಸಾರ್ಥಕ್ಯ ಪಡೆಯುವುದಿಲ್ಲ. ಶಬ್ದವಾಗಿಯೂ ಸದ್ದು ಮಾಡುವುದಿಲ್ಲ. ಶಬ್ದಕೋಶದಲ್ಲಿ ಹೂತು ಹೋಗಿರುತ್ತವೆ. ಹಾಗಿರುವಾಗ ಆ ಪದಗಳ ಪ್ರಯೋಜನವಾದರೂ ಏನು? ಬಳಸದೇ, ಬರೆಯದೇ 'ಸ್ವಾಭಾವಿಕ ಮರಣ'ವನ್ನಪ್ಪಿದ ಸಾವಿರಾರು ಪದಗಳಿವೆ.

ಇಂಗ್ಲೆಂಡಿನ ಭಾಷಾಪ್ರೇಮಿಗಳ ಸಂಘ ಹೀಗೆ ಅಸುನೀಗಿದ ಹದಿನೈದು ಸಾವಿರಕ್ಕೂ ಹೆಚ್ಚು ಪದಗಳನ್ನು ಪಟ್ಟಿಮಾಡಿ The Dictionary of Dead Words ಎಂಬ ಕೃತಿ ಪ್ರಕಟಿಸಿದೆ. ಇದನ್ನು ಪ್ರಕಟಿಸಿದ ನಂತರವಾದರೂ ಅದರಲ್ಲಿನ ಕೆಲವು ಪದಗಳು ಬಳಕೆಗೆ ಬಂದು ಪುನರ್ಜನ್ಮ ಪಡೆಯಬಹುದೆಂಬ ಲೇಖಕರ ಆಶಯ ನುಚ್ಚುನೂರಾಗಿದೆ. Dead Words ಬದಲಿಗೆ Unused words ಎಂದು ಎರಡನೆ ಆವೃತ್ತಿಗೆ ಶೀರ್ಷಿಕೆ ಬದಲಿಸಿದರೂ ಏನೂ ಪ್ರಯೋಜನವಾಗಿಲ್ಲ. ಉಪಯೋಗಕ್ಕೆ ಬಾರದ ಪದಗಳು ಎಂಬ ಹಣೆಪಟ್ಟಿ ಹಚ್ಚಿ ಹೊರ ಹಾಕಿದ ನಂತರ ಅವುಗಳನ್ನು ಯಾರು ಒಳಬಿಟ್ಟುಕೊಂಡಾರು? ಭಾಷಾವಿಜ್ಞಾನಿಗಳು, ಪ್ರಾಧ್ಯಾಪಕರು ಅಕೆಡೆಮಿಕ್ ಆಸಕ್ತಿಯಿಂದ ಮಾತ್ರ ಈ ಪದಕೋಶವನ್ನು ನೋಡಬಹುದು.

ಆದರೆ ನಾನು ಇತ್ತೀಚೆಗೆ ಜಾನ್ ಕಿಯೋನಿಗ್ ಬರೆದ The Dictionary of Obscure Sorrows ಎಂಬ ವಿಚಿತ್ರ ವಾದ ಪದಕೋಶವನ್ನು ಓದುತ್ತಿದ್ದೆ. ಕಿಯೋನಿಗ್‌ನ ಪ್ರಕಾರ ಇಂಗ್ಲಿಷ್ ಭಾಷೆ ಎಲ್ಲ ಭಾಷೆಗಳಿಂದ ಎರವಲು ಪದಗಳನ್ನು ತೆಗೆದುಕೊಂಡಿದ್ದರೂ, ಜಗತ್ತಿನ ಯಾವುದೇ ಮೂಲೆಯಲ್ಲಿ ಇಂಗ್ಲಿಷಿನಲ್ಲಿ ಫಿಟ್ ಆಗಿ ಕುಳಿತುಕೊಳ್ಳುವ ಪದಗಳನ್ನು ತಕ್ಷಣ ತನ್ನದಾಗಿ ಮಾಡಿಕೊಳ್ಳುತ್ತದೆ. ಅದಕ್ಕೆ ಪುರಾವೆಯಾಗಿ ಪದಕೋಶ ದಲ್ಲಿ ಆ ಪದವನ್ನು ಸೇರಿಸಿಕೊಂಡು ಬಿಡುತ್ತದೆ. ಆದರೂ ಕೆಲವು ಭಾವನೆಗಳನ್ನು ಹೇಳಲು ಇಂಗ್ಲಿಷ್ ಪದಕೋಶದಲ್ಲಿ ಸೂಕ್ತವಾದ ಪದಗಳೇ ಇಲ್ಲ. ಒಂದೆಡೆ ಉಪಯೋಗಿಸದೇ ನಿರುಪಯುಕ್ತವಾದ, Dead words, ಇನ್ನೊಂದೆಡೆ ಭಾವನೆಗಳನ್ನು ತೋಡಿಕೊಳ್ಳಲು ಪದಗಳೇ ಇಲ್ಲದಂಥ ಸ್ಥಿತಿ. ಉದಾ ಹರಣೆಗೆ, ಕೆಲವರು ನೈಸರ್ಗಿಕ ಪ್ರಕೋಪ ಆಗಲಿ ಎಂದು ಕನವರಿಸುತ್ತಿರುತ್ತಾರಂತೆ. ಇನ್ನು ಕೆಲವರು ಆಕಾಶದಲ್ಲಿ ಹಾರುವ ವಿಮಾನವನ್ನು ಕಂಡಾಗ ಅದು crash ಆಗಿ ಬೀಳಬಾರದಿತ್ತಾ ಎಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತಾರಂತೆ. ಅಂಥ ದೃಶ್ಯಕ್ಕೆ ತಾನು ಪ್ರತ್ಯಕ್ಷ ದರ್ಶಿಯಾಗಬೇಕು ಎಂಬುದಷ್ಟೇ ಅವರ ಆಶಯ. ಒಟ್ಟಾರೆ ಯಾಗಿ ಅವರ ಮುಂದೆ ಏನಾದರೂ ಒಂದು ದುರಂತ ಸಂಭವಿಸಬೇಕು. ಆದರೆ ಅವರಿಗೆ ಅದರಿಂದ ಯಾವ ನಷ್ಟವೂ ಆಗಬಾರದು. ಅಂಥ ದುರಂತದಿಂದ ಲಾಭ ಮಾಡಿಕೊಳ್ಳುವುದು ಹೇಗೆ ಎಂದು ಅಕಲು ಹಾಕುತ್ತಿರುತ್ತಾರೆ. Everybody loves good drought ಅಂತಾರಲ್ಲ ಹಾಗೆ. ಇಂಥ ಒಂದು ವಿಚಿತ್ರ ಮನೋಭಾವವನ್ನು (hunger for disaster) ಹೇಳಲು ಇಂಗ್ಲಿಷಿನಲ್ಲಿ ಒಂದು ಶಬ್ದವೇ ಇಲ್ಲ! ಆದರೆ ಗ್ರೀಕ್‌ನಲ್ಲಿ ಈ ಭಾವನೆಯನ್ನು ನಿಖರವಾಗಿ ಹೇಳಲು lachesism ಎಂಬ ಪದವಿದೆ. ಇಂಗ್ಲಿಷ್ ಪದಕೋಶದಲ್ಲಿ ಯಥಾವತ್ತಾಗಿ ಆರಿಸಿಕೊಳ್ಳಲಾಗಿದೆ.

ಬಾಲ್ಯದ ಆನಂದದ ಕ್ಷಣಗಳನ್ನು ನೆನಪಿಸಿಕೊಂಡು ಪುನಃ ಬಾಲ್ಯಕ್ಕೆ ಮರಳಿದರೆ ಎಷ್ಟು ಚೆನ್ನಾಗಿತ್ತೆಂದು ಕನವರಿಸುವುದನ್ನು ಬಣ್ಣಿಸುವುದೆಂತು? ಅಂಥ ಒಂದು ಮಧುರ ಭಾವವನ್ನು ಒಂದು ಪದದಲ್ಲಿ ಹೇಳಲು ಸಾಧ್ಯವಿಲ್ಲ. ಕಾರಣ ಈ ಭಾವನೆಯನ್ನು ಹೇಳಲು ಒಂದು ಪದವಿಲ್ಲ. ಆದರೆ ಮಂಡಾರಿನ್ ಭಾಷೆಯಲ್ಲಿ ಮಾತ್ರ 'Yuyi' ಎಂಬ ಪದವಿದೆಯಂತೆ. ಬೇರೆ ಯಾವ ಭಾಷೆಗಳಲ್ಲೂ ಪದಗಳಿಲ್ಲ. ನೀವು ನಿಮಗೆ ಇಷ್ಟವಾದವರ ಜತೆ ಕಾಲ್ಪನಿಕ ಸಂಭಾಷಣೆಯಲ್ಲಿ (hypothetical conversation) ನಿರತರಾಗಿರುತ್ತೀರಿ. ಕನ್ನಡದಲ್ಲಿ ಇದಕ್ಕೆ ಮನಸ್ಸಿನಲ್ಲಿ ಮಂಡಿಗೆ ತಿನ್ನುವುದು ಎಂಬ ಪ್ರಯೋಗವಿದೆ. ಆದರೆ ಈ ಕಲ್ಪನೆಯ ಸಾರವನ್ನು ಒಂದು ಪದದಲ್ಲಿ ಹೇಳೋಣ ಅಂದ್ರೆ ಶಬ್ದವೇ ಇಲ್ಲ. ಆದರೆ ಪೋಲಿಷ್ ಭಾಷೆಯಲ್ಲಿ jouska ಎಂಬ ಪದವಿದೆ. ಅದು ನಿಖರವಾಗಿ ಈ ಭಾವನೆಯನ್ನು ಕಟ್ಟಿಕೊಡುತ್ತದೆ. ಜಗತ್ತು ರಭಸದಲ್ಲಿ ಮುನ್ನುಗ್ಗುತ್ತಿದೆ. ತಂತ್ರಜ್ಞಾನ ನಮ್ಮ ಜೀವನವಿಧಾನ, ಚಿಂತನಾಕ್ರಮವನ್ನು ಬದಲಿಸಿದೆ. ಹಿಂದೆಂದೂ ಯೋಚಿಸದ, ಅನುಭವಿಸದ ಪ್ರಸಂಗ, ಸಂಗತಿಗಳು ಮುಖಾಮುಖಿಯಾದಾಗ ಅವುಗಳನ್ನು ಬಣ್ಣಿಸಲು ಅಥವಾ ಹೇಳಲು ನಮಗೆ ಪದಗಳೇ ಸಿಗುವುದಿಲ್ಲ ಅಥವಾ ಹೊಸ ಪದಗಳು ಬೇಕಾಗುತ್ತವೆ. ಯುರೋಪಿಯನ್ ಯೂನಿಯನ್‌ನಿಂದ ಏಕಾಏಕಿ ಹೊರಹೋಗಲು ಬ್ರಿಟನ್ ನಿರ್ಧರಿಸಿತು. ಈ ಸಂಬಂಧ ದೇಶಾದ್ಯಂತ ಜನಮತಗಣನೆಯಾಯಿತು. ಇಂಥದ್ದೊಂದು ಕಸರತ್ತು ಹಿಂದೆಂದೂ ನಡೆದಿರಲೇ ಇಲ್ಲ. ಹೀಗಾಗಿ ಈ ಪ್ರಕ್ರಿಯೆಯನ್ನು ವಿವರಿಸುವ ಪದವೂ ಶಬ್ದಕೋಶದಲ್ಲಿ ಇದ್ದಿರಲಿಲ್ಲ. ಆದರೆ ಪದವಿಲ್ಲವೆಂದು ಸುಮ್ಮನಿರುವಂತಿಲ್ಲವಲ್ಲ, ಯಾವನೋ ಶಬ್ದಬ್ರಹ್ಮ (wordsmith) (Britain Exit- Brit Exist Brexit) ಎಂಬ ಹೊಸ ಪದವನ್ನು ಟಂಕಿಸಿದ. ಅದು ರಾತ್ರಿ ಬೆಳಗಾಗುವುದರೊಳಗೆ ಜಗತ್ಪ್ರಸಿದ್ಧವಾಯಿತು. ಇದಕ್ಕಿಂತ ಪರಿಣಾಮಕಾರಿಯಾದ ಮತ್ತೊಂದು ಪದ ಇರಲಿಕ್ಕಿಲ್ಲ. ಈಗ ಈ ಪದ ಇಂಗ್ಲಿಷ್ ಡಿಕ್ಷನರಿ ಸೇರಿದೆ.



ಇದೇ ಮಾತನ್ನು ಪ್ರಧಾನಿ ಮೋದಿಯವರು ಐನೂರು, ಸಾವಿರ ರುಪಾಯಿ ನೋಟುಗಳನ್ನು ನಿಷೇಧಿಸಿದಾಗ ಉಂಟಾದ ಪರಿಸ್ಥಿತಿಗೂ ಹೇಳಬಹುದು. ಆ ದಿನ ರಾತ್ರಿ ಎಲ್ಲ ಸುದ್ದಿಮನೆಯಲ್ಲೂ ಇದೇ ಚರ್ಚೆ. ಇಡೀ ಪ್ರಕ್ರಿಯೆಗೆ ಏನಂತ ಕರೆಯೋದು ಎಂಬ ತಾಕಲಾಟ. ಇಂಗ್ಲಿಷ್‌ನಲ್ಲಿ ಇದನ್ನು demonetization ಅಂತ ಕರೆದರು. ಕನ್ನಡದಲ್ಲಿ ಏನನ್ನೋದು? ಅಪಮೌಲ್ಯೀಕರಣ, ಅಪನಗದೀಕರಣ, ನೋಟು ಅಮಾನ್ಯ….ಹೀಗೆ ಒಂದೊಂದು ಪತ್ರಿಕೆ ಒಂದೊಂದು ಪದವನ್ನು ಬಳಸಿದವು. ಹಿಂದಿ ಪತ್ರಿಕೆಗಳು ನೋಟ್‌ಬಂದಿ ಎಂದು ಕರೆದವು. ನಾವು ಇಡೀ ಪ್ರಕ್ರಿಯೆಯನ್ನು 'ನೋಟ್ಯಂತರ' ಎಂದು ಕರೆದವು. ಇಂಥದ್ದೊಂದು ಕ್ರಮವನ್ನು ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಯಾರೂ ಕೈಗೊಂಡಿರಲಿಲ್ಲ, ಹೀಗಾಗಿ ಅದನ್ನು ಸಮರ್ಥವಾಗಿ ಬಣ್ಣಿಸುವ ಪದಗಳು ನಮ್ಮಲ್ಲಿ ಇರಲಿಲ್ಲ.

ಇಂದಿಗೂ ಕೆಲವು ಭಾವನೆಗಳನ್ನು ಹೇಳಲು ನಮ್ಮಲ್ಲಿ ಸೂಕ್ತ ಪದಗಳೇ ಇಲ್ಲ, ಉದಾಹರಣೆಗೆ, ಒಂದು ಆಹಾರದ ರುಚಿಯಂತೆ ಮತ್ತೊಂದು ಇದ್ದರೆ, ಒಂದು ಹಣ್ಣು, ಪದಾರ್ಥದ ರುಚಿಯಂತೆ ಮತ್ತೊಂದು ಸಹ ಇದ್ದರೆ ಅದಕ್ಕೆ ಏನನ್ನೋದು? ಪತ್ರಕರ್ತ ವೈಯೆನ್ಕೆ ಅವರು ಬಹಳ ವರ್ಷಗಳವರೆಗೆ ಹೀಗೊಂದು ಪದ ಇದ್ದಿದ್ದರೆ ಎಷ್ಟು ಚೆನ್ನಾಗಿತ್ತೆಂದೂ, ಅಂಥ ಪದವೇನಾದರೂ ಇದ್ದಿರಬಹುದೆಂದೂ ಭಾಷೆಗಳ ಬಗ್ಗೆ ಆಸಕ್ತಿ ಬೆಳೆಸಿಕೊಂಡವರು ಸಿಕ್ಕಾಗ ಕೇಳುತ್ತಿದ್ದರು. ಅದೇನೆಂದರೆ, ಆ ಪದಕ್ಕೆ ಯಾವುದೇ ಅರ್ಥವಿರಬಾರದು. ಆದರೆ ಯಾವುದಾದರೂ ಪದದ ಬದಲಿಗೆ ಅದನ್ನು ಎಲ್ಲಿ ಬೇಕಾದರೂ ಬಳಸಬಹುದು. ಅಂಥ ಪದವೇನಾದರೂ ಇದೆಯಾ? ಈ ಪ್ರಶ್ನೆಯನ್ನು ಅವರು ಗುಲ್ವಾಡಿ, ಕಾರ್ನಾಡ್, ಟಿಜೆಎಸ್ ಜಾರ್ಜ್, ಪಾವೆಂ…. ಹೀಗೆ ಅನೇಕರನ್ನು ಕೇಳಿದ್ದರು. ಯಾರಿಂದಲೂ ಸಮರ್ಪಕ ಉತ್ತರ ಸಿಕ್ಕಿರಲಿಲ್ಲ. 'ಅಂಥದ್ದೊಂದು ಪದ ಇರಬೇಕಿತ್ತು' ಎಂದು ಚಡಪಡಿಸುತ್ತಿದ್ದರು. ಇತ್ತೀಚೆಗೆ The Dictonary Of Obscure Sorrows ಓದುವಾಗ ಅಂಥದ್ದೊಂದು ಪದ ಸಿಕ್ಕಿತು. ವೈಯೆನ್ಕೆ ಇದ್ದಿದ್ದರೆ ಎಷ್ಟು ಖುಷಿಪಡುತ್ತಿದ್ದರು ಎಂದೆನಿಸಿತು. ಆ ಪದ Eglaf. ಅದರ ಅರ್ಥವನ್ನು ಹೀಗೆ ವಿವರಿಸಿದ್ದರು- A word that has no meaning; can be used in place of any other word. (ಆದರೆ ಈ ಪದವನ್ನು ಇತ್ತೀಚೆಗೆ ಸೇರಿಸಿದ್ದು)

ಕೆಲವು ಸಣ್ಣಪುಟ್ಟ ಪ್ರಸಂಗಗಳನ್ನು ಹೇಳಲು ಸಹ ನಮ್ಮಲ್ಲಿ ಒಳ್ಳೆಯ ಪದಗಳಿಲ್ಲ. ಉದಾಹರಣೆಗೆ, ಕಾರು ಹೊರಟ ತಕ್ಷಣ ಕೆಲವರು ನಿದ್ದೆ ಮಾಡಲಾರಂಭಿಸುತ್ತಾರೆ. ಇದಕ್ಕೇನು ಹೇಳುವುದು, ಇಂಥವರಿಗೆ ಏನೆಂದು ಕರೆಯೋದು? ಕೆಲದಿನಗಳ ಹಿಂದೆ ಇದೇ ಪ್ರಶ್ನೆಯನ್ನು ಲಂಡನ್‌ನ 'ದಿ ಗಾರ್ಡಿಯನ್' ಪತ್ರಿಕೆ ತನ್ನ ಓದುಗರಿಗೆ ಕೇಳಿ, ತಮಗೆ ಹೊಳೆಯುವ ಪದವನ್ನು ಸೂಚಿಸುವಂತೆ ವಿನಂತಿಸಿಕೊಂಡಿತು. ಸಾವಿರಾರು ಪದಗಳು ಓದುಗರಿಂದ ಹರಿದು ಬಂದವು. ಅಂತಿಮವಾಗಿ, Carcolepsy ಎಂಬ ಪದವನ್ನು ಆಯ್ಕೆ ಮಾಡಲಾಯಿತು.

ಅಮೆರಿಕನ್ನರಿಗೆ ಒಂದು ವಿಚಿತ್ರ ಖಯಾಲಿ ಇದೆ. ಅದೇನೆಂದರೆ ತಾವೇ ಅದನ್ನು ಕಂಡು ಹಿಡಿದಿದ್ದು ಎಂಬ ಹಿರಿಮೆ, ಹೆಗ್ಗಳಿಕೆ. ಹಾಗಂತ ಅದು ಹಲವು ವರ್ಷ, ದಶಕಗಳಿಂದ ಅಲ್ಲಿಯೇ ಇರುತ್ತದೆ. ಆದರೂ ತಮ್ಮಿಂದಾಗಿಯೇ ಅದು ಜಗತ್ತಿಗೆ ತಿಳಿಯಿತು ಎಂಬುದನ್ನು ಅವರು ಟಾಂಟಾಂ ಮಾಡುತ್ತಾರೆ. ಈ ಖಯಾಲಿಗೆ ಏನೆಂದು ಹೇಳುವುದು? Elite Daily ಎಂಬ ಪತ್ರಿಕೆ ಓದುಗರಿಂದ ಸಲಹೆಗಳನ್ನು ಅಪೇಕ್ಷಿಸಿದಾಗ ಮೂಡಿಬಂದ ಸುಂದರ ಪದವೆಂದರೆ- Columbusing. ಕೊಲಂಬಸ್ ಕಂಡು ಹಿಡಿದಿದ್ದು ಮೊದಲೇ ಇದ್ದದ್ದನ್ನು ತಾನೆ? ಹೊಸತೇನನ್ನೂ ಅಲ್ಲವಲ್ಲ?

ಇವುಗಳನ್ನು ಭಾಷಾತಜ್ಞರು ಸುಲಭಕ್ಕೆ ಸ್ವೀಕರಿಸುವುದಿಲ್ಲ, ಅವರ ಪ್ರಕಾರ ಇವು Made-Up Words. ಆದರೆ ಹೊಸ ಪದಗಳನ್ನು ಹುಟ್ಟು ಹಾಕುವುದು ಸುಲಭ ಅಲ್ಲ ಎಂಬುದು ಅವರಿಗೂ ಗೊತ್ತಿದೆ. Made-Up ಪದಗಳು ಬಹುಬೇಗ ಸ್ವೀಕಾರವಾಗುತ್ತದೆಂಬುದನ್ನು ಅವರೂ ಒಪ್ಪುತ್ತಾರೆ.

ನೀವು ನಿಮ್ಮ ಮನೆಯಲ್ಲಿ ಹೆಚ್ಚು ಆತ್ಮವಿಶ್ವಾಸದಿಂದ ಇರುತ್ತೀರಿ. ಬೇರೆಡೆ ಹೋದಾಗ ಪರಕೀಯರಾಗಿರುತ್ತೀರಿ. ನಿಮಗೆ ಖಡಾಖಡಿ ವರ್ತಿಸಲು ಸಾಧ್ಯವಾಗುವುದಿಲ್ಲ. ಈ ಕಾರಣದಿಂದ ಕೆಲವರು ಮಹತ್ವದ ಮಾತುಕತೆ, ಒಪ್ಪಂದವನ್ನು ತಮ್ಮ ಮನೆಯಲ್ಲೇ ಆಗಲಿ ಎಂದು ಹಠ ಹಿಡಿಯುತ್ತಾರೆ. ಬೇರೆಯವರ ಮನೆ ಬಾಗಿಲಿಗೆ ಯಾಕೆ ಹೋಗಬೇಕು ಎಂಬ ಭಾವನೆ. ಈ ಯೋಚನೆಯನ್ನು ನಾವೆಲ್ಲರೂ ಆಗಾಗ ಅನುಭವಿಸುತ್ತೇವೆ. The place where you are your most authentic self ಅಂತಾರಲ್ಲ. ಅದಕ್ಕೆ ಏನನ್ನೋದು? ಕನ್ನಡದಲ್ಲಿ ಈ ಭಾವನೆ, ಗ್ರಹಿಕೆಗೆ ಯಾವ ಪದವಿದೆ?

ನಾವು ಯಾರನ್ನಾದರೂ ಭೇಟಿಯಾದಾಗ ಅವರ ಬುದ್ಧಿವಂತಿಕೆಗೆ ಬಹಳ ಆಕರ್ಷಿತರಾಗುತ್ತೇವೆ. ಅವರ ರೂಪ, ಸ್ಥಾನಮಾನ, ವ್ಯಕ್ತಿತ್ವ, ಹಣ, ಶ್ರೀಮಂತಿಕೆ…. ಯಾವುದೂ ನಮಗೆ ಮುಖ್ಯ ಅಲ್ಲ, ಬರೀ ಬುದ್ಧಿವಂತಿಕೆಗೆ ಮಾತ್ರ ಒಲಿಯುತ್ತೇವೆ. ಈ ಭಾವನೆಯನ್ನು ಯಾವ ಪದದಿಂದ ವ್ಯಕ್ತಪಡಿಸೋದು? ನೀರಿನ ಮೇಲೆ ಬಿದ್ದ ಚಂದಿರನ ಬೆಳಕನ್ನು ಬಣ್ಣಿಸುವ ಪದ ಯಾವುದು? ಮಣ್ಣಿನ ವಾಸನೆಯನ್ನು ಒಂದೇ ಪದದಲ್ಲಿ ಹೇಳಲು ಸಾಧ್ಯವಾ? ಮನಸ್ಸಿನಲ್ಲಿದೆ ಆದರೆ ಬಾಯಲ್ಲಿ ಬರೊಲ್ಲ, ಅದಕ್ಕೇನು ಹೇಳುವುದು? ಬೆಂಕಿಪೊಟ್ಟಣದಿಂದ ಕಡ್ಡಿ ತೆಗೆದು ಎಷ್ಟೇ ಗೀರಿದರೂ ಬೆಂಕಿ ಹೊತ್ತಿಕೊಳ್ಳುವುದೇ ಇಲ್ಲ, ಇದನ್ನು ಬಣ್ಣಿಸುವ ಪದ ಯಾವುದು?

ಇಂದು ನಮಗೆ ಶಬ್ದಬ್ರಹ್ಮರು ಬೇಕಾಗಿದ್ದಾರೆ. ಅವರ ಅಗತ್ಯ ಹಿಂದೆಂದಿಗಿಂತಲೂ ಹೆಚ್ಚು ಅಗತ್ಯವಿದೆ ಎಂದು ಅನಿಸುವುದಿಲ್ಲವಾ?

ಅವರು ತಬ್ಬಿಕೊಂಡರೆ ಇವರಿಗೇಕೆ ಅಷ್ಟೊಂದು ಚಿಂತೆ?

ಇತ್ತೀಚೆಗೆ ಪ್ರಧಾನಿ ಮೋದಿ ರಷ್ಯಾಕ್ಕೆ ಹೋದಾಗ ಅಲ್ಲಿನ ಅಧ್ಯಕ್ಷ ಪುಟಿನ್‌ಗೆ ಬೆಚ್ಚಗಿನ ಸ್ನೇಹಶೀಲ ಅಪ್ಪುಗೆ ನೀಡಿದ್ದರು. ಅದು ಪಾಶ್ಚಾತ್ಯ ದೇಶಗಳನ್ನು ಸಿಟ್ಟಿಗೇಳಿಸಿದೆ. ಚೀನಾ ಕೂಡ ಈ ಅಪ್ಪುಗೆಯಿಂದ ಚಿಂತೆಗೆ ಬಿದ್ದಿದೆ. ಮೋದಿ ತಪ್ಪು ಮಾಡಿದರಾ? ಅಥವಾ ಪಾಶ್ಚಾತ್ಯ ದೇಶಗಳು ಈ ಸ್ನೇಹವನ್ನು ಪೂರ್ವಗ್ರಹದಿಂದ ನೋಡುತ್ತಿವೆಯಾ?

ಸಂಗತ

ಡಾ.ವಿಜಯ್ ದರಡಾ
vveditoped@gmail.com

ಅದೊಂದು ಅಪ್ಪುಗೆ ಜಗತ್ತಿನೆಲ್ಲೆಡೆ ಚರ್ಚೆಗೆ ಗ್ರಾಸವಾಗಿದೆ. ಅಮೆರಿಕ ಒಂದು ರೀತಿ, ಯುರೋಪಿಯನ್ ದೇಶಗಳು ಇನ್ನೊಂದು ರೀತಿ, ಚೀನಾ ಮತ್ತೊಂದು ರೀತಿ ಹಾಗೂ ಉಕ್ರೇನ್ ಮಗದೊಂದು ರೀತಿಯಲ್ಲಿ ಇದನ್ನು ವ್ಯಾಖ್ಯಾನಿಸುತ್ತಿವೆ. ಇಷ್ಟಕ್ಕೂ ಪ್ರಧಾನಿ ನರೇಂದ್ರ ಮೋದಿ ರಷ್ಯಾಕ್ಕೆ ಹೋದಾಗ ಅಲ್ಲಿನ ಅಧ್ಯಕ್ಷ ವ್ಲಾದಿಮಿರ್ ಪುಟಿನ್‌ರನ್ನು ಸ್ನೇಹದಿಂದ ತಬ್ಬಿಕೊಂಡಿದ್ದು ಜಗತ್ತಿನಾದ್ಯಂತ ಇಷ್ಟೊಂದು ಸುದ್ದಿಯಾಗುತ್ತಿರುವುದೇಕೆ? ಏಕೆ ಪಾಶ್ಚಾತ್ಯ ದೇಶಗಳೆಲ್ಲ ಗದ್ದಲ ಆರಂಭಿಸಿವೆ?

ಉಕ್ರೇನ್ ಅಧ್ಯಕ್ಷ ವೊಲೋದಿಮಿರ್ ಜೆಲೆನ್‌ಸ್ಕಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, 'ಈ ಬೆಳವಣಿಗೆ ನೋಡಿ ನನಗೆ ಬಹಳ ಬೇಸರವಾಗಿದೆ. ಇದು ಶಾಂತಿ ಸ್ಥಾಪನೆಯ ಯತ್ನಕ್ಕೆ ನೀಡಿದ ದೊಡ್ಡ ಹೊಡೆತ. ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ದೇಶದ ಮುಖ್ಯಸ್ಥರು ಜಗತ್ತಿನ ಅತ್ಯಂತ ದೊಡ್ಡ ಕ್ರಿಮಿನಲ್‌ನನ್ನು ಮಾಸ್ಕೋದಲ್ಲಿ ಹೀಗೆ ತಬ್ಬಿಕೊಂಡಿದ್ದು ನೋಡಿ ನಾನು ತಬ್ಬಿಬ್ಬಾಗಿದ್ದೇನೆ. ಅದೂ, ಉಕ್ರೇನ್‌ನ ಆಸ್ಪತ್ರೆಯಲ್ಲಿ ಮಕ್ಕಳ ಮೇಲೆ ರಷ್ಯಾ ಬಹಳ ದೊಡ್ಡ ದಾಳಿ ನಡೆಸಿದ ದಿನವೇ ಈ ಬೆಳವಣಿಗೆ ನಡೆದಿರುವುದು ಆಘಾತ ಉಂಟುಮಾಡಿದೆ ಎಂದು ಹೇಳಿದ್ದಾರೆ.

ಇನ್ನಿತರ ಪಾಶ್ಚಾತ್ಯ ದೇಶಗಳು ಕೂಡ ನರೇಂದ್ರ ಮೋದಿ ಯಾವುದೇ ಕಾರಣಕ್ಕೂ ರಷ್ಯಾ ಭೇಟಿ ವೇಳೆ ಪುಟಿನ್‌ರನ್ನು ತಬ್ಬಿಕೊಳ್ಳುವುದಿಲ್ಲ ಎಂದೇ ನಿರೀಕ್ಷಿಸಿದ್ದವು. ಪಶ್ಚಿಮ ಬುದ್ಧಿಜೀವಿಗಳು ಇದನ್ನು ಸೋಷಿಯಲ್ ಮೀಡಿಯಾಗಳಲ್ಲಿ ಕೂಡ ಬರೆದಿದ್ದರು. ಆದರೆ, ಮೋದಿಯವರ ಕೆಲಸದ ಶೈಲಿಯನ್ನು ತಿಳಿದವರಿಗೆ ಅವರು ಯಾವಾಗ ಬೇಕಾದರೂ ರಾಜತಾಂತ್ರಿಕ ವಿಚಾರಗಳಲ್ಲಿ ಅಚ್ಚರಿಗಳನ್ನು ನೀಡಬಲ್ಲರು ಎಂಬುದು ಗೊತ್ತಿದೆ. ಈ ಬಾರಿಯೂ ಅವರು ಅದನ್ನೇ ಮಾಡಿದ್ದಾರೆ. ಇದರಿಂದ ರಷ್ಯಾಕ್ಕೆ ಖುಷಿಯಾಗಿದ್ದರೆ, ಅಮೆರಿಕದಿಂದ ಹಿಡಿದು ಯುರೋಪ್‌ನ ಅನೇಕ ದೇಶಗಳಿಗೆ ಗಾಯದ ಮೇಲೆ ಉಪ್ಪು ಸವರಿದಂತಾಗಿದೆ. ಆದರೆ ಚೀನಾ ಸದ್ಯಕ್ಕೆ ಏನನ್ನೂ ಬಹಿರಂಗವಾಗಿ ಹೇಳುವ ಸ್ಥಿತಿಯಲ್ಲಿಲ್ಲ. ಏಕೆಂದರೆ ಅದಕ್ಕೆ ರಷ್ಯಾದ ಸ್ನೇಹ ಬೇಕು.

ಪಾಶ್ಚಾತ್ಯ ದೇಶಗಳ ನಾಯಕರೆಲ್ಲ ಅಮೆರಿಕದಲ್ಲಿ ನ್ಯಾಟೋ ಬ್ಯಾನರ್ ಅಡಿ ಸಭೆ ನಡೆಸಿ ರಷ್ಯಾವನ್ನು ಹೇಗೆ ಮಟ್ಟಹಾಕಬೇಕು ಎಂದು ಚರ್ಚಿಸುತ್ತಿದ್ದಾಗಲೇ ಪ್ರಧಾನಿ ಮೋದಿ ರಷ್ಯಾಕ್ಕೆ ಭೇಟಿ ನೀಡಿದ್ದರು. ಇತ್ತೀಚಿನ ವರ್ಷಗಳಲ್ಲಿ ಭಾರತ ಮತ್ತು ಅಮೆರಿಕದ ನಡುವಿನ ಸಂಬಂಧ ಸಾಕಷ್ಟು ಸುಧಾರಣೆಯಾಗಿರುವುದರಿಂದ ಭಾರತವು ರಷ್ಯಾವನ್ನು ಬೆಂಬಲಿಸುವ ಹಂತಕ್ಕೆ ಹೋಗಲಾರದು ಎಂದೇ ಪಾಶ್ಚಾತ್ಯ ದೇಶಗಳು ಭಾವಿಸಿದ್ದವು. ಯುದ್ಧ ಶುರುವಾದ ಮೇಲೆ ರಷ್ಯಾವನ್ನು ಭಾರತ ಬಹಿರಂಗವಾಗಿ ಟೀಕಿಸಿಲ್ಲವಾದರೂ, ಅದು ಬೆಂಬಲವನ್ನಂತೂ ನೀಡುವುದಿಲ್ಲ ಎಂಬುದು ಅವರ ಲೆಕ್ಕಾಚಾರವಾಗಿತ್ತು. ಹೀಗಾಗಿ ಕೊನೆಯ ಪಕ್ಷ ಮೋದಿಯವರು ಪುಟಿನ್‌ರನ್ನು ತಬ್ಬಿಕೊಳ್ಳದೆ ಒಂದು ಸೂಕ್ಷ್ಮ ಸಂದೇಶವನ್ನು ನೀಡುತ್ತಾರೆ ಎಂದು ಅವರೆಲ್ಲಾ ನಿರೀಕ್ಷಿಸುತ್ತಿದ್ದರು. ಆದರೆ ಆಗಿದ್ದೇ ಬೇರೆ. ಮೋದಿ ನೀಡಿದ್ದು ಬೇರೆಯದೇ ಸಂದೇಶ.

ಮೋದಿ ರಷ್ಯಾಕ್ಕೆ ತೆರಳಿದ್ದಾಗ ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ತಮ್ಮ ನಿವಾಸಕ್ಕೆ ಖಾಸಗಿ ಔತಣಕ್ಕಾಗಿ ಇವರನ್ನು ಆಹ್ವಾನಿಸಿದ್ದರು. ಅಲ್ಲಿ ರಷ್ಯಾದ ಅತ್ಯುಚ್ಚ ನಾಗರಿಕ ಗೌರವವನ್ನು ಕೂಡ ಮೋದಿಗೆ ಪ್ರದಾನ ಮಾಡಿದರು. ಅವರು ತೋರಿದ ಈ ಗೌರವಕ್ಕೆ ಮೋದಿ ಬೆಚ್ಚನೆಯ ಬಿಗಿ ಅಪ್ಪುಗೆ ನೀಡಿ ಪುಟಿನ್‌ಗೆ ಕೃತಜ್ಞತೆ ಹೇಳಿದರು. ತಕ್ಷಣ ಅದರ ಫೋಟೋ ಹಾಗೂ ವಿಡಿಯೊಗಳು ಮಾಧ್ಯಮಗಳಲ್ಲಿ ವೈರಲ್ ಆದವು. ಪಾಶ್ಚಾತ್ಯ ದೇಶಗಳಲ್ಲಿ ಸಂಚಲನ ಉಂಟಾಯಿತು. ಅವು ಮೋದಿಯವರ ನಡೆಯನ್ನು ಟೀಕಿಸಲು ಆರಂಭಿಸಿದವು. ಅಚ್ಚರಿಯೆಂಬಂತೆ, ಪುಟಿನ್ ಜೊತೆಗಿನ ಭೇಟಿಯಲ್ಲಿ ಮೋದಿಯವರು 'ಯಾವುದೇ ಭಿನ್ನಾಭಿಪ್ರಾಯವನ್ನು ಯುದ್ಧಭೂಮಿಯಲ್ಲಿ ಬಗೆಹರಿಸಿಕೊಳ್ಳಲು ಸಾಧ್ಯವಿಲ್ಲ' ಎಂದು ನೇರವಾಗಿ ಹೇಳಿದ್ದನ್ನು ಪಾಶ್ಚಾತ್ಯ ದೇಶಗಳು ಮರೆತೇಬಿಟ್ಟಿದ್ದವು. 'ಯುದ್ಧದಲ್ಲಿ ಮಕ್ಕಳು ಸಾಯುವುದನ್ನು ನೋಡಿದರೆ ನನ್ನ ಕರುಳು ಹಿಂಡಿದಂತಾಗುತ್ತದೆ' ಎಂದೂ ಪುಟಿನ್‌ಗೆ ನೇರವಾಗಿಯೇ ಮೋದಿ ಹೇಳಿದ್ದರು. ತನ್ಮೂಲಕ ಉಕ್ರೇನ್‌ನಲ್ಲಿ ರಷ್ಯಾ ನಡೆಸುತ್ತಿರುವ ನರಮೇಧಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರು. ಆಗ ಪಾಶ್ಚಾತ್ಯ ದೇಶಗಳು ಈ ಹೇಳಿಕೆಗಳನ್ನು ಸ್ವಾಗತಿಸಿದ್ದವು. ಆದರೆ, ಪುಟಿನ್‌ರನ್ನು ತಬ್ಬಿಕೊಂಡಾಕ್ಷಣ ಅವುಗಳ ನಿಲುವೇ ಬದಲಾಗಿಬಿಟ್ಟಿತು. ಅದಕ್ಕೇನು ಕಾರಣ? ನನಗೆ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರ ಹೇಳಿಕೆ ಸರಿಯಾಗಿದೆ ಅನ್ನಿಸುತ್ತದೆ. ಅವರು ಪಾಶ್ಚಾತ್ಯ ದೇಶಗಳು ಎಲ್ಲವನ್ನೂ 'ಒಂದೇ ಬದಿಯಿಂದ ಗಮನಿಸುತ್ತವೆ' ಎಂದು ಹೇಳಿದ್ದಾರೆ. ತಮ್ಮ ಸಮಸ್ಯೆಗಳು ಇಡೀ ಜಗತ್ತಿನ ಸಮಸ್ಯೆಯೆಂಬಂತೆ ಜಗತ್ತು ಭಾವಿಸಬೇಕೆಂದು ಬಯಸುವ ಆ ದೇಶಗಳು, ಜಗತ್ತಿನ ಸಮಸ್ಯೆಗಳನ್ನು ಕೊನೆಯ ಪಕ್ಷ ಸಮಸ್ಯೆ ಎಂದು ಗುರುತಿಸುವುದಕ್ಕೂ ಮುಂದಾಗುವುದಿಲ್ಲ ಎಂದು ಜೈಶಂಕರ್ ಹೇಳಿದ್ದಾರೆ. ತುಂಬಾ ಸರಿಯಾದ ಮಾತಿದು.

ಮೋದಿ ಮತ್ತು ಪುಟಿನ್‌ರ ಬಿಗಿಯಪ್ಪುಗೆಯನ್ನು ಟೀಕಿಸುವವರು ಒಂದು ಸಂಗತಿಯನ್ನು ಅರ್ಥ ಮಾಡಿಕೊಳ್ಳಬೇಕು. ಭಾರತ ಮತ್ತು ರಷ್ಯಾ ನಡುವಿನ ಸ್ನೇಹ ಇಂದು-ನಿನ್ನೆಯದಲ್ಲ. ಪಂ.ಜವಾಹರಲಾಲ್ ನೆಹರು ಕಾಲದಿಂದಲೂ ನಮಗೆ ರಷ್ಯಾ ಜೊತೆ ಆಪ್ತವಾದ ಸಂಬಂಧವಿದೆ. ಈ ಎರಡು ದೇಶಗಳ ಭಾಷೆಗಳು ಬೇರೆಯಾಗಿದ್ದರೂ ನಾವು ಸದಾ ಒಂದೇ ಧ್ವನಿಯಲ್ಲಿ ಮಾತನಾಡಿದ್ದೇವೆ. ಬಾಲಿವುಡ್ ಸೂಪರ್‌ಸ್ಟಾರ್ ರಾಜ್‌ಕಪೂರ್ ಭಾರತದಲ್ಲಿ ಎಷ್ಟು ಪ್ರಸಿದ್ಧರಾಗಿದ್ದರೋ ರಷ್ಯಾದಲ್ಲೂ ಅಷ್ಟೇ ಜನಪ್ರಿಯರಾಗಿದ್ದರು. ಭಾರತದ ದೃಷ್ಟಿಕೋನದಲ್ಲಿ ಈಗಿನ ಬೆಳವಣಿಗೆಗಳನ್ನು ನೋಡುವುದಕ್ಕೆ ಪಾಶ್ಚಾತ್ಯ ದೇಶಗಳಿಗೆ ಸಾಧ್ಯವಾದರೆ ವಾಸ್ತವ ಏನೆಂಬುದು ಅವುಗಳಿಗೆ ಅರ್ಥವಾಗುತ್ತದೆ. ರಷ್ಯಾ ಕುರಿತಾದ ಭಾರತದ ನಿಲುವು ಪಶ್ಚಿಮದ ದೇಶಗಳಿಗೆ ವಿರುದ್ಧವಾದ ನಿಲುವಲ್ಲ. ಬದಲಿಗೆ, ನಮ್ಮ ಅಗತ್ಯಗಳಿಗೆ ತಕ್ಕಂತೆ ನಾವು ರಷ್ಯಾದೊಂದಿಗೆ ಸ್ನೇಹಶೀಲ ಸಂಬಂಧ ಕಾಯ್ದುಕೊಳ್ಳುತ್ತಿದ್ದೇವೆ. ಇಂದು ಅಮೆರಿಕ, ಫ್ರಾನ್ಸ್ ಹಾಗೂ ಇನ್ನಿತರ ಪಾಶ್ಚಾತ್ಯ ದೇಶಗಳು ಭಾರತಕ್ಕೆ ನಾನಾ ರೀತಿಯ ಯುದ್ಧ ಸಾಮಗ್ರಿಗಳನ್ನು ಪೂರೈಸುತ್ತವೆಯಾದರೂ, ಹಿಂದೊಂದು ದಿನ ಅಮೆರಿಕವು ಬಹಿರಂಗವಾಗಿ ಪಾಕಿಸ್ತಾನಕ್ಕೆ ಬೆಂಬಲ ನೀಡಿದ್ದನ್ನು ಭಾರತ ಹೇಗೆ ಮರೆಯಲು ಸಾಧ್ಯ? ಆಗ ಭಾರತಕ್ಕೆ ವ್ಯೂಹಾತ್ಮಕ ಬೆಂಬಲ ನೀಡಿದ್ದು ಇದೇ ರಷ್ಯಾ. ನಮ್ಮ ದೇಶಕ್ಕೆ ರಷ್ಯಾ ಯಾವತ್ತೂ ವಿಶ್ವಾಸಾರ್ಹ ಸ್ನೇಹಿತನಾಗಿದೆ. ಇಂದು ಬದಲಾದ ಪರಿಸ್ಥಿತಿಯಲ್ಲಿ ಚೀನಾ ಜತೆಗೂ ರಷ್ಯಾ ಸ್ನೇಹವನ್ನು ಬಯಸುತ್ತಿದೆ. ಪಾಶ್ಚಾತ್ಯ ದೇಶಗಳು ರಷ್ಯಾ ಮೇಲೆ ಸಾಕಷ್ಟು ಆರ್ಥಿಕ ನಿರ್ಬಂಧಗಳನ್ನು ಹೇರಿರುವುದರಿಂದ ಚೀನಾದ ಗೆಳೆತನ ಮಾಡುವುದು ರಷ್ಯಾಕ್ಕೆ ಅನಿವಾರ್ಯವಾಗಿದೆ. ಹಾಗೆಯೇ, ಈ ಸಂದರ್ಭದಲ್ಲಿ, ರಷ್ಯಾ ಜತೆಗಿನ ನಮ್ಮ ಸ್ನೇಹವನ್ನು ಇನ್ನಷ್ಟು ಬಲಗೊಳಿಸಿಕೊಳ್ಳುವುದು ಭಾರತಕ್ಕೂ ಅಗತ್ಯವಿದೆ. ಆದರೆ,

ಪಶ್ಚಿಮದ ತಜ್ಞರು ಒಂದು ವೇಳೆ ಭಾರತದ ಗಡಿಯಲ್ಲಿ ಚೀನಾ ಏನಾದರೂ ದುಸ್ಸಾಹಸಕ್ಕೆ ಕೈಹಾಕಿದರೆ ಆಗ ಭಾರತವನ್ನು ರಷ್ಯಾ ನೇರವಾಗಿ ಬೆಂಬಲಿಸುವುದಿಲ್ಲ ಎಂದು ಎಚ್ಚರಿಕೆ ನೀಡುತ್ತಿದ್ದಾರೆ. ಮೇಲ್ನೋಟಕ್ಕೆ ಈ ಲೆಕ್ಕಾಚಾರ ಸರಿಯಾಗಿದೆ ಎಂದೇ ಅನ್ನಿಸಬಹುದು. ವಾಸ್ತವ ಏನೆಂದರೆ, ಈಗಿನ ಪರಿಸ್ಥಿತಿಯಲ್ಲಿ, ಚೀನಾದ ಮನವೊಲಿಸುವ ಶಕ್ತಿಯಿರುವುದು ಕೂಡ ರಷ್ಯಾಕ್ಕೆ ಮಾತ್ರ. ಅಂದರೆ ಭಾರತವನ್ನು ಕೆಣಕದಂತೆ ಚೀನಾಗೆ ತಿಳಿಹೇಳುವ ಸಾಮರ್ಥ್ಯ ರಷ್ಯಾಕ್ಕಿದೆ. ರಷ್ಯಾದ ನೆರವು ಇಲ್ಲದೆ ಭಾರತದ ವಿರುದ್ಧ ತಾನು ಮುಂದುವರೆಯಲು ಸಾಧ್ಯವಿಲ್ಲ ಎಂಬುದು ಚೀನಾಕ್ಕೂ ಗೊತ್ತಿದೆ.

ಇನ್ನು ಅಮೆರಿಕದ ಕೆಲ ರಕ್ಷಣಾ ತಜ್ಞರು ಭಾರತದಲ್ಲಿ ರಷ್ಯಾದವರು ಯುದ್ಧ ಸಲಕರಣೆಗಳನ್ನು ಉತ್ಪಾದನೆ ಮಾಡಲು ಒಪ್ಪಂದ ಮಾಡಿಕೊಂಡಿರುವುದು ಕಳವಳಕಾರಿ ಬೆಳವಣಿಗೆ ಎಂದಿದ್ದಾರೆ. ಇದು ಮೂರ್ಖತನದ ಹೇಳಿಕೆ. ನೀವು ಎಲ್ಲಿ ಬೇಕಾದರೂ ಯುದ್ಧ ಸಾಮಗ್ರಿಗಳನ್ನು ಉತ್ಪಾದನೆ ಮಾಡಿ ಜಗತ್ತಿನ ಯಾವ ದೇಶಕ್ಕೆ ಬೇಕಾದರೂ ಮಾರಾಟ ಮಾಡುವ ಮೂಲಕ ಸಂಘರ್ಷಕ್ಕೆ ಪ್ರಚೋದನೆ ನೀಡಬಹುದು. ಆದರೆ ನಾವು ನಮ್ಮ ರಕ್ಷಣೆಗಾಗಿ ಯುದ್ಧ ಸಾಮಗ್ರಿಗಳನ್ನು ಉತ್ಪಾದನೆ ಮಾಡುವುದು ನಿಮಗೆ ಕಳವಳ ಉಂಟುಮಾಡುತ್ತದೆ! ಇದೆಂತಹ ಆಷಾಢಭೂತಿತನ! ನನ್ನ ಪ್ರಕಾರ, ಅಮೆರಿಕದಲ್ಲಿ ಪಾಶ್ಚಾತ್ಯ ದೇಶಗಳ ನ್ಯಾಟೋ ಸಭೆ ನಡೆಯುವುದಕ್ಕೂ ಮೊದಲು ರಷ್ಯಾದಲ್ಲಿ ಪುಟಿನ್‌ರನ್ನು ಮೋದಿ ತಬ್ಬಿಕೊಂಡಿದ್ದು 'ಭಾರತವು ವ್ಯೂಹಾತ್ಮಕ ವಿಷಯಗಳಲ್ಲಿ ಯಾರ ಮಾತನ್ನೂ ಕೇಳುವುದಿಲ್ಲ ಎಂಬ ಸಂದೇಶವನ್ನು ಜಗತ್ತಿಗೇ ರವಾನಿಸುವ ಬಹಳ ಮಹತ್ವದ ಹಾಗೂ ಲೆಕ್ಕಾಚಾರದ ನಡೆ. ಭಾರತ ಕೇವಲ ಜಾಗತಿಕ ಶಾಂತಿಗಾಗಿ ಎಲ್ಲರ ಜೊತೆಗೆ ಕೈಜೋಡಿಸಿ ಕೆಲಸ ಮಾಡುತ್ತದೆ. ಪುಟಿನ್‌ರನ್ನು ತಬ್ಬಿಕೊಂಡ ನಂತರ ಮೋದಿ ಆಸ್ಟ್ರಿಯಾಕ್ಕೆ ಭೇಟಿ ನೀಡಿದ್ದು ಕೂಡ ಬಹಳ ಮಹತ್ವದ ಬೆಳವಣಿಗೆ. ಅದೂ ಕೂಡ ತನ್ನದೇ ಆದ ಸಂದೇಶವನ್ನು ಜಗತ್ತಿಗೆ ನೀಡಿದೆ. ಇಷ್ಟಕ್ಕೂ, ಭಾರತದ ಪ್ರಧಾನಿಯೊಬ್ಬರು ಆಸ್ಟ್ರಿಯಾಕ್ಕೆ 41 ವರ್ಷಗಳ ಬಳಿಕ ಭೇಟಿ ನೀಡಿದ್ದಾರೆ.

ಹಿರಿಯರ ಯುದ್ಧದಲ್ಲಿ ವಯಸ್ಸಿನ ತಾಕಲಾಟ!: ನಾನಿದನ್ನು ಬರೆಯುತ್ತಿರುವ ಹೊತ್ತಿಗೆ ಅತ್ತ ಅಮೆರಿಕದಿಂದ ಡೊನಾಲ್ಡ್ ಟ್ರಂಪ್ ಹತ್ಯೆಗೆ ಯತ್ನ ನಡೆದ ಸುದ್ದಿ ಬರುತ್ತಿದೆ. ಈ ಘಟನೆಯು ಮುಂದಿನ ಚುನಾವಣೆಯಲ್ಲಿ ಟ್ರಂಪ್ ಗೆಲ್ಲುವ ಸಾಧ್ಯತೆಯನ್ನು ಇನ್ನಷ್ಟು ಗಟ್ಟಿಗೊಳಿಸಬಹುದು. ಆದರೆ, ವಿಚಿತ್ರ ಎಂಬಂತೆ ಅಮೆರಿಕದಲ್ಲಿ ಈ ಬಾರಿ ಯಾರೇ ಗೆದ್ದರೂ ಅದರ ಇತಿಹಾಸದಲ್ಲೇ ಅತ್ಯಂತ ಹೆಚ್ಚು ವಯಸ್ಸಾದ ಅಧ್ಯಕ್ಷರೊಬ್ಬರು ಅಧಿಕಾರಕ್ಕೆ ಬರುತ್ತಾರೆ. ಈ ಹಿಂದಿನ ದಾಖಲೆ ರೊನಾಲ್ ರೇಗನ್ ಹೆಸರಿನಲ್ಲಿದೆ. ಅವರು ಎರಡನೇ ಅವಧಿಗೆ ಅಧ್ಯಕ್ಷರಾಗಿ ನಿವೃತ್ತಿ ಹೊಂದಿದಾಗ 77 ವರ್ಷ ವಯಸ್ಸಾಗಿತ್ತು. ಜೋ ಬೈಡನ್‌ಗೆ ಈಗ 81 ವರ್ಷ. ಡೊನಾಲ್ಡ್ ಟ್ರಂಪ್‌ಗೆ 78 ವರ್ಷ. ಅಮೆರಿಕದ ಸಾರ್ವಜನಿಕ ಜೀವನದಲ್ಲಿ ವಯೋವೃದ್ಧರು ಯುವಕರಿಗೆ ಸರಿಸಮನಾದ ಉತ್ಸಾಹದೊಂದಿಗೆ ಕೆಲಸ ಮಾಡುವುದು ಹೊಸತೇನಲ್ಲ. ಬೇರೆ ಬೇರೆ ಕ್ಷೇತ್ರಗಳಲ್ಲೂ ಅಮೆರಿಕದಲ್ಲಿ ಇಂದು 75 ವರ್ಷ ಮೇಲ್ಪಟ್ಟ 20 ಲಕ್ಷಕ್ಕೂ ಹೆಚ್ಚು ಜನರು ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಅಧಿಕೃತ ಅಂಕಿಅಂಶಗಳು ಹೇಳುತ್ತವೆ. ಮುಂದಿನ ದಶಕದಲ್ಲಿ ಈ ಸಂಖ್ಯೆ 30 ಲಕ್ಷವನ್ನು ದಾಟುವ ನಿರೀಕ್ಷೆಯಿದೆ. ಹಾಗಾಗಿ ಬೈಡೆನ್ ಮತ್ತು ಟ್ರಂಪ್ ಏಕೆ ಮತ್ತೊಮ್ಮೆ ಈ ಇಳಿವಯಸ್ಸಿನಲ್ಲೂ ಅಧ್ಯಕ್ಷರಾಗಲು ಬಯಸುತ್ತಿದ್ದಾರೆ ಎಂದು ಯಾರೂ ಕಟಕಿಯಾಡುವಂತಿಲ್ಲ. ಆದರೆ, ಬೈಡೆನ್‌ಗೆ ಮರೆಗುಳಿತನ ಕಾಡುತ್ತಿದೆ. ಅದರ ಬಗ್ಗೆ ಎಲ್ಲರೂ ತಕರಾರು ಎತ್ತುತ್ತಿದ್ದಾರೆ.

ಜನಸಾಮಾನ್ಯರಿಗಿಂತ ಹೆಚ್ಚಾಗಿ ಶ್ವೇತಭವನದ ಅಧಿಕಾರಿಗಳು ಹಾಗೂ ಸಿಐಎ ಗುಪ್ತಚರ ದಳದ ಅಧಿಕಾರಿಗಳು ಅಧ್ಯಕ್ಷರ ವೃದ್ಧಾಪ್ಯದ ಬಗ್ಗೆ ಚಿಂತೆಗೀಡಾಗಿದ್ದಾರೆ. ಅವರು ಕೇಳುತ್ತಿರುವ ಮಿಲಿಯನ್ ಡಾಲರ್ ಪ್ರಶ್ನೆ: 'ಇಷ್ಟೊಂದು ವಯಸ್ಸಾಗಿರುವ ಅಧ್ಯಕ್ಷರೊಂದಿಗೆ ಅತ್ಯಂತ ಮಹತ್ವದ ಗುಪ್ತಚರ ವಿಚಾರಗಳನ್ನು ಹಂಚಿಕೊಳ್ಳಬಹುದೇ?

ಆದರೆ ಅವರ ಮುಂದೆ ಬೇರೆ ಆಯ್ಕೆಯಾದರೂ ಎಲ್ಲಿದೆ?

(ಲೇಖಕರು : ಹಿರಿಯ ಹಿರಿಯ ಪತ್ರಿಕೋದ್ಯಮಿ ಹಾಗೂ ರಾಜ್ಯಸಭಾ ಮಾಜಿ ಸದಸ್ಯ

ಭಟ್ಟರ್ ಸ್ಕಾಚ್

● **ಪೂರ್ಣಯ್ಯ, ಮೈಸೂರು**
ದಾಂಪತ್ಯ ಜೀವನಕ್ಕೆ ಕಾಲಿಟ್ಟ ಅಂಬಾನಿ ಅನಂತು ಕನ್ನಡದಲ್ಲಿ ಪ್ರಣಯ ಗೀತೆ ಹಾಡು ಅಂದ್ರೆ, ಯಾವ ಹಾಡು ಹಾಡ್ತಾ ಇದ್ದ, ಭಟ್ರೇ?
– 'ರಾಧಿಕೆ ನಿನ್ನ ಸರಸ ಇದೇನೇ...'

● **ಅಲಮೇಲು, ಮೇಲುಕೋಟೆ**
ಕಿರು ತೆರೆಯಲ್ಲಿ ಬೆಳಗಿನ ಹೊತ್ತು ದೇವರು, ದೇಗುಲಗಳನ್ನು ನೋಡಿ ಪುಣ್ಯ ಕಟ್ಟಿಕೊಳ್ಳುತ್ತಿದ್ದ ನಮಗೆ ಕಲ್ಲು ಬಿತ್ತಲ್ಲ?
– 'ಪವಿತ್ರ ದರ್ಶನ' ಪ್ರಸಾರವಾಗುತ್ತಿಲ್ಲ ಎನ್ನುವ ಬೇಸರವೇ?

● **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ನಿಮ್ಮ ಹೃದಯ ಕಂಪಿಸಿತೇಕೆ?
– ಇದ್ದೂ ಬಾಡಿಗೆ ಕೊಡದಿದ್ದರೆ, ಹೃದಯದಿಂದ ಜಾಗವನ್ನೂ ಖಾಲಿ ಮಾಡದಿದ್ದರೆ ಇನ್ನೇನಾದೀತು?!

● **ರಾಜೇಶ ಬಂಕಾಪುರ, ಬಂಕಾಪುರ**
ಭಟ್ರೇ, ಕಾಂಗ್ರೆಸ್ ಕೃಪಾಪೋಷಿತ 'ವಾಲ್ಮೀಕಿ ರಾಮಾಯಣ' ಬರೆದವರು ಯಾರು?
– ನಾನಲ್ಲ.. ನಾನಲ್ಲ.. ಅಂತಾರಲ್ಲ ನಾಗೇಂದ್ರ, ದದ್ದಲ್ಲ!

● **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಕೆಮ್ಮು ಇರುವವರು ಕಳ್ಳತನಕ್ಕೆ ಹೋಗಬಾರದು ಅಂತಾರಲ್ಲ?
– ಕಳ್ಳನನ್ನು ಹಿಡಿಯಲೂ ಹೋಗಬಾರದು!

● **ವಿಶ್ವನಾಥ, ಜೇವರ್ಗಿ**
ಭಟ್ರೇ, ಕನ್ನಡ ಕಲಿಯಲು ವಿಶ್ವವಾಣಿ ಓದಿ ಅಂತ ಶಿಕ್ಷಣ ಸಚಿವರಿಗೆ ಸಿಎಂ ಆದೇಶಿಸಿದರೆ?
– ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಂದಲೇ ಅಭಿಯಾನ ಆರಂಭ!

● **ರಮೇಶ ಗೌಡ, ಮಳವಳ್ಳಿ**
ಭಟ್ರೇ, ನನ್ನ ಮಗ ತಪ್ಪು ಮಾಡಿದ್ದರೆ ಗಲ್ಲಿಗೇರಿಸಿ ಅಂತ ರೇವಣ್ಣ ಹೇಳಿದ್ದರ ಅರ್ಥವೇನು?
– ಮಗ ಗಲ್ಲಿಗೇರಿಸುವ ತಪ್ಪು ಮಾಡಿಲ್ಲ ಎಂದರ್ಥ!

● **ಎಲ್.ವಿ.ಸತೀಶ, ಮೈಸೂರು**
ಭಟ್ರೇ, ನಂಬಿದವರೇ ಮೋಸ ಮಾಡ್ತಾರಲ್ಲ?
– ನಂಬದಿದ್ದರೆ, ನಂಬಿಸದಿದ್ದರೆ ಮೋಸ ಮಾಡಲು ಸಾಧ್ಯವೇ?!

● **ವಿನೋದ ಕೆ.ಸಂಪತ್, ಮೈಸೂರು**
ಭಟ್ರೇ, ಪ್ರದೀಪ ಈಶ್ವರ ಸ್ವಲ್ಪ ಜಾಸ್ತಿ ಮಾತಾಡ್ತಾರೆ ಅಲ್ಲವಾ?
– ಸ್ವಲ್ಪ ಜಾಸ್ತಿ ಮಾತಾಡ್ತಾರೆ ಅಂದ್ರೆ ಏನು ಅಂತ ಮೊದಲು ಹೇಳು!

● **ರಾಮು ಕೆ., ಮಂಡ್ಯ**
ಭಟ್ರೇ, ನೀವು ಯಾರನ್ನೂ ಶೆಡ್ಡಿಗೆ ಕರೆಯುವುದಿಲ್ಲವಾ?
– ನೀವು ಯಾರನ್ನೂ ಬೆಡ್ಡಿಗೆ ಕರೆಯುವುದಿಲ್ಲವಾ ಅಂತ ಕೇಳಿದ್ದರೆ ಉತ್ತರಿಸುತ್ತಿದ್ದೆ!

● **ನಂದಾ ಹಿರೇಮಠ, ತುಮಕೂರು**
ಕನ್ನಡಿಗರು ತಮ್ಮ ಭಾಷೆಯನ್ನು ಬೇರೆಯವರಿಗೆ ಯಾಕೆ ಕಲಿಸುವುದಿಲ್ಲ?
–ಬೇರೆಯವರ ಭಾಷೆಯನ್ನು ಇವರೇ ಕಲಿಯುತ್ತಾರಲ್ಲ?!

ಮಿಥ್ಯಗಳ ಅಬ್ಬರದಲ್ಲಿ ಮಂಕಾಗುತ್ತಿರುವ ತಥ್ಯಗಳು

ಪ್ರಚಲಿತ
ಗಣೇಶ್ ಭಟ್ ವಾರಣಾಸಿ
vveditoped@gmail.com

ಸುಳ್ಳಿಗಿರುವ ಶಕ್ತಿಯೇ ಅದು. ಅದು ಅನುಕೂಲಕ್ಕೆ ತಕ್ಕಂತೆ, ಕಾಲಕ್ಕೆ ತಕ್ಕಂತೆ ರೂಪಿತವಾಗುತ್ತದೆ. ಸುಳ್ಳು ಅತಿ ರಂಜಕವಾಗಿರುತ್ತದೆ. ಹೀಗಾಗಿ ಸತ್ಯಕ್ಕಿಂತ ಮೊದಲೇ ಸುಳ್ಳುಗಳು ಜನರನ್ನು ತಲುಪುತ್ತದೆ. ಅದ್ದರಿಂದಲೇ ಸತ್ಯ ಚಪ್ಪಲಿಯನ್ನು ಹಾಕುವಷ್ಟರಲ್ಲಿ ಸುಳ್ಳು ಊರಿಗೆ ಅರ್ಧ ಸುತ್ತನ್ನು ಹಾಕುತ್ತದೆ ಎನ್ನುವ ಗಾದೆ ರೂಪುಗೊಂಡದ್ದು. ಮೊದಲು ಯಾವ ಸುದ್ದಿ ಸಿಗುತ್ತದೆಯೋ ಅದೇ ಸುದ್ದಿಯನ್ನು ಜನರು ಹೆಚ್ಚು ನಂಬುತ್ತಾರೆ. ದಶಕದ ಹಿಂದೆ ಸಾಮಾಜಿಕ ಮಾಧ್ಯಮಗಳಾದ ಫೇಸ್‌ಬುಕ್, ಯೂಟ್ಯೂಬ್, ವಾಟ್ಸಾಪ್, ಟ್ವಿಟರ್‌ಗಳು ಪರಿಚಯಿಸಲ್ಪಟ್ಟಾಗ ಮುಖ್ಯಮಾಹಿನಿ ಮಾಧ್ಯಮಗಳು ಬಿತ್ತರಿಸಿದ ಸುದ್ದಿಗಳ ಸತ್ಯಾಸತ್ಯತೆಯನ್ನು ಒರೆಹಚ್ಚಲು ದೊರಕಿರುವ ಒಂದು ಅವಕಾಶವೆಂದೇ ಭಾವಿಸಲಾಗಿತ್ತು. ಆದರೆ ಕ್ರಮೇಣ ಸಾಮಾಜಿಕ ಮಾಧ್ಯಮಗಳೂ ಕುಲಗೆಟ್ಟು ಹೋದವು. ಸುಳ್ಸುದ್ದಿಯನ್ನು ಹರಡುವ ವಾಟ್ಸಾಪ್‌ಗಳು, ಸುದ್ದಿಯನ್ನು ತಿರುಚುವ ಯೂಟ್ಯೂಬರ್‌ಗಳು ಸಾಮಾಜಿಕ ಮಾಧ್ಯಮಗಳ ವಿಶ್ವಾಸಾರ್ಹತೆಯನ್ನೂ ಹಾಳು ಮಾಡಿದವು. ಸಾಮಾಜಿಕ ಮಾಧ್ಯಮಗಳಲ್ಲಿ ಬಿತ್ತರಿಸಲ್ಪಟ್ಟ ಸುದ್ದಿಗಳು ಅಸಲಿಯೋ ನಕಲಿಯೋ ಎಂದು ವಿಶ್ಲೇಷಿಸಲೆಂದೇ ಕೆಲವು ಫ್ಯಾಕ್ಟ್ ಚೆಕಿಂಗ್ ಮಾಧ್ಯಮಗಳು ಹುಟ್ಟಿಕೊಂಡವು. ಆದರೆ ಅವುಗಳೂ ಅಜೆಂಡಾಗಳ ಮೇಲೆಯೇ ನಿರೂಪಿತಗೊಳ್ಳಲು ಆರಂಭವಾದಾಗ ಫ್ಯಾಕ್ಟ್ ಚೆಕ್ಕರ್‌ಗಳ ವಿಶ್ವಾಸಾರ್ಹತೆಯೂ ಕುಂದಿತು. ಸಾಮಾಜಿಕ ಮಾಧ್ಯಮಗಳ ಮೂಲಕ ಜನರನ್ನು ತಲುಪಲು ಎಲ್ಲಾ ರಾಜಕೀಯ ಪಕ್ಷಗಳು ಐಟಿ ಸೆಲ್‌ಗಳನ್ನು ಹೊಂದಿವೆ. ಸಾಮಾಜಿಕ ಮಾಧ್ಯಮದಲ್ಲಿ ಸ್ವಲ್ಪ ಮಟ್ಟಿಗೆ ಹಿಂದಿದ್ದ ಕಾಂಗ್ರೆಸ್ ಪಕ್ಷವು 2021ರಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ಪಕ್ಷದ ಪರವಾಗಿ ಪ್ರಚಾರ ಕೈಗೊಳ್ಳಲು, ಟ್ರೆಂಡ್‌ಗಳನ್ನು ಸೃಷ್ಟಿಸಲು 5 ಲಕ್ಷ ಸೋಶಿಯಲ್ ಮೀಡಿಯಾ ವಾಲಂಟಿಯರ್‌ಗಳನ್ನು ನೇಮಕಾತಿ ಮಾಡಿಕೊಳ್ಳಲಿದೆ ಎಂದು ಘೋಷಿಸಿತ್ತು. ಇಂದು ಸಾಮಾಜಿಕ ಮಾಧ್ಯಮದಲ್ಲಿ ಇತರೆಲ್ಲಾ ಪಕ್ಷಗಳಿಗಿಂತ ಕಾಂಗ್ರೆಸ್ ಪಕ್ಷವು ಹೆಚ್ಚು ಸಕ್ರಿಯವಾಗಿದೆ.

2024ರ ಚುನಾವಣೆಯ ಸಂದರ್ಭದಲ್ಲಿ ಪ್ರಚಾರ ಹಾಗೂ ಅಪಪ್ರಚಾರಗಳಿಗೆ ಸಾಮಾಜಿಕ ಮಾಧ್ಯಮಗಳನ್ನು ಧಾರಾಳವಾಗಿ ಬಳಸಿಕೊಳ್ಳಲಾಯಿತು. ಈ ಬಾರಿಯ ಮಹಾಚುನಾವಣೆಯಲ್ಲಿ ಸುಳ್ಳುಗಳೇ ಹೆಚ್ಚು ವಿಜೃಂಭಿಸಿವೆ ಎನ್ನಬಹುದು. ಕೇಂದ್ರದಲ್ಲಿ ಬಿಜೆಪಿಯು ಪುನಃ ಅಧಿಕಾರಕ್ಕೆ ಬಂದರೆ ಸಂವಿಧಾನವನ್ನು ಬದಲಿಸಲಿದೆ, ಮೀಸಲಾತಿಯನ್ನು ತೆಗೆದು ಹಾಕಲಿದೆ, ಸಿಎಎ ಜಾರಿಯಿಂದಾಗಿ ಮುಸಲ್ಮಾನರಿಗೆ ಅನ್ಯಾಯವಾಗಲಿದೆ, ಕೇಂದ್ರ ಸರಕಾರವು ಅದಾನಿ ಅಂಬಾನಿಗಳ ಒಳಿತಿಗಾಗಿ ಮಾತ್ರ ಕೆಲಸಮಾಡುತ್ತಿದೆ ಎಂಬೆಲ್ಲಾ ರೀತಿಯ ಅಪಪ್ರಚಾರಗಳನ್ನು ಪ್ರತಿಪಕ್ಷಗಳು ನಡೆಸಿದವು. ಹಾಗೆ ನೋಡಿದರೆ ಈ ಬಾರಿ ಪ್ರತಿಪಕ್ಷಗಳು ಸುಳ್ಳು ಹಬ್ಬಿಸುವುದನ್ನೇ ಚುನಾವಣಾ ಕಾರ್ಯತಂತ್ರವಾಗಿ ಬಳಸಿದಂತಿದೆ. ಇದರ ರುಚಿ 2023ರಲ್ಲಿ ಕರ್ನಾಟಕ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲೇ ಕಾಂಗ್ರೆಸ್ ಪಕ್ಷಕ್ಕೆ ಸಿಕ್ಕಿತ್ತು. ಕಾಂಗ್ರೆಸ್ ಪಕ್ಷವು ಪೇಸಿಎಂ, 40 ಪರ್ಸೆಂಟ್ ಕಮಿಷನ್ ಸರಕಾರ ಎಂಬೆಲ್ಲಾ ರೀತಿಯ ಪ್ರಚಾರವನ್ನು ವ್ಯವಸ್ಥಿತವಾಗಿ ನಡೆಸಿದ ಕಾರಣ ಕರ್ನಾಟಕದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಭಾರೀ ಸೋಲು ಉಂಟಾಗಿ ಕಾಂಗ್ರೆಸ್ ಪಕ್ಷವು ಗೆಲುವನ್ನು ಪಡೆದಿತ್ತು. ಚುನಾವಣಾ ಸಂದರ್ಭದಲ್ಲಿ ಮಾಡಿದ್ದ ಯಾವೊಂದು ಆರೋಪವನ್ನೂ ಇದುವರೆಗೂ ಸಾಬೀತುಪಡಿಸಲು ಕಾಂಗ್ರೆಸ್ ಪಕ್ಷಕ್ಕೆ ಸಾಧ್ಯವಾಗಿಲ್ಲ.

ಲೋಕಸಭಾ ಚುನಾವಣೆಗಳು ಮುಗಿದರೂ ಸುಳ್ಳು ಆರೋಪಗಳು ನಿಂತಿಲ್ಲ. ಕೇಂದ್ರ ಸರಕಾರದ ಮೇಲೆ ರಚನಾತ್ಮಕ ಟೀಕೆಗಳನ್ನು ನಡೆಸಲು ಸಾಕಷ್ಟು ವಿಷಯಗಳು ಇವೆ. ಆದರೆ ಪ್ರತಿಪಕ್ಷಗಳು ಕೇವಲ ನಕಾರಾತ್ಮಕ ತಂತ್ರಗಳನ್ನೇ ಹೆಚ್ಚು ಅವಲಂಬಿಸುತ್ತಿರುವುದು ದೇಶದ ಹಿತದೃಷ್ಟಿಯಿಂದ ಏನೇನೂ ಒಳ್ಳೆಯದಲ್ಲ. ಚುನಾವಣೆಯ ನಂತರವೂ ಸುಳ್ಳು ಆರೋಪಗಳು ಮುಂದುವರಿದಿವೆ. ಇತ್ತೀಚೆಗೆ ಲೋಕಸಭೆಯಲ್ಲಿ ನಡೆಸಿದ ಭಾಷಣದಲ್ಲಿ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅಗ್ನಿವೀರ ಅಜಯ್ ಕುಮಾರ್ ವಿಷಯವನ್ನು ಪ್ರಸ್ತಾಪಿಸಿ ಅಗ್ನಿವೀರರು ಸೇವಾ ಸಂದರ್ಭದಲ್ಲಿ ಸಾವಿಗೀಡಾದರೆ ಅವರಿಗೆ ಯಾವುದೇ ರೀತಿಯ ಪರಿಹಾರವನ್ನು ಕೇಂದ್ರ ಸರಕಾರವು ಕೊಡುತ್ತಿಲ್ಲ ಎಂದು ಆರೋಪಿಸಿದರು. ರಾಹುಲ್ ಆರೋಪಕ್ಕೆ ತಕ್ಷಣವೇ ಪ್ರತಿಕ್ರಿಯಿಸಿದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಈಗಾಗಲೇ ಮೃತ ಅಗ್ನಿವೀರನ ಕುಟುಂಬಕ್ಕೆ ಸುಮಾರು 98 ಲಕ್ಷ ರುಪಾಯಿಗಳ ಪರಿಹಾರವನ್ನು ನೀಡಲಾಗಿದೆ ಎಂದು ಸ್ಪಷ್ಟನೆ ನೀಡಿದರು. ಇಷ್ಟಕ್ಕೂ ಸುಮ್ಮನಾಗದ ರಾಹುಲ್ ಗಾಂಧಿ ತಾನು ಮೃತನ ಕುಟುಂಬವನ್ನು ಭೇಟಿ ಮಾಡಿದ ವಿಡಿಯೊವನ್ನು ಮಾಧ್ಯಮಗಳಲ್ಲಿ ಹರಿಯಬಿಟ್ಟು ಮೃತನ ತಂದೆ ತನಗೆ ಯಾವುದೇ ಪರಿಹಾರ ಇದುವರೆಗೂ ಸಿಕ್ಕಿಲ್ಲ ಎಂದು ಹೇಳಿಕೆ ನೀಡಿದ್ದಾರೆ ಎಂದು ಹೇಳಿದರು. ರಾಹುಲ್ ಗಾಂಧಿಯವರ ಆರೋಪಕ್ಕೆ ಭಾರತೀಯ ಸೇನೆಯೇ ಪ್ರತಿಕ್ರಿಯಿಸಿ ಮೃತ ಅಜಯ್ ಕುಟುಂಬಕ್ಕೆ ಕೊಡಬೇಕಾದ 1.65 ಕೋಟಿ ರುಪಾಯಿಗಳ ಪರಿಹಾರದಲ್ಲಿ 98.39 ಲಕ್ಷ ರುಪಾಯಿಗಳನ್ನು ಈಗಾಗಲೇ ಕೊಡಲಾಗಿದ್ದು, ಉಳಿದ ಸರಿಸುಮಾರು 67 ಲಕ್ಷ ರುಪಾಯಿಗಳನ್ನು ಪೊಲೀಸು ಪರಿಶೀಲನೆಯ ನಂತರ ಶೀಘ್ರವೇ ಹಸ್ತಾಂತರಿಸಲಾಗುವುದು ಎಂದು ಸ್ಪಷ್ಟೀಕರಣವನ್ನು ಕೊಡಬೇಕಾಯಿತು. ಅಗ್ನಿಪಥ ಯೋಜನೆಯ ಕುರಿತಾಗಿ ರಾಜಕೀಯ ಪ್ರೇರಿತ ಅಪಪ್ರಚಾರ ಎಷ್ಟು ಅಪಾಯಕಾರಿಯಾಗಿ ಪರಿಣಮಿಸಿದೆ ಎಂದರೆ ಹರಿಯಾಣದ ಜಾಟ್ ಸಮುದಾಯದ ಖಾಪ್ ಪಂಚಾಯತ್ ತನ್ನ ಸಮುದಾಯದ ಯುವಕರು ಅಗ್ನಿಪಥ್ ಯೋಜನೆಯನ್ನು ಸೇರುವುದರ ವಿರುದ್ಧ ನಿಷೇಧವನ್ನು ಹೇರುವಂತಾಗಿದೆ. 2022ರಲ್ಲಿ ಅಗ್ನಿಪಥ ಯೋಜನೆಯನ್ನು ಸೇರಲು 34 ಲಕ್ಷ ವಿದ್ಯಾರ್ಥಿಗಳು ತಮ್ಮನ್ನು ನೊಂದಾಯಿಸಿಕೊಂಡಿದ್ದರು ಎಂದರೆ ಆ ಯೋಜನೆಗೆ ಯಾವ ರೀತಿಯ ಜನಸ್ಪಂದನೆ ಸಿಕ್ಕಿದೆ ಎಂಬುದು ಅರ್ಥವಾಗಬಹುದು.

ಭಾರತದಲ್ಲಿ ಪ್ರಜಾಪ್ರಭುತ್ವವು ಅಪಾಯದಲ್ಲಿದೆ ಎಂದು ಪ್ರತಿಪಕ್ಷಗಳು ಆರೋಪಿಸುತ್ತವೆ. ಆದರೆ ದೇಶದ 11 ರಾಜ್ಯಗಳಲ್ಲಿ ಕಾಂಗ್ರೆಸ್ ಹಾಗೂ ಇಂಡಿ ಅಲಾಯನ್ಸ್ ಪಕ್ಷಗಳು ಅಧಿಕಾರದಲ್ಲಿವೆ. ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ 240 ಸ್ಥಾನಗಳಿಗೆ ಕುಸಿದಾಗ ಹಾಗೂ ಕಾಂಗ್ರೆಸ್ 99 ಸ್ಥಾನಗಳನ್ನು ಗೆದ್ದಾಗ ಪ್ರತಿಪಕ್ಷಗಳು ಇದು ಪ್ರಜಾಪ್ರಭುತ್ವದ ವಿಜಯ ಎಂದು ಬಣ್ಣಿಸುತ್ತಿವೆ. ಭಾರತದಲ್ಲಿ ಪ್ರಜಾತಂತ್ರ ಅಪಾಯದಲ್ಲಿದೆ ಎಂದು ಈ ಹಿಂದೆ ಮಾಡಿರುವ ಆರೋಪಕ್ಕೆ ಅರ್ಥವೆಲ್ಲಿದೆ? ಎಲೆಕ್ಟ್ರಾನಿಕ್ ಮತಯಂತ್ರದ ಬಗ್ಗೆ ಅಪಪ್ರಚಾರವು ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಪ್ರತಿಪಕ್ಷಗಳು ಚುನಾವಣೆಗಳನ್ನು ಸೋತಾಗ ಮಾತ್ರ ಮತಯಂತ್ರದ ವಿಶ್ವಾಸಾರ್ಹತೆಯ ಬಗ್ಗೆ ಪ್ರಶ್ನೆಗಳನ್ನು ಎತ್ತಲಾಗುತ್ತದೆ. ಕರ್ನಾಟಕ, ಹಿಮಾಚಲ ಪ್ರದೇಶ ಹಾಗೂ ತೆಲಂಗಾಣದಲ್ಲಿ ಕಾಂಗ್ರೆಸ್ ಗೆದ್ದಾಗ, ತಮಿಳುನಾಡಿನಲ್ಲಿ ಡಿಎಂಕೆ ಗೆದ್ದಾಗ, ಕೇರಳದಲ್ಲಿ ಕಮ್ಯುನಿಸ್ಟ್ ಗೆದ್ದಾಗ, ದೆಹಲಿ ಹಾಗೂ ಪಂಜಾಬಿನಲ್ಲಿ ಆಮ್ ಆದ್ಮಿ ಪಕ್ಷವು ಗೆದ್ದಾಗ, ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿಯ ಟಿಎಂಸಿ ಗೆದ್ದಾಗ ಮತಯಂತ್ರವನ್ನು ಯಾರೂ ದೂರಲಿಲ್ಲ. ಆದರೆ ಬಿಜೆಪಿಯೂ ರಾಜ್ಯ ಚುನಾವಣೆ ಹಾಗೂ ಕೇಂದ್ರ ಚುನಾವಣೆಗಳನ್ನು ಗೆದ್ದಾಗ ಮಾತ್ರ ಮತಯಂತ್ರಗಳ ಬಗ್ಗೆ ಅಪಸ್ವರಗಳೇಳುತ್ತವೆ. ಮೊನ್ನೆಯ ಲೋಕಸಭಾ ಚುನಾವಣೆಯ ಫಲಿತಾಂಶವು ಪ್ರಕಟವಾದ ನಂತರ ರಾಹುಲ್ ಗಾಂಧಿಯವರು ಇವಿಎಂಗಳು ಬ್ಲ್ಯಾಕ್ ಬಾಕ್ಸಿನಂತೆ ಇದ್ದು ಅವು ಪರಿಶೀಲನೆಗೆ ದಕ್ಕುವುದಿಲ್ಲ ಎಂದು ಹೇಳಿದ್ದಾರೆ. ಆದರೆ 2017ರಲ್ಲಿ ಚುನಾವಣಾ ಆಯೋಗವು ಇವಿಎಂ ಅನ್ನು ಹ್ಯಾಕ್ ಮಾಡಲು ರಾಜಕೀಯ ಪಕ್ಷಗಳಿಗೆ ಪಂಥಾಹ್ವಾನವನ್ನು ಕೊಟ್ಟಾಗ ಕಾಂಗ್ರೆಸ್, ಆಮ್ ಆದ್ಮಿ ಪಾರ್ಟಿ ಸೇರಿದಂತೆ ಯಾವ ಪಕ್ಷಗಳೂ ಇವಿಎಂ ಅನ್ನು ಹ್ಯಾಕ್ ಮಾಡುವ ಪ್ರಯತ್ನವನ್ನೇ ಮಾಡಲಿಲ್ಲ. ಏಕೆಂದರೆ ಇವಿಎಂ ಅನ್ನು ಹ್ಯಾಕ್ ಮಾಡಲು ಸಾಧ್ಯವಿಲ್ಲ ಎಂಬುದು ಅವರಿಗೆ ಚೆನ್ನಾಗಿ ಗೊತ್ತಿತ್ತು.

ದೇಶದ ಉದ್ಯಮಪತಿಗಳನ್ನು ಗುರಿ ಮಾಡಿ ದಾಳಿ ಮಾಡುತ್ತಿರುವುದು ಪ್ರತಿಪಕ್ಷಗಳ ಹವ್ಯಾಸವಾಗಿ ಬಿಟ್ಟಿದೆ. ಭಾರತ ವಿರೋಧಿ ಜಾರ್ಜ್ ಸೋರೋಸ್ ಬೆಂಬಲಿತ ಹಿಂಡೆನ್‌ಬರ್ಗ್ ಹೆಸರಿನ ಶಾರ್ಟ್ ಸೆಲ್ಲಿಂಗ್ ಸಂಸ್ಥೆಯು ಎರಡು ವರ್ಷಗಳ ಮೊದಲು ಅದಾನಿ ಸಂಸ್ಥೆಯ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಮಾಡಿ ವರದಿ ಬಿಡುಗಡೆ ಮಾಡಿದಾಗ, ಮೋದಿ ವಿರುದ್ಧ ಹೊಸ ಅಸ್ತ್ರ ಸಿಕ್ಕಿತೆಂದು ಸಂಭ್ರಮಿಸಿದ್ದ ಪ್ರತಿಪಕ್ಷಗಳು, ಮೋದಿ ಹಾಗೂ ಅದಾನಿ ನಡುವೆ ನೇರ ಸಂಬಂಧವಿದೆಯೆಂದು ಆರೋಪಿಸಿ ಗುಲ್ಲೆಬ್ಬಿಸಿದ್ದವು. ಈ ಅಪಪ್ರಚಾರದಿಂದಾಗಿ ಅದಾನಿ ಸಮೂಹದ ಮಾರಕಟೆ ಮೌಲ್ಯವು 150 ಬಿಲಿಯನ್ ಡಾಲರ್‌ಗಳಷ್ಟು (ಅಂದಿನ ರುಪಾಯಿ ಮೌಲ್ಯದಲ್ಲಿ ಸುಮಾರು 12 ಲಕ್ಷ ಕೋಟಿ ರುಪಾಯಿಗಳು) ಕುಸಿದಿತ್ತು. ಇದರಿಂದಾಗಿ ಅದಾನಿ ಸಂಸ್ಥೆಯ ಮೌಲ್ಯ ಮಾತ್ರವಲ್ಲ, ಆ ಸಂಸ್ಥೆಯ ಮೇಲೆ ಹೂಡಿಕೆ ಮಾಡಿದ್ದ ದೇಶದ ಲಕ್ಷಾಂತರ ಷೇರುದಾರರೂ ಕೋಟ್ಯಂತರ ರುಪಾಯಿಗಳನ್ನು ಕಳೆದುಕೊಳ್ಳಬೇಕಾಯಿತು. ಹಿಂಡೆನ್‌ಬರ್ಗ್ ಆರೋಪಗಳು ಸುಳ್ಳೆಂದು ಸುಪ್ರೀಂ ಕೋರ್ಟಿನಲ್ಲೇ ಸಾಬೀತಾಯಿತು. ಅದಾನಿ ಸಂಸ್ಥೆಯ ಮೌಲ್ಯ ಪುನಃ ಹೆಚ್ಚಾಗಿದೆ. ಇನ್ನು ಅಂಬಾನಿಯನ್ನು ಟೀಕಿಸುತ್ತಿದ್ದವರಲ್ಲಿ ಹೆಚ್ಚಿನವರು ಮೊನ್ನೆ ನಡೆದ ಮುಖೇಶ್ ಅಂಬಾನಿ ಮಗನ ಅದ್ದೂರಿಯ ಮದುವೆಯಲ್ಲಿ ಅತಿಥಿಗಳಾಗಿ ಭಾಗವಹಿಸಿದ್ದಾರೆ!

ಮೇಕ್ ಇನ್ ಇಂಡಿಯಾ ಯೋಜನೆಯನ್ನು ಆರಂಭಿಸಿದಾಗ ಆ ಯೋಜನೆಯನ್ನು ಅಪಹಾಸ್ಯ ಮಾಡಲಾಗಿತ್ತು. ಇಂದು ಮೇಕ್ ಇನ್ ಇಂಡಿಯಾ ಹಾಗೂ ಆತ್ಮ ನಿರ್ಭರ್ ಭಾರತ್ ಯೋಜನೆಗಳು ದೇಶದ ಅಭಿವೃದ್ಧಿ ದರವು 2023-24ರಲ್ಲಿ ಶೇ.8.2ರಷ್ಟು ಗಳಿಗೆ ಏರುವಂತೆ ಮಾಡಿ ಭಾರತವನ್ನು ಜಗತ್ತಿನ ಅತೀ ವೇಗವಾಗಿ ಬೆಳೆಯುವ ಆರ್ಥಿಕತೆಯ ದೇಶವನ್ನಾಗಿಸಿವೆ. ಜಗತ್ತಿನ ಅತೀ ದೊಡ್ಡ ಆರ್ಥಿಕತೆಯುಳ್ಳ ದೇಶಗಳ ಪಟ್ಟಿಯಲ್ಲಿ ಭಾರತವಿಂದು 10ನೇ ಸ್ಥಾನದಿಂದ ಐದನೇ ಸ್ಥಾನಕ್ಕೇರಿದೆ. ಈ ಯೋಜನೆಯ ಭಾಗವಾಗಿ 1.27 ಲಕ್ಷ ನವೋದ್ಯಮಗಳು ದೇಶದಲ್ಲಿ ರೂಪುಗೊಂಡಿವೆ. ಈ ನವೋದ್ಯಮಗಳು ಸುಮಾರು 13 ಲಕ್ಷ ನೇರ ಉದ್ಯೋಗಗಳನ್ನು ಹೊಸದಾಗಿ ಸೃಷ್ಟಿಸಿವೆ. ನವೋದ್ಯಮಗಳು ಭಾರದ ಜಿಡಿಪಿಗೆ ಸುಮಾರು 140 ಶತಕೋಟಿ ಡಾಲರ್‌ಗಳ ಕೊಡುಗೆಯನ್ನು ನೀಡಿವೆ. 2030ರಲ್ಲಿ ಭಾರತದ ರಫ್ತಿಗೆ ಒಂದು ಟ್ರಿಲಿಯನ್ ಡಾಲರ್ ಮೌಲ್ಯವನ್ನು ಈ ನವೋದ್ಯಮಗಳು ಸೇರಿಸಲಿವೆ ಎಂದು ಅಂದಾಜಿಸಲಾಗಿದೆ. 2013-14 ರಲ್ಲಿ ಭಾರತದ ರಫ್ತು 336 ಬಿಲಿಯನ್ ಡಾಲರ್‌ಗಳಾಗಿದ್ದರೆ 2023-24 ರಲ್ಲಿ ಅದು ಶೇ.230ರಷ್ಟು ಅಭಿವೃದ್ಧಿಯನ್ನು ಕಂಡು 778 ಬಿಲಿಯನ್ ಡಾಲರ್‌ಗಳಿಗೇರಿದೆ. 2014ರ ಮೊದಲು ಸೈನಿಕರ ಶೂ, ಯುದ್ಧೋಪಕರಣಗಳು, ಬುಲೆಟ್ ಪ್ರೂಫ್ ಅಂಗಿಗಳು ಹೀಗೆ ಪ್ರತಿಯೊಂದಕ್ಕೂ ವಿದೇಶಗಳನ್ನು ಅವಲಂಬಿಸಿದ್ದ ಭಾರತ 2023-24ರಲ್ಲಿ ದೇಶೀಯವಾಗಿ 1.3 ಲಕ್ಷ ಕೋಟಿ ರುಪಾಯಿಗಳ ಮೌಲ್ಯದ ಯುದ್ಧ ಸಾಮಾಗ್ರಿಗಳನ್ನು ಉತ್ಪಾದಿಸಿದೆ ಎಂದರೆ ಮೇಕ್ ಇನ್ ಇಂಡಿಯಾ – ಆತ್ಮನಿರ್ಭರ್ ಭಾರತ್ ಯೋಜನೆಗಳ ಯಶಸ್ಸನ್ನು ಅರ್ಥಮಾಡಿಕೊಳ್ಳಬಹುದು.

ಕಳೆದ ಹತ್ತುವರ್ಷಗಳಲ್ಲಿ ಸರಕಾರವು ದೇಶದ ಪ್ರತೀ ಮನೆಗೆ ವಿದ್ಯುತ್ ಸಂಪರ್ಕ, ಅಡುಗೆ ಅನಿಲದ ಸಂಪರ್ಕ ಹಾಗೂ ಶೌಚಾಲಯವನ್ನು ಒದಗಿಸಿ ಕೊಡುವಲ್ಲಿ ಯಶಸ್ವಿಯಾಗಿದ್ದು, ಇದೀಗ ಪ್ರತೀ ಮನೆಗೆ ಕುಡಿಯುವ ನೀರಿನ ಸಂಪರ್ಕವನ್ನು ಕೊಡುವ ಕಾರ್ಯವನ್ನು ಜಲ್ ಜೀವನ್ ಮಿಷನ್ ಮೂಲಕ ಮಾಡುತ್ತಿದ್ದು, ದೇಶದ 77.5% ಮನೆಗಳಿಗೆ ಈಗಾಗಲೇ ಸಂಪರ್ಕವನ್ನು ಕಲ್ಪಿಸಲಾಗಿದೆ. 2019ರಲ್ಲಿ ಈ ಯೋಜನೆಯು ಆರಂಭವಾದ ನಂತರ ದೇಶದ 11.75 ಕೋಟಿ ಮನೆಗಳಿಗೆ ಹೊಸದಾಗಿ ನಲ್ಲಿ ನೀರಿನ ಸಂಪರ್ಕವನ್ನು ಕೊಡಲಾಗಿದೆ. ದ್ವಿಗುಣಗೊಂಡ ವಿಮಾನ ನಿಲ್ದಾಣಗಳು, ದೇಶದ ಎಲ್ಲಾ ನಗರಗಳಿಗೆ ವಿಸ್ತರಿಸಿಕೊಂಡ ಮೆಟ್ರೋಗಳು, ವಿದ್ಯುದೀಕರಣಗೊಂಡು ಆಧುನಿಕವಾದ ರೈಲ್ವೇ, ದ್ವಿಗುಣಗೊಂಡ ಹೈವೇಗಳು ಹಾಗೂ ಎಕ್ಸ್‌ಪ್ರೆಸ್‌ವೇಗಳು, ಹೆಚ್ಚಾದ ವಿದೇಶಿ ವಿನಿಮಯ ಸಂಗ್ರಹ ಹಾಗೂ ನೇರ ವಿದೇಶೀ ಹೂಡಿಕೆ, ನಿಯಂತ್ರಣದಲ್ಲಿರುವ ಹಣದುಬ್ಬರ, ದೇಶ ಡಿಜಿಟಲ್ ಇಂಡಿಯಾ ಆಗಿ ಬದಲಾದ ರೀತಿ ಈ ಎಲ್ಲಾ ಧನಾತ್ಮಕ ವಿಷಯಗಳು ಸುದ್ದಿಯಾಗುವುದೇ ಇಲ್ಲ. ಮಿಥ್ಯಗಳ ಮೆರವಣಿಗೆಯಲ್ಲಿ ತಥ್ಯ ಮಂಕಾಗುತ್ತಿದೆ.

(ಲೇಖಕರು : ಹವ್ಯಾಸಿ ಬರಹಗಾರರು)

ಅಭಿಮತ

ಅನೀಶ್.ಬಿ.,ಕೊಪ್ಪ

ನೈತಿಕ ಪ್ರಜ್ಞೆ ಮೀರಿ ಹಾರದಿರಲಿ ಕ್ರೌರ್ಯ

ಭಾರತದಲ್ಲಿ ಸೂರ್ಯೋದಯಕ್ಕೆ ಒಂದೆರಡು ತಾಸಿತ್ತು. ಬಹುಶಃ ಭಾರತೀಯರೆಲ್ಲರೂ ಶಾಂತಿಯಿಂದ ಸುಖನಿದ್ರೆಯಲ್ಲಿದ್ದ ಕ್ಷಣ. ಆದರೆ ವಿಶ್ವದ ದೊಡ್ಡಣ್ಣನಾದ ಅಮೆರಿಕದ ಪೆನ್ಸಿಲ್ವೇನಿಯಾದ ಬಟ್ಲರ್ ಪಟ್ಟಣದಲ್ಲಿ ಅದೊಂದು ಸುಂದರ ಸಂಜೆ. ಒಂದೊಮ್ಮೆ ದೊಡ್ಡಣ್ಣನ ಚುಕ್ಕಾಣಿಯನ್ನು ಹಿಡಿದು, ಜಗತ್ತನ್ನೇ ಕಿರುಬೆರಳಿನಲ್ಲಿ ಆಡಿಸುವಂತೆ ಅಭಿವೃದ್ಧಿಯ ಪಥದಲ್ಲಿ ಅಧಿಕಾರ ನಡೆಸಿದ್ದ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಚುನಾವಣಾ ಪ್ರಚಾರ ಭಾಷಣ ಮಾಡುತ್ತಿದ್ದ ಸಂದರ್ಭ 'ವೋಟ್ ಫಾರ್ ಟ್ರಂಪ್ .. ವೋಟ್ ಫಾರ್ ಟ್ರಂಪ್...' ಎಂದು ಕೇಕೆ ಹಾಕುತ್ತಿದ್ದ ಜನಸ್ತೋಮದ ನಡುವೆಯಿಂದ ಹಾರಿಬಂದ ಅದೊಂದು ಗುಂಡು, ಟ್ರಂಪ್ ಕಿವಿಗೆ ಸವರಿ ಹಾದು ಹೋಯಿತು. ಮುಖ ತುಂಬ ರಕ್ತ ಚಿಮ್ಮಿತು!

ಜಗತ್ತಿಗೆ ಶಾಂತಿ,ಅಹಿಂಸಾವಾದದ ಮಂತ್ರ ಪಠಿಸಿ, ನುಡಿದಂತೆ ನಡೆದ ಮಹಾತ್ಮ ಗಾಂಧೀಜಿಯವರನ್ನೇ ಹುತಾತ್ಮರನ್ನಾಗಿಸಿದ್ದೂ ಕೂಡ ನಾಥೂರಾಮ್ ಗೋಡ್ಸೆ ಎಂಬಾತನ ಪಿಸ್ತೂಲಿನಿಂದ ಚಿಮ್ಮಿದ ಗುಂಡೇ ಅಲ್ಲವೇ? ಅಹಿಂಸೆಯನ್ನೇ ಅಸ್ತ್ರವನ್ನಾಗಿಸಿಕೊಂಡಿದ್ದ ಗಾಂಧೀಜಿಯವರನ್ನೂ ಹಿಂಸೆಯಿಂದ ಕೊಲ್ಲಬೇಕೆಂದು ಕಣ್ಣಟ್ಟಂತಹ ವ್ಯಕ್ತಿಯೋರ್ವ ನಮ್ಮ ನಡುವೆಯೇ ಇದ್ದಾನೆ ಎಂಬುದು ಯಾರಿಗೂ ಗೊತ್ತಿರಲಿಲ್ಲ. ಅಂತೆಯೇ ಡೊನಾಲ್ಡ್ ಟ್ರಂಪ್ ಎಂಬ ಅಮೆರಿಕದ ಅಧ್ಯಕ್ಷನಿಂದ 4 ವರ್ಷಗಳ ಕಾಲ ಆಡಳಿತಕ್ಕೊಳಪಟ್ಟು, ಅದರ ಸಾಧಕ ಬಾಧಕಗಳನ್ನು ಅವಲೋಕಿಸುತ್ತಾ, ಮುಂದೆ ನಡೆಯುವ ಚುನಾವಣೆಯಲ್ಲಿ ಆತ ನಮಗೆ ನಾಯಕನಾಗಬೇಕೋ ಅಥವಾ ಬೇಡವೋ ಎಂದು ನಿರ್ಧರಿಸುವ ಮೊದಲೇ ಟ್ರಂಪ್‌ನ್ನು ಕೊನೆಗಾಣಿಸುವ ಅವಕಾಶಕ್ಕಾಗಿ ಕಾಯ್ದು ಕುಳಿತ ಥಾಮಸ್ ಮ್ಯಾಥ್ಯೂ ಕ್ರೂಕ್ಸ್ ಎಂಬಾತ ನಮ್ಮ ನಡುವೆಯೇ ಇದ್ದಾನೆ ಎಂಬುದು ತಂತ್ರಜ್ಞಾನದ ನಾಗಾಲೋಟದಲ್ಲಿ ಓಡುತ್ತಿರುವ ಈ ಯುಗದಲ್ಲಿಯೂ ಯಾರಿಗೂ ಗೊತ್ತಾಗಲೇ ಇಲ್ಲ!

ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ನಾಯಕನೊಬ್ಬನ ಆಡಳಿತ ಸಮಂಜಸವೆನಿಸಿದಲ್ಲಿ ಆತನನ್ನು ಮತದಾನವೆಂಬ ಶಕ್ತಿಶಾಲಿ ಅಸ್ತ್ರದಿಂದ ದೂರವಿಡುವ ಹಕ್ಕು ಸಂವಿಧಾನಬದ್ಧ ಅಧಿಕಾರ ನಡೆಸುತ್ತಿರುವ ಎಲ್ಲಾ ರಾಷ್ಟ್ರದ ಸರ್ವ ಪ್ರಜೆಗಳಿಗೂ ಇರುತ್ತದೆ. ಹಾಗಾಗಿ ತಮಗೆ ಸೂಕ್ತ ನಾಯಕನಲ್ಲವೆನಿಸಿದಲ್ಲಿ ಆತನನ್ನು ಮತದಾರ ತನ್ನ ನೈತಿಕ ಪ್ರಜ್ಞೆಯಿಂದ ದೂರವಿಡಬೇಕೆ ಹೊರತು, ಸಮಾಜಘಾತುಕ ವ್ಯಕ್ತಿಗಳಂತೆ ಆತನನ್ನು ಗುಂಡಿಟ್ಟು ಕೊಲ್ಲುವುದು ಅತ್ಯಂತ ಅಮಾನವೀಯ ಎಂದೆನಿಸಿಕೊಳ್ಳುತ್ತದೆ. ಶಿಕ್ಷಣ, ತಾಂತ್ರಿಕ ಹಾಗೂ ಇನ್ನಿತರ ರಂಗದಲ್ಲಿ ಮುಂದಿರುವ ರಾಷ್ಟ್ರಗಳಲ್ಲಿ ವಿದ್ಯಾವಂತರೇ ಇಂತಹ ಹೇಯ ಕೃತ್ಯಗಳಲ್ಲಿ ಪಾಲ್ಗೊಳ್ಳುತ್ತಿರುವುದು ನಿಜಕ್ಕೂ ಶೋಚನೀಯ ವಿಚಾರ.

ಶಾಲಾ ಕಾಲೇಜುಗಳಲ್ಲಿ ಲಕ್ಷಗಟ್ಟಲೆ ಶುಲ್ಕವನ್ನು ತುಂಬಿ, ಶೈಕ್ಷಣಿಕವಾಗಿ ವಿದ್ಯಾವಂತರಾಗಿ, ಮುಂದೊಂದು ದಿನ ತನ್ನ ಮಗು ಸಮಾಜದಲ್ಲಿ ಉತ್ತಮ ಸ್ಥಾನವನ್ನು ಪಡೆಯಬೇಕೆಂಬುದು ಪ್ರತಿಯೊಬ್ಬ ಪೋಷಕರ ಕನಸಾಗಿರುತ್ತದೆ. ಆದರೆ ನೈತಿಕ ಪ್ರಜ್ಞೆಯನ್ನು ಎಚ್ಚರಿಸುವ ಶಿಕ್ಷಣದ ಬೀಜ ಬಿತ್ತುವ ಕಾರ್ಯ ನಮ್ಮ ಮನೆಯಿಂದಲೇ ಪ್ರಾರಂಭವಾಗಬೇಕು. ವಿದ್ಯಾರ್ಥಿ ಜೀವನದ ಪ್ರತಿಯೊಂದು ಹಂತಗಳಲ್ಲಿ ನೀರೆರೆದು ಪೋಷಿಸುವರು ಸಿಕ್ಕಾಗ ಮುಂದೊಂದು ದಿನ ನೈತಿಕ ಪ್ರಜ್ಞೆಯು ಹೆಮ್ಮರವಾಗಿ ತಲೆ ಎತ್ತಿ ನಿಲ್ಲುವುದರಲ್ಲಿ ಸಂಶಯವಿಲ್ಲ. ಇತ್ತೀಚಿನ ಭಯೋತ್ಪಾದನೆ, ಉಗ್ರ ಸಂಘಟನೆಯಂತಹ ಸಮಾಜಘಾತುಕ ಕೃತ್ಯಗಳಲ್ಲಿ ತೊಡಗಿಕೊಳ್ಳುವ ಬಹುತೇಕರು ವಿದ್ಯಾವಂತರೇ ಆಗಿರುವುದು ಖೇದಕರ ಸಂಗತಿ. ಹಾಗಾಗಿ ದೇಶದಲ್ಲಿ ನಾಗರಿಕ ಪ್ರಜ್ಞೆ ಹಾಗೂ ಸಮಷ್ಠಿಯ ಪ್ರಜ್ಞೆಯನ್ನು ಬೆಳೆಸುವಂತಹ ಉದಾರ ಮನೋಭಾವವನ್ನು ಬೆಳೆಸುವ ಶಿಕ್ಷಣವನ್ನು ಮಕ್ಕಳಿಗೆ ಕೊಟ್ಟಲ್ಲಿ ಇಂತಹ ಅಮಾನವೀಯ ಕೃತ್ಯಗಳಿಗೆ ಕಡಿವಾಣ ಹಾಕಬಹುದು.

ಪ್ರಥಮ ಮಹಿಳಾ ಪ್ರಧಾನಿ ಎಂದು ಗುರುತಿಸಿ ಕೊಂಡು, ದೇಶದ ನಾರಿಶಕ್ತಿಯನ್ನು ಎತ್ತಿ ಹಿಡಿಯುವ ಮೂಲಕ ದೇಶದಲ್ಲಿ ಅನೇಕ ಬದಲಾವಣೆಗಳನ್ನು ತಂದಂತಹ ದಿಟ್ಟ ಮಹಿಳೆ ಇಂದಿರಾ ಗಾಂಧಿಗೂ ಈ ತರಹದ ಆಕಸ್ಮಿಕ ಸಾವು ತಪ್ಪಿರಲಿಲ್ಲ, ದೇಶದ ಅಭಿ ವೃದ್ಧಿಯ ಬಗ್ಗೆ ಹತ್ತಾರು ಕನಸು ಕಟ್ಟಿಕೊಂಡು ಚುನಾವಣಾ ಪ್ರಚಾರ ದಲ್ಲಿದ್ದ ರಾಜೀವ್ ಗಾಂಧಿಯವರೂ ಕೂಡ ಇದೇ ರೀತಿ ತಮ್ಮ ಪ್ರಾಣ ವನ್ನು ಅರ್ಪಿಸುವಂತಾಯಿತು. ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು, ನಾಯಕತ್ವವನ್ನು ವಿರೋಧಿಸಲು ಗುಂಡೇಟಿನಂತಹ ನೀಚ ಮಾಧ್ಯಮಗಳನ್ನು ಬಳಸಿಕೊಳ್ಳುವ ಯುವ ಸಮೂಹವು ರೂಪು ಗೊಳ್ಳುತ್ತಿರುವುದು ಭವಿಷ್ಯಕ್ಕೆ ಅತ್ಯಂತ ಮಾರಕ ಸಂಗತಿಯಾಗು ವುದಂತೂ ನಿಜ. ಒಬ್ಬ ನಾಯಕನ ಗುಂಡೇಟಿನ ಸಾವು ಆ ವ್ಯಕ್ತಿಯ ಸಾವು ಮಾತ್ರ ಎಂದೆನಿಸಿಕೊಳ್ಳದೆ, ಇಡೀ ವ್ಯವಸ್ಥೆಯ ಲೋಪ ದೋಷ, ಜನರ ಮಾನಸಿಕ ಸ್ಥಿತಿಗತಿ ಎಲ್ಲವನ್ನೂ ಬಿಂಬಿಸುತ್ತದೆ. ಈ ನಿಟ್ಟಿನಲ್ಲಿ ನೈತಿಕ ಪ್ರಜ್ಞೆಯನ್ನೂ ಮೀರಿ ಕ್ರೌರ್ಯದ ಗುಂಡೇಟುಗಳು ಹಾರದಿರಲಿ ಎಂಬುದು ಆರೋಗ್ಯಕರ ಸಮಾಜದ ಆಶಯವಾಗಿರಬೇಕಿದೆ.

ಖಾಸಗಿ ಸಾರಿಗೆ ವ್ಯವಸ್ಥೆಗೆ ಕೊಳ್ಳಿಯಿಟ್ಟಿತಾ ಸರಕಾರ?

ರಾಜ್ಯದ ಶೇ.42ರಷ್ಟು ಮಹಿಳಾ ಪ್ರಯಾಣಿಕರು ಸಕಾಲದಲ್ಲಿ ದೊರಕುವ ಖಾಸಗಿ ಬಸ್ಸುಗಳನ್ನೇ ನಂಬಿಕೊಂಡಿದ್ದಾರೆ. ಸರಕಾರದ ವ್ಯವಸ್ಥೆ ತಲುಪದ ಕಡೆಗೆ ನಾವು ತಲುಪಿ, ಜನಸೇವೆಗೆ ಕಟಿಬದ್ಧರಾಗಿ ನಿಂತಿದ್ದೇವೆ. ಶಕ್ತಿ ಯೋಜನೆಯಲ್ಲಿ ನಮ್ಮನ್ನೂ ಒಳಗೊಂಡು ರಾಜ್ಯಾದ್ಯಂತ ಜಾರಿಯಾಗಬೇಕು ಎನ್ನುತ್ತಿದ್ದಾರೆ.

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ಶತಮಾನಗಳಿಂದಲೂ ಖಾಸಗಿ ಬಸ್ಸುಗಳು ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಜನಸಾಮಾನ್ಯರಿಗಾಗಿ ಓಡಾಡುತ್ತಿವೆ. ಈ ಭಾಗದಲ್ಲಿ ಸಾರಿಗೆ ವಾಹನಗಳಿದ್ದರೂ ಬೆರಳೆಣಿಕೆಯಷ್ಟು ಮಾತ್ರ ಮತ್ತು ವಿದ್ಯಾರ್ಥಿಗಳಿಗೆ, ಅನಾರೋಗ್ಯ ಪೀಡಿತರು ಸರಕಾರಿ ಬಸ್ಸುಗಳನ್ನು ನಂಬಿ ಕುಳಿತರೆ ಮರುಜನ್ಮ ಎತ್ತಿಬರಬೇಕಾದೀತು ಎಂಬಂಥ ಪರಿಸ್ಥಿತಿಯಿದೆ. ಹಾಗಾಗಿ, ಮೂಲದಿಂದಲೂ ಖಾಸಗಿ ಬಸ್ಸುಗಳನ್ನೇ ನಂಬಿಕೊಂಡು ಇಲ್ಲಿನ ಜನರು ಪ್ರಯಾಣಿಸುತ್ತಿದ್ದಾರೆ.

ಮಂಗಳೂರು ನಗರ ಪ್ರದೇಶವೊಂದರಲ್ಲೇ ಸುಮಾರು 300ರಷ್ಟು ಖಾಸಗಿ ಬಸ್ಸುಗಳಿವೆ. ಈ ಭಾಗದಲ್ಲಿ ಹಳ್ಳಿ ಪ್ರದೇಶಕ್ಕೆ ಹೋಗುವ ಸರಕಾರಿ ಬಸ್ಸುಗಳನ್ನು ವಿಚಾರಿಸಿದರೆ, ಒಂದಂಕಿಯನ್ನೂ ದಾಟುವುದಿಲ್ಲ. ಹಾಗಾಗಿ, ಜಿಲ್ಲೆಯಲ್ಲಿ ಖಾಸಗಿ ಬಸ್ಸುಗಳಿಂದ ಒಪ್ಪಂದ ಸಾರಿಗೆ (Contract carriage) ಸೇವೆ ನಡೆಯುತ್ತಿದೆ. ಜತೆಗೆ, ಸರಕಾರಿ ನೌಕರಿಗಳಿಗೆ ಜೋತು ಬೀಳದೆ ಖಾಸಗಿ ಬಸ್ಸು, ವಾಹನಗಳಲ್ಲಿ ಚಾಲಕರಾಗಿ, ನಿರ್ವಾಹಕರಾಗಿ ಮತ್ತು ದಶಕಗಳಿಂದ ದುಡಿಯುತ್ತ ಬಸ್ಸಿನ ಮಾಲೀಕರಾದ ಅನೇಕ ಉದ್ಯೋಗಿಗಳು, ಉದ್ಯಮಿಗಳು ಈ ಮೂಲಕ ನೂರಾರು ಜನರಿಗೆ ಮತ್ತು ಅವರ ಮೇಲೆ ಅವಲಂಬಿತರಾಗಿರುವ ಕುಟುಂಬ ಸದಸ್ಯರ ಜೀವನಕ್ಕೂ ಆಸರೆಯಾಗುತ್ತಿದ್ದಾರೆ. ಈ ಮೂಲಕ ಬದುಕನ್ನೂ ನಾವು ಸಮಾಜವಾದ ಮತ್ತು ಸಾಮಾಜಿಕ ಭದ್ರತೆಯಡಿ ನೋಡುವ ಅಗತ್ಯವಿದೆ.

ಇದೇ ಸಂದರ್ಭದಲ್ಲಿ ಜಾರಿಯಾದ ಶಕ್ತಿ ಯೋಜನೆಯ ಕುರಿತು ಖಾಸಗಿ ಬಸ್ಸುಗಳ ಮಾಲೀಕರು, ಕರೋನಾ ಸಂಕಷ್ಟದಲ್ಲಿ ಪ್ರಯಾಣ ಸೇವೆಯನ್ನು ನಿಲ್ಲಿಸಿ ನಮಗೆ ನಷ್ಟವುಂಟಾಗಿದೆ, ಕೆಲವರು ಉದ್ಯೋಗ ಕಳೆದುಕೊಂಡಿದ್ದಾರೆ. ಈಗ, ಶಕ್ತಿ ಯೋಜನೆಯಿಂದ ನಮಗೆ ಮತ್ತು ನಮ್ಮ ಮೂಲ ಪ್ರಯಾಣಿಕರಿಗೆ ಉಚಿತ ಪ್ರಯಾಣ ಯೋಜನೆಯ ಪ್ರಯೋಜನ ಸಿಗುವುದಿಲ್ಲ. ಆದ್ದರಿಂದ ಸರಕಾರವು, ನಮಗೆ ಸ್ಪಂದಿಸಿದರೆ ನಾವು ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅನುಕೂಲ ಮಾಡಿಕೊಡಲು ಸಿದ್ಧರಿದ್ದೇವೆ. ಆದರೆ, ರಾಜ್ಯ ಸರಕಾರವು ಪ್ರತೀ 3 ತಿಂಗಳಿಗೊಮ್ಮೆ ಕಟ್ಟಿಸಿಕೊಳ್ಳುವ ರಸ್ತೆ ತೆರಿಗೆಯನ್ನು ಮತ್ತು ಮೀನುಗಾರರ ದೋಣಿಗಳಿಗೆ ನೀಡುವಂತೆ ನಮಗೂ ಸಬ್ಸಿಡಿ ದರದಲ್ಲಿ ಡೀಸೆಲ್ ನೀಡಬೇಕು ಎಂದು ಮಾಧ್ಯಮಗಳ ಮೂಲಕ ಸಹ ಸರಕಾರವನ್ನು ಕೇಳಿಕೊಂಡಿದ್ದಾರೆ.

ಖಾಸಗಿ ಬಸ್ಸುಗಳ ಕುರಿತಂತೆ ಗಮನಿಸುವುದಾದರೆ, ಇಡೀ ರಾಜ್ಯದಲ್ಲಿ ಅತಿ ಹೆಚ್ಚು ಖಾಸಗಿ ಬಸ್ಸುಗಳ ಸಂಚಾರ ದಟ್ಟಣೆಯು ಶಿವಮೊಗ್ಗ, ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಜಿಲ್ಲೆಗಳನ್ನು ಒಳಗೊಂಡಿವೆ. ಸುಮಾರು 900ಕ್ಕೂ ಅಧಿಕ ಗ್ರಾಮಗಳಿಗೆ ಸರಕಾರಿ ಬಸ್ಸುಗಳ ಸೇವೆ ಇಲ್ಲದಿರುವ ಜಿಲ್ಲೆಗಳಾಗಿ ಶಿವಮೊಗ್ಗ, ದಾವಣಗೆರೆ ಮತ್ತು ತುಮಕೂರು ಜಿಲ್ಲೆಗಳು ದಾಖಲೆ ಮಾಡಿವೆ ಎನ್ನಬಹುದು. ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿನ ಪರಿಸ್ಥಿತಿಯು ಇದಕ್ಕಿಂತ ಭಿನ್ನವಾಗಿಯೇನು ಇಲ್ಲ.

ಇನ್ನು, ಮೈಸೂರು ಜಿಲ್ಲೆಯ ಸುಮಾರು 10, ಬೆಳಗಾವಿ ಗ್ರಾಮೀಣ ಪ್ರದೇಶದ 30ಕ್ಕೂ ಅಧಿಕ ಮತ್ತು ಕೊಡಗಿನ ಕೆಲ ಹಳ್ಳಿಭಾಗಗಳಿಗೆ ಸಹ ಸರಕಾರಿ ಬಸ್ಸಿನ ಸಂಪರ್ಕ ಇಲ್ಲಿಯವರೆಗೂ ಇಲ್ಲದಿರುವುದು ಕಂಡುಬಂದಿದೆ.

ಒಂದು ಅಂದಾಜಿನ ಪ್ರಕಾರ, ಚಿತ್ರದುರ್ಗ ಜಿಲ್ಲೆಯಲ್ಲಿ 400ರಷ್ಟು ಖಾಸಗಿ ಬಸ್ಸುಗಳ ಸಂಚಾರವನ್ನೇ ಅಲ್ಲಿನ ಜನರು ನಂಬಿಕೊಂಡಿದ್ದಾರೆ, ಸರಕಾರಿ ಬಸ್ಸುಗಳ ಸೇವೆಯೇ ಲಭ್ಯವಿಲ್ಲ. ಕರೋನಾ ನಂತರದಲ್ಲಿ ಇದ್ದ ಕೆಲ ಬಸ್ಸುಗಳು ಸಂಚಾರವನ್ನು ನಿಲ್ಲಿಸಿವೆ. ಇನ್ನು, ಚಿಕ್ಕಮಗಳೂರಿನ ರಿಮೋಟ್ ಪ್ರದೇಶದ ಹಳ್ಳಿಗಳಿಗೆ ಖಾಸಗಿ ಬಸ್ಸುಗಳೇ ಜೀವನಾಡಿ. ಸರಕಾರಿ ಬಸ್ಸುಗಳು ಇತ್ತ ಮುಖ ಮಾಡಿಯೂ ಇಲ್ಲವೆಂದು ಜನರು ನಿಟ್ಟುಸಿರು ಬಿಡುತ್ತಾರೆ. ಸುಮಾರು 200ರಷ್ಟು ಖಾಸಗಿ ಬಸ್ಸುಗಳಲ್ಲಿ ಓಡಾಡುವ ಬಹುತೇಕ ಮಹಿಳೆಯರು ಶಕ್ತಿ ಯೋಜನೆಯಿಂದ ಬಹುದೂರವೇ ಉಳಿದಿದ್ದಾರೆ. ಬೆಂಗಳೂರಿನಂತಹ ನಗರ ಪ್ರದೇಶಗಳಲ್ಲಿನ ಉಳ್ಳವರು ಈ ಯೋಜನೆ ಪಡೆದರೆ ಸಾಕೆ? ನಾವು ಮತ ಹಾಕಿಲ್ಲವೆ? ನಾವು ಮಹಿಳೆಯರು ಅಲ್ಲವೇ? ಎಂದು ಪ್ರಶ್ನಿಸುವ ಮಹಿಳೆಯರನ್ನು ಸರಕಾರ ಗಮನಿಸುವುದೇ? ಎಂಬುದನ್ನು ಬಲ್ಲವರಾರು!

ಶಿವಮೊಗ್ಗ ಜಿಲ್ಲೆಯಿಂದ ಪಕ್ಕದ ದಾವಣಗೆರೆ, ಚಿತ್ರದುರ್ಗ, ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಹಾವೇರಿ ಸೇರಿದಂತೆ ಅನೇಕ ಜಿಲ್ಲೆಗಳಿಗೆ ಖಾಸಗಿ ಬಸ್ಸುಗಳೇ ಆಧಾರ. ಇನ್ನು ಕುಂದಾಪುರ-ಬೈಂದೂರು ವಿಭಾಗದಲ್ಲಿ ಸರಕಾರಿ ಸಾರಿಗೆ ವ್ಯವಸ್ಥೆಗೆ ಹೆಚ್ಚಿನ ಬೇಡಿಕೆಯಿದ್ದರೂ, ಸಂಚರಿಸಲು ಪರವಾನಿಗೆ ಇದ್ದರೂ ಸರಕಾರಿ ಬಸ್ಸುಗಳ ಓಡಾಟ ನಿಲ್ಲಿಸಿರುವುದು ಯಾಕೆ ಎಂದು ಅಲ್ಲಿನ ವಿದ್ಯಾರ್ಥಿಗಳು, ಮಹಿಳೆಯರು ಪ್ರಶ್ನಿಸುತ್ತಿದ್ದಾರೆ. ಸುಮಾರು 10 ಸಾವಿರಕ್ಕೂ ಅಧಿಕ ಶಿಕ್ಷಣಾರ್ಥಿಗಳು ಈ ಮಾರ್ಗವನ್ನು ಬಳಸುತ್ತಿದ್ದು, ಈ ಪೈಕಿ ಬಹುತೇಕ ಮಂದಿ ಕುಂದಾಪುರ ಹಾಗೂ ಬೈಂದೂರಿನ ಗ್ರಾಮೀಣ ಭಾಗದವರಾಗಿದ್ದು, ಬಸ್ರೂರು, ಹಾಲಾಡಿ, ಕೊಕ್ಕರ್ಣೆ, ಸಿದ್ದಾಪುರ, ಶಂಕರನಾರಾಯಣ, ಗೋಳಿಯಂಗಡಿ, ಹೆಬ್ರಿ, ತಲ್ಲೂರು ಮೂಲಕ ಕೊಲ್ಲೂರು, ಹೆಮ್ಮಾಡಿ ಮೂಲಕ ಕೊಲ್ಲೂರು, ನೂಜಡಿ, ಆಲೂರು, ಕೆರಾಡಿ, ಹಳ್ಳಿಹೊಳೆ, ಕಮಲಶಿಲೆ, ಶೇಡಿಮನೆ, ಉಳ್ಳೂರು 74, ನಾಡಾ, ವಕ್ವಾಡಿ, ಗುಲ್ವಾಡಿ, ಉಪ್ಪಿನ ಕುದ್ರು, ಯಡಮೊಗೆ ಅಮಾಸೆಬೈಲು, ಬೈಂದೂರು, ಯೆರುಕೋಣೆ ಹೀಗೆ ನಾನಾ ಗ್ರಾಮಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದಾರೆ.

ಹೀಗೆ ಜನಪ್ರಿಯ ಐದು ಘೋಷಣೆಗಳನ್ನು ಘೋಷಿಸಿ ಅಧಿಕಾರಕ್ಕೆ ಬಂದ ಸರಕಾರ, ಯಾವುದೇ ವಿಷಯದಲ್ಲಿ ಪ್ರಾದೇಶಿಕ ತಾರತಮ್ಯ, ಭೇದ ಭಾವ ತೋರಬಾರದು ಮತ್ತು ಸ್ಥಳೀಯರ ಬೇಡಿಕೆಗಳನ್ನು ಅಲಕ್ಷಿಸಬಾರದು.

ಕರಾವಳಿಯ ಮಕ್ಕಳು, ಮಲೆನಾಡಿನ ಜನರು, ಉತ್ತರ ಕರ್ನಾಟಕದ ಜನಸಾಮಾನ್ಯರು ಸರಕಾರಿ ಘೋಷಣೆಗಳನ್ನು, ವಿವಿಧ ಯೋಜನೆಗಳನ್ನು ಪಡೆಯದಂತಹ ತಪ್ಪೇನು ಮಾಡಿದ್ದಾರೆ? ಎಂಬುದನ್ನಾದರೂ ಅಧಿಕಾರಿಗಳು, ಇಲಾಖೆಯವರು ಸ್ಪಷ್ಟಪಡಿಸಬೇಕು.

ನಾನು ಇಲ್ಲಿಯವರೆಗೆ ಸರಕಾರಿ ಬಸ್ಸುಗಳನ್ನೇ ನೋಡಿಲ್ಲ ಸ್ವಾಮಿ. ನಮ್ಮೂರ್ಗೆ ಖಾಸಗಿ ಬಸ್ಸು ಮಾತ್ರವೇ ಬರೋದು. ನಾವೂ ಸಾಲಿನಲ್ಲಿ ನಿಂತ್ಕಂಡೇ ಓಟು ಹಾಕಿ ಬಂದಿರೋದು, ಆದ್ರೆ ನಮ್ಗೆ ಕೊಡಾಕಿಲ್ಲ ಅಂತಾರೆ ಫ್ರೀ ಬಸ್ಸು ಎನ್ನುವ ಮಹಿಳೆಯರಿಗೆ ಶಕ್ತಿ ಯೋಜನೆಯನ್ನು ಸರಕಾರ ಹೇಗೆ ಒದಗಿಸಬಲ್ಲದು?

ಶಿವಮೊಗ್ಗ, ದಾವಣಗೆರೆ, ತುಮಕೂರು, ಕೋಲಾರ, ಬಳ್ಳಾರಿ, ಬೆಳಗಾವಿ, ಕಲ್ಯಾಣ ಕರ್ನಾಟಕ (ಇದರ 8 ಜಿಲ್ಲೆಗಳ ವ್ಯಾಪ್ತಿಗಳಲ್ಲಿನ 120ಕ್ಕೂ ಹೆಚ್ಚು ಗ್ರಾಮಗಳಿಗೆ ಇನ್ನೂ ಸಾರಿಗೆ ವ್ಯವಸ್ಥೆಯೇ ತಲುಪಿಲ್ಲದಿರುವ ವರದಿಗಳು ಪ್ರಕಟವಾಗಿವೆ.) ಜಿಲ್ಲೆಗಳಲ್ಲಿ ಪ್ರಯಾಣಿಸುವ ಇವರಿಗೆಲ್ಲ ಯಾವ ಸೇವೆಯ ಮೂಲಕ ಶಕ್ತಿ ಯೋಜನೆಯನ್ನು ಆಳುವ ಸರಕಾರ ಕೊಟ್ಟ ಮಾತಿನಂತೆ ತಲುಪಿಸಬಲ್ಲದು?

ಜನಸಾಮಾನ್ಯರ ನಿತ್ಯದ ಬದುಕಿನಲ್ಲಿ ಪ್ರಯಾಣವೆಂಬುದು ಒಂದು ಪ್ರಮುಖ ಭಾಗವಾಗಿ ಹೋಗಿದೆ. ಅದು ಹಳ್ಳಿಗಳಲ್ಲಿ ಸಂತೆಪೇಟೆಗೆ ಹೋಗುವುದಿರಬಹುದು, ನಗರಪಟ್ಟಣಗಳಿಗೆ ಆರೋಗ್ಯ ತಪಾಸಣೆ, ಹೆಚ್ಚಿನ ಚಿಕಿತ್ಸೆಗೆ ಹೋಗುವುದಿರಬಹುದು ಮತ್ತು ಪ್ರಮುಖವಾಗಿ ನಮ್ಮ ಮಕ್ಕಳು ತಮ್ಮ ಶಾಲಾಕಲಿಕೆಗಾಗಿ ಪಕ್ಕದಲ್ಲಿನ ನಗರಕ್ಕೆ ಹೋಗುವುದಿರಬಹುದು, ಇದಕ್ಕೆಲ್ಲ ಪ್ರಮುಖ ಆಧಾರವಾಗಿ ನಿಲ್ಲುವುದು ಸಾರಿಗೆ ವ್ಯವಸ್ಥೆ ಮಾತ್ರ.

ಅಂತಾರಾಜ್ಯ ಪ್ರಯಾಣ, ವೋಲ್ವೋ, ಹವಾ ನಿಯಂತ್ರಿತ ಬಸ್‌ಗಳಲ್ಲಿ ಉಚಿತ ಪ್ರಯಾಣದ ಶಕ್ತಿ ಯೋಜನೆ ಅನ್ವಯಿಸುವುದಿಲ್ಲ. ಕೇವಲ ಸರಕಾರಿ ಕೆಂಪು ಬಣ್ಣದ ಸಾರಿಗೆ ವಾಹನಗಳಿಗೆ ಮಾತ್ರ ಎಂಬ ನಿಬಂಧನೆಗಳು ವಿಧಿಸಲ್ಪಟ್ಟವು. ಸರಿಸುಮಾರು 27 ಸಾವಿರದಷ್ಟು ನಿಗಮದ ವಾಹನಗಳು 25 ಲಕ್ಷ ಕಿ.ಮೀ.ಗಳ ನಿತ್ಯದ ಸೇವೆ ಕೊಡುತ್ತಿವೆ ಎಂದು ಅಂದಾಜಿಸಲಾಗಿದೆ. ಇವುಗಳನ್ನು ಮಾತ್ರವೇ ನಂಬಿ ರಾಜ್ಯದ ಗ್ರಾಮೀಣ ಭಾಗದ ಜನರು ತಮ್ಮ ನಿತ್ಯ ಪ್ರಯಾಣಗಳನ್ನು ಹಮ್ಮಿಕೊಳ್ಳುವುದಾದರೆ ಅವರ ಗತಿಯೇನು ಎಂಬುದನ್ನು ಸಾರಿಗೆ ಇಲಾಖೆಯವರು ಗಂಭೀರವಾಗಿ ಯೋಚಿಸಬೇಕು. ಯಾಕೆಂದರೆ, ರಾಜ್ಯದಲ್ಲಿ ಸುಮಾರು 8 ಸಾವಿರಕ್ಕೂ ಅಧಿಕ ಖಾಸಗಿ ಬಸ್‌ಗಳಿದ್ದು, ಸರಕಾರಿ ಬಸ್ಸುಗಳು ಹೋಗದ, ಸೇವೆ ನೀಡದ, ಅತ್ಯಂತ ದುರ್ಗಮ ಮಾರ್ಗಗಳಿರುವ ಹಳ್ಳಿಗಳಿಗೆ ತಮ್ಮ ಸಾರಿಗೆ ಸೇವೆ ನೀಡುತ್ತಿವೆ. ಇದರಲ್ಲಿ ಮಹಿಳೆಯರು ಮತ್ತು ಶಾಲಾಮಕ್ಕಳೇ ಅಧಿಕ ಸಂಖ್ಯೆಯಲ್ಲಿ ಪ್ರಯಾಣಿಸುತ್ತಿರುವುದು ಕೂಡ ಸರಕಾರಿ ಸಾರಿಗೆ ವ್ಯವಸ್ಥೆಯ ವಿಫಲತೆಗೆ ಹಿಡಿದ ಕೈಗನ್ನಡಿಯಾಗಿದೆ.

ಕಾನೂನಾತ್ಮಕವಾಗಿ ಇದನ್ನು ಗಮನಿಸಿದರೆ, ಈ ಸಮಸ್ಯೆ ಬಹಳ ಹಿಂದಕ್ಕೆ ಹೋಗುತ್ತದೆ. ರಾಜ್ಯವನ್ನು ಮರುವಿಂಗಡಣೆ ಮಾಡುವ ಹಂತದಲ್ಲೇ ಈ ಖಾಸಗಿ-ಸರಕಾರಿ ಸಾರಿಗೆ ಎಂಬ ದ್ವಂದ್ವಗಳು ಹುಟ್ಟಿಕೊಂಡವು. ಈ ಹಂತದಲ್ಲಿ ಹುಬ್ಬಳ್ಳಿ-ಧಾರವಾಡ ಸಾರಿಗೆ ವ್ಯವಸ್ಥೆಯನ್ನು ರಾಷ್ಟ್ರೀಕರಣ ಮಾಡಿ 1957ರಲ್ಲಿ ರಾಜ್ಯ ಸಾರಿಗೆ ವ್ಯವಸ್ಥೆ ಎಂದು ಘೋಷಿಸಲಾಯಿತು.

1959ರಲ್ಲಿ ಆನೇಕಲ್ ನ್ಯಾಷನಲ್ ಸ್ಕೀಮ್ ಅಂತ ಮಾಡಲಾಯಿತು. 1960ರಲ್ಲಿ ಬೆಂಗಳೂರು ಸ್ಕೀಮ್ ಜಾರಿಗೊಳಿಸಲಾಯಿತು. ಈ ಹಂತದಲ್ಲೇ ಬಿಟಿಎಸ್ ಯೋಜನೆಯನ್ನು ಮಹಾನಗರ ಪಾಲಿಕೆ ಅಡಿಯಲ್ಲಿ ಜಾರಿಗೊಳಿಸಲಾಯಿತು ಮತ್ತು 25ಕಿ.ಮೀ. ವ್ಯಾಪ್ತಿಯಲ್ಲಿ ಸಂಚರಿಸುವಂತೆ 2014ರಲ್ಲಿ ನಿಯಮಗಳಲ್ಲಿ ಬದಲಾವಣೆ ತರಲಾಯಿತು. ಹೀಗೆ ಒಂದರ ಹಿಂದೆ ಒಂದರಂತೆ ಜಾರಿಯಾಗುತ್ತ ಬಂದ ರಾಷ್ಟ್ರೀಕೃತ ಯೋಜನೆಗಳು 20ಕ್ಕೂ ಹೆಚ್ಚು ಎಂಬುದನ್ನು ಇಲ್ಲಿ ಗಮನಿಸಬೇಕು. ಇದರಲ್ಲಿ ಮಂಗಳೂರು ಯೋಜನೆಯೂ ಸೇರಿದ್ದು, 1968ರಲ್ಲಿ ರಾಷ್ಟ್ರೀಕೃತವಾಯಿತು. 1968ಕ್ಕೂ ಮೊದಲು ಸ್ಥಳೀಯ ಖಾಸಗಿ ವಾಹನಗಳಲ್ಲಿ ಜನರಿಗೆ ಸಾರಿಗೆ ಸೇವೆ ನೀಡುತ್ತಿದ್ದುದನ್ನು, ಮೋಟಾರು ಕಾಯ್ದೆ-1988 ಜಾರಿಗೊಳಿಸಿ ಇದರಲ್ಲಿಯೂ ಹಿಂದಿನದನ್ನು ಮುಂದುವರಿಸಲಾಯಿತು.

ಹೀಗೆ ರಾಷ್ಟ್ರೀಕೃತ ಯೋಜನೆಯಿಂದ ಖಾಸಗಿ ಸಾರಿಗೆಯವರಿಗೆ ಬಹುದೊಡ್ಡ ಹೊಡೆತ ಬಿದ್ದಿದ್ದಂತೂ ಸತ್ಯ. ಲೋಕಲ್ ಪ್ರಯಾಣಗಳನ್ನು ಮಾಡಬಹುದು ಆದರೆ, ರಾಷ್ಟ್ರೀಕೃತಗೊಂಡ ಪ್ರಯಾಣದ ದಾರಿ (Route)ಗಳಲ್ಲಿ ಸಂಚರಿಸುವಂತಿಲ್ಲ ಎಂಬ ನಿಯಮದಿಂದ ಖಾಸಗಿಯವರ ಎಲ್ಲ ಪರವಾನಿಗೆಗಳು ರದ್ದಾದವು. ಇವರನ್ನು ಉಳಿಸಲಿಕ್ಕೆ ಸರ್ವೋಚ್ಚ ನ್ಯಾಯಾಲಯ ನೀಡಿದ ಸಲಹೆಯಂತೆ 2002ರಲ್ಲಿ ಸರಕಾರವು ಸಮನ್ವಯ ಮಾರ್ಗಸೂಚಿ ಮೂಲಕ ಪರಿಹರಿಸಲು ಯತ್ನಿಸಿ, 14-01- 2002 ಕಟ್ ಆಫ್ ಪರ್ಮಿಟ್ ಡೇಟ್ ನಿಗದಿಪಡಿಸಿತು. ಇದಾದ ನಂತರವೂ ಹೆಚ್ಚುಕಡಿಮೆ 3 ಸಾವಿರದಷ್ಟು ಖಾಸಗಿ ಪರವಾನಿಗೆ ಪಡೆದ ವಾಹನಗಳ ಪರಿಸ್ಥಿತಿ ಅತಂತ್ರಗೊಂಡಿದ್ದರಿಂದ, ರಾಜ್ಯ ಸರಕಾರವು 07-03-2019ಕ್ಕೆ ಅಧಿಸೂಚನೆ ಹೊರಡಿಸಿ, ಇಡೀ ಕರ್ನಾಟಕ ರಾಜ್ಯವನ್ನು ರಾಷ್ಟ್ರೀಕೃತವನ್ನಾಗಿ (stage carriage) ಘೋಷಿಸಲಾಯಿತು. ಉಳಿದಂತೆ ಖಾಸಗಿಯವರಿಗೆ ಒಪ್ಪಂದ ಸಾರಿಗೆ ಸಂಚಾರ (Contract Carriage) ಮಾಡಲು ಅವಕಾಶ ನೀಡಲಾಯಿತು. ಹಾಗಾಗಿ, ಈ ನಿಗಮ ಸಾರಿಗೆ ಮತ್ತು ಖಾಸಗಿ ಬಸ್ಸುಗಳ ನಡುವೆ ಹೊಂದಾಣಿಕೆಯ ತಿಕ್ಕಾಟ ನಡೆದೇ ಇದೆ. ಇದು ಹೇಗಿದೆಯೆಂದರೆ, ನಾವು ಜನರಿಗೆ ಸಾರಿಗೆ ಸೇವೆ ನೀಡುವುದಿಲ್ಲ ಮತ್ತು ನೀಡುವವರನ್ನು ಕೆಲಸ ಮಾಡಲು ಬಿಡುವುದಿಲ್ಲ ಎಂಬಂತಹ ಧೋರಣೆಯು, ಕತ್ತು ಹಿಸುಕಿಸುವ ಕೆಲಸವಲ್ಲವೇ?

ಕೇಂದ್ರವೇ ಇರಲಿ, ರಾಜ್ಯ ಸರಕಾರವೇ ಇರಲಿ, ತನ್ನ ಯಾವುದೇ ಒಂದು ಬೃಹತ್ ಯೋಜನೆಗಳಿಗೆ ಸರಕಾರ-ಸಾರ್ವಜನಿಕ-ಖಾಸಗಿ ಸಹಭಾಗಿತ್ವದಡಿಯಲ್ಲಿ ಚಾಲನೆ ನೀಡುವುದನ್ನು ನಾವೆಲ್ಲ ನೋಡುತ್ತಲೇ ಇದ್ದೇವೆ. ಆದರೆ, ರಾಜ್ಯದ ಖಾಸಗಿ ವಾಹನಗಳ ಮಾಲೀಕರ ಅಥವಾ ನಡೆಸುವವರ ವಿಚಾರದಲ್ಲಿ ಮಾತ್ರ ತಾರತಮ್ಯ ಧೋರಣೆ ಯಾಕೆ ಎಂಬುದೇ ಇಲ್ಲಿನ ನೈತಿಕ ಪ್ರಶ್ನೆ.

ಈ ಖಾಸಗಿ ಬಸ್ಸುಗಳನ್ನು ಓಡಿಸುವವರು ನಮ್ಮದೇ ನಾಗರಿಕರು ಮತ್ತು ಅವುಗಳಲ್ಲಿ ಸಂಚರಿಸುವವರು ನಮ್ಮದೇ ಮತದಾರರು ಎಂಬುದನ್ನು ಇಲಾಖೆ ಮತ್ತು ಸರಕಾರ ಸರಿಯಾಗಿ ಅರಿತುಕೊಂಡಲ್ಲಿ ಉಂಟಾಗಿರುವ ಸಂಚಾರ ವ್ಯತ್ಯಯದ ಬಿಕ್ಕಟ್ಟುಗಳು ಪರಿಹಾರ ಕಾಣಬಲ್ಲವು. ಸಮಸ್ಯೆ ಎಲ್ಲಿದೆ? ಯಾವ ಸ್ವರೂಪದ್ದು? ಪರಿಹರಿಸಲು ಸಾಧ್ಯವೇ? ಹೊಂದಾಣಿಕೆ ಮಾರ್ಗದಿಂದ ಪರಿಹರಿಸಬಹುದೇ? ಇತ್ಯಾದಿ ಅಂಶಗಳನ್ನು ಪರಿಶೀಲಿಸಿ, ಸಂಬಂಧಿಸಿದವರ ಬಳಿ ಕುಳಿತು ಚರ್ಚಿಸಿ ಸರಿಪಡಿಸಿಕೊಂಡರೆ, ಸಂಚಾರ ವ್ಯವಸ್ಥೆಯ ಸವಾಲುಗಳಿಗೆ ಪರಿಹಾರ ಖಂಡಿತ ಸಾಧ್ಯವಿದೆ. ಇದರಿಂದ ಮಕ್ಕಳ ಶಿಕ್ಷಣ, ನಾಗರಿಕರ ಪ್ರಯಾಣ ಎಲ್ಲವೂ ಸುಗಮವಾಗುವುದೆಂಬ ಕಳಕಳಿ ನಮ್ಮದು. ಇದೇ ಕಾಳಜಿಯನ್ನು ಸರಕಾರ ಮತ್ತು ಸಾರಿಗೆ ಇಲಾಖೆ ಹೊಂದುವಂತಾಗಲಿ ಎಂಬುದು ನಮ್ಮೆಲ್ಲರ ಅಪೇಕ್ಷೆ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 204

ಸಮಾಚಾರ ಸಣ್ಣದಲ್ಲ

ಮಾಸಾಂತ್ಯದಲ್ಲಿ ಬಿಜೆಪಿ ಆಡಳಿತ ರಾಜ್ಯಗಳ ಸಭೆ

ದೆಹಲಿ: ಬಿಜೆಪಿ ಆಡಳಿತದ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯನ್ನು ಇದೇ ಮಾಸಾಂತ್ಯದಲ್ಲಿ ಹಮ್ಮಿಕೊಳ್ಳಲು ಮುಂದಾಗಿರುವ ಪಕ್ಷದ ವರಿಷ್ಠರು, ಲೋಕಸಭೆ ಚುನಾವಣೆಯ ಫಲಿತಾಂಶ ಕುರಿತು ಚರ್ಚೆ ನಡೆಸಲಿದ್ದಾರೆ ಎನ್ನಲಾಗಿದೆ. ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜ್‌ನಾಥ್ ಸಿಂಗ್, ಕೇಂದ್ರ ಆರೋಗ್ಯ ಸಚಿವರೂ ಆಗಿರುವ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜಗತ್ ಪ್ರಕಾಶ್ ನಡ್ಡಾ ಸಭೆಯಲ್ಲಿ ಉಪಸ್ಥಿತರಿರುವರು. 2024ರ ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಕಳಪೆ ಸಾಧನೆ ಕುರಿತು ಪರಾಮರ್ಶೆ ನಡೆಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಚಿನ್ನ ಕಳವು ಆರೋಪಕ್ಕೆ ಟ್ರಸ್ಟ್ ತಿರುಗೇಟು

ಕೇದಾರನಾಥ: ಕೇದಾರನಾಥ ದೇವಾಲಯದಿಂದ 228 ಕೆ.ಜಿ ಚಿನ್ನಾಭರಣ ಕಳುವಾಗಿದೆ ಎಂದು ಆರೋಪಿಸಿರುವ ಜ್ಯೋತಿಷ್‌ಪೀಠದ ಶಂಕರಾಚಾರ್ಯ ಸ್ವಾಮಿ ಅವಿಮುಕ್ತೇಶ್ವರಾನಂದ ಸರಸ್ವತಿ ಬೇಕಿದ್ದರೆ ನ್ಯಾಯಾಲಯದಲ್ಲಿ ದಾವೆ ಹೂಡಲಿ ಎಂದು ಬದರಿ- ಕೇದಾರಾನಾಥ ದೇವಾಲಯ ಸಮಿತಿ ಅಧ್ಯಕ್ಷ ಅಜೇಂದ್ರ ಅಜಯ್ ಸವಾಲು ಹಾಕಿದ್ದಾರೆ. ಕೇದಾರನಾಥ ಧಾಮದಿಂದ ಚಿನ್ನ ನಾಪತ್ತೆಯಾಗಿದೆ ಎಂಬ ಸ್ವಾಮಿ ಅವಿಮುಕ್ತೇಶ್ವರಾನಂದ ಸರಸ್ವತಿ ಮಾಡಿರುವ ಆರೋಪ ದುರದೃಷ್ಟಕರ. ಅವರು ರಾಜಕೀಯ ಅಜೆಂಡಾವನ್ನು ಮುಂದಿಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ ಎನಿಸುತ್ತದೆ. ವೃಥಾ ಹೇಳಿಕೆ ನೀಡುವ ಬದಲು ಸಂಬಂಧಪಟ್ಟ ಪ್ರಾಧಿಕಾರವನ್ನು ಸಂಪರ್ಕಿಸಿ, ತನಿಖೆ ನಡೆಸುವಂತೆ ಮನವಿ ಮಾಡಲಿ ಅಥವಾ ಸಾಕ್ಷ್ಯಗಳಿದ್ದಲ್ಲಿ ಕೋರ್ಟ್ ಮುಂದಿಡಲಿ ಎಂದು ಅಜಯ್ ಹೇಳಿದ್ದಾರೆ.

ಎನ್‌ಟಿಎ ಸುಧಾರಣೆ; 37 ಸಾವಿರ ಸಲಹೆ!

ದೆಹಲಿ: ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ(ಎನ್‌ಟಿಎ)ಯಲ್ಲಿ ಸುಧಾರಣೆ ತರುವುದಕ್ಕಾಗಿ ರಚನೆ ಆಗಿರುವ ಇಸ್ರೋ ಮಾಜಿ ಮುಖ್ಯಸ್ಥ ಆರ್. ರಾಧಾಕೃಷ್ಣನ್ ನೇತೃತ್ವದ ಕೇಂದ್ರದ ಉನ್ನತ ಮಟ್ಟದ ಪರೀಕ್ಷಾ ಸುಧಾರಣಾ ಸಮಿತಿ ನೀಡಿದ ಆಹ್ವಾನದ ಮೇರೆಗೆ 37 ಸಾವಿರಕ್ಕೂ ಹೆಚ್ಚು ಸಲಹೆಗಳು ಬಂದಿವೆ. ಪರೀಕ್ಷಾ ಪ್ರಕ್ರಿಯೆ ಗುಣಮಟ್ಟ ಹೆಚ್ಚಳ, ದಾಖಲೆಗಳ ಭದ್ರತೆ, ಶಿಷ್ಟಾಚಾರ ಪಾಲನೆ ಮತ್ತು ಎನ್‌ಟಿಎ ಕಾರ್ಯಾಚರಣೆಯಲ್ಲಿ ಅಗತ್ಯ ಸುಧಾರಣೆಗಳನ್ನು ತರಲು ಸ್ಥಾಪಿಸಲಾದ ಸಮಿತಿ ಸಲಹೆ-ಅಭಿಪ್ರಾಯಗಳನ್ನು ಕಳುಹಿಸಿಕೊಡುವಂತೆ ಮನವಿ ಮಾಡಿತ್ತು. ಪರೀಕ್ಷೆಯ ಪ್ರಕ್ರಿಯೆ ಬಗ್ಗೆ ವಿಶ್ವಾಸ ಕಳೆದುಕೊಂಡಿದ್ದ ವಿದ್ಯಾರ್ಥಿಗಳಿಂದಲೇ ಹೆಚ್ಚಿನ ಸಲಹೆಗಳು ಬಂದಿವೆ. ಕೃಪಾಂಕ ಮತ್ತು ಪರೀಕ್ಷಾ ಕೇಂದ್ರದಲ್ಲಿನ ಮೂಲಸೌಕರ್ಯಕ್ಕೆ ಸಂಬಂಧಿಸಿ ಮಾರ್ಗಸೂಚಿ ಹೊರಡಿಸಬೇಕೆಂದು ಸಲಹೆ ನೀಡಲಾಗಿದೆ. ಹೆಚ್ಚಿನ ಪಾರದರ್ಶಕತೆ ನಿರೀಕ್ಷಿಸುತ್ತಿರುವ ಸಲಹೆಗಳೂ ಬಂದಿದೆ.

ವಿಮಾನ ನಿಲ್ದಾಣ ನೌಕರಿಗೆ ಭಾರಿ ನೂಕು ನುಗ್ಗಲು

ಮುಂಬೈ: ಇಲ್ಲಿನ ವಿಮಾನ ನಿಲ್ದಾಣದಲ್ಲಿ ಖಾಲಿ ಇದ್ದ 2,216 ನೌಕರಿಗಳಿಗೆ ನೇರ ಸಂದರ್ಶನಕ್ಕೆ ಆಹ್ವಾನ ನೀಡಿದ್ದು, ಉದ್ಯೋಗ ಅರಸಿ 25,000ಕ್ಕೂ ಅಧಿಕ ಆಕಾಂಕ್ಷಿಗಳು ನೇರ ಸಂದರ್ಶನಕ್ಕೆ ಧಾವಿಸಿದ್ದರು. ಪರಿಣಾಮ, ಕಾಲ್ತುಳಿದಂತಹ ಪರಿಸ್ಥಿತಿ ಎದುರಾಗಿತ್ತು. ಸಂದರ್ಶನಕ್ಕೆಂದು ಬಂದವರ ಸಂಖ್ಯೆ ನೋಡಿಯೇ ವಿಮಾನ ನಿಲ್ದಾಣದ ಅಧಿಕಾರಿಗಳು ಆತಂಕಕ್ಕೊಳಗಾದರು. ಉದ್ಯೋಗಾಕಾಂಕ್ಷಿಗಳನ್ನು ನಿಯಂತ್ರಿಸಲು ಕಷ್ಟವಾಗಿ ಪರದಾಡಿದರು. ನಿರೀಕ್ಷೆ ಮೀರಿ ಆಕಾಂಕ್ಷಿಗಳು ಧಾವಿಸಿದ್ದರಿಂದ ವಿಮಾನ ನಿಲ್ದಾಣ ಸಿಬ್ಬಂದಿ ಸಂದರ್ಶನಕ್ಕೆ ಮಾಡಿಕೊಂಡಿದ್ದ ವ್ಯವಸ್ಥೆ ಏನೇನೂ ಸಾಲದಂತಾಗಿತ್ತು.

ವಿಮಾನ ನಿಲ್ದಾಣದಲ್ಲಿ ಲಗ್ಗೇಜ್‌ಗಳ ನಿರ್ವಹಣೆ, ಬ್ಯಾಗೇಜ್ ಬೆಲ್ಟ್, ಮೆಟ್ಟಿಲು ಜೋಡಿಸಿದ ಟ್ರಕ್-ಟ್ರ್ಯಾಕ್ಟರ್‌ಗಳ ಚಾಲನೆ-ನಿರ್ವಹಣೆ, ರ‍್ಯಾಂಪ್ ನಿರ್ವಹಣೆ ಮೊದಲಾದ ಕನಿಷ್ಠ 20 ಸಾವಿರ ರು.,ಗರಿಷ್ಠ 30 ಸಾವಿರ ರು. ವೇತನದ ಕೆಲಸಗಳಿಗೆ ನೇರ ಸಂದರ್ಶನಕ್ಕೆ ಕರೆಯಲಾಗಿತ್ತು. 10ನೇ ತರಗತಿ ವ್ಯಾಸಂಗ ಮಾಡಿದ ಸದೃಢ ದೇಹದ ಯುವಜನರಿಗೆ ಉದ್ಯೋಗ ಅವಕಾಶವಿತ್ತು.

{ ಜೈರಾಮ್ ರಮೇಶ್ } ಎಐಸಿಸಿ ಪ್ರಧಾನ ಕಾರ್ಯದರ್ಶಿ

ಇ.ಡಿ, ಐಟಿ, ಸಿಬಿಐ ದಾಳಿಗಳ ಪರಿಣಾಮ ಭಾರತ 2014ರಿಂದಲು ಕಡಿಮೆ ಬಂಡವಾಳ ಹೂಡಿಕೆಯ ಸಮಸ್ಯೆಯ ಚಕ್ರದಲ್ಲಿ ಸಿಲುಕಿದೆ. ಕಡಿಮೆ ಹೂಡಿಕೆ ಯಿಂದ ಮಧ್ಯಮ ಹಾಗೂ ದೀರ್ಘಾವಧಿ ಜಿಡಿಪಿ ವೃದ್ಧಿಯ ದರ ಕ್ಷೀಣಿಸುವಂತೆ ಮಾಡುವುದಲ್ಲದೇ ವೇತನ ಮತ್ತು ಬಳಕೆದಾರರ ಖರೀದಿ ಸಾಮರ್ಥ್ಯದ ಬೆಳವಣಿಗೆಯನ್ನೂ ಕುಂಠಿತಗೊಳಿಸುತ್ತದೆ.

ಜೂ.29ರಂದು 215 | ಜು.16ರಂದು 307 ಪ್ರಕರಣ ಪತ್ತೆ | ಪ್ರತಿನಿತ್ಯ ಶೇ.17ರಷ್ಟು ಏರಿಕೆ

ಅಮೆರಿಕದಲ್ಲಿ ಮತ್ತೆ ಕರೋನಾ ಅಲೆ

ವಾಷಿಂಗ್ಟನ್: ಕೋವಿಡ್-19 ಪೂರ್ಣ ಕೊನೆಗೊಂಡಿಲ್ಲ, ಸೋಂಕು ಹರಡುವುದೂ ನಿಂತಿಲ್ಲ. ಅಮೆರಿಕ ದೇಶವನ್ನು ಈಗಲೂ ಕರೋನಾ ಸೋಂಕು ಕಾಡುತ್ತಲೇ ಇದೆ.

ಅಮೆರಿಕದ 4 ದೊಡ್ಡ ದೊಡ್ಡ ರಾಜ್ಯಗಳು, 3 ಸಣ್ಣ ರಾಜ್ಯಗಳು ಕರೋನಾ ವೈರಾಣು ಸೋಂಕಿನ ಹೊಸ ರೂಪಾಂತರದಿಂದ ತೊಂದರೆಗೆ ಒಳಗಾಗಿವೆ. ಈ ಏಳೂ ರಾಜ್ಯಗಳಲ್ಲಿ ಸೋಂಕಿತರ



ಸಂಖ್ಯೆಯಲ್ಲಿ ದಿನೇ ದಿನೇ ಏರಿಕೆ ಆಗುತ್ತಿದೆ. ಜುಲೈ 3ನೇ ವಾರದಲ್ಲಿ ದಿನದಲ್ಲಿ 300ಕ್ಕೂ ಅಧಿಕ ಪ್ರಕರಣ ದಾಖಲಾಗುತ್ತಿವೆ. ಜೂ.29ಕ್ಕೆ ಹೋಲಿಸಿದರೆ ಕರೋನಾ ಸೋಂಕು ಪ್ರಕರಣದಲ್ಲಿ ಶೇ.17ರಷ್ಟು ಏರಿಕೆ ಕಂಡು ಬಂದಿದೆ. ಜೂ.29ರಂದು 215 ಸೋಂಕಿನ ಪ್ರಕರಣ ದಾಖಲಾಗಿದ್ದವು, ಜು.16ರಂದು 307 ಕರೋನಾ ಸೋಂಕು ಪ್ರಕರಣ ದಾಖಲಾಗಿವೆ ಎಂದು ವರದಿ ಯಾಗಿದೆ. ಜೀವಹಾನಿ ಮಾಡದೇ ಇದ್ದರೂ ಸೋಂಕು ವೇಗವಾಗಿ ಹರಡುತ್ತಿದೆ. ಇದುವೇ ಆರೋಗ್ಯ ಇಲಾಖೆಯ ಆತಂಕವನ್ನು ಹೆಚ್ಚಿಸಿದೆ. ರೋಗ ನಿಯಂತ್ರಣ ಮತ್ತು ತಡೆಗಟ್ಟುವಿಕೆಗೆ ಸರಕಾರ ಸುರಕ್ಷಿತ ಮಾರ್ಗಸೂಚಿಗಳನ್ನು ಪ್ರಕಟಿಸಿದ್ದು, ಕಡ್ಡಾಯ ಪಾಲನೆಗೆ ನಿರ್ದೇಶಿಸಿದೆ.

2023ರ ಚಳಿಗಾಲಕ್ಕೆ ಹೋಲಿಸಿದರೆ ಈಗ ಕೋವಿಡ್-19 ಪ್ರಕರಣಗಳು ಯುಎಸ್‌ನಲ್ಲಿ ಶೇ.27ರಷ್ಟು ಏರಿಕೆಯಾಗಿವೆ. ಈ ದಿಢೀರ್ ಏರಿಕೆಗೆ ಕಾರಣ ಕರೋನಾ ವೈರಸ್‌ನ ಎರಡು ಹೊಸ ರೂಪಾಂತರಗಳಾಗಿವೆ. ಎಫ್‌ಎಲ್‌ಐಆರ್‌ಟಿ ಮತ್ತು ಎಲ್‌ಬಿ.1 ರೂಪಾಂತರ ವೈರಸ್ ತಳಿಗಳು ವೇಗವಾಗಿ ಹರಡುವ ಗುಣ ಹೊಂದಿವೆ. ಮೇನಲ್ಲಿ ಈ ಎರಡೂ ರೂಪಾಂತರಿ ವೈರಾಣುಗಳು 7 ರಾಜ್ಯಗಳಲ್ಲಿ ಹೆಚ್ಚಾಗಿ ಕಂಡು ಬಂದಿವೆ. ಆದರೆ, ತೀವ್ರ ಆರೋಗ್ಯ ಸಮಸ್ಯೆ ಉಂಟು ಮಾಡಿಲ್ಲ. ಹಾಗೆಂದು ನಿರ್ಲಕ್ಷಿಸುವಂತಿಲ್ಲ ಎಂದು ಆರೋಗ್ಯ ಅಧಿಕಾರಿಗಳು ಮುನ್ನೆಚ್ಚರಿಕೆ ಮಾತು ಹೇಳಿದ್ದಾರೆ.



ಹೊಸ ಕೋವಿಡ್ ಲಕ್ಷಣ

ಹೊಸ ರೂಪಾಂತರಿ ತಳಿ ವೈರಾಣುಗಳ ಸೋಂಕಿನ ಸಾಮಾನ್ಯ ಲಕ್ಷಣವೆಂದರೆ ಜ್ವರ, ಕೆಮ್ಮು, ಸುಸ್ತು, ರುಚಿ ಮತ್ತು ವಾಸನೆ ಗ್ರಹಿಕೆ ನಷ್ಟ, ಗಂಟಲೂತ, ಸ್ನಾಯುನೋವು, ತಲೆ ನೋವು, ಉಸಿರಾಟ ಸಮಸ್ಯೆ ಸೇರಿದೆ. ಎದೆನೋವು, ಕುತ್ತಿಗೆ ನೋವು ಮತ್ತು ಊತ, ಕೆಮ್ಮಿದಾಗ ರಕ್ತ ಬರುವುದು ಕೂಡ ಸೋಂಕಿನ ಲಕ್ಷಣಗಳಾಗಿವೆ. ಹೈರಿಸ್ಕ್ ಪ್ರದೇಶದಲ್ಲಿರುವ ಜನರು ಆದ್ಯತೆ ಮೇರೆಗೆ ಹೊಸದಾಗಿ ಲಸಿಕೆ ಹಾಕಿಸಿಕೊಳ್ಳಬೇಕು, ಸಾರ್ವಜನಿಕ ಪ್ರದೇಶದಲ್ಲಿ ಮಾಸ್ಕ್ ಧರಿಸಬೇಕು ಎಂದು ಅರೋಗ್ಯ ಅಧಿಕಾರಿಗಳು ಸೂಚಿಸಿದ್ದಾರೆ.

7 ರಾಜ್ಯ ಕಟ್ಟೆಚ್ಚರ

ಕ್ಯಾಲಿಫೋರ್ನಿಯಾ, ಅರ್ಕಾನ್ಸಾಸ್, ಫ್ಲೋರಿಡಾ, ಮೇರಿಲ್ಯಾಂಡ್, ನವಾಡಾ, ಒರೆಗಾನ್, ಟೆಕ್ಸಾಸ್‌ನಲ್ಲಿ ಅತಿಹೆಚ್ಚು ಸೋಂಕಿನ ಪ್ರಕರಣ ದಾಖಲಾಗಿದ್ದು, ತ್ಯಾಜ್ಯದ ನೀರಿನ ಮೂಲಕ ಸೋಂಕು ಹರಡುತ್ತಿರು ವುದು ಪತ್ತೆಯಾಗಿದೆ. 2024ರ ಏ.13ರ ಮಾಹಿತಿ ಪ್ರಕಾರ ಕ್ಯಾಲಿಫೋರ್ನಿಯಾದಲ್ಲಿ 1.1 ಕೋಟಿಗೂ ಅಧಿಕ ಕೋವಿಡ್ ಪ್ರಕರಣ ದಾಖಲಾಗಿದ್ದರೆ, ಟೆಕ್ಸಾಸ್‌ನಲ್ಲಿ 90 ಲಕ್ಷ, ಫ್ಲೋರಿಡಾದಲ್ಲಿ 80 ಲಕ್ಷ, ಮೆರಿಲ್ಯಾಂಡ್ ಮತ್ತು ಅರ್ಕಾನ್ಸಾಸ್‌ನಲ್ಲಿ ತಲಾ 10 ಲಕ್ಷ, ಒರೆಗಾನ್‌ನಲ್ಲಿ 9.93 ಲಕ್ಷ, ನವಾಡಾದಲ್ಲಿ 9.23 ಲಕ್ಷ ಪ್ರಕರಣ ದಾಖಲಾಗಿವೆ.

8 ವರ್ಷ ಹಳೆಯ ಗುದ್ದೋಡು ಪ್ರಕರಣ | ಪಾದಚಾರಿಗೆ ಮರ್ಸಿಡಿಸ್ ಕಾರು ಡಿಕ್ಕಿ

1.98 ಕೋಟಿ ರು. ಪರಿಹಾರ !

ದೆಹಲಿ: ಎಂಟು ವರ್ಷಗಳ ಹಿಂದೆ 17 ವರ್ಷದ ಬಾಲಕನೊಬ್ಬ ತಂದೆಯ ಮರ್ಸಿಡಿಸ್ ಬೆಂಜ್ ಕಾರು ಚಲಾಯಿಸಿ ಯುವಕನ ಸಾವಿಗೆ ಕಾರಣವಾಗಿದ್ದ 'ಹಿಟ್ ಅಂಡ್ ರನ್'(ಗುದ್ದೋಡು) ಪ್ರಕರಣದಲ್ಲಿ ನ್ಯಾಯಾಲಯ ಸಂತ್ರಸ್ತನ ಕುಟುಂಬಕ್ಕೆ 1.98 ಕೋಟಿ ರು. ಪರಿಹಾರ ನೀಡುವಂತೆ ಆದೇಶಿಸಿದೆ.

30 ದಿನಗಳೊಳಗಾಗಿ ಪರಿಹಾರದ ಹಣವನ್ನು ಸಂತ್ರಸ್ತರಿಗೆ ನೀಡುವಂತೆ ವಿಮಾ ಕಂಪನಿಗೆ ಆದೇಶಿಸಿರುವ ಮೋಟಾರ್ ಅಪಘಾತ ಟ್ರಿಬ್ಯೂನಲ್, ಪರಿಹಾರದ ಮೊತ್ತವನ್ನು ವಿಮಾ ಕಂಪನಿಯು ಬೇಕಿದ್ದರೆ ಬಳಿಕ ಆರೋಪಿಯ ತಂದೆಯಿಂದ ಪಡೆದುಕೊಳ್ಳಬಹುದು ಎಂದೂ ಹೇಳಿದೆ.

2016ರ ಮೇ 4ರಂದು ದೆಹಲಿಯ ಸಿಬಿಲ್ ಲೈನ್ಸ್ ಪ್ರದೇಶದಲ್ಲಿ 17 ವರ್ಷದ ಅಪ್ರಾಪ್ತ ಚಲಾಯಿಸುತ್ತಿದ್ದ ಮರ್ಸಿಡಿಸ್ ಕಾರು, ರಸ್ತೆ ಪಕ್ಕ ನಡೆದುಕೊಂಡು ಹೋಗುತ್ತಿದ್ದ ಸಿದ್ದಾರ್ಥ ಶರ್ಮಾ ಎಂಬ ಯುವಕನಿಗೆ ಡಿಕ್ಕಿ ಹೊಡೆದಿತ್ತು. ಅತಿ ವೇಗವಾಗಿ ಬಂದ ಕಾರು, ರಸ್ತೆ ಬಿಟ್ಟು ಪಾದಚಾರಿ ಮಾರ್ಗ ಹತ್ತಿತ್ತು. ಅಪಘಾತದ ರಭಸಕ್ಕೆ ಕಾರಿನ ಟಯರ್ ಸ್ಫೋಟಗೊಂಡಿತ್ತು. ಘಟನೆಯಲ್ಲಿ ಸಿದ್ದಾರ್ಥ ಶರ್ಮಾ ಸಾವನ್ನಪ್ಪಿದ್ದರು. ರಸ್ತೆ ಬದಿಯ ಅಂಗಡಿಯಿಂದ ನೂಡಲ್ಸ್ ಖರೀದಿಸಿ ಹೊರಟಿದ್ದ ಸಿದ್ದಾರ್ಥ್‌ಗೆ ವೇಗದಲ್ಲಿ ಬರುತ್ತಿದ್ದ ಕಾರಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲೇ ಇಲ್ಲ. ಪ್ರಕರಣ ಸಂಬಂಧ ಮೋಟಾರ್ ಆ್ಯಕ್ಸಿಡೆಂಟ್ ಕ್ಲೇಮ್

ಟ್ರಿಬ್ಯೂನಲ್(ಮಾಕ್ಟ್) 1.21 ಕೋಟಿ ರು. ಪರಿಹಾರ ಹಾಗೂ ಅಪಘಾತವಾದಾಗಿನಿಂದ ಈವರೆಗಿನ ಬಡ್ಡಿ ಮೊತ್ತ 77.61 ಲಕ್ಷ ರು. ಗಳನ್ನು ಪಾವತಿಸುವಂತೆ ಆದೇಶಿಸಿದೆ.

ಸಿದ್ದಾರ್ಥ 2015ರಲ್ಲಿ 25 ಸಾವಿರ ರು. ವೇತನ ಪಡೆಯುತ್ತಿದ್ದರು. ಉನ್ನತ ಶಿಕ್ಷಣವನ್ನೂ ಪಡೆಯುತ್ತಿದ್ದರು. ಅಪಘಾತಕ್ಕೆ ಕೆಲವೇ ದಿನ ಮುನ್ನ ಅವರಿಗೆ ವಾರ್ಷಿಕ 10 ಲಕ್ಷ ರು. ವೇತನ ಪ್ಯಾಕೇಜ್‌ನ ಕೆಲಸ ಕೂಡ ಸಿಕ್ಕಿತ್ತು ಎಂಬ ಅಂಶಗಳನ್ನೆಲ್ಲಾ ಪರಿಗಣಿಸಿದ ಟ್ರಿಬ್ಯೂನಲ್, ದೊಡ್ಡ ಮೊತ್ತದ ಪರಿಹಾರ ನೀಡುವಂತೆ ಆದೇಶಿಸಿದೆ.

ಅಪಘಾತವೆಸಗಿದ ಆರೋಪಿಯ ತಂದೆ ಮನೋಜ್ ಅಗರ್ವಾಲ್, ಮಗ ಚಾಲನಾ ಪರವಾನಗಿ ಇಲ್ಲದಿದ್ದರೂ ಕಾರು ಚಲಾಯಿಸುತ್ತಿದ್ದ ಬಗ್ಗೆ ಹಾಗೂ ಹಿಂದೆ ಕೂಡ ಈ ರೀತಿಯ ಅಪಘಾತ ಮಾಡಿರುವ ಬಗ್ಗೆ ಮಾಹಿತಿ ಇದ್ದರೂ ಮಗನ ದುಷ್ಕೃತ್ಯಗಳಿಗೆ ಕುಮ್ಮಕ್ಕು ನೀಡುತ್ತಿದ್ದರು ಎಂಬುದನ್ನು ಟ್ರಿಬ್ಯೂನಲ್ ಗಮನಿಸಿದೆ. ಮನೋಜ್ ಅಗರ್ವಾಲ್ ಹೆಸರನ್ನೂ ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಲಾಗಿದೆ.

23ರ ಕೇಂದ್ರ ಬಜೆಟ್‌ನತ್ತ ಕುತೂಹಲ

ಆಂಧ್ರ ಸೇರಿ 5 ರಾಜ್ಯಗಳಿಗೆ ವಿಶೇಷ ಅನುದಾನ?

ದೆಹಲಿ: ಆರ್ಥಿಕ ಬೆಳವಣಿಗೆಯಲ್ಲಿ ಹಿಂದೆ ಬಿದ್ದಿರುವ 5 ರಾಜ್ಯಗಳು ಮತ್ತು 1 ಕೇಂದ್ರಾಡಳಿತ ಪ್ರದೇಶ ವಿಶೇಷ ಆರ್ಥಿಕ ಅನುದಾನ ನೀಡುವ ಬಗ್ಗೆ ಕೇಂದ್ರ ಸರಕಾರ ಚಿಂತನೆ ನಡೆಸಿದೆ ಎನ್ನಲಾಗಿದೆ. ಬಿಹಾರ, ಆಂಧ್ರಪ್ರದೇಶ, ಜಾರ್ಖಂಡ್, ಛತ್ತೀಸಗಢ ಮತ್ತು ಒಡಿಶಾ ಹಾಗೂ ಕೇಂದ್ರಾಡಳಿತ ಪ್ರದೇಶ ಜಮ್ಮು-ಕಾಶ್ಮೀರ ಹೆಚ್ಚಿನ ಅನುದಾನ ಪಡೆಯುವ ಸಾಧ್ಯತೆ ಇದೆ ಎನ್ನಲಾಗಿದೆ.

ಎನ್‌ಡಿಎ ಮೈತ್ರಿಕೂಟದ ಪ್ರಮುಖ ಪಾಲುದಾರ ಸಂಯುಕ್ತ ಜನತಾದಳ(ಜೆಡಿಯು) ಆಡಳಿತದ ಬಿಹಾರ ವಿಶೇಷ ಸ್ಥಾನಮಾನಕ್ಕಾಗಿ ಒತ್ತಾಯಿಸುತ್ತಿದೆ. ಮುಂದಿನ ವರ್ಷ ವಿಧಾನಸಭಾ ಚುನಾವಣೆ ನಡೆಯಲಿ ರುವ ಹಿನ್ನೆಲೆ ಹೆಚ್ಚಿನ ಅನುದಾನ ಸಿಗುವುದು ಖಚಿತ ಎನ್ನಲಾಗಿದೆ.

ದೆಹಲಿಗೆ ಮಂಗಳವಾರ ತೆರಳಿ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿದ್ದ ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು, ತಮ್ಮ ರಾಜ್ಯದಲ್ಲಿನ ಕೆಲವು ಬೃಹತ್ ಅಭಿವೃದ್ಧಿ ಯೋಜನೆಗಳನ್ನು ಪೂರ್ಣಗೊಳಿಸಲು ವಿಶೇಷ ಆರ್ಥಿಕ ಅನುದಾನಕ್ಕಾಗಿ ಒತ್ತಾಯಿಸಿದ್ದಾರೆ ಎಂದು ತಿಳಿದುಬಂದಿದೆ. ನೀತಿ ಆಯೋಗ ಕೆಲ ಮಾನದಂಡ ನಿಗದಿಪಡಿಸಿದ ನಂತರ ಯಾವುದೇ ರಾಜ್ಯಕ್ಕೆ ವಿಶೇಷ ಸ್ಥಾನಮಾನ ಸಾಧ್ಯವಿಲ್ಲ. ಆದರೆ, ಎನ್‌ಡಿಎ ಸರಕಾರ ಜು.23ರ ಬಜೆಟ್‌ನಲ್ಲಿ 5-6 ರಾಜ್ಯಗಳಿಗೆ ವಿಶೇಷ ಅನುದಾನ ನೀಡುವ ಸಾಧ್ಯತೆ ತಳ್ಳಿಹಾಕುವಂತಿಲ್ಲ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ತಂದೆ, ಮಗ-ಸೊಸೆ ದುರ್ಮರಣ, ಬಾಲಕಿ ಗಂಭೀರ

ಕಾಶ್ಮೀರ ಕಣಿವೆಗೆ ಬಿದ್ದ ಕಾರು, ಬೆಂಗಳೂರಿನ ಮೂವರ ಸಾವು

ಶ್ರೀನಗರ: ಪ್ರವಾಸಕ್ಕೆಂದು ಶ್ರೀನಗರಕ್ಕೆ ತೆರಳಿದ್ದ ಬೆಂಗಳೂರಿನ ಕುಟುಂಬ ಪ್ರವಾಸ ಮಾಡುತ್ತಿದ್ದ ಕಾರು ಸೀದಾ ಕಮರಿಗೆ ಬಿದ್ದಿದ್ದು ಮೂವರು ಸಾವನ್ನಪ್ಪಿದ್ದು ಓರ್ವ ಮಗು ಜೀವನ್ಮರಣ ಹೋರಾಟ ನಡೆಸುತ್ತಿದೆ.

ಘಟನೆ ಸೋಮವಾರ ನಡೆದಿದ್ದು, ಕಾರಿನ ಚಾಲಕ ಹ್ಯಾಂಡ್‌ಬ್ರೇಕ್ ಹಾಕುವುದನ್ನು ಮರೆತಿದ್ದೇ ಅವಘಡಕ್ಕೆ ಕಾರಣ ಎನ್ನಲಾಗಿದೆ. ಬೆಂಗಳೂರು ನಿವಾಸಿಗಳಾದ ತಂದ್ರಾ ದಾಸ್ (44), ಮೊನಾಲಿಸಾ ದಾಸ್ (41), ಹಾಗೂ ಚಂಪಕ್ ದಾಸ್ (67) ಸಾವನ್ನಪ್ಪಿದ್ದು, 8 ವರ್ಷದ ಬಾಲಕಿ ಗಂಭೀರವಾಗಿ ಗಾಯಗೊಂಡಿದ್ದಾಳೆ.

ಸೋನಾಮಾರ್ಗದಿಂದ ಜೀರೋ ಪಾಯಿಂಟ್‌ಗೆ ಕಾರು ಸಾಗುತ್ತಿತ್ತು. ಈ ವೇಳೆ ಪಾಣಿಮಠ ಪ್ರದೇಶದಲ್ಲಿ ಕಾರೊಂದು ಕೆಟ್ಟು ನಿಂತಿದ್ದನ್ನು ನೋಡಿದ ಕಾರಿನ ಚಾಲಕ ವಿಚಾರಿಸಲು ತೆರಳಿದ್ದಾರೆ. ಆದರೆ, ತಮ್ಮ ಕಾರಿನ ಹ್ಯಾಂಡ್ ಬ್ರೇಕ್ ಹಾಕಲು ಮರೆತಿದ್ದಾರೆ. ಪರಿಣಾಮ, ಕಾರು ಚಾಲನೆ

ಗೊಂಡು ಝೋಜಿಲಾ ಪಾಸ್‌ನ ಆಳದ ಕಮರಿಗೆ ಬಿದ್ದಿದೆ. ಕಾರಿನಲ್ಲಿದ್ದವರಲ್ಲಿ ಮೂವರು ದುರ್ಮರಣಕ್ಕೀಡಾಗಿದ್ದಾರೆ.

ಜಮ್ಮು-ಕಾಶ್ಮೀರ ಪೊಲೀಸ್, ಸೇನಾಪಡೆ, ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ಐಟಿಬಿಪಿ ಮತ್ತು ಸಿಆರ್‌ಪಿಎಫ್ ಜಂಟಿ ಕಾರ್ಯಾಚರಣೆ ನಡೆಸಿ ಮೃತದೇಹಗಳನ್ನು ಮೇಲೆತ್ತಿದ್ದಾರೆ. ಗಂಭೀರವಾಗಿ ಗಾಯಗೊಂಡಿರುವ ಬಾಲಕಿಯನ್ನು ಸ್ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪುನರ್ ರಚಿತ ಆಯೋಗದಲ್ಲಿ ಮಿತ್ರ ಪಕ್ಷಗಳಿಗೆ ಸ್ಥಾನ

ನೀತಿ ಆಯೋಗ ಮರುರಚನೆ: ಎಚ್‌ಡಿಕೆ, ನಿರ್ಮಲಾ ಸೇರ್ಪಡೆ

ದೆಹಲಿ: ನೀತಿ ಆಯೋಗವನ್ನು ಕೇಂದ್ರ ಸರಕಾರ ಮರುರಚನೆ ಮಾಡಿದ್ದು, ಎನ್‌ಡಿಎ ಮಿತ್ರಪಕ್ಷಗಳ ನಾಯಕರನ್ನೂ ಸೇರ್ಪಡೆ ಮಾಡಿದೆ.

ಪುನರ್ ರಚನೆಯಾದ ನೀತಿ ಆಯೋಗದಲ್ಲೀಗ ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷರಾಗಿದ್ದರೆ, ಆರ್ಥಿಕ ತಜ್ಞ ಸುಮನ್ ಕೆ.ಬೆರ್ರಿ ಉಪಾಧ್ಯಕ್ಷರಾಗಿದ್ದಾರೆ. ನಾಲ್ವರು ಪೂರ್ಣಾವಧಿ ಸದಸ್ಯರು, 15 ಮಂದಿ ಕೇಂದ್ರ ಸಚಿವರು ಇದ್ದಾರೆ. ಎನ್‌ಡಿಎ ಮಿತ್ರಪಕ್ಷಗಳಿಗೂ ಅವಕಾಶ ಮಾಡಿಕೊಡ ಲಾಗಿದೆ. ವಿಜ್ಞಾನಿ ವಿ.ಕೆ. ಸಾರಸ್ವತ್, ಕೃಷಿ ಅರ್ಥಶಾಸ್ತ್ರಜ್ಞ ರಮೇ ಶ್ ಚಾಂದ್, ಶಿಶು ಆರೋಗ್ಯ ತಜ್ಞ ವಿ.ಕೆ.ಪೌಲ್, ಅರ್ಥಶಾಸ್ತ್ರಜ್ಞ ಅರವಿಂದ್ ವಿರ್ಮಾನಿ ಆಯೋಗದ ಪೂರ್ಣಾವಧಿ ಸದ ಸ್ಯರಾಗಿದ್ದಾರೆ. ಕೇಂದ್ರ ಸಚಿವರಾದ ರಾಜ ನಾಥ ಸಿಂಗ್(ರಕ್ಷಣೆ), ಅಮಿತ್ ಶಾ(ಗೃಹ), ಶಿವ ರಾಜ್ ಸಿಂಗ್ ಚೌಹಾಣ್(ಕೃಷಿ), ನಿರ್ಮಲಾ ಸೀತಾರಾಮನ್(ಹಣಕಾಸು) ಪದನಿಮಿತ್ತ ಸದಸ್ಯರಾಗಿದ್ದಾರೆ.

ನಿತಿನ್ ಗಡ್ಕರಿ, ಜೆ.ಪಿ.ನಡ್ಡಾ, ಲಲನ್ ಸಿಂಗ್, ವಿರೇಂದ್ರ ಕುಮಾರ್, ರಾವ್ ಇಂದ್ರಜಿತ್ ಸಿಂಗ್, ಜೌಲ್ ಓರಂ, ಅನ್ನಪೂರ್ಣಾದೇವಿ ಹಾಗೂ ಮಿತ್ರಪಕ್ಷಗಳ ನಾಯಕರೂ, ಕೇಂದ್ರ ಸಚಿವರೂ ಆದ ಎಚ್.ಡಿ.ಕುಮಾರಸ್ವಾಮಿ (ಜೆಡಿಎಸ್), ರಂಜನ್ ಸಿಂಗ್(ಜೆಡಿಯು), ಚೇತನರಾಂ ಮಾಂಝಿ(ಎಚ್‌ಎಎಂ), ಕೆ.ರಾಮಮೋಹನ್ ನಾಯ್ಡು(ಟಿಡಿಪಿ), ಚಿರಾ ಗ್ ಪಾಸ್ವಾನ್ (ಎಲ್‌ಜೆಪಿ) ವಿಶೇಷ ಆಹ್ವಾನಿತರಾಗಿದ್ದಾರೆ.

ನಡ್ಡಾ ಭೇಟಿಯಾದ ಮೌರ್ಯ | ಬಿಜೆಪಿ ರಾಜ್ಯಾಧ್ಯಕ್ಷ ಬದಲು?

ಉ.ಪ್ರ ಯೋಗಿ ಸಂಪುಟಕ್ಕೆ ಸರ್ಜರಿ?

ಲಖನೌ: ಉತ್ತರಪ್ರದೇಶದಲ್ಲಿನ 80 ಲೋಕಸಭಾ ಕ್ಷೇತ್ರಗಳಲ್ಲಿ ಹೆಚ್ಚಿನ ಸ್ಥಾನಗಳ ನಿರೀಕ್ಷೆ ಮಾಡಿದ್ದ ಬಿಜೆಪಿ, ಚುನಾವಣೆಯಲ್ಲಿ ರಾಜ್ಯ ಘಟಕದ ಕಳಪೆ ಪ್ರದರ್ಶನದಿಂದ ಚಿಂತೆಗೀಡಾಗಿದೆ. ಈ ಹಿನ್ನೆಲೆಯಲ್ಲೇ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಸಂಪುಟದಲ್ಲಿ ಬದಲಾವಣೆ ಸಾಧ್ಯತೆ ಇದೆ ಎಂಬ ಸುದ್ದಿ ಹರಿದಾಡುತ್ತಿವೆ.

ಈ ಮಧ್ಯೆ, ಸಿಎಂ ಯೋಗಿ ಜತೆಗಿನ ಡಿಸಿಎಂ ಕೇಶವ ಪ್ರಸಾದ್ ಮೌರ್ಯ ಮುನಿಸು, ಮನಸ್ತಾಪ ಪಕ್ಷದ ವರಿಷ್ಠರ ಅಂಗಳದಲ್ಲಿ ಬುಧವಾರ ಚರ್ಚೆಯಾಗಿವೆ. ಇನ್ನೊಂದೆಡೆ, ಪಕ್ಷದ ರಾಜ್ಯಾಧ್ಯಕ್ಷ ಭುಪೇಂದ್ರ ಚೌಧರಿ ದೆಹಲಿಯಲ್ಲಿ ಪ್ರಧಾನಿ ಮೋದಿ, ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಭೇಟಿಯಾಗಿ ರಾಜಿನಾಮೆ ನೀಡುವ ಇಂಗಿತ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ. ಇನ್ನೊಂದೆಡೆ ಸಿಎಂ ಯೋಗಿ ಆದಿತ್ಯನಾಥ ಹಾಗೂ ಡಿಸಿಎಂ ಮೌರ್ಯ ನಡುವೆ ಶೀತಲ ಸಮರ ಮುಂದುವರಿದಿದೆ. ಮೌರ್ಯ ದೆಹಲಿಯಲ್ಲಿ ಜೆ.ಪಿ.ನಡ್ಡಾ ಅವರನ್ನು ಮಂಗಳವಾರ ಭೇಟಿಯಾಗಿ ಅಸಮಾಧಾನ ತೋಡಿಕೊಂಡಿದ್ದಾರೆ. ರಾಜ್ಯದಲ್ಲಿನ ಉಪ ಚುನಾವಣೆ ಮುಗಿಯುವವರೆಗಾದರೂ ಮನಸ್ತಾಪ ಬಿಟ್ಟು ಪ್ರಚಾರದ ಕಡೆ ಗಮನ ಹರಿಸುವಂತೆ ಅಧ್ಯಕ್ಷರು ನಿರ್ದೇಶನ ನೀಡಿ ಕಳುಹಿಸಿದ್ದಾರೆ ಎನ್ನಲಾಗಿದೆ. ಸದ್ಯಕ್ಕೆ ಸಂಪುಟದಲ್ಲಿ ಬದಲಾವಣೆ ಇಲ್ಲ. ಕೆಲ ದೊಡ್ಡ ಖಾತೆಗಳ ಜವಾಬ್ದಾರಿ ಡಿಸಿಎಂ ಮೌರ್ಯ ಅವರಿಗೆ ನೀಡುವ ಸಾಧ್ಯತೆ ಇದೆ ಎನ್ನಲಾಗಿದೆ.

ಡಿಸಿಎಂ ಮೌರ್ಯ ಮುನಿಸು

ಡಿಸಿಎಂ ಕೇಶವ ಪ್ರಸಾದ್ ಮೌರ್ಯ, ಯಾವ ಸರಕಾರವೂ ಸಂಘಟನೆಗಿಂತ ದೊಡ್ಡದಲ್ಲ, ಯಾವುದೇ ವ್ಯಕ್ತಿಯೂ ಸಂಘಟನೆಗಿಂತ ದೊಡ್ಡವರಲ್ಲ' ಎಂದು ಲಖನೌನಲ್ಲಿ ರಾಜ್ಯ ಬಿಜೆಪಿ ಸಭೆಯಲ್ಲಿ ಹೇಳಿದ್ದರು. ಹಲವು ಸಂಪುಟ ಸಭೆಗಳಿಗೆ ಭಾಗಿಯಾಗದೇ ಸಿಎಂ ಯೋಗಿ ವಿರುದ್ಧ ಮೌರ್ಯ ಅಸಮಾಧಾನ ಹೊರಹಾಕಿದ್ದರು.

ಉತ್ತರ ಪ್ರದೇಶ: ಕಾರ್ಯಕ್ರಮಕ್ಕೆ ಡಿಸಿ ಅನುಮತಿ ನಿರಾಕರಣೆ

ಇಸ್ಲಾಂಗೆ ಮತಾಂತರ- ಸಾಮೂಹಿಕ ವಿವಾಹ

ಲಖನೌ: ಇಸ್ಲಾಂಗೆ ಮತಾಂತರಗೊಂಡ ಇತರೆ ಧರ್ಮದ ಯುವಕ-ಯುವತಿಯರ ಸಾಮೂಹಿಕ ವಿವಾಹ ನಡೆಸಲು ಅನುಮತಿ ನೀಡುವಂತೆ ಇತ್ತೆಹಾದ್-ಎ-ಮಿಲ್ಲತ್ ಕೌನ್ಸಿಲ್ (ಐಎಂಸಿ) ಮನವಿ ಮಾಡಿದ್ದು, ಲಖನೌ ಜಿಲ್ಲಾಡಳಿತ ಅನುಮತಿ ನಿರಾಕರಿಸಿದೆ.

ಆದರೆ, ಏನೇ ಆದರೂ 5 ಜೋಡಿಗಳ ಮದುವೆ ಮಾಡಿಸಿಯೇ ಸಿದ್ಧ. ಕಾನೂನಿನ ವ್ಯಾಪ್ತಿಯಲ್ಲೇ ಸಾಮೂಹಿಕ ವಿವಾಹ ನಡೆಸುತ್ತೇವೆ ಎಂದು ಐಎಂಸಿ ಮುಖ್ಯಸ್ಥ ಮೌಲಾನಾ ತೌಕೀರ್ ರಜಾಖಾನ್ ಬುಧವಾರ ಸುದ್ದಿಗಾರರಿಗೆ ತಿಳಿಸಿದ್ದಾರೆ. ಐಎಂಸಿ ರಾಜ್ಯ ಉಸ್ತುವಾರಿ ನದೀಮ್ ಖುರೇಷಿ ಮಾತನಾಡಿ, ಮತಾಂತರ ಬಳಿಕ 5 ಜೋಡಿಗಳ ನಿಕಾಹ್ ಕಾರ್ಯಕ್ರಮ ಆಯೋಜಿಸಿದ್ದೆವು. ಆದರೆ, ಜಿಲ್ಲಾಡಳಿತ ಅವಕಾಶ ನೀಡಿಲ್ಲ. ಆದರೆ ಈಗ ಸಿಟಿ ಮ್ಯಾಜಿಸ್ಟ್ರೇಟ್ ಅವರ ಅನುಮತಿ ಕೋರಿ ಮನವಿ ಸಲ್ಲಿಸಿದ್ದೇವೆ ಎಂದು ಹೇಳಿದ್ದಾರೆ. ಇಸ್ಲಾಂಗೆ ಮತಾಂತರಗೊಂಡ ಹಿಂದೂ ಯುವಕ-ಯುವತಿಯರ ವಿವಾಹಗಳನ್ನು ನಡೆಸಲಾಗುವುದು ಮತ್ತು ಮೊದಲ ಹಂತದಲ್ಲಿ ಐದು ಜೋಡಿಗಳ ವಿವಾಹಗಳನ್ನು ನಡೆಸಲಾಗುವುದು ಎಂದು ಐಎಂಸಿ ಮುಖ್ಯಸ್ಥರು ಹಿಂದೆಯೇ ಹೇಳಿದ್ದರು. ಜು.21ರ ಬೆಳಗ್ಗೆ 11 ಗಂಟೆಗೆ ಖಲೀಲ್ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಸಾಮೂಹಿಕ ನಿಕಾಹ್ ಸಮಾರಂಭ ಹಮ್ಮಿಕೊಂಡಿದ್ದರು.



ಆಷಾಡ ಏಕಾದಶಿ ಸಂದರ್ಭ ಮಹಾರಾಷ್ಟ್ರದ ಪಂಢರಪುರದಲ್ಲಿರುವ ವಿಠಲ-ರುಕ್ಮಿಣಿ ದೇವಾಲಯಕ್ಕೆ ಮುಖ್ಯಮಂತ್ರಿ ಏಕನಾಥ ಶಿಂದೆ ದಂಪತಿ ಬುಧವಾರ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥಿಸಿದರು. ಈ ಸಂದರ್ಭ ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ, ಗೋವಾ ರಾಜ್ಯಗಳಿಂದ ಲಕ್ಷಾಂತರ ಭಕ್ತರು ಪಂಡರಪುರಕ್ಕೆ ಯಾತ್ರೆಯಲ್ಲಿ ಬಂದು ಪಂಡರಿನಾಥನ ದರ್ಶನ ಪಡೆದರು.

ಮುಸ್ಲಿಂ ಸಂಖ್ಯೆ ವೃದ್ಧಿಗೆ ಅಸ್ಸಾಂ ಸಿಎಂ ಕಳವಳ

ಗುವಾಹಟಿ: ಅಸ್ಸಾಂನಲ್ಲಿ ಮುಸ್ಲಿಂ ಜನಸಂಖ್ಯೆ ಸದ್ಯ ರಾಜ್ಯದ ಒಟ್ಟು ಜನಸಂಖ್ಯೆಯ ಶೇ.40ಕ್ಕೆ ಏರಿಕೆಯಾಗಿದೆ. ಕ್ಷಿಪ್ರಗತಿಯಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಯ ಈ ಪರಿ ಆತಂಕಕ್ಕೆ ಕಾರಣವಾಗಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಹೇಳಿದ್ದಾರೆ.

1951ರಲ್ಲಿ ರಾಜ್ಯದಲ್ಲಿ ಶೇ.12ರಷ್ಟಿದ್ದ ಮುಸ್ಲಿಂ ಜನಸಂಖ್ಯೆ ಈಗ ಶೇ.40ಕ್ಕೇರಿದೆ. ಬಹಳಷ್ಟು ಜಿಲ್ಲೆಗಳಲ್ಲಿ ಮುಸ್ಲಿಂ ಜನಸಂಖ್ಯೆಯೇ ದೊಡ್ಡದಿದೆ. ಇದು ಕೇವಲ ರಾಜಕೀಯ ವಿಚಾರವಲ್ಲ, ನನ್ನ ಮಟ್ಟಿಗೆ ಹೇಳುವುದಾದರೆ ಉಳಿದ ಧರ್ಮದವರ ಜೀವನ-ಮರಣದ ವಿಚಾರವಾಗಿದೆ ಎಂದು ಸಿಎಂ ಬಿಸ್ವಾ ಶರ್ಮಾ ಕಳವಳ ವ್ಯಕ್ತಪಡಿಸಿದ್ದಾರೆ. ಕೆಲವು ನಿರ್ದಿಷ್ಟ ಪ್ರದೇಶಗಳ, ನಿರ್ದಿಷ್ಟ ಸಮುದಾಯದ ಜನರ ಅಪರಾಧ ಚಟುವಟಿಕೆಗಳು ಚಿಂತೆಗೆ ಕಾರಣವಾಗಿವೆ ಎಂದು ಸಿಎಂ ಶರ್ಮಾ ಜು.1ರಂದು ಯಾವುದೇ ಸಮುದಾಯ ಉಲ್ಲೇಖಿಸದೇ ಹೇಳಿದ್ದರು. ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿರುವ ಅಲ್ಪಸಂಖ್ಯಾತರು ಅಭಿವೃದ್ಧಿ ಕಾರ್ಯ ಲೆಕ್ಕಿಸದೇ ಕಾಂಗ್ರೆಸ್‌ಗೆ ಮತ ಹಾಕಿದ್ದಾರೆ . ಅಸ್ಸಾಂನಲ್ಲಿ ಬಾಂಗ್ಲಾದೇಶಿ ಅಲ್ಪಸಂಖ್ಯಾತರೇ ಹೆಚ್ಚಾಗಿ ಕೋಮುವಾದದಲ್ಲಿ ಮುಳುಗಿದ್ದಾರೆ ಎಂದು ಸಿಎಂ ಜೂನ್ 23ರಂದು ಹೇಳಿದ್ದರು.

ಅಗ್ನಿವೀರ್‌ಗೆ ಶೇ.10 ನೌಕರಿ: ಹರ್ಯಾಣ

ಚಂಡೀಗಢ: ಭಾರತೀಯ ಸೇನೆಯಲ್ಲಿ 4 ವರ್ಷಗಳ ಸೇವೆ ಪೂರ್ಣಗೊಳಿಸಿದ ಅಗ್ನಿವೀರರಿಗೆ ಪೊಲೀಸ್ ಇಲಾಖೆ ಸೇರಿದಂತೆ ಸರಕಾರಿ ಉದ್ಯೋಗಗಳಲ್ಲಿ ಶೇ.10ರಷ್ಟು ಮೀಸಲು ಸೌಲಭ್ಯವನ್ನು

ಹರಿಯಾಣ ಸರಕಾರ ಬುಧವಾರ ಘೋಷಿಸಿದೆ. ಅಗ್ನಿವೀರರಿಗೆ ಪೊಲೀಸ್ ಕಾನ್‌ಸ್ಟೇಬಲ್, ಮೈನಿಂಗ್ ಗಾರ್ಡ್, ಅರಣ್ಯ ಕಾವಲು ಸಿಬ್ಬಂದಿ, ಜೈಲು ವಾರ್ಡನ್ ಮತ್ತಿತರ ನೌಕರಿಗಳಿಗೆ ನೇರ ನೇಮಕ ಮಾಡಿಕೊಳ್ಳಲಾಗುವುದು. ಜತೆಗೆ ಶೇ.10 ರಷ್ಟು ನೌಕರಿ ಮೀಸಲಿಡಲಾ ಗುವುದು ಎಂದು ಮುಖ್ಯಮಂತ್ರಿ ನಯಾಬ್ ಸೈನಿ ಹೇಳಿದ್ದಾರೆ. ಕೇಂದ್ರ ಸರಕಾರದ ಅಗ್ನಿಪಥ್, ಯುವಜನರ ಕಲ್ಯಾಣ ಯೋಜನೆಯಾಗಿದೆ. ಯುವಜನರು ಸೈನ್ಯದಲ್ಲಿ ತರಬೇತಿ ಪಡೆದು 4 ವರ್ಷ ಸೇವೆ ಸಲ್ಲಿಸಿದ ಬಳಿಕ ಹರಿಯಾಣ ಸರಕಾರ ಅಗ್ನಿವೀರರಿಗೆ ಉದ್ಯೋಗ ನೀಡಲಿದೆ. ಜತೆಗೆ ಅಗ್ನಿವೀರರು ಸ್ವಉದ್ಯೋಗ ಆರಂಭಿಸಲು ಬಯಸಿದರೆ ಸರಕಾರ ಬಡ್ಡಿ ಇಲ್ಲದೇ 5 ಲಕ್ಷ ರು. ಸಾಲ ನೀಡಲಿದೆ. ಸಿ ಮತ್ತು ಡಿ ಗ್ರೂಪ್ ಹುದ್ದೆಗಳ ವಯೋಮಿತಿಯಲ್ಲಿ 3 ವರ್ಷಗಳ ಸಡಿಲಿಕೆ ಮಾಡಲಿದೆ ಎಂದರು. 30 ಸಾವಿರಕ್ಕಿಂತ ಹೆಚ್ಚಿನ ಸಂಬಳ ದಲ್ಲಿ ಅಗ್ನಿವೀರರನ್ನು ನೇಮಕ ಮಾಡಿಕೊಳ್ಳುವ ಕೈಗಾರಿಕಾ ಘಟಕಗ ಳಿಗೆ ವಾರ್ಷಿಕ 60 ಸಾವಿರ ರು. ಸಬ್ಸಿಡಿ ನೀಡಲಾಗುವುದು ಎಂದು ಸಿಎಂ ಘೋಷಿಸಿದ್ದಾರೆ.

ಸೋತವರಿಗೆ ಇವಿಎಂ ಪರಿಶೀಲನೆಗೆ ಅವಕಾಶ

ದೆಹಲಿ: ಚುನಾವಣೆಯಲ್ಲಿ ಸೋತ ಬಳಿಕ ವಿದ್ಯುನ್ಮಾನ ಮತಯಂತ್ರಗಳ ಮೇಲೆ ಅನುಮಾನವಿದ್ದರೆ ಪರಿಶೀಲಿಸಲು ಅವಕಾಶವಿದೆ ಎಂದಿರುವ ಕೇಂದ್ರ ಚುನಾವಣಾ ಆಯೋಗ, ಆ ದಿಶೆಯಲ್ಲಿ

ಪರಾಜಿತ ಅಭ್ಯರ್ಥಿ ಗಳಿಗೆ ಹಲವು ಆಯ್ಕೆಗಳನ್ನು ನೀಡಿದೆ.

ಸೋಲಿನ ನಂತರ ಇವಿಎಂಗಳ ಕಾರ್ಯವೈಖರಿ ಬಗ್ಗೆ ಅನುಮಾನವಿದ್ದರೆ ಯಾವುದೇ ಮತಗಟ್ಟೆಯಿಂದ ಸೋತ ಅಭ್ಯರ್ಥಿ ಮತಯಂತ್ರ ತರಿಸಿ ಪರಿಶೀಲನೆ ನಡೆಸಬಹುದು ಎಂದು ಚುನಾಚಣಾ ಆಯೋಗ ಬುಧವಾರ ಹೇಳಿದೆ. ಇವಿಎಂ ಪರಿಶೀಲನೆಗೆ ತಾಂತ್ರಿಕ- ಪ್ರಮಾಣಿತ ಕಾರ್ಯಾಚರಣೆ ವಿಧಾನವನ್ನು(ಟಿ-ಎಸ್‌ಒಪಿ) ಬಿಡುಗಡೆ ಮಾಡಿದೆ. ಅದರನ್ವಯ ಯಾವುದೇ ಅಭ್ಯರ್ಥಿ ಪರಿಶೀಲನೆಗೆ ಇಚ್ಚಿಸುವ ಮತಯಂತ್ರದ ಸಿರಿಯಲ್ ನಂಬರ್ ತಿಳಿಸುವ ಮೂಲಕ ಪರಿಶೀಲನೆ ಮಾಡಬಹುದು. ಯಾವುದೇ ಅಧಿಕಾರಿ ಯ, ಮೂರನೇ ವ್ಯಕ್ತಿಯ ಮಧ್ಯಪ್ರವೇಶವಿಲ್ಲದೇ ತಪಾಸಣೆ ನಡೆಸಬ ಹುದು ಎಂದು ಆಯೋಗ ಹೇಳಿದೆ. ಇವಿಎಂ ಸೆಟ್‌ನ ಒಂದು ನಿರ್ದಿಷ್ಟ ಘಟಕವನ್ನು(ಬ್ಯಾಲೆಟ್ ಯುನಿಟ್, ಕಂಟ್ರೋಲ್ ಯುನಿಟ್ ಅಥವಾ ವಿವಿಪ್ಯಾಟ್) ಇನ್ನೊಂದು ಸೆಟ್‌ನ ಘಟಕದ ಜತೆಗೆ ಜೋಡಿಸಿ ಪರಿಶೀಲನೆಗೂ ಅವಕಾಶ ಮಾಡಿಕೊಡಲಾಗಿದೆ.

ಎನ್‌ಸಿಪಿ-ಅಜಿತ್ ಬಣ ತೊರೆದ 4 ನಾಯಕರು

ಮುಂಬೈ: ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿ(ಎನ್‌ಸಿಪಿ)-ಅಜಿತ್ ಬಣಕ್ಕೆ ಸಂಕಷ್ಟ ಎದುರಾಗಿದೆ. ನಾಲ್ವರು ನಾಯಕರು ಪಕ್ಷ ತೊರೆದಿದ್ದಾರೆ. ಮಹಾರಾಷ್ಟ್ರದ ಪಿಂಪ್ರಿ-ಛಿಂಚ್ವಾಡಾ

ಘಟಕದ ಅಧ್ಯಕ್ಷ ಅಜಿತ್ ಗೌಹಾನೆ ಮತ್ತು ಇಬ್ಬರು ಮಾಜಿ ಕಾರ್ಪೊರೇಟರ್‌ಗಳಾದ ರಾಹುಲ್ ಭೋಸಲೆ ಮತ್ತು ಪಂಕಜ್ ಭಲೇಕರ್ ಹಾಗೂ ವಿದ್ಯಾರ್ಥಿ ನಾಯಕ ಯಶ್ ಸಾನೆ ಪಕ್ಷ ತೊರೆದು ಶರದ್ ಪವಾರ್ ನೇತೃತ್ವದ ಎನ್‌ಸಿಪಿ ಸೇರಿಕೊಂಡಿದ್ದಾರೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಮೂಲದ ನಿಯತಕಾಲಿಕ 'ಆರ್ಗನೈಸರ್'ನಲ್ಲಿ ಮಹಾರಾಷ್ಟ್ರದಲ್ಲಿ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಸಾಧನೆ ಕಳಪೆಯಾಗಿದೆ. ಅದಕ್ಕೆ ಪಕ್ಷ ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ಜತೆ ಮೈತ್ರಿ ಮಾಡಿಕೊಂಡಿರುವುದೇ ಕಾರಣ ಎಂಬ ವಿಶ್ಲೇಷಣಾತ್ಮಕ ವರದಿ ಪ್ರಕಟಗೊಂಡ ನಂತರ ನಾಲ್ವರೂ ನಾಯಕರು ಪಕ್ಷ ತೊರೆದಿದ್ದಾರೆ ಎನ್ನಲಾಗಿದೆ. ಲೋಕಸಭಾ ಚುನಾವಣೆಯಲ್ಲಿಯೂ ಎನ್‌ಸಿಪಿ ಅಜಿತ್ ಬಣ ಹಿನ್ನಡೆ ಅನುಭವಿಸಿತ್ತು. ಇದೀಗ ಉಪ ಮುಖ್ಯಮಂತ್ರಿ ನೇತೃತ್ವದ ಪಕ್ಷಕ್ಕೆ ಎರಡನೇ ಪೆಟ್ಟು ಬಿದ್ದಿದೆ.

ಸಮಾಚಾರ ಸಣ್ಣದಲ್ಲ

ಯಾತ್ರಿಕರಿಗೆ ವ್ಯಾನ್ ಡಿಕ್ಕಿ: ಐವರ ಸಾವು

ತಂಜಾವೂರು: ಪಾದಯಾತ್ರೆ ಮೂಲಕ ಧಾರ್ಮಿಕ ಕೇಂದ್ರಕ್ಕೆ ಹೊರಟಿದ್ದ ಐವರು ಅಪಘಾತಕ್ಕೆ ಬಲಿಯಾದ ಘಟನೆ ಬುಧವಾರ ತಂಜಾವೂರು-ತಿರುಚಿರಾಪಳ್ಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿದೆ. ಗಾಯಗೊಂಡ ಓರ್ವ ಪಾದಯಾತ್ರಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ತಿರುಚಿರಾಪಳ್ಳಿ ಕಡೆಗೆ ವೇಗದಲ್ಲಿ ಸಾಗುತ್ತಿದ್ದ ವ್ಯಾನ್ ವಳಂಬಾಕುಡಿ ಗ್ರಾಮದ ಬಳಿ ಪಾದಯಾತ್ರಿಗಳಿಗೆ ಡಿಕ್ಕಿ ಹೊಡೆದಿದೆ. ಪಾದಯಾತ್ರಿಗಳು ಪುದುಕೊಟ್ಟೈ ಜಿಲ್ಲೆಯವರಾಗಿದ್ದು ಸುಮಾರು 50 ಜನರ ತಂಡ ಸಮಯಾಪುರಂನ ಮಾರಿಯಮ್ಮನ್ ದೇಗುಲಕ್ಕೆ ಹೊರಟಿದ್ದರು ಎನ್ನಲಾಗಿದೆ. ತಮಿಳುನಾಡು ಸಿಎಂ ಎಂ ಕೆ ಸ್ಟಾಲಿನ್, ಮೃತರ ಕುಟುಂಬಕ್ಕೆ 2 ಲಕ್ಷ ರು ಪರಿಹಾರ ಹಾಗೂ ಗಾಯಗೊಂಡವರ ಚಿಕಿತ್ಸೆಗೆ 1 ಲಕ್ಷ ರು ಪರಿಹಾರ ಘೋಷಿಸಿದ್ದಾರೆ. ವ್ಯಾನ್ ಚಾಲಕ ನಿದ್ದೆಮಂಪರಿನಲ್ಲಿ ವಾಹನ ಚಲಾಯಿಸಿದ್ದೇ ಅಪಘಾತಕ್ಕೆ ಕಾರಣ ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದು ಬಂದಿದೆ.

ಬೇಳೆ ದರ ಇಳಿಕೆಗೆ ಕ್ರಮ: ಪ್ರಲ್ಹಾದ್ ಜೋಶಿ

ದೆಹಲಿ: ದೇಶದ ಪ್ರಮುಖ ಮಾರುಕಟ್ಟೆಗಳಲ್ಲಿ ತೊಗರಿ, ಕಡಲೆ ಬೇಳೆ ಮತ್ತು ಉದ್ದು ಮತ್ತಿತರ ಬೇಳೆಗಳ ಬೆಲೆಯಲ್ಲಿ ಶೇ.4ರಷ್ಟು ಇಳಿಕೆ ಆಗಿದೆ. ಹಾಗಿದ್ದರೂ ವ್ಯಾಪಾರಿಗಳು ದರ ಇಳಿಸದೇ ಇರುವುದು ಗಮನಕ್ಕೆ ಬಂದಿದೆ. ಎಲ್ಲ ವರ್ತಕರು

ಬೇಳೆ- ಕಾಳು ಬೆಲೆ ಕಡಿಮೆ ಮಾಡುವಂತೆ ಕ್ರಮ ಕೈಗೊಳ್ಳಿ ಎಂದು ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ್ ಜೋಶಿ ಅಧಿಕಾರಿಗಳಿಗೆ ಬುಧವಾರ ಸೂಚಿಸಿದ್ದಾರೆ. ದೆಹಲಿಯಲ್ಲಿ ಗ್ರಾಹಕ ವ್ಯವಹಾರಗಳ ಇಲಾಖೆ ಉನ್ನತ ಅಧಿಕಾರಿಗಳ ಸಭೆ ನಡೆಸಿ ಚರ್ಚಿಸಿದ ಸಚಿವರು ಈ ಬಗ್ಗೆ ತ್ವರಿತ ಕ್ರಮಕ್ಕೆ ಸಲಹೆ ನೀಡಿದ್ದಾರೆ. ಗ್ರಾಹಕರಿಗೆ ಕೈಗೆಟಕುವ ದರದಲ್ಲಿ ಧಾನ್ಯಗಳು ಲಭಿಸುವಂತೆ ಮಾಡಲು ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದೂ ಸಚಿವರು ಇದೇ ವೇಳೆ ಹೇಳಿದರು. ಸಣ್ಣ ವ್ಯಾಪಾರದ ಮಳಿಗೆಗಳಲ್ಲಿ ಮಾತ್ರ ತೊಗರಿ, ಉದ್ದು, ಕಡಲೆ ಬೇಳೆ ಬೆಲೆ ಇಳಿಸಲಾಗಿದೆ. ಆದರೆ, ದೊಡ್ಡ ದೊಡ್ಡ ವ್ಯಾಪಾರಿ ಮಳಿಗೆಗಳಲ್ಲಿ ಬೆಲೆ ಇಳಿಸದಿರುವುದು ಗಮನಕ್ಕೆ ಬಂದಿದೆ. ಕೂಡಲೇ ಇದರ ವಿರುದ್ಧ ಕ್ರಮಕ್ಕೆ ಮುಂದಾಗಿದೆ ಎಂದು ಅಧಿಕಾರಿಗಳಿಗೆ ಸೂಚಿಸಿದರು. ಈಗಾಗಲೇ ಬೇಳೆಗಳ ಬೆಲೆಯನ್ನು ಕೂಡಲೇ ಇಳಿಸುವಂತೆ ಈ ದೊಡ್ಡ ವರ್ತಕರಿಗೂ ಸೂಚನೆ ನೀಡಲಾಗಿದೆ. ಈ ನಿರ್ದೇಶನ ಅನುಸರಿಸಲು ವಿಫಲವಾದರೆ ಅವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಸಚಿವ ಪ್ರಲ್ಹಾದ್ ಜೋಶಿ ಎಚ್ಚರಿಸಿದ್ದಾರೆ

ಕೇಜ್ರಿ ಜಾಮೀನು ಅರ್ಜಿ: ತೀರ್ಪು ಕಾಯ್ದಿರಿಸಿದ ಹೈ

ದೆಹಲಿ: ಮದ್ಯ ನೀತಿ ಹಗರಣದಲ್ಲಿ ಸಿಬಿಐ ಬಂಧನ ಪ್ರಶ್ನಿಸಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ದೆಹಲಿ ಹೈಕೋರ್ಟ್ ಬುಧವಾರ ಪೂರ್ಣಗೊಳಿ

ಸಿದ್ದು, ತೀರ್ಪು ಕಾಯ್ದಿರಿಸಿದೆ. ನ್ಯಾ.ನೀನಾ ಬನ್ಸಾಲ್ ಖನ್ನಾ, ಅರ್ಜಿದಾರ ಕೇಜ್ರಿವಾಲ್ ಮತ್ತು ಸಿಬಿಐ ಪರ ವಕೀಲರ ವಾದಗಳನ್ನು ಆಲಿಸಿದ ಬಳಿಕದ ತೀರ್ಪು ಕಾಯ್ದಿರಿಸಿದರು. ಕೇಜ್ರಿವಾಲ್ ಜೈಲಿನಿಂದ ಬಿಡುಗಡೆಯಾಗುವುದನ್ನು ತಡೆಯುವ ಸಲುವಾಗಿಯೇ ಸಿಬಿಐ ಉದ್ದೇಶಪೂರ್ವಕವಾಗಿ ದೆಹಲಿ ಮುಖ್ಯಮಂತ್ರಿಯನ್ನು ಜಾರಿ ನಿರ್ದೇಶನಲಾಯದ ವಶದಲ್ಲಿ ಇರುವಾಗಲೇ ಜೈಲಿನಲ್ಲೇ ಬಂಧಿಸಿದೆ ಎಂದು ವಕೀಲ ಅಭಿಷೇಕ್ ಮನು ಸಿಂಘ್ವಿ ವಾದ ಮಂಡಿಸಿದ್ದಾರೆ. ಇ.ಡಿ ದಾಖಲಿಸಿದ ಪ್ರಕರಣಗಳಲ್ಲಿ ಕೇಜ್ರಿವಾಲ್ ಅವರಿಗೆ ಮಧ್ಯಂತರ ಜಾಮೀನು ಸಿಕ್ಕಿದೆ. ಆದರೆ, ಕುತಂತ್ರದಿಂದ ಸಿಬಿಐ ಅವರನ್ನು ಬಂಧಿಸಿದೆ ಎಂದು ಹೇಳಿದರು. ಇದೊಂದು ಬಂಧನದಲ್ಲೇ ಇರಿಸಿಕೊಳ್ಳುವ ಸಲುವಾಗಿ ಮಾಡಿದ ಮುಂಜಾಗ್ರತೆಯ ಬಂಧನ ಪ್ರಕ್ರಿಯೆ ಆಗಿದೆ ಅಷ್ಟೇ ಎಂದು ಕೇಜ್ರಿವಾಲ್ ಪರ ವಕೀಲರು ಬಣ್ಣಿಸಿದರು. ಈ ವಾದ ತಳ್ಳಿ ಹಾಕಿದ ಸಿಬಿಐ ಪರ ವಕೀಲ ಡಿ.ಪಿ ಸಿಂಗ್, ಈ ವಾದವನ್ನು ಪುರಸ್ಕರಿಸಬಾರದು, ಕುತಂತ್ರದಿಂದ ಬಂಧನ ಎಂಬ ಆರೋಪ ಸರಿಯಲ್ಲ ಎಂದು ಹೇಳಿದರು. ಜು.29ರಂದು ಅರವಿಂದ ಕೇಜ್ರಿವಾಲ್ ಸಲ್ಲಿಸಿರುವ ಮುಖ್ಯ ಜಾಮೀನು ಅರ್ಜಿಗೆ ಸಂಬಂಧಿಸಿ ವಾದವನ್ನು ನ್ಯಾಯಾಲಯ ಆಲಿಸಲಿದೆ.

ಸಿಕ್ಕಿಂ ಮಾಜಿ ಸಚಿವರ ಮೃತದೇಹ ಪತ್ತೆ

ಪಶ್ಚಿಮ ಬಂಗಾಳ : 9 ದಿನಗಳ ಹಿಂದೆ ಕಾಣೆಯಾಗಿದ್ದ ಸಿಕ್ಕಿಂನ ಮಾಜಿ ಸಚಿವ ಆರ್ ಸಿ ಪೌಡ್ಯಾಲ್ ಮೃತದೇಹ ಪಶ್ಚಿಮ ಬಂಗಾಳದ ಕಾಲುವೆಯಲ್ಲಿ



ಪತ್ತೆಯಾಗಿದೆ. ಬುಧವಾರ ಈ ಬಗ್ಗೆ ಮಾಹಿತಿ ನೀಡಿರುವ ಪೊಲೀಸರು ಸಿಲಿಗುರಿ ಬಳಿಯ ಫುಲ್‌ಬರಿಯ ತೀಸ್ತಾ ನದಿ ಕಾಲುವೆಯಲ್ಲಿ 80 ವರ್ಷದ ಆರ್ ಸಿ ಪೌಡ್ಯಾಲ್ ಮೃತದೇಹ ಪತ್ತೆಯಾಗಿದೆ ಎಂದು ತಿಳಿಸಿದ್ದಾರೆ. ಮೃತದೇಹದ ಮೇಲಿದ್ದ ವಾಚ್ ಹಾಗೂ ಬಟ್ಟೆಯ ಮೂಲಕ ಗುರುತು ಪತ್ತೆಹಚ್ಚಲಾಗಿದ್ದು ತೀಸ್ತಾ ನದಿಯ ಮೇಲ್ಭಂಡೆಯಿಂದ ಶವ ತೇಲಿ ಬಂದಿರುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ. ಜುಲೈ 7ರಂದು ಪಾಕ್ಯೋಂಗ್ ಜಿಲ್ಲೆಯ ಛೋಟಾ ಸಿಂಗ್ಟಮ್ ಪ್ರದೇಶದಿಂದ ಮಾಜಿ ಸಚಿವ ಪೌಡ್ಯಾಲ್ ನಾಪತ್ತೆಯಾಗಿದ್ದು ಅವರ ಪತ್ತೆಗೆ ವಿಶೇಷ ತನಿಖಾ ದಳ ರಚಿಸಲಾಗಿತ್ತು. ಸಾವಿನ ಕುರಿತು ತನಿಖೆ ಮುಂದುವರೆಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪೌಡ್ಯಾಲ್ ಸಿಕ್ಕಿಂ ವಿಧಾನಸಭೆಯ ಡೆಪ್ಯೂಟಿ ಸ್ಪೀಕರ್ ಆಗಿಯೂ ಕಾರ್ಯ ನಿರ್ವಹಿಸಿದ್ದಾರೆ.



5 ರಿಂಗ್‌ಗಳ ಮಹತ್ವವೇನು?

5 ಖಂಡಗಳನ್ನು ಪ್ರತಿನಿಧಿಸುವ 5 ರಿಂಗ್‌ಗಳುಳ್ಳ ಒಲಿಂಪಿಕ್ಸ್ ಧ್ವಜವನ್ನು 1913ರಲ್ಲಿ ಆಧುನಿಕ ಒಲಿಂಪಿಕ್ಸ್ ಪಿತಾಮಹ ಫ್ರಾನ್ಸ್‌ನ ಪಿಯರ್ ಡಿ ಕೌಬರ್ಟಿನ್ ವಿನ್ಯಾಸಗೊಳಿಸಿದರು. ಒಲಿಂಪಿಕ್ಸ್ ಧ್ವಜ 1920ರ ಬೆಲ್ಜಿಯಂನ ಅಂಟ್ವೆರ್ಪ್‌ನಲ್ಲಿ ಮೊದಲ ಬಾರಿ ಅಧಿಕೃತವಾಗಿ ಹಾರಾಡಿಸಲಾಯಿತು. ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವ ಪ್ರತಿ ದೇಶದ ರಾಷ್ಟ್ರಧ್ವಜವೂ ಈ ರಿಂಗ್ಗಳ ಒಂದಾದರೂ ಬಣ್ಣವನ್ನು ಒಳಗೊಂಡಿರುವುದು ಈ ರಿಂಗ್‌ನ ವಿಶೇಷತೆಯಾಗಿದೆ.

ಜುಲೈ 26ರಂದು ಆರಂಭವಾಗಲಿರುವ ಪ್ಯಾರಿಸ್ ಒಲಿಂಪಿಕ್ಸ್‌ಗೆ ಇನ್ನೇನು ದಿನಗಣನೆ ಶುರುವಾಗಿದ್ದು, ಆಯೋಜನೆಗಾಗಿ ಫ್ರಾನ್ಸ್ ನಗರ ಸಜ್ಜಾಗಿದೆ. ಅದರಂತೆ ವಿಶ್ವಾದ್ಯಂತ ಕ್ರೀಡಾಪಟುಗಳು ಕೂಡ ಪದಕಗಳನ್ನು ಗೆಲ್ಲುವುದಕ್ಕಾಗಿ ಸತತವಾಗಿ ಅಭ್ಯಾಸ ನಡೆಸುತ್ತಿದ್ದಾರೆ. ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಎಷ್ಟು ಸ್ಪರ್ಧೆಗಳಿವೆ ಹಾಗೂ ಎಷ್ಟು ಪದಕಗಳು ವಿತರಣೆಯಾಗಲಿವೆ ಎಂಬ ಪ್ರಶ್ನೆ ಎಲ್ಲರಲ್ಲೂ ಮನೆಮಾಡಿದೆ.

ಒಲಿಂಪಿಕ್ಸ್ ಇತಿಹಾಸದ ಪ್ರಮುಖ ಕ್ರೀಡೆಗಳು

ಪ್ಯಾರಿಸ್ 2024ರ ಒಲಿಂಪಿಕ್ ಕ್ರೀಡಾಕೂಟದ ಸ್ಪರ್ಧೆಯ ಪಟ್ಟಿಯಲ್ಲಿ ಒಟ್ಟು 32 ಕ್ರೀಡೆಗಳಿದ್ದು, ಒಟ್ಟು 5,084 ಪದಕಗಳು ವಿತರಣೆಯಾಗಲಿವೆ. ಇದರಲ್ಲಿ ಚಿನ್ನ, ಬೆಳ್ಳಿ ಕಂಚಿನ ಪದಕಗಳು ಸೇರಿಕೊಂಡಿವೆ. ಫ್ರೆಂಚ್ ಮಿಂಟ್ ಮೊನ್ನೈ ಡಿ ಪ್ಯಾರಿಸ್ ಈ ಪದಕಗಳನ್ನು ಉತ್ಪಾದಿಸಿದೆ. ಪ್ಯಾರಿಸ್ ಮೂಲದ ಐಷಾರಾಮಿ ಆಭರಣ ಸಂಸ್ಥೆ ಚೌಮೆಟ್ ಪದಕಗಳನ್ನು ವಿನ್ಯಾಸ ಮಾಡಿದೆ. ಪದಕಗಳ ಹಿಂಭಾಗದಲ್ಲಿ 1896 ರಲ್ಲಿ ಮೊದಲ ಆಧುನಿಕ ಒಲಿಂಪಿಕ್ಸ್‌ಗೆ ಆತಿಥ್ಯ ವಹಿಸಿದ್ದ ಪನಾಥೆನಿಕ್ ಕ್ರೀಡಾಂಗಣದೊಳಗೆ ಗ್ರೀಕ್ ವಿಜಯದ ದೇವತೆ ನೈಕ್ ಚಿತ್ರಿಸಲಾಗಿದೆ.

ಪ್ಯಾರಿಸ್ ಒಲಿಂಪಿಕ್ಸ್‌ನ 32 ಕ್ರೀಡೆಗಳು: ಅಕ್ವಾಟಿಕ್ಸ್ (ಈಜು, ಮ್ಯಾರಥಾನ್ ಈಜು, ಡೈವಿಂಗ್, ವಾಟರ್ ಪೋಲೊ, ಆರ್ಟಿಸ್ಟಿಕ್ ಈಜು), ಬಿಲ್ಲುಗಾರಿಕೆ, ಅಥ್ಲೆಟಿಕ್ಸ್, ಬ್ಯಾಡ್ಮಿಂಟನ್, ಬ್ಯಾಸ್ಕೆಟ್‌ಬಾಲ್, ಬಾಕ್ಸಿಂಗ್, ಬ್ರೇಕಿಂಗ್, ಕ್ಯಾನೊ (ಕ್ಯಾನೊ ಸ್ಪ್ರಿಂಟ್, ಕ್ಯಾನೊ ಸ್ಲಾಲೋಮ್), ಸೈಕ್ಲಿಂಗ್ (ಬಿಎಮ್‌ಎಕ್ಸ್ ಫ್ರೀಸ್ಟೈಲ್, ಬಿಎಂಎಕ್ಸ್ ರೇಸಿಂಗ್, ರೋಡ್ ಸೈಕ್ಲಿಂಗ್, ಟ್ರ್ಯಾಕ್ ಸೈಕ್ಲಿಂಗ್), ಈಕ್ವೆಸ್ಟ್ರಿಯನ್ (ಈಕ್ವೆಸ್ಟ್ರಿಯನ್ ಈವೆಂಟಿಂಗ್, ಈಕ್ವೆಸ್ಟ್ರಿಯನ್ ಈವೆಂಟಿಂಗ್, ಈಕ್ವೆಸ್ಟ್ರಿಯನ್ ಡ್ರೆಸ್ಸಿಂಗ್, ಈಕ್ವೆಸ್ಟ್ರಿಯನ್ ಜಂಪಿಂಗ್), ಫೆನ್ಸಿಂಗ್, ಫುಟ್‌ಬಾಲ್, ಗಾಲ್ಫ್, ಜಿಮ್ನಾಸ್ಟಿಕ್ಸ್ (ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್, ರಿಥಮಿಕ್ ಜಿಮ್ನಾಸ್ಟಿಕ್ಸ್), ಹ್ಯಾಂಡ್‌ಬಾಲ್, ಹಾಕಿ, ಜೂಡೋ, ಮಾಡರ್ನ್ ಪೆಂಟಾಥ್ಲಾನ್, ರೋಯಿಂಗ್, ರಗ್ಬಿ, ನೌಕಾಯಾನ, ಶೂಟಿಂಗ್, ಸ್ಕೇಟ್ ಬೋರ್ಡಿಂಗ್, ಸ್ಪೋರ್ಟ್ ಕ್ಲೈಂಬಿಂಗ್, ಸರ್ಫಿಂಗ್, ಟೇಬಲ್ ಟೆನ್ನಿಸ್, ಟೇಕ್ವಾಂಡೋ, ಟೆನ್ನಿಸ್, ಟ್ರಯಥ್ಲಾನ್, ವಾಲಿಬಾಲ್ (ಬೀಚ್ ವಾಲಿಬಾಲ್, ವಾಲಿಬಾಲ್), ವೇಟ್‌ಲಿಫ್ಟಿಂಗ್, ಮತ್ತು ಕುಸ್ತಿ

ಒಲಿಂಪಿಕ್ಸ್‌ನ ಆಕರ್ಷಕ ಕ್ರೀಡೆಗಳು

ಅಥ್ಲೆಟಿಕ್ಸ್

ಒಲಿಂಪಿಕ್ಸ್ ಒಂದು ವಿಶ್ವದಲ್ಲಿ ಅತಿ ಹೆಚ್ಚು ಜನಪ್ರಿಯತೆ ಪಡೆದ ಕ್ರೀಡಾಕೂಟವಾಗಿದೆ. ವಿಶ್ವಾದ್ಯಂತ ಕ್ರೀಡೆಗಳ ಪೈಕಿ ಹಲವಾರು ಕ್ರೀಡೆಗಳು ಇದರಲ್ಲಿ ಕೂಡಿಕೊಂಡಿದ್ದು, ಅದರಲ್ಲಿ ಒಂದಿಚ್ಚು ಕ್ರೀಡೆಗಳು ಹೆಚ್ಚಿನ ಗಮನ ಸೆಳೆದಿವೆ. ಅದರಲ್ಲಿ ಅಥ್ಲೆಟಿಕ್ಸ್ (ಟ್ರ್ಯಾಕ್ ಮತ್ತು ಫೀಲ್ಡ್) ಅಥೆನ್ಸ್‌ನಲ್ಲಿ (1896) ನಡೆದ ಮೊದಲ ಆಧುನಿಕ ಒಲಿಂಪಿಕ್ ಕ್ರೀಡಾಕೂಟದಿಂದಲೂ ಇದು ಅವಿಭಾಜ್ಯ ಅಂಗವಾಗಿದೆ. 1896 ರ ಕ್ರೀಡಾಕೂಟದಲ್ಲಿ, ಈ ಕ್ರೀಡೆಯು 100 ಮೀಟರ್, 110 ಮೀ ಹರ್ಡಲ್ಸ್, 400 ಮೀ, 800 ಮೀ, 1500 ಮೀ, ಡಿಸ್ಕಸ್ ಥ್ರೋ, ಹೈ ಜಂಪ್, ಲಾಂಗ್ ಜಂಪ್, ಟ್ರಿಪಲ್ ಜಂಪ್, ಮ್ಯಾರಥಾನ್, ಪೋಲ್ ವಾಲ್ಟ್ ಮತ್ತು ಶಾಟ್ ಪುಟ್ ಸೇರಿದಂತೆ 12 ಸ್ಪರ್ಧೆಗಳನ್ನು ಹೊಂದಿತ್ತು.

ಈಜು

ಪುರುಷರ 100 ಮೀಟರ್ ಫ್ರೀಸ್ಟೈಲ್, 100 ಮೀಟರ್ ಫ್ರೀಸ್ಟೈಲ್, 400 ಮೀಟರ್ ಫ್ರೀಸ್ಟೈಲ್ ಮತ್ತು 1200 ಮೀಟರ್ ಫ್ರೀಸ್ಟೈಲ್ ಸೇರಿ ಈಜು ಸ್ಪರ್ಧೆಯು 1896ರ ಕ್ರೀಡಾಕೂಟದ ಆವೃತ್ತಿಯಿಂದಲೂ ಒಲಿಂಪಿಕ್ಸ್ ಒಂದು ಭಾಗವಾಗಿದೆ. ಕಾಲಾನಂತರದಲ್ಲಿ, ಒಲಿಂಪಿಕ್ಸ್ 35 ಈಜು ಸ್ಪರ್ಧೆಗಳನ್ನು ಒಳಗೊಂಡಿತು. ಮಹಿಳೆಯರಿಗೆ ವಿವಿಧ ವಿಭಾಗಗಳಲ್ಲಿ ಭಾಗವಹಿಸಲು ಅವಕಾಶ ನೀಡಲಾಯಿತು.

ಸೈಕ್ಲಿಂಗ್

ಸೈಕ್ಲಿಂಗ್ ಪ್ರಾರಂಭದಿಂದಲೂ ಒಲಿಂಪಿಕ್ಸ್‌ನ ಒಂದು ಭಾಗವಾಗಿದೆ. ಅಥೆನ್ಸ್ ಕ್ರೀಡಾಕೂಟದಲ್ಲಿ, ಟ್ರ್ಯಾಕ್ ಸೈಕ್ಲಿಂಗ್ ಪುರುಷರಿಗೆ ಪ್ರತ್ಯೇಕವಾಗಿ ಐದು ಸ್ಪರ್ಧೆಗಳನ್ನು ಒಳಗೊಂಡಿತ್ತು: 100 ಕಿ.ಮೀ, 10 ಕಿ.ಮೀ, 12 ಗಂಟೆ, 1 ಕಿ.ಮೀ ಟ್ರಯಲ್ ಮತ್ತು ಸ್ಪ್ರಿಂಟ್. ವರ್ಷಗಳಲ್ಲಿ, ಕ್ರೀಡೆಯು ಪುರುಷರು ಮತ್ತು ಮಹಿಳೆಯರಿಗಾಗಿ 12 ಸ್ಪರ್ಧೆಗಳನ್ನು ಒಳಗೊಂಡಿದೆ.

ಶೂಟಿಂಗ್

1904 ಮತ್ತು 1928 ರ ಕ್ರೀಡಾಕೂಟಗಳನ್ನು ಹೊರತುಪಡಿಸಿ, ಶೂಟಿಂಗ್ ಒಲಿಂಪಿಕ್ಸ್‌ನಲ್ಲಿ ಖಾಯಂ ಸ್ಥಾನ ಪಡೆದಿದೆ. ಇದರಲ್ಲಿ ಐದು ಸ್ಪರ್ಧೆಗಳಿವೆ: 25 ಮೀ ಆರ್ಮಿ ಪಿಸ್ತೂಲ್, 25 ಮೀ ರಾಪಿಡ್ ಫೈರ್ ಪಿಸ್ತೂಲ್ 60 ಶಾಟ್‌ಗಳು, 50 ಮೀ ಪಿಸ್ತೂಲ್ 60 ಶಾಟ್‌ಗಳು ಆರ್ಮಿ ರೈಫಲ್ 200 ಮೀ, ಮತ್ತು ಆರ್ಮಿ ರೈಫಲ್ 300 ಮೀ ಸ್ಪರ್ಧೆಗಳು ಒಳಗೊಂಡಿವೆ.

ಫೆನ್ಸಿಂಗ್ (ಕತ್ತಿವರಸೆ)

ಅಥ್ಲೆಟಿಕ್ಸ್‌ನಷ್ಟೇ ಹಳೆಯದಾದ ಫೆನ್ಸಿಂಗ್ ಆರಂಭದಿಂದಲೂ ಒಲಿಂಪಿಕ್ಸ್‌ನ ಭಾಗವಾಗಿದೆ. ಅಥೆನ್ಸ್ 1896ರ ಒಲಿಂಪಿಕ್ಸ್ ಸಮಯದಲ್ಲಿ ಪುರುಷರ ಫೆನ್ಸಿಂಗ್‌ನ ಮೂರು ಸ್ಪರ್ಧೆ ಆಯೋಜಿಸಿತ್ತು. ಫಾಯಿಲ್ ವೈಯಕ್ತಿಕ, ಫಾಯಿಲ್ ಮಾಸ್ಟರ್ಸ್ ಮತ್ತು ಸೇಬರ್ ವಿಭಾಗವಿತ್ತು. ಆರಂಭದಲ್ಲಿ ಗ್ರೀಸ್ ಮತ್ತು ಫ್ರಾನ್ಸ್ ಪ್ರಾಬಲ್ಯ ಹೊಂದಿತ್ತು.

ಜಿಮ್ನಾಸ್ಟಿಕ್ಸ್

ಕ್ರೀಡಾಕೂಟದ ಪ್ರಾರಂಭದ 1896ರ ಆವೃತ್ತಿಯಿಂದಲೂ ಕಲಾತ್ಮಕ ಜಿಮ್ನಾಸ್ಟಿಕ್ಸ್ ಒಲಿಂಪಿಕ್ಸ್‌ನ ಭಾಗವಾಗಿದೆ. ಪುರುಷರಿಗಾಗಿಯೇ ಮಾಡಲಾಗಿದ್ದ ಈ ಕ್ರೀಡೆಯು ಎಂಟು ತಂಡ ಮತ್ತು ವೈಯಕ್ತಿಕ ಸ್ಪರ್ಧೆಗಳನ್ನು ಒಳಗೊಂಡಿತ್ತು. ನಂತರ, ಈ ಕ್ರೀಡೆಯನ್ನು ಮಹಿಳೆಯರಿಗೆ ತೆರೆಯಲಾಯಿತು, 14 ವಿಭಾಗಗಳಿಗೆ ವಿಸ್ತರಿಸಲಾಯಿತು.

ಕುಸ್ತಿ

1896ರ ಅಥೆನ್ಸ್ ಒಲಿಂಪಿಕ್ಸ್‌ನಲ್ಲಿ ಸೇರ್ಪಡೆಗೊಂಡ ನಂತರ, ಗ್ರೀಕೋ-ರೋಮನ್ ಕುಸ್ತಿಯನ್ನು ಮುಂದಿನ ಎರಡು ಆವೃತ್ತಿಗಳಿಂದ (1900 ಮತ್ತು 1904) ಕೈಬಿಡಲಾಗಿತ್ತು. ಅಥೆನ್ಸ್‌ನಲ್ಲಿ ಈ ಕ್ರೀಡೆಯು ಪುರುಷರಿಗೆ ಕೇವಲ ಒಂದು ಸ್ಪರ್ಧೆಯನ್ನು ಒಳಗೊಂಡಿತ್ತು. ಗ್ರೀಕೋ-ರೋಮನ್ ಕುಸ್ತಿ ಕ್ರಮೇಣ ಪುರುಷರು ಮತ್ತು ಮಹಿಳೆಯರಿಗೆ ಆರು ತೂಕದ ವರ್ಗಗಳನ್ನು ಸೇರಿಸಲು ವಿಸ್ತರಿಸಿದೆ.

ಟೆನ್ನಿಸ್

ಟೆನಿಸ್ 1896ರ ಕ್ರೀಡಾಕೂಟದಲ್ಲಿ ಕಾಣಿಸಿಕೊಂಡ ಕ್ರೀಡೆ. ಉದ್ಘಾಟನಾ ಒಲಿಂಪಿಕ್ಸ್ ಎರಡು ಟೆನ್ನಿಸ್ ಸ್ಪರ್ಧೆಗಳನ್ನು ಒಳಗೊಂಡಿತ್ತು: ಪುರುಷರ ಸಿಂಗಲ್ಸ್ ಮತ್ತು ಪುರುಷರ ಡಬಲ್ಸ್. ಮುಂಬರುವ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಈ ಕ್ರೀಡೆಯು ಐದು ಸ್ಪರ್ಧೆಗಳನ್ನು ಒಳಗೊಂಡಿದೆ: ಪುರುಷರ ಸಿಂಗಲ್ಸ್, ಪುರುಷರ ಡಬಲ್ಸ್, ಮಹಿಳಾ ಸಿಂಗಲ್ಸ್, ಮಹಿಳಾ ಡಬಲ್ಸ್ ಮತ್ತು ಮಿಶ್ರ ಡಬಲ್ಸ್.

ವೇಟ್‌ಲಿಫ್ಟಿಂಗ್

ವೇಟ್ ಲಿಫ್ಟಿಂಗ್ 1896ರಿಂದಲೂ ಒಲಿಂಪಿಕ್ ಕ್ರೀಡೆಯಾಗಿದೆ. ಆರಂಭದಲ್ಲಿ, ಇದು ಪುರುಷರಿಗೆ ಪ್ರತ್ಯೇಕವಾಗಿ ಎರಡು ಸ್ಪರ್ಧೆಗಳನ್ನು ಒಳಗೊಂಡಿತ್ತು: ಹೆವಿವೇಯ್ಟ್ ಒನ್-ಹ್ಯಾಂಡ್ ಲಿಫ್ಟ್ ಮತ್ತು ಹೆವಿವೇಯ್ಟ್ ಟು-ಹ್ಯಾಂಡ್ ಲಿಫ್ಟ್. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಪುರುಷರು ಮತ್ತು ಮಹಿಳೆಯರಿಗಾಗಿ ಐದು ತೂಕದ ವಿಭಾಗಗಳಲ್ಲಿ 10 ಸ್ಪರ್ಧೆಗಳು ನಡೆಯಲಿವೆ.

ವಾಲ್ಮೀಕಿ ನಿಗಮ ಹಗರಣ: ನಾಗೇಂದ್ರ ಪತ್ನಿ ಇ.ಡಿ ವಶಕ್ಕೆ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮ ಹಗರಣಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಬಿ.ನಾಗೇಂದ್ರ ಅವರ ಪತ್ನಿ ಮಂಜುಳಾ ಅವರು ಇಡಿ ವಿಚಾರಣೆಗೆ ಹಾಜರಾಗಿದ್ದರು. ಬೆಂಗಳೂರಿನ ಶಾಂತಿನಗರದಲ್ಲಿರುವ ಇಡಿ ಕಚೇರಿಯಲ್ಲಿ ವಿಚಾರಣೆ ಮಾಡಿದ್ದು, ನಾಗೇಂದ್ರ ರಾಮ್ಕಿ ಉತ್ಸವ್ ಅಪಾರ್ಟ್‌ಮೆಂಟ್‌ಗೆ ಇಡಿ ತಂಡ ಬಿಟ್ಟುಹೋಗಿದೆ. ಬುಧವಾರ ಬೆಳಗ್ಗೆ ಡಾಲರ್ಸ್ ಕಾಲೋನಿಯಲ್ಲಿರುವ ನಾಗೇಂದ್ರ ನಿವಾಸದಿಂದ ಕರೆತಂದು ವಿಚಾರಣೆ ಮಾಡಿದ್ದರು. ಇದೀಗ ವಿಚಾರಣೆ ಅಂತ್ಯ ಬಳಿಕ ಹೇಗೆ ಕರೆತಂದ ಹಾಗೇ ಬಿಟ್ಟುಬಂದಿದ್ದಾರೆ.

ಜುಲೈ 13ರಂದು ನಾಗೇಂದ್ರ ಅವರನ್ನು ಇಡಿ ಅಧಿಕಾರಿಗಳು ವಶಕ್ಕೆ ಪಡೆದಿದ್ದರು. ಬಳಿಕ ಯಲಹಂಕದಲ್ಲಿರುವ ಜನಪ್ರತಿನಿಧಿಗಳ ನ್ಯಾಯಾಲಯದ ನ್ಯಾಯಾಧೀಶರ ಮನೆಗೆ ಹಾಜರುಪಡಿಸಲಾಗಿತ್ತು. ಈ ವೇಳೆ ನ್ಯಾಯಾಧೀಶರಾದ ಸಂತೋಷ್ ಗಜಾನನ ಭಟ್ ಅವರು 5 ದಿನಗಳ ಕಾಲ ಕಸ್ಟಡಿಗೆ ನೀಡಿದ್ದರು. 18ನೇ ತಾರೀಖಿನಂದು ಬೆಳಗ್ಗೆ 11ಕ್ಕೆ ಮತ್ತೆ ಹಾಜರುಪಡಿಸುವಂತೆ ಸೂಚನೆ ನೀಡಿದ್ದರು.

ಏನಿದು ಪ್ರಕರಣ?: ವಾಲ್ಮೀಕಿ ನಿಗಮದಲ್ಲಿ ಅವ್ಯವಹಾರ ನಡೆದಿದೆ ಎಂದು ಆರೋಪಿಸಿ ನಿಗಮದ ಅಧೀಕ್ಷಕ ಚಂದ್ರಶೇಖರ್ ಎಂಬಾತ ಮೇ 26ರಂದು ಶಿವಮೊಗ್ಗದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು. ನಿಗಮದ 187 ಕೋಟಿ ರು.ಗಳನ್ನು ವಿವಿಧ ಖಾತೆಗಳಿಗೆ ವರ್ಗಾಯಿಸಲಾಗಿದೆ, ಇದರಲ್ಲಿ 88 ಕೋಟಿ ಹಣ ದುರುಪಯೋಗವಾಗಿದೆ ಎಂದು ಅವರು ಡೆತ್‌ನೋಟ್‌ನಲ್ಲಿ ಬರೆದಿದ್ದರು. ಹೀಗಾಗಿ ನಿಗಮದ ಎಂಡಿ, ಲೆಕ್ಕಾಧಿಕಾರಿಯನ್ನು ಅಮಾನತು ಮಾಡಲಾಗಿತ್ತು. ನಂತರ ಅಧಿಕಾರಿಗಳ ಬಂಧನವಾಗಿತ್ತು. ಚಂದ್ರಶೇಖರ್ ಬರೆದಿರುವ ಡೆತ್ ನೋಟ್‌ನಲ್ಲಿ ಎಂಡಿ ಜೆ.ಜೆ ಪದ್ಮನಾಭ ಹಾಗೂ ಲೆಕ್ಕಾಧಿಕಾರಿ ಪರಶುರಾಮ್ ಹಾಗೂ ಯೂನಿಯನ್ ಬ್ಯಾಂಕ್ ಮ್ಯಾನೇಜರ್ ಸುಚಿಸ್ಮಿತಾ ಅವರೇ ನನ್ನ ಸಾವಿಗೆ ಕಾರಣ ಎಂದು ಬರೆದಿಟ್ಟಿದ್ದರು. ಈ ಸಂಬಂಧ ವಿನೋಬನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಎಂಡಿ ಜೆ.ಜೆ ಪದ್ಮನಾಭ ಹಾಗೂ ಲೆಕ್ಕಾಧಿಕಾರಿ ಪರಶುರಾಮ್ ಅವರನ್ನು ರಾಜ್ಯ ಸರಕಾರ ಅಮಾನತುಗೊಳಿಸಿತ್ತು.

ಕುಸ್ತಿ ಫೆಡರೇಷನ್ ವಿರುದ್ಧ ಗುಡುಗಿದ ಪಿ.ಟಿ ಉಷಾ

ದೆಹಲಿ: ಪ್ಯಾರಿಸ್ ಒಲಿಂಪಿಕ್ಸ್ ಸಂಘಟಕರಿಗೆ ಕಳುಹಿಸಲಾದ ಪಟ್ಟಿಯಲ್ಲಿ ಅಂತಿಮ ಪಂಘಲ್ ಅವರ ತರಬೇತುದಾರರ ಹೆಸರನ್ನು ಕೈಬಿಟ್ಟಿದ್ದು, ಈ ನಿಟ್ಟಿನಲ್ಲಿ ಭಾರತ ಕುಸ್ತಿ ಫೆಡರೇಷನ್ ಸಮಿತಿ ವಿರುದ್ಧ ಭಾರತ ಒಲಿಂಪಿಕ್ ಸಂಸ್ಥೆ ಅಧ್ಯಕ್ಷೆ ಪಿ.ಟಿ. ಉಷಾ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಭಾರತ ಕುಸ್ತಿ ಫೆಡರೇಷನ್ ಅಮಾನತಿನಲ್ಲಿದ್ದಾಗ ಅಡ್ಹಾಕ್ ಸಮಿತಿಯು ಸಂಘಟಕರಿಗೆ ಹೆಸರುಗಳ ಪಟ್ಟಿಯನ್ನು ಕಳುಹಿಸಿತ್ತು. ಈ ವೇಳೆ ಸಮಿತಿಯು ಸರಿಯಾಗಿ ಕರ್ತವ್ಯ ನಿರ್ವಹಿಸಿಲ್ಲ ಎಂದು ಅವರು ಆರೋಪಿಸಿದ್ದಾರೆ. ಪ್ಯಾರಿಸ್‌ಗೆ ಪಂಘಲ್ ಅವರ ಆದ್ಯತೆಯ ತರಬೇತುದಾರರಿಗೆ ವೀಸಾ ಮಂಜೂರು ವಿಳಂಬವಾದ ಹಿನ್ನೆಲೆಯಲ್ಲಿ ಅವರು ಈ ರೀತಿ ಪ್ರತಿಕ್ರಿಯೆ ನೀಡಿದ್ದಾರೆ. ಹಿಸಾರ್‌ನಲ್ಲಿ ತರಬೇತಿ ಪಡೆಯುತ್ತಿರುವ 19 ವರ್ಷದ ಪಂಘಲ್, 2023ರಲ್ಲಿ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಕಂಚು ಗೆಲ್ಲುವ ಮೂಲಕ ಪ್ಯಾರಿಸ್ ಕ್ರೀಡಾಕೂಟಕ್ಕೆ ಅರ್ಹತೆ ಗಳಿಸಿದ ಭಾರತದ ಮೊದಲ ಕುಸ್ತಿಪಟುವಾಗಿದ್ದಾರೆ. ಪಂಘಲ್ ಅವರು ತನ್ನ ಕೋಚ್‌ಗಳಾದ ಭಗತ್ ಸಿಂಗ್, ವಿಕಾಸ್ ಮತ್ತು ಫಿಸಿಯೋಥೆರಪಿಸ್ಟ್ ಹೀರಾ ಅವರೊಂದಿಗೆ ಪ್ಯಾರಿಸ್‌ಗೆ ತೆರಳಲು ಬಯಸಿದ್ದು, ಈ ಎಲ್ಲರ ಹೆಸರುಗಳಿಗೆ ಐಒಸಿ ಹಸಿರುನಿಶಾನೆ ನೀಡಿತ್ತು. ಆದರೆ, ನೆರವು ಸಿಬ್ಬಂದಿಯು ಇನ್ನೂ ವೀಸಾ ಮಂಜೂರಾತಿಗಾಗಿ ಕಾಯುತ್ತಿದ್ದಾರೆ. ಆಗಸ್ಟ್ 3ರಂದು ಕುಸ್ತಿಪಟುಗಳು ಪ್ಯಾರಿಸ್‌ಗೆ ತಲುಪಬೇಕಿದೆ. ಆದರೆ, ನೆರವು ಸಿಬ್ಬಂದಿಗೆ ಆಗಸ್ಟ್ 2ಕ್ಕೆ ಬಯೋ ಮೆಟ್ರಿಕ್ಸ್‌ಗೆ ಕಾಲಾವಕಾಶ ನೀಡಲಾಗಿದೆ. ಭೂಪೇಂದ್ರ ಸಿಂಗ್ ಬಾಜ್ವಾ ಮುಖ್ಯಸ್ಥರಾಗಿದ್ದ ಅಡ್ಹಾಕ್ ಸಮಿತಿಯಲ್ಲಿ ಎಂ.ಎಂ. ಸೋಮಯ್ಯ ಮತ್ತು ಮಂಜುಷಾ ಕನ್ವರ್ ಸದಸ್ಯರಾಗಿದ್ದರು.

ಗೌತಮ್ ಗಂಭೀರ್ ಸಲಹೆ ತಿರಸ್ಕರಿಸಿತೇ ಬಿಸಿಸಿಐ?

ಬೆಂಗಳೂರು: ನೂತನ ಕೋಚ್ ಆಗಿ ಗೌತಮ್ ಗಂಭೀರ್ ಅವರನ್ನು ನೇಮಕಗೊಳಿಸಿದ ನಂತರ ಬಿಸಿಸಿಐ ನೂತನ ಸಹಾಯಕ ಸಿಬ್ಬಂದಿಗಾಗಿ ಹುಡುಕಾಟ ಮುಂದುವರಿಸಿದ್ದು, ತಂಡದ ವಿವಿಧ ಹುದ್ದೆಗಾಗಿ ಗಂಭೀರ್ ಸೂಚಿಸಿರುವ ಐವರ ಹೆಸರನ್ನು ಬಿಸಿಸಿಐ ತಿರಸ್ಕರಿಸಿ ಕೇವಲ ಒಂದು ಹೆಸರನ್ನು

ಅನುಮೋದಿಸಿದೆ ಎಂದು ವರದಿಯಾಗಿದೆ.

ಗಂಭೀರ್ ಅವರು ವಿವಿಧ ಹುದ್ದೆಗಳಿಗಾಗಿ ಆರ್. ವಿನಯಕುಮಾರ್, ಮೋರ್ನೆ ಮೊರ್ಕೆಲ್, ಅಭಿಷೇಕ್ ನಾಯರ್, ರಿಯಾನ್ ಟೆನ್ ಡೊಸ್ಚೆಟ್, ಜಾಂಟಿ ರೋಡ್ಸ್, ಲಕ್ಷ್ಮೀಪತಿ ಬಾಲಾಜಿ ಹೆಸರನ್ನು ಸೂಚಿಸಿದ್ದರು. ಆದರೆ ಮಂಡಳಿಯು ಈ ಎಲ್ಲ ಆಟಗಾರರ ಪೈಕಿ ಒಬ್ಬರನ್ನು ಮಾತ್ರ ಒಪ್ಪಿಕೊಂಡಿದೆ ಎನ್ನಲಾಗಿದೆ.

ಸದ್ಯ ಕೋಲ್ಕತ್ತಾ ನೈಟ್ ರೈಡರ್ಸ್‌ನ ಸಹಾಯಕ ಕೋಚ್ ಆಗಿ ಕಾರ್ಯನಿರ್ವಹಿಸುತ್ತಿರುವ ಅಭಿಷೇಕ್ ನಾಯರ್ ಹೊರತುಪಡಿಸಿ ಗಂಭೀರ್ ಸೂಚಿಸಿರುವ ಎಲ್ಲ ಹೆಸರುಗಳನ್ನು ಬಿಸಿಸಿಐ ತಿರಸ್ಕರಿಸಿದೆ ಎಂದು ಇಕಾನಾಮಿಕ್ ಟೈಮ್ಸ್ ವರದಿ ಮಾಡಿದೆ. ಈ ಕುರಿತು ಅಧಿಕೃತ ಘೋಷಣೆ ಇನ್ನೂ ಆಗಿಲ್ಲ, ನಾಯರ್ ಅವರನ್ನು ಕೋಚಿಂಗ್ ಸಿಬ್ಬಂದಿಯಾಗಿ ಸೇರ್ಪಡೆಗೊಳಿಸುವಂತೆ ಗಂಭೀರ್ ಮಾಡಿರುವ ಮನವಿಗೆ ಬಿಸಿಸಿಐ ಸಮ್ಮತಿಸಿದೆ. ಟೀಮ್ ಇಂಡಿಯಾದ ಬೌಲಿಂಗ್ ಹಾಗೂ ಫೀಲ್ಡಿಂಗ್ ಕೋಚ್‌ಗಾಗಿ ಹುಡುಕಾಟ ಮುಂದುವರಿದಿದೆ. ಈ ಹಿಂದೆ ರವಿಶಾಸ್ತ್ರಿ, ರಾಹುಲ್ ದ್ರಾವಿಡ್‌ಗೆ ತಮ್ಮ ಕೋಚಿಂಗ್ ಸಿಬ್ಬಂದಿ ಆಯ್ಕೆ ಮಾಡಲು ಮುಕ್ತ ಅವಕಾಶ ನೀಡಲಾಗಿತ್ತು. ಆದರೆ ಈ ವಿಚಾರದಲ್ಲಿ ಗಂಭೀರ್‌ಗೆ ಸ್ವತಂತ್ರ ನೀಡಲಾಗಿಲ್ಲ.

ಮೂರು ಬಾರಿ ಇನ್ಸ್ಟಾಗ್ರಾಂ ತಲಾಖ್ | ವಿಷಯ ಸಾರ್ವಜನಿಕಗೊಳಿಸಿದ ಶೈಖಾ ಮಹ್ರಾ

ಪತಿಗೆ ದುಬೈ ರಾಜಕುವರಿ ವಿಚ್ಛೇದನ

ದುಬೈ: ದುಬೈ ಆಡಳಿತಗಾರನ ಪುತ್ರಿ ಶೈಖಾ ಮಹ್ರಾ ಬಿಂತ್ ಮೊಹಮ್ಮದ್ ಬಿನ್ ರಶೀದ್ ಅಲ್ ಮಕ್ತೌಮ್ ಅವರು ತಮ್ಮ ಪತಿ ಶೇಖ್ ಮನಾ ಬಿನ್ ಮೊಹಮ್ಮದ್ ಬಿನ್ ರಶೀದ್ ಬಿನ್ ಮನಾ ಅಲ್ ಮಕ್ತೌಮ್ ಅವರಿಗೆ ಇನ್ಸ್ಟಾಗ್ರಾಮ್ ಮೂಲಕ ವಿಚ್ಛೇದನ ನೀಡಿದ್ದಾರೆ.

ಇನ್ಸ್ಟಾಗ್ರಾಮ್ ನಲ್ಲಿ 3 ಬಾರಿ ತಲಾಖ್ ಹೇಳಿ ವಿಚ್ಛೇದನ ನೀಡಿದೆ ಎಂದು ರಾಜಕುಮಾರಿ ಶೈಖಾ ಮಹ್ರಾ ಸಾರ್ವಜನಿಕವಾಗಿ ಘೋಷಿಸಿದ್ದಾರೆ.

ಡಿಯರ್ ಹಸ್ಬೆಂಡ್ ನೀವು ಬೇರೆ ಸಂಗಾತಿ ಜತೆಗೆ ಇರುವ ಹೊತ್ತಲ್ಲೇ ನಾನು ವಿಚ್ಛೇದನ ಘೋಷಿಸುತ್ತಿದ್ದೇನೆ. ನಾನು ತಲಾಖ್ ಎಂದು 3 ಬಾರಿ ಬರೆದಿದ್ದೇನೆ ಟೇಕ್ ಕೇರ್... ಇಂತಿ ನಿಮ್ಮ

ಮಾಜಿ ಪತ್ನಿ ಎಂದು ರಾಜಕುಮಾರಿ ಸಂದೇಶ ರವಾನೆ ಮಾಡಿದ್ದಾರೆ. ಮೊದಲ ಮಗು ಜನಿಸಿದ 2 ತಿಂಗಳ ನಂತರ ರಾಜಕುಮಾರಿ ಇಂಥ ಕಠಿಣ ನಿರ್ಧಾರ ಕೈಗೊಂಡಿದ್ದಾರೆ.

ಈ ಸುದ್ದಿ ವೈರಲ್ ಆಗಿದೆ: ದಂಪತಿ ಸಾಮಾಜಿಕ ಮಾಧ್ಯಮದಲ್ಲಿ ಅನ್ ಫಾಲೋ ಮಾಡಿದ್ದಾರೆ ಮತ್ತು ತಮ್ಮ ಪ್ರೊಫೈಲ್‌ಗಳಿಂದ ಒಟ್ಟಿಗೆ ಇರುವ ಎಲ್ಲಾ ಫೋಟೋಗಳನ್ನು ಡಿಲೀಟ್ ಮಾಡಿದ್ದಾರೆ.

ಶೈಖಾ ಮಹ್ರಾ ಅವರು ಕೈಗಾರಿಕೋದ್ಯಮಿ: ಮಕ್ತೌಮ್ ಅವರನ್ನು ಮೇ 2023 ರಲ್ಲಿ ವಿವಾಹವಾದರು. ವರ್ಷದ ನಂತರ ಮಗಳು ಜನಿಸಿದಳು.

ಇಸ್ಲಾಮಿಕ್ ಕಾನೂನಿನಲ್ಲಿ, ತ್ವರಿತ ವಿಚ್ಛೇದನವನ್ನು ತಲಾಕ್-ಎ-ಬಿದ್ದತ್ ಎನ್ನಲಾಗುತ್ತದೆ. ಪತಿ ತಕ್ಷಣ ಮದುವೆ ರದ್ದು ಮಾಡಲು 3 ಬಾರಿ ತಲಾಖ್ ಹೇಳುತ್ತಾರೆ. ಪುರುಷರು ಮಾತ್ರ ತಲಾಖ್ ಹೇಳಬಹುದು. ಮಹಿಳೆ ಖುಲಾ ಎಂಬ ವಿಭಿನ್ನ ಪ್ರಕ್ರಿಯೆ ಮೂಲಕ ವಿಚ್ಛೇದನ ಪಡೆಯಬಹುದು.

ತರಕಾರಿಗಳ ಬೆಲೆ ಇಳಿಕೆ ನಿಟ್ಟುಸಿರಿಟ್ಟ ಗ್ರಾಹಕರು

ತರಕಾರಿ ಬೆಳೆಗೆ ಪೂರಕ ಮಳೆಯಾದ ಹಿನ್ನೆಲೆ ಶೇ.20 ಪೂರೈಕೆ ಹೆಚ್ಚಳ | ಆಷಾಡ ಮಾಸ ಪರಿಣಾಮ ಕಾರಣ

ಹೂವಪ್ಪ ಐ.ಹೆಚ್. ಬೆಂಗಳೂರು

ಗಗನಕ್ಕೇರಿದ್ದ ತರಕಾರಿಗಳ ಬೆಲೆ ಇದೀಗ ಅರ್ಧದಷ್ಟು ಇಳಿಕೆಯಾಗಿದ್ದು, ಗ್ರಾಹಕರಿಗೆ ನೆಮ್ಮದಿ ತಂದಿದೆ. ಸುಮಾರು ಒಂದೂವರೆ ತಿಂಗಳಿಂದ ಏರುಮುಖದಲ್ಲಿದ್ದ ಬೆಲೆ ಇಳಿಕೆಯಾಗಿದ್ದರಿಂದ ಗೃಹಿಣಿಯರಲ್ಲಿ ಸಂತಸ ಮೂಡಿದೆ.

ಆದರೆ ಮಾರುಕಟ್ಟೆಯಲ್ಲಿ ತರಕಾರಿ ಬೆಲೆ ಇಳಿಕೆ ಕಂಡಿದ್ದರಿಂದ ರೈತರಿಗೆ ಬೇಜಾರಾಗಿದೆ. ಹೌದು, ಕಳೆದ ತಿಂಗಳು ಚಿಲ್ಲರೆ ದರ ಬೀನ್ಸ್ ಕೆಜಿಗೆ 190-200 ರು. ಇತ್ತು. ಈಗ 60- 70 ರು.ಗೆ ಬಂದಿದೆ. ಹಿರೇಕಾಯಿ, ಹಾಗಲಕಾಯಿ, ನವಿಲುಕೋಸು, ಗೌರಿಕಾಯಿಗಳಿಗೆ 80-90 ಇದ್ದ ಬೆಲೆ ಈಗ 50-60 ರು.ಗೆ ಇಳಿದಿದೆ. ಮೂಲಂಗಿ-60, ಬದನೇಕಾಯಿ, ಬಿಟಾಟ್, 60-70 ಇದ್ದ ಬೆಲೆ, 40-60 ರು.ಗೆ ಬಂದಿದೆ. ಹೀಗೆ ಕೆಲವೊಂದು ತರಕಾರಿ ಬೆಲೆ ಒಂದೇ ವಾರದಲ್ಲಿ ಕುಸಿತ ಕಂಡಿದೆ. ಇನ್ನೂ ಕೇವೊಂದು ತರಕಾರಿ ಬೆಲೆ ಇಳಿಕ್ಕೆಯಾಗಿಲ್ಲ. ಕ್ಯಾರೆಟ್, ಕ್ಯಾಪ್ಸಿ ಕಮ್, ಬಟಾಣಿ ಕೆಜಿಗೆ 80-90 ರು. ಮುಂದುವರೆದಿದೆ. ಹೆಚ್ಚು ತರಕಾರಿ ಬೆಳೆಯುವ ಪ್ರದೇಶಗಳಾದ ಕೋಲಾರ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಚಿಂತಾಮಣಿ ಪ್ರದೇಶಗಳಲ್ಲಿ ಮಳೆ ತರಕಾರಿ ಬೆಳೆಗೆ ಪೂರಕವಾದ ಹಿನ್ನೆಲೆಯಲ್ಲಿ ಶೇ.20 ಪೂರೈಕೆ ಅಧಿಕಾವಾಗಿದೆ ಜತೆಗೆ ಈಗ ಆಷಾಡಮಾಸ ಪರಿಣಾಮ ಸಮಾರಂಭಗಳು ಇಲ್ಲದಿರುವುದು ತರಕಾರಿ ಬೆಲೆ ಇಳಿಕೆಗೆ ಕಾರಣ ಎನ್ನಲಾಗುತ್ತಿದೆ.

ಬಿರುಬಿಸಿಲಿನ ತಾಪಮಾನಕ್ಕೆ ರೈತರು ಬೆಳೆ ಬೆಳೆಯಲಾಗದೆ ಪರದಾಡುವಂತಾಗಿತ್ತು, ಆದರೆ, ಕಳೆದ ಒಂದು ತಿಂಗಳಿನಿಂದ ಉತ್ತಮವಾದ ಮಳೆಯಿಂದ ಬೆಂಗಳೂರು ಗ್ರಾಮಾಂತರ ತರಕಾರಿ ಬರಲಾರಂಭಿಸಿದೆ. ಪರಿಣಾಮ ತರಕಾರಿ ಬೆಲೆಯಲ್ಲಿ ಇಳಿಕೆ ಕಂಡಿರುವುದು ಇದು ಸಹ ಕಾರಣವಾಗಿದೆ.

ಬೇಸರಗೊಂಡ ರೈತರು: ಕಳೆದ 6 ತಿಂಗಳಿನಿಂದ ಮಳೆಯಿಲ್ಲದೆ ರೈತರು ತರಕಾರಿಗಳನ್ನು ಬೆಳೆಯೋದೇ ನಿಲ್ಲಿಸಿದ್ದರು. ಆದರೆ, ಇತ್ತೀಚೆಗೆ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ರೈತರು ಹೆಚ್ಚಾಗಿ ಹಣ್ಣು-ತರಕಾರಿಗಳನ್ನು ಬೆಳೆಯಲು ಆರಂಭಿಸಿದ್ದಾರೆ. ಅದರಂತೆ ಬೇರೆ ಬೇರೆ ಹಣ್ಣು ತರಕಾರಿಗಳನ್ನು ಹೆಚ್ಚಾಗಿ ಬೆಳೆದು ಮಾರುಕಟ್ಟೆಗೆ ಹಾಕುತ್ತಿದ್ದಾರೆ. ತರಕಾರಿ ಉತ್ಪಾದನೆ

ಹಿಂದಿನಗಿಂತ ಈಗ ಶೇ. 20 ಪೂರೈಕೆ ಅಧಿಕಾವಾಗಿದೆ ಜತೆಗೆ ಈಗ ಆಷಾಡಮಾಸ ಪರಿಣಾಮ ಮದುವೆ, ಧಾರಮಿಕ ಪೂಜೆ ಸಮಾರಂಭಗಳು ಇಲ್ಲದಿರುವುದು ತರಕಾರಿ ಬೆಲೆ ಇಳಿಕೆಗೆ ಕಾರಣ.

- ಮಂಜುನಾಥ್
ಎಪಿಎಂಸಿ ತರಕಾರಿ ವ್ಯಾಪಾರಿ ಬೆಂಗಳೂರು

ಹೆಚ್ಚಾಗಿದ್ದು, ಈಗ ಸರಿಯಾದ ಬೆಲೆ ರೈತರಿಗೆ ಸಿಗುತ್ತಿಲ್ಲ ಎಂದು ರೈತ ವೀರೇಶ್ ಹೇಳಿದ್ದಾರೆ.

ಡಿಮ್ಯಾಂಡ್: ಕೋಲಾರ ಮಾರುಕಟ್ಟೆಯಿಂದಲೇ ಎಲ್ಲಾ ಮಾರುಕಟ್ಟೆಗೆ ಪೂರೈಕೆಯಾಗುತ್ತಿದ್ದೂ, ಟೊಮ್ಯಾಟೊಗೆ ಎಂದಿ ನಂತೆ ಉತ್ತಮ ಬೇಡಿಕೆ ಇದೆ. 15 ಕೆಜಿ ಬಾಕ್ಸ್ ಟೊಮ್ಯಾಟೊ 300-600 ಇದ್ದ ಬೆಲೆ ಈಗ ಕಡಿಮೆ ಗುಣಮಟ್ಟಕ್ಕೆ 800 ರು., ಉತ್ತಮ ಟೊಮ್ಯಾಟೊ 1200 ರು.ವರೆಗೆ ಮಾರಾಟವಾಗುತ್ತಿದೆ.

ಸಗಟು ಕೆಜಿಗೆ 50-65 ರು. ಆಗಿದ್ದು ಚಿಲ್ಲರೆ ದರ 70-90 ರು.ಗೆ ಮಾರಾಟವಾಗುತ್ತಿದೆ. ಆದರೆ, ಮಳೆಯಿಂದ ಕೆಲವು ಮಾರಕ ಖಾಯಿಲೆಗಳು ಸಹ ಹಣ್ಣು-ತರಕಾರಿಗಳಿಗೆ ಬರಲಾರಂಭಿಸಿದೆ. ಇದು ರೈತರಿಗೆ ಮತ್ತೊಂದು ಸಂಕಷ್ಟವಾಗಿದೆ. ಬೆಲೆ ಇದ್ದರೂ ಖುಷಿ ಇಲ್ಲ ಎನ್ನುತ್ತಾರೆ ರೈತರು. ಈಗಾಗಲೇ ಟೊಮ್ಯಾಟೊಗೆ ಚುಕ್ಕೆ ರೋಗ, ಎಲೆ ಸುರುಳಿ ಸೇರಿದಂತೆ ಹಲವು ರೋಗಗಳು ಬರಲಾರಂಭಿಸಿವೆ. ಹಾಗಾಗಿ ಇಷ್ಟು ದಿನ ಉಷ್ಣಾಂಷದಿಂದ ಬೆಳೆಗಳನ್ನು ಕಾಪಾಡಿಕೊಳ್ಳುವುದು ರೈತರಿಗೆ ಸವಾಲಾಗಿದೆ. ಈಗ ಮಳೆಯಿಂದ ರಕ್ಷಣೆ ಮಾಡಬೇಕಾಗಿದೆ. ಮೊದಲು ಬೆಲೆ ಇತ್ತು, ಬೆಳೆ ಇರಲಿಲ್ಲ. ಈಗ ಬೆಲೆ ಇಲ್ಲ, ಬೆಳೆ ಇದೆ. ಇದು ರೈತರ ಪರಿಸ್ಥಿತಿಯಾಗಿದೆ.

ಒಟ್ಟಿನಲ್ಲಿ ಬೆಲೆ ಏರಿಕೆಯಿಂದ ಕಂಗಾಲಾಗಿದ್ದ ಗ್ರಾಹಕರು ಸಧ್ಯಕ್ಕೆ ನಿಟ್ಟುಸಿರುಬಿಟ್ಟರೆ, ಇತ್ತ ರೈತರು ಮತ್ತೆ ಬೆಲೆಯಿಲ್ಲದೆ ಸಂಕಷ್ಟಕ್ಕೆ ಸಿಲುಕಿದ್ದಾರೆ.

ದೌರ್ಜನ್ಯ: ಜಪಾನ್ ಫುಟ್‌ಬಾಲಿಗ ಬಂಧನ

ಟೋಕಿಯೊ: ಜಪಾನ್ ಫುಟ್‌ಬಾಲಿಗ ಕೈಶು ಸಾನೊ ಅವರನ್ನು ಮಹಿಳೆಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿರುವ ಆರೋಪದಲ್ಲಿ ಪೊಲೀಸರು ಬಂಧಿಸಿದ್ದಾರೆ.

ಭಾನುವಾರದಂದು ಫುಟ್‌ಬಾಲ್ ಆಟಗಾರ ಮತ್ತು ಅವರ ಇಬ್ಬರು ಸ್ನೇಹಿತರು ಟೋಕಿಯೊದ ಹೋಟೆಲೊಂದರಲ್ಲಿ ಮಹಿಳೆಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ ಎಂದು ಜಪಾನ್ ನ ಸರಕಾರಿ ಟೆಲಿವಿಶನ್ ಎನ್‌ಎಚ್‌ಕೆ ವರದಿ ಮಾಡಿದೆ. ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದ ಫೋನ್ ಕರೆಯೊಂದನ್ನು ಸ್ವೀಕರಿಸಿದ ಪೊಲೀಸರು, ತಕ್ಷಣ ಕಾರ್ಯಾಚರಣೆಗಿಳಿದು ಮೂವರು ಆರೋಪಿಗಳನ್ನು ಹೋಟೇಲ್ ಸಮೀಪ ಬಂಧಿಸಿದರು ಎಂದು ವರದಿಗಳು ತಿಳಿಸಿವೆ. ಸಾನೊ ಜಪಾನ್ ಪರವಾಗಿ ಮೂರು ಪಂದ್ಯಗಳಲ್ಲಿ ಆಡಿದ್ದಾರೆ. ಈ ವರ್ಷ ಖತರ್‌ನಲ್ಲಿ ನಡೆದ ಏಷ್ಯನ್ ಕಪ್‌ನಲ್ಲಿ ಅವರು ಜಪಾನ ತಂಡದಲ್ಲಿದ್ದರು.

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ
ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ
ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine
@gmail.com

ಸುತ್ತ ಮುತ್ತ

ಎಲ್ಲರೂ ಆಚರಿಸುವ ಹಬ್ಬ

ದೇಶದ ದಕ್ಷಿಣ ಭಾರತದಲ್ಲಿ ಅದರಲ್ಲೂ ಉತ್ತರ ಕರ್ನಾಟಕದ ಭಾಗಗಳಲ್ಲಿ ಮೊಹರಮ್ ಹಬ್ಬದ ಆಚರಣೆ ವಿಶೇಷ ಹಾಗೂ ವಿಶಿಷ್ಟ ವೈಭವ ಹೊಂದಿದೆ. ಇದು ಹತ್ತು ದಿನಗಳವರೆಗೆ ಆಚರಿಸುವ ಹಬ್ಬ. ಮೊದಲ ದಿನದಿಂದ ಮೊಹರಂ ಕೊನೆ ದಿನದವರೆಗೂ ಹಳ್ಳಿ ಹಳ್ಳಿಗಳಲ್ಲಿ ದೇವ್ರುಗಳು; ಏಳನೇ ದಿನಕ್ಕೆ ಸಂದಲ್ ರಾತ್ರಿ, ಒಂಬತ್ತು ದಿನಗಳಿಗೆ ಕತ್ತಲ್ ರಾತ್ರಿ ಮತ್ತು ಮೊಹರಮ್ ಕೊನೆ ದಿನದಂದು ಅಶುರಾ ಎಂಬ ಹೆಸರಿನಲ್ಲಿ ಮೆರವಣಿಗೆ ಮಾಡುತ್ತಾರೆ.

ಪ್ರತಿನಿತ್ಯ ದೇವರುಗಳಿಗೆ ದೀನ್ ಹಾಕುತ್ತಾ, ಚಿಕ್ಕವರಿಂದ ಹಿಡಿದು ದೊಡ್ಡವರವರೆಗೂ ಹಬ್ಬ ಮಾಡುವುದು ವಿಶೇಷ ಎನಿಸಿದೆ. ಹುಲಿ ಸೋಗು (ಹುಲಿ ವೇಷ), ಅಚ್ಚಳ್ಳಿ ಸೋಗು, ಕಳ್ಳಬಾಡಗಿ ಸೋಗು ವೇಷ ಧರಿಸಿ, ಹಿಂದೂ ಮುಸ್ಲಿಂ ಎಂಬ ಭೇದ ಭಾವ ಮರೆತು ಎಲ್ಲರೂ ಸೇರಿ ಆಚರಿಸುವ ಹಬ್ಬವಿದು. ರಾಯಚೂರು ಜಿಲ್ಲೆಯ ಮುದ್ಗಲ್‌ನಲ್ಲಿ, ರಾಯಚೂರು ನಗರ, ಕೊಪ್ಪಳ ನಗರ, ಮಂಗಳಾಪುರ, ಕುದುರಿ ಮೋತಿ, ಭಾಗ್ಯನಗರ, ಚಿತ್ರದುರ್ಗ, ಗದಗ, ಲಕ್ಷ್ಮೇಶ್ವರ, ಚಿತ್ರದುರ್ಗ, ಶಿವಮೊಗ್ಗ, ಹಾಸನ - ಹೀಗೆ ವಿವಿಧ ಭಾಗಗಳಲ್ಲಿ ವಿಶಿಷ್ಟ ರೀತಿಯಲ್ಲಿ ಆಚರಿಸಲ್ಪಡುತ್ತದೆ.

ಅರಬಿಕ್ ಭಾಷೆಯಲ್ಲಿ ಮೊಹರಂ ಎಂದರೆ ನಿಷೇಧ ಎಂದರ್ಥ. ಪ್ರವಾದಿ ಪೈಗಂಬರರ ಮೊಮ್ಮಕ್ಕಳಾದ ಹಸೇನ್ ಹಾಗೂ ಹುಸೇನ್ ಅಲಿ ಸಹೋದರರು ಸಾ.ಶ. 680

ರಲ್ಲಿ ಕರ್ಬಾಲಾದಲ್ಲಿ ನಡೆದ ಹೋರಾಟದಲ್ಲಿ ಕೊಲ್ಲಲ್ಪಟ್ಟರು. ಇದರ ಸ್ಮರಣಾರ್ಥವಾಗಿ ಇಂದು ಎಲ್ಲಾ ಕಡೆಯಲ್ಲಿ ಆಚರಿಸುವ ಹಬ್ಬ ಮೊಹರಮ್. ಈ ಹಬ್ಬದಲ್ಲಿ ಅಶುರಾ ಎಂಬುದು ಶಿಯಾ ಮುಸ್ಲಿಮ್ ಬಾಂಧವರಿಗೆ ಶೋಕಾಚರಣೆಯ ಹಬ್ಬವಾಗಿರುತ್ತದೆ. ಮೊಹರಂ ಎಂದರೆ ನಿಷೇಧ; ಹಸೀನ್ ಹಾಗೂ ಹುಸೇನ್ ಅಲಿ ಸಹೋದರರ ಸ್ಮರಣಾರ್ಥವಾಗಿ ಹತ್ತು ದಿನಗಳವರೆಗೆ ಮಾಂಸ ಹಾರಕ್ಕೂ ನಿಷೇಧವಿದೆ. ಕರ್ಬಾಲಾದಲ್ಲಿ ಹಸೆನ್ ಹಾಗೂ ಹುಸೆನ್ ಅಲಿ ಸಹೊದರರು ಕುಡಿಯಲು ನೀರು ಸಿಗದೆ, ಬಳಲಿ ಯುದ್ಧದಲ್ಲಿ ಅಸುನೀಗಿದರು. ಅದರ ಸ್ಮರಣಾರ್ಥ ಇಂದು ಮುಸ್ಲಿಮರು ಈ ಹತ್ತು ದಿನಗಳ ಹಬ್ಬಗಳಲ್ಲಿ ನೀರು, ಶರಬತ್ತುನ್ನು ಕೊಡುವ ವ್ಯವಸ್ಥೆಯನ್ನು ಮಾಡುತ್ತಾರೆ. ಎಲ್ಲಾ ಜನಾಂಗದವರೂ ಒಟ್ಟಾಗಿ ಆಚರಿಸುವ ಸಾಮರಸ್ಯದ ಉತ್ಸವ, ಹಬ್ಬ ಎಂದರೆ ಈ ಮೊಹರಮ್ ಹಬ್ಬ.

● **ಈರಪ್ಪ ಬಿಜಲಿ** ಕೊಪ್ಪಳ

ಹೆಲ್ತ್ ಕಾರ್ನರ್

ಶಕ್ತಿಯ ಆಗರ

ತನ್ನ ದೇಶದ ಜನರು ನಿಶ್ಶಕ್ತಿಯಿಂದ ಬಳಲುತ್ತಿದ್ದಾಗ, ಅವರಿಗೆ ಪೌಷ್ಟಿಕಾಂಶವು ಸುಲಭವಾಗಿ ದೊರಕಲು ಅನುಕೂಲವಾಗುವಂತೆ, ನುಗ್ಗೆ ಬೀಜಗಳನ್ನು ನಮ್ಮ ದೇಶದಿಂದ ಹಡಗಿನಲ್ಲಿ ತರಿಸಿಕೊಂಡು, ಎಲ್ಲೆಡೆ ಅದನ್ನು ಬೆಳೆದ ದೇಶ ಕ್ಯೂಬಾ. ಅತಿ ಕಡಿಮೆ ವೆಚ್ಚದಲ್ಲಿ, ಉತ್ತಮ ಗುಣಮಟ್ಟದ ಪೌಶ್ಟಿಕಾಂಶವನ್ನು ನೀಡುವಲ್ಲಿ ನುಗ್ಗೆ ಮರ ಎತ್ತಿದ ಕೈ. ಇದರ ಕಾಯಿ, ಎಲೆ, ಹೂವು, ಬೀಜ - ಎಲ್ಲದರಲ್ಲೂ ಹಲವು ಲವಣಾಂಶಗಳು ಮತ್ತು ಪೌಶ್ಟಿಕಾಂಶಗಳಿವೆ. ವಿಟಮಿನ್ 3, ಬಿ ಕಾಂಪ್ಲೆಕ್ಸ್, ಸಿ, ಕ್ಯಾಲ್ಸಿಯಂ, ಪೊಟಾಶಿಯಂ, ಕಬ್ಬಿಣ, ಮ್ಯಾಗ್ನೀಶಿಯಂ ಮೊದಲಾದ ಅಂಶಗಳನ್ನು ಹೊಂದಿರುವ ನುಗ್ಗೆಯನ್ನು ಆಹಾರವಾಗಿ ಉಪಯೋಗಿಸಬಹುದು. ಕಾಯಿಯನ್ನು ಸಾಂಬಾರು, ಪಲ್ಯ ಮತ್ತು ಎಲೆಯನ್ನು ಪಲ್ಯ, ಪುಡಿಯ ರೂಪದಲ್ಲಿ ಸೇವಿಸಬಹುದು. ಜಗತ್ತಿನ ಆರೋಗ್ಯಕ್ಕೆ ಭಾರತದ ಕೊಡುಗೆ ಈ ನುಗ್ಗೆ.

● **ಅಜಯ್ ಅಂಚೆಪಾಳ್ಯ**

ಬೆಂಕಿಯೊಂದಿಗೆ, ನೀರಿನೊಂದಿಗೆ ಯಾವಾಗಲೂ ನಾವು ಸರಸವಾಡಬಾರದು. ಜಾಲತಾಣಗಳಿಗೆ ತಮ್ಮ ಫೋಟೋ ಹಾಕುವ ನೆಪದಲ್ಲಿ ಸೆಲ್ಫಿ ಗೀಳಿನಿಂದಾಗಿ ಅನೇಕರು, ನೀರಿಗೆ ಸಿಲುಕಿ ದುರಂತ ಅಂತ್ಯ ಕಾಣುತ್ತಿದ್ದಾರೆ.

@vishwavaninews
ವಿಶ್ವವಾಣಿ
ಅನುದಿನವೂ ವಿರಾಮ ಒಂದು ನೆಪ
ಆರಾಮ
ಬೆಂಗಳೂರು | ಗುರುವಾರ 18 | 07 | 2024

ಮಳೆ ಸುರಿಯುವಾಗ ಇರಲಿ ಎಚ್ಚರ!

● **ಕಾಳಿಹುಂಡಿ ಶಿವಕುಮಾರ್**

ರಾಜ್ಯಾದ್ಯಂತ ಮಳೆ ಚುರುಕುಗೊಂಡಿದೆ. ನದಿಗಳಲ್ಲಿ ಪ್ರವಾಹ, ಗುಡ್ಡಗಳ ಇಳಿಜಾರಿನಲ್ಲಿ ಕುಸಿತ, ಹಲವು ದುರಂತಗಳು ನಡೆಯುತ್ತಿವೆ. ಅಕ್ಕ ಪಕ್ಕದ ಗ್ರಾಮಸ್ಥರು, ರೈತರು ನದಿಗೆ ನೀರು ಬಿಟ್ಟಿರುವುದನ್ನು ಗಮನಿಸದೆ ತಮ್ಮ ಹೊಲ-ಗದ್ದೆಗಳಿಗೆ ಕೆಲಸಕ್ಕೆ ಹೋಗುವ ಸಂದರ್ಭದಲ್ಲಿ ಅನೇಕ ದುರಂತಗಳನ್ನು ಕೂಡ ಎದುರಿಸುತ್ತಿದ್ದಾರೆ.

ನದಿಗಳಲ್ಲಿ ನೀರು ಹರಿಯುವುದನ್ನು ನೋಡಲೆಂದೇ ಕೆಲವರು ಹೋಗುತ್ತಾರೆ; ಅಲ್ಲಿ ಕೆಲವರು ತಮ್ಮ ಚೇಷ್ಟೆಗಳನ್ನು ಪ್ರಾರಂಭಿಸುತ್ತಾರೆ. ನೀರಿನ ಹತ್ತಿರಕ್ಕೆ ಹೋಗಿ ಸೆಲ್ಫಿ ತೆಗೆದುಕೊಳ್ಳುವುದು, ಸೇತುವೆ ಮೇಲೆ ನೀರು ಹರಿಯುತ್ತಿದ್ದಾಗ ವಾಹನ ಚಾಲನೆ ಮಾಡುವುದು, ಈಜುವುದು, ನೀರಿನಲ್ಲಿ ಆಟವಾಡುವುದು- ಇದರಿಂದಾಗಿ ದುರಂತಗಳು ಸಂಭವಿಸಿವೆ. ಈಚೆಗೆ ಜಲಪಾತದ ಕೆಳಭಾಗದಲ್ಲಿ ನೀರಿನಲ್ಲಿ ನಿಂತವರ ಮೇಲೆ ಒಮ್ಮೆಗೇ ನೀರು ಹರಿದು ದುರಂತವಾಗಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅವು

ಎದುರಿನಲ್ಲಿ ಮ್ಯಾನ್ ಹೋಲ್ ಇರಬಹುದು!

ನಗರ ಪ್ರದೇಶಗಳಲ್ಲಿ ಚರಂಡಿಯ ಮೂಲಕ ಮಳೆಯ ನೀರು ರಸ್ತೆಯ ಮೇಲೆಲ್ಲಾ ಹರಿಯುವುದರಿಂದ ಅಲ್ಲಿ, ಎಲ್ಲಿ ಮ್ಯಾನ್ ಹೋಲ್ ಅಥವಾ ಇನ್ನಿತರ ಗುಂಡಿಗಳು ಇರುತ್ತವೆ ಎನ್ನುವುದು ಗೊತ್ತಾಗುವುದಿಲ್ಲ! ಮುಖ್ಯವಾಗಿ ದ್ವಿಚಕ್ರ ಸವಾರದಾರರು ಎಚ್ಚರ ವಹಿಸಬೇಕು. ಮಳೆ ಬರುವಾಗ ರಸ್ತೆಗಳಿಗೆ ಹೊಂದಿಕೊಂಡ ಗುಡ್ಡಗಳು ಕೂಡ ಕುಸಿಯಬಹುದು, ಬೃಹತ್ ಮರಗಳು ನೆಲಕ್ಕುರುಳಬಹುದು. ವಾಹನ ಸವಾರದಾರರು ಮಳೆಗೆ ಸಂಪೂರ್ಣ ರಕ್ಷಣಾ ಸಾಮಗ್ರಿಗಳನ್ನು ತಮ್ಮ ಜೊತೆಯಲ್ಲಿ ಇಟ್ಟುಕೊಳ್ಳಬೇಕು.

ಪುನರಾವರ್ತನೆಯಾಗದಂತೆ ಎಲ್ಲರೂ ಎಚ್ಚರಿಕೆಯಿಂದ ಇರಲೇಬೇಕು.

ನದಿ ಪಾತ್ರಗಳಲ್ಲಿ ಎಚ್ಚರಿಕೆ

ಡ್ಯಾಮ್‌ನಿಂದ ಅತಿ ಹೆಚ್ಚು ನೀರನ್ನು ಬಿಟ್ಟಾಗ ಅದೊಂದು ಸುಂದರ ದೃಶ್ಯ. ಆದರೆ, ಅದನ್ನು ನೋಡುವಾಗ, ಎಷ್ಟು ಮುನ್ನೆಚ್ಚರಿಕೆ ವಹಿಸಿದರೂ ಸಾಲದು. ನೀರಿನ ಬಳಿ ಸೆಲ್ಫಿ ತೆಗೆಯುವುದು ಎಂದರೆ ಹರಾಕಿರಿ ಮಾಡಿಕೊಂಡಂತೆಯೇ ಸರಿ. ನದಿಯಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಈಜಿ ಕೆಲವರು ಸಾಹಸ ಪ್ರದರ್ಶನ ಮಾಡುತ್ತಾರೆ. ಇದು ಸಲ್ಲದು. ಜೊತೆಗೆ ಸೇತುವೆ ಮುಳುಗಿದ ಮೇಲು ಕೂಡ ಅದರಲ್ಲಿ ಹೋಗುವ ಪ್ರಯತ್ನ ಮಾಡುತ್ತಾರೆ. ತಗ್ಗು ಪ್ರದೇಶಗಳಲ್ಲಿರುವ ಮನೆಗಳು, ಜಮೀನುಗಳಲ್ಲಿ ಕೆಲಸ ಮಾಡುವ ಗ್ರಾಮಸ್ಥರು ಮಳೆಗಾಲದ ವರೆಗೆ ರಾತ್ರಿ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ನಮ್ಮ ಯುವಜನತೆ ಸೆಲ್ಫಿ ಹುಚ್ಚಿನಿಂದಾಗಿ ನದಿಗಳ ನೀರಿನ ಆಸು ಪಾಸು ಡ್ಯಾಮ್‌ಗಳಲ್ಲಿ, ಜಲಪಾತದ ನಡುವೆ, ಅಪಾಯಕಾರಿ ಸ್ಥಳದಲ್ಲಿ ದುರಂತಕ್ಕೆ ಈಡಾಗಿದ್ದಾರೆ.

ತಂದೆ -ತಾಯಿಗಳಲ್ಲಿ ಒಂದು ಮನವಿ - ಅತಿ ಮಳೆ ಇದ್ದಾಗ, ಮಕ್ಕಳಿಗೆ ರಜೆ ಕೂಡ ಇರುವುದರಿಂದ, ಜೊತೆಗೆ ಶನಿವಾರ ಭಾನುವಾರದಂದು ತಮ್ಮ ಸ್ನೇಹಿತರ ಜೊತೆ ಪ್ರವಾಸದ ನೆಪದಲ್ಲಿ ಅಪಾಯಕಾರಿ ಸ್ಥಳಗಳಿಗೆ ಹೋಗಿ ದುರಂತ ಸಂಭವಿಸಿರುವ ಅನೇಕ ಉದಾಹರಣೆಗಳು ಈಗಾಗಲೇ ನಡೆದಿವೆ. ಈ ಬಗ್ಗೆ ಎಚ್ಚರಿಕೆ ವಹಿಸಬೇಕು. ಮಕ್ಕಳ ಜೊತೆಯಲ್ಲಿ ಪೋಷಕರು ಇದ್ದರೆ ಒಳ್ಳೆಯದು. ಮಕ್ಕಳಿಗೆ ಮಳೆ ಎಂದರೆ ಪಂಚಪ್ರಾಣ. ಮಳೆಯಲ್ಲಿ ನೆನೆದು ಅವರ ಆರೋಗ್ಯದಲ್ಲೂ ಕೂಡ ಏರುಪೇರು ಆಗಬಹುದು.

ಪ್ರಕೃತಿಯ ಆ ನೀರಿನ ಸೌಂದರ್ಯವನ್ನು ನಾವು ದೂರದಿಂದಲೇ ನೋಡಿ ಸಂಭ್ರಮಿಸೋಣ.

ಮಳೆ ನಿಂತು ಹೋದ ಮೇಲೆ

ಮಳೆಗಾಲದಲ್ಲಿ ಮಿಂಚು, ಗುಡುಗು ಹೆಚ್ಚಾದಾಗ ವಿದ್ಯುತ್ ಕಂಬಗಳ ತಂತಿಗಳು ನೆಲಕ್ಕೆ ಬಿದ್ದಿರುತ್ತವೆ. ಇಂತಹ ಸಮಯದಲ್ಲಿ ಎಲ್ಲರೂ ಎಚ್ಚರ ವಹಿಸಬೇಕು. ಆಕಸ್ಮಿಕವಾಗಿ ವಿದ್ಯುತ್ ಪ್ರವಹಿಸಿ ಜೀವಕ್ಕೆ ಅಪಾಯವಾಗುವುದನ್ನು ತಪ್ಪಿಸೋಣ. ಹಲವು ಕಡೆ ನಾಲೆಗಳು ಕೂಡ ಒಡೆದುಹೋಗಬಹುದು. ಆಗ ಮನೆಯೊಳಗೆ ನೀರು ಪ್ರವೇಶಿಸಿದಂತೆ ಎಚ್ಚರವಹಿಸಬೇಕು.

ಮಳೆಗಾಲದ ವಾತಾವರಣದಲ್ಲಿ ಅನೇಕ ರೋಗ-ರುಜಿನೆಗಳೂ ಬರುತ್ತವೆ. ನೀರು ಕೂಡ ಕಲುಷಿತವಾಗಿರುತ್ತದೆ. ನೀರನ್ನು ಕುಡಿಯುವಾಗ ಕುದಿಸಿ ಆರಿಸಿದ ನೀರನ್ನು ಕುಡಿಯಬೇಕು. ಡೆಂಘೀ ಜ್ವರ ಹರಡದಂತೆ, ಸೊಳ್ಳೆಗಳ ಕಡಿತದ ಕುರಿತು ಎಚ್ಚರಿಕೆ ವಹಿಸಬೇಕು. ಸೊಳ್ಳೆ ಬ್ಯಾಟ್ ಹಿಡಿದು, ಮನೆಯೊಳಗಿನ ಸೊಳ್ಳೆಗಳನ್ನು ನಿರ್ಮೂಲನೆ ಮಾಡುವುದು ಉತ್ತಮ.

ಸುರಿವ ಮಳೆಯಲ್ಲಿ ಪ್ರವಾಸ ಬೇಕೆ?

ಮಳೆಗಾಲದ ಸಮಯದಲ್ಲಿ, ಹೆಚ್ಚು ಮಳೆ ಸುರಿವ ದಿನಗಳಲ್ಲಿ, ಮಲೆನಾಡು ಮತ್ತು ಕರಾವಳಿ ಪ್ರದೇಶಕ್ಕೆ ಪ್ರವಾಸ ಮಾಡುವಾಗ ಎಚ್ಚರಿಕೆ ವಹಿಸಬೇಕು. ಜಾಸ್ತಿ ಮಳೆ ಇರುವಾಗ ಪ್ರವಾಸವನ್ನು ನಿಲ್ಲಿಸೋಣ. ಒಂದು ವೇಳೆ ಹೋದರೆ ಎಚ್ಚರಿಕೆಯಿಂದ ಕಾರ್ಯಕ್ರಮಗಳನ್ನು ಆಯೋಜಿಸಿ, ನೀರು ಹರಿಯುವ ಸ್ಥಳ ಇನ್ನಿತರ ಕಡೆ ಎಚ್ಚರಿಕೆ ವಹಿಸಬೇಕು. ಮಳೆ ಬೀಳುವಾಗ ಕಾರಿನಲ್ಲಿ, ಬೈಕ್‌ನಲ್ಲಿ ರಾತ್ರಿ ಪ್ರಯಾಣ ಯಾವಾಗಲೂ ಮಾಡಲೇಬಾರದು. ಗುಡ್ಡ ಕುಸಿದೋ, ರಸ್ತೆಗಳು ಬಿರುಕು ಉಂಟಾಗಿಯೋ ರಸ್ತೆ ಪ್ರಯಾಣವೇ ನಿಂತುಹೋಗಿ, ಅಪಾಯ ಎದುರಾಗಬಹುದು.

ಪ್ರಕೃತಿ ಮಾತೆಯು ತನ್ನ ದಿನಚರಿಯನ್ನು ವರ್ಷಪೂರ್ತಿ ನಡೆಸುತ್ತಲೇ ಬರುತ್ತದೆ. ಆದರೆ ಮಾನವನ ಅತಿಯಾಸೆ, ವಿವೇಚನಾ ರಹಿತ ಅಭಿವೃದ್ಧಿ ಕಾಮಗಾರಿಯಿಂದಾಗಿ, ಪ್ರಕೃತಿಯ ಮುನಿಸು ಹೆಚ್ಚಾಗಿ ಕಾಣಿಸುತ್ತಿದೆ. ಅತಿಯಾಗಿ ಮಳೆ ಸುರಿಯುವ ಜಾಗದಲ್ಲಿ, ಮಳೆಗಾಲದಲ್ಲಿ ಬೆಟ್ಟವನ್ನು ಕಡಿದು, ರಸ್ತೆ ಮಾಡಲು ಪ್ರಯತ್ನ ನಡೆಸಿದ ತಿಳಿಗೇಡಿ ಕೆಲಸದಿಂದಾಗಿ, ಮೊನ್ನೆ ಅಂಕೋಲಾದ ಬಳಿ ಗುಡ್ಡ ಕುಸಿದು ನಾಲ್ಕಾರು ಮಂದಿ ದುರಂತ ಸಾವನ್ನು ಕಂಡರು. ಇಂತಹ, 'ಮಾನವ ನಿರ್ಮಿತ ದುರಂತ'ಗಳನ್ನು ತಡೆಯುವುದು ನಮ್ಮ ಕೈಯಲ್ಲಿದೆ!

ಈ ಮಳೆಗಾಲದ ಸಂದರ್ಭದಲ್ಲಿ ಅಕ್ಕಪಕ್ಕದವರನ್ನು ಕೂಡ ಜಾಗೃತಗೊಳಿಸಿ, ಮನೆಯ ಸದಸ್ಯರು ಮತ್ತು ಜಾನುವಾರುಗಳ ಬಗ್ಗೆ ಗಮನ ಹರಿಸೋಣ, ಮಳೆಗಾಲದ ವಾತಾವರಣವನ್ನು ಅನುಭವಿಸೋಣ.

(ಛಾಯಾಚಿತ್ರಗಳು : ಗೋಪಿ ಜಾಲಿ)

ತಾತಾ ತೂತಿನ ಬನಿಯನ್ನು!

ಫ್ಯಾಷನ್ನೆಂದರೆ ಫ್ಯಾಷನ್ನು
ಯಾರೇ ಹುಬ್ಬೇರಿಸಲೇನು
ತಾತಾತೂತಿನ ಬನಿಯನ್ನು
ಚಿಂದಿಯ ಪ್ರೇಮವೆ ಈಗಿನ್ನು॥

ಹರಿಯದೆ ಇದ್ದರೆ ಹಿತವಿಲ್ಲ
ಹರಕಲು ಕಟ್ಟೆಯೆ ಇಹುದಲ್ಲ
ಅಯ್ಯೋ! ಪಾಪವೆ ಎನ್ನುವರು
ಬಿಕ್ಕೆಯೆ ಜೀವನವಾದವರು॥

ಜೀನ್ಸೊ ಚಡ್ಡಿಯೊ ಪ್ಯಾಂಟೇನು
ಜೂಲಾಗಿದ್ದರೇ ಬೆಲೆ ತಾನು
ಧರಿಸುವರಿವರು ಪೋಟಿಯಲೇ
ಅಲ್ಲದಿರಲವರಲಿ ಸಲ್ಲುವರೇ॥

ಚಿತ್ರವಿಚಿತ್ರದ ಕೇಶಗಳು
ವಿಚಿತ್ರ ಮುಂಡನ ಬಣ್ಣಗಳು
ನೇತ್ರದ ಸೋಗೆಯ ವಿನ್ಯಾಸ
ಬೀದಿಲಿ ಕಂಡರೆ ಮನ ಭೀತ॥

ಅರಿವೆಯು ಮಾನಕೆ ಹಳೆ ಮಾತು
ಮಾರ್ಜಾಲ ನಡಿಗೆಗೆ ಹೊಸ ಧಾತು
ಅದಕೇ ಭಾರೀ ಚಪ್ಪಾಳೆ
ಆಚೆಗೆ ಬಂದರೆ ಹೊಸ ರಗಳೆ॥

ಹರಿಯುವ ಚಿಪ್ಪಿಗರವರೆಲ್ಲ
ನಮನಿಮಗೇನು ಹಿತರಲ್ಲ
ಪ್ರಜ್ಞೆಯು ತಪ್ಪುವ ಬೆಲೆಯಷ್ಟೆ
ಮೀಂಗುಲಿ ಕಾಲನ ಬಲೆಯಷ್ಟೆ

● **ರತ್ನಾ ಮೂರ್ತಿ**

ದೀರ್ಘವಾಗುತ್ತಿರುವ ಭೂದಿನ

ಭೂಮಿಯು ತನ್ನ ಅಕ್ಷದಲ್ಲಿ 23.5 ಡಿಗ್ರಿಯಷ್ಟು ವಾಲಿಕೊಂಡಿದ್ದು, ತನ್ನ ಪಥದಲ್ಲಿ ನಿರ್ದಿಷ್ಟ ವೇಗದಲ್ಲಿ ಸುತ್ತುತ್ತಿದೆ ಎಂಬುದು ಪ್ರಾಥಮಿಕ ಪತ್ಯಗಳಲ್ಲಿದೆ. ಆದರೆ ಈ ಪ್ರಾಥಮಿಕ ಸತ್ಯವು ಬದಲಾಗಬಹುದು ಎಂದು ವಿಜ್ಞಾನಿಗಳು ಎಚ್ಚರಿಸಿದ್ದಾರೆ. ಅದಕ್ಕೆ ಕಾರಣ? ಮಾನವನ ಮಿತಿಮೀರಿದ ಚಟುವಟಿಕೆ!

ಗ್ಲೋಬಲ್ ವಾರ್ಮಿಂಗ್ ಅಥವಾ ಭೂ ತಾಪಮಾನ ಏರಿಕೆಯು ಮುಖ್ಯವಾಗಿ ನಮ್ಮ ನಾಗರಿಕತೆಯ ಬೆಳವಣಿಗೆಯಿಂದ ಆದದ್ದು. ಈಚಿನ ದಶಕಗಳಲ್ಲಿ, ತಾಪಮಾನ ಏರಿಕೆಯಿಂದಾಗಿ, ಧ್ರುವ ಪ್ರದೇಶಗಳಲ್ಲಿರುವ ಹಿಮವು ವೇಗವಾಗಿ ಕರಗುತ್ತಿದೆ. ಹಿಮ ಕರಗಿದಾಗ, ಅಪಾರ ಪ್ರಮಾಣದ ನೀರು ಭೂಮಧ್ಯ ರೇಖೆಯತ್ತ ಬರುತ್ತಿದೆ ಮತ್ತು ಇದು ಭೂಮಿಯ ಒಟ್ಟೂ ದ್ರವರಾಶಿಯ ಸಮತೋಲನವನ್ನು ಬದಲಿಸುತ್ತಿದೆ. ಇದರಿಂದಾಗಿ, ಭೂಮಿಯು ಸುತ್ತುತ್ತಿರುವ ವೇಗವು ನಿಧಾನವಾಗಿ ಕಡಿಮೆಯಾಗುವುದು ಎಂದು ಅಧ್ಯಯನಗಳು ತಿಳಿಸಿವೆ.

ಇದರಿಂದೇನು ಪರಿಣಾಮವಾದೀತು? ಋತುಗಳ ಬದಲಾವಣೆ, ತಾಪಮಾನದ ವ್ಯತ್ಯಯ ಮತ್ತು ಇತರ ಬದಲಾವಣೆಗಳಾಗಬಹುದು. ಜತೆಗೆ, ನಮ್ಮ ಒಂದು ದಿನದ ಅವಧಿಯು ಹೆಚ್ಚಳವಾಗುವ ಸಾಧ್ಯತೆ ಇದೆ! ಇದು ಒಳ್ಳೆಯ ಬೆಳವಣಿಗೆಯಂತೂ ಅಲ್ಲ!

ಇದಕ್ಕೆ ಪರಿಹಾರ? ಪರಿಸರ ರಕ್ಷಣೆ, ಕಾಡಿನ ರಕ್ಷಣೆ, ಮಾಲಿನ್ಯದ ಕಡಿತ. ಅದನ್ನು ಮಾಡಬೇಕಾದ್ದು ಯಾರು? ಉತ್ತರ ಸರಳ: ಮಾನವ!

● **ರವಿ ದುಡ್ಡಿನಜಡ್ಡು**

ಜೈಗರ್ನಿಕ್ ಪರಿಣಾಮ!

● **ಡಾ. ಅರಕಲಗೂಡು ನೀಲಕಂಠ ಮೂರ್ತಿ**

ಕೆಲವು ಸ್ನೇಹಿತರು ಹೋಟೆಲ್ ಒಂದಕ್ಕೆ ಊಟಕ್ಕೆಂದು ಹೋಗುತ್ತಾರೆ. ಎಲ್ಲರೂ ಅವರವರ ಇಷ್ಟದ ಪಾನೀಯ, ಆಹಾರ ಸೇವಿಸುತ್ತಾರೆ. ಊಟ ತುಂಬಾ ಚೆನ್ನಾಗಿತ್ತು. ಬೇಕುಬೇಕಾದ್ದನ್ನು ವೇಟರ್ ತಕ್ಷಣ ತಂದುಕೊಡುತ್ತಿದ್ದ. ವೇಟರ್ ಜೇಬಿಗೆ ಕೂಡ ಸಾಕಷ್ಟು ಭಕ್ಷೀಸು ಬಿದ್ದಿತ್ತು. ಎಲ್ಲರೂ ಹೊರ ಬಂದು ತಮ್ಮ ನೆಲೆ ತಲುಪಿದರು. ಆದರೆ ಒಬ್ಬ ತನ್ನ ಕನ್ನಡಕವನ್ನು ಹೋಟೆಲಿನಲ್ಲೇ ಮರೆತು ಬಂದದ್ದರಿಂದ, ಅದನ್ನು ಹುಡುಕಿಕೊಂಡು ಹೋಟೆಲಿಗೆ ಹೋಗುತ್ತಾನೆ. ಆ ವೇಟರ್ ಒಳಗಿಂದ ಬಂದಾಗ 'ನನ್ನ ಕನ್ನಡಕ ನೋಡಿದಿರಾ?' ಎಂದು ಕೇಳುತ್ತಾನೆ. ಆಗ ವೇಟರ್ ಆಶ್ಚರ್ಯದಿಂದ 'ಯಾರು ನೀವು? ಯಾವ ಕನ್ನಡಕ?' ಎಂದು ಅಚ್ಚರಿ ವ್ಯಕ್ತಪಡಿಸುತ್ತಾನೆ.

ಆಗಷ್ಟೇ ಊಟ ಮುಗಿಸಿ ಹೊರಹೋಗಿ ಕೆಲವೇ ನಿಮಿಷಗಳಾಗಿವೆ; ಧಾರಾಳ ಟಿಪ್ಸ್ ಸ್ವೀಕರಿಸಿ, ಧನ್ಯವಾದ ಹೇಳಿದ್ದ ಆತ, ಅಷ್ಟು ಬೇಗ ಹೇಗೆ ಮರೆಯಲು ಸಾಧ್ಯ, ಎನಿಸುವುದು ಸಹಜ ಅಲ್ಲವೆ? ಆದರೆ ಅದು ಸಾಧ್ಯ ಮತ್ತು ಅದನ್ನೆ ಜೈಗರ್ನಿಕ್ ಪರಿಣಾಮ ಎನ್ನುವುದು!

ಇಸವಿ 1920. ಒಬ್ಬ ಮಹಿಳೆಯು, ವಿಯನ್ನಾ ದೇಶದ ಹೋಟೆಲ್ ಒಂದರಲ್ಲಿ ಊಟ ಮಾಡುವಾಗ, ತನಗೆ ಸರ್ವ್ ಮಾಡುತ್ತಿದ್ದ ವೇಟರ್, ಆ ಮಹಿಳೆಯದಷ್ಟೆ ಅಲ್ಲದೆ ಇನ್ನಿತರರ ಆರ್ಡರ್‌ಗಳನ್ನೂ ಮರೆಯದೆ ತಂದು ಕೊಡುತ್ತಿದ್ದುದು, ಹಾಗೆಯೆ ಬಿಲ್ಲುಗಳನ್ನು ಸಹ ಹಣ ಸಂದಾಯ ಆಗುವವರೆಗೆ ಸ್ವಲ್ಪವೂ ಮರೆಯದೆ ಇದ್ದುದನ್ನು ಗಮನಿಸಿದಳು. ಒಮ್ಮೆ ಒಬ್ಬ ಕಸ್ಟಮರ್ ಹೊರನಡೆದ ನಂತರ, ಮತ್ತೊಬ್ಬರತ್ತ ತಿರುಗಿದ್ದೇ ತಡ, ಹಳೆಯ ಗಿರಾಕಿಯ ಬಿಲ್ ಬಗ್ಗೆ ಆ ವೇಟರ್ ಸಂಪೂರ್ಣ ಮರೆಯುತ್ತಿದ್ದ ವಿಷಯ ಕೂಡ ಗಮನಿಸಿದ್ದಳು. ಆ ಮಹಿಳೆಯ ಪೂರ್ಣ ಹೆಸರು ಬ್ಲೂಮಾ ವುಲ್ಫೋವ್ನಾ ಜೈಗರ್ನಿಕ್. ಈ 'ಮರೆಯುವ' ವಿದ್ಯಮಾನದ ಕುರಿತು ಅಧ್ಯಯನ ನಡೆಸಿದಳು.

ಜೈಗರ್ನಿಕ್ ಪರಿಣಾಮ (ಜೈಗರ್ನಿಕ್ ಎಫೆಕ್ಟ್) ಎಂಬುದು ಒಂದು ಮನೋವೈಜ್ಞಾನಿಕ ವಿದ್ಯಮಾನ. ಯಾವುದೇ ಕೆಲಸ ಅಥವ ಘಟನೆ ಪೂರ್ತಿ ಮುಕ್ತಾಯ ಆಗಿಲ್ಲದಾಗ ನೆನಪಿನಲ್ಲಿ ಉಳಿದಿರುವ ಹಾಗೆ, ಮುಕ್ತಾಯಗೊಂಡ ಕೆಲಸ ಅಥವ ಮುಗಿದುಹೋದ ಘಟನೆ ನೆನಪಿರುವುದಿಲ್ಲ ಎಂಬುದನ್ನು ವಿವರಿಸುವುದೇ, ಜೈಗರ್ನಿಕ್‌ಪರಿಣಾಮ.

ನೆನಪಿನಲ್ಲಿ ಉಳಿವ ಕೆಲಸ: ಬ್ಲೂಮಾ ಜೈಗರ್ನಿಕ್ ಮನೋರೋಗ ವೈದ್ಯೆ ಹಾಗು ಮನೋವಿಜ್ಞಾನಿ. ತಾನು ವಿಯೆನ್ನಾ ಹೋಟೆಲಿನಲ್ಲಿ ಕಂಡದನ್ನು ಪ್ರಯೋಗಕ್ಕೆ ಒಳಪಡಿಸಲು, 138 ಮಕ್ಕಳ ಒಂದು ಗುಂಪಿನವರಿಗೆ ಕೆಲವು ಕೆಲಸಗಳನ್ನು, ಗಣಿತದ ಸಮಸ್ಯೆಗಳನ್ನು ಮತ್ತು ಒಗಟುಗಳನ್ನು ಮುಗಿಸುವಂತೆ ಹೇಳಿ, ಸ್ವಲ್ಪ ಸಮಯದ ನಂತರ ನಿಲ್ಲಿಸಲು ಹೇಳಿದಳು. ಒಂದು ಘಂಟೆಯ ನಂತರ 138 ರಲ್ಲಿ 110 ಮಕ್ಕಳು ಮುಗಿಸದಿದ್ದ ಕಾರ್ಯಗಳನ್ನು ನೆನಪಿಟ್ಟುಕೊಂಡಿದ್ದರು; ಆದರೆ, ಪೂರ್ತಿ ಮುಗಿಸಿದ್ದ ಮಕ್ಕಳು ಆ ಕೆಲಸವನ್ನು ಮರೆತಿದ್ದರು. ಇದೇ ರೀತಿ ವಯಸ್ಕರಲ್ಲಿ ಪ್ರಯೋಗ ಮಾಡಿದಾಗ, 90 ರಷ್ಟು ಜನರು ಮುಗಿಯದ ಕೆಲಸಗಳನ್ನು ನೆನಪಿನಲ್ಲಿ ಇಟ್ಟುಕೊಂಡಿದ್ದರು. ಅಂದಿನಿಂದ ಅದರ ಬಗ್ಗೆ ಅನೇಕ



ಉಪಯೋಗ

- ಆಸಕ್ತಿಕರ ಘಟನೆಗಳತ್ತ ಜನರ ಗಮನ ಸೆಳೆಯುವುದು.
- ಜನರನ್ನು ಅದರಲ್ಲಿ ಭಾಗವಹಿಸುವ ಹಾಗೆ ಮಾಡುವುದು.
- ಹಾಗೆ ಭಾಗಿಗಳಾದವರಿಗೆ ಅಕಾಲಿಕವಾಗಿ ತಡೆಹಾಕಿ, ಮುಂದೆ ತಿಳಿದುಕೊಳ್ಳಬೇಕೆಂಬ ಸಂದರ್ಭ ಸೃಷ್ಟಿಸುವುದು.
- ಸ್ವಲ್ಪ ಕಾಲದ ನಂತರ ಭಾಗಿಯಾಗಿರುವವರನ್ನು ಮತ್ತೆ ಅದರತ್ತ ಮರಳಿಸುವುದು.

ಧಾರಾವಾಹಿಗಳಲ್ಲಿ ಕುತೂಹಲ!

- ಸುದ್ದಿ ಮಾಧ್ಯಮದಲ್ಲಿ ವ್ಯಂಗ್ಯಚಿತ್ರಗಳನ್ನು ಮತ್ತು ಮುಖ್ಯಾಂಶದ ಶೀರ್ಷಿಕೆಗಳನ್ನು ಸೃಷ್ಟಿಸುವುದು.
- ಸಿನಿಮಾ ಮಾಧ್ಯಮದಲ್ಲಿ ಆಸಕ್ತಿ ಮೂಡಿಸುವ ಟ್ರೈಲರ್ ಮೂಡಿಸುವುದು.
- ಧಾರಾವಾಹಿಗಳಲ್ಲಿ ಕುತೂಹಲ ಮೂಡಿಸುವುದು, ಟಿಆರ್‌ಪಿ ಹೆಚ್ಚಿಸುವುದು!
- ಮಾರಾಟಕ್ಕೆ ಅನುಕೂಲ ಆಗುವಂತಹ ವಾತಾವರಣ ಸೃಷ್ಟಿಸುವುದು.

ಸಂಶೋಧಕರು ಅನೇಕ ವಿಧದ ಪ್ರಯೋಗಗಳನ್ನು ಕೈಗೊಂಡಿದ್ದಾರೆ. ಬ್ಲೂಮಾ ಜೈಗರ್ನಿಕ್ ತನ್ನ ಅಧ್ಯಯನಗಳನ್ನು, 1927 ರಲ್ಲಿ ಪ್ರಕಟಿಸಿದಳು. ಅವಳು ಪ್ರಸ್ತಾಪಿಸಿದ ಈ ಸಿದ್ಧಾಂತಕ್ಕೆ, ಜೈಗರ್ನಿಕ್ ಪರಿಣಾಮ ಎಂಬ ಹೆಸರು ಉಳಿಯಿತು.

ವಿಳಂಬ ಪ್ರವೃತ್ತಿ ಇರುವವರು, ಯಾವ ಕೆಲಸವನ್ನಾದರೂ ಬೇಗ ಆರಂಭಿಸುವುದರ ಅಥವ ಯಾವುದಾದರೂ ಒಂದು ಹಂತದಿಂದ ಶುರುಮಾಡುವುದರ ಪ್ರಾಮುಖ್ಯತೆಯ ಬಗೆಗೆ ಅರಿತುಕೊಂಡರೆ ಅನುಕೂಲ. ಅಂತಹವರಿಗೆ, ಜೈಗರ್ನಿಕ್ ಪರಿಣಾಮದಿಂದ ಮುಗಿಸದ ಕೆಲಸಗಳ ತಿಳಿವಳಿಕೆಯಿಂದ ಆಗುವಂಥ ಒತ್ತಡ, (ಕಾಲಹರಣ ಮಾಡುವ ಅಂಥವರನ್ನು) ಮತ್ತೆ ಅವರನ್ನು ಕೆಲಸ ಮುಗಿಸುವಂತೆ ಪ್ರೇರೇಪಿಸಲು ಸಾಧ್ಯ. ಜೈಗರ್ನಿಕ್‌ಪರಿಣಾಮ ಮತ್ತು ಮಾನಸಿಕ ಆರೋಗ್ಯ

ಮಾನಸಿಕ ಆರೋಗ್ಯದ ಮೇಲೆ ಸಹ ಜೈಗರ್ನಿಕ್ ಪರಿಣಾಮ ಪ್ರಮುಖ ಪಾತ್ರ ವಹಿಸಬಹುದು. ಅರ್ಧಂಬರ್ಧ ಮುಗಿದ ಕೆಲಸಗಳು, ಆಗಾಗ ಒತ್ತಡದ ಆಲೋಚನೆಗಳಿಗೆ ದಾರಿ ಮಾಡಿಕೊಡಬಹುದು. ಇಂಥ ಯೋಚನೆಗಳಿಂದ ನಿದ್ದೆ ಕಡಿತವಾಗಿ, ಆತಂಕವನ್ನು ಹೆಚ್ಚಿಸಿ ಭಾವನಾತ್ಮಕ ಮತ್ತು ಮಾನಸಿಕ ಸಂಪನ್ಮೂಗಳನ್ನು ಕಡಿಮೆಗೊಳಿಸಿ, ಅದರಿಂದ ವ್ಯಕ್ತಿಯನ್ನು ಅಸಮರ್ಪಕ ನಡವಳಿಕೆಯತ್ತ ದೂಡಬಹುದು.

ಅದಕ್ಕೆ ಪ್ರತಿಯಾಗಿ, ಜೈಗರ್ನಿಕ್ ಪರಿಣಾಮವು, ಒಬ್ಬ ವ್ಯಕ್ತಿಯು ತಾನು ಹಿಡಿದ ಕೆಲಸವನ್ನು ಸಕಾಲದಲ್ಲಿ ಮುಗಿಸುವಂತೆ ಪ್ರೇರೇಪಿಸಿ, ಆತನ ಉತ್ತಮ ಹವ್ಯಾಸಗಳನ್ನು ಅಧಿಕಗೊಳಿಸಿ, ಬಾಕಿ ಕಾರ್ಯಗಳನ್ನು ಮುಗಿಸುವತ್ತ ಪ್ರೇರೇಪಿಸಬಹುದು. ಇದು ನಮ್ಮ ಇಂದಿನ ದಿನಚರಿಯಲ್ಲಿ ಸಕಾರಾತ್ಮಕ ಪ್ರರಿಣಾಮ ಬೀರಬಲ್ಲದು.

ದಿನ ದರ್ಶಿಕೆ

ಆಷಾಢ ಮಾಸ, ಶುಕ್ಲ ಪಕ್ಷ, ದ್ವಾದಸಿ, ಜ್ಯೇಷ್ಠಾ ನಕ್ಷತ್ರ, ಶುಕ್ಲ ಯೋಗ, 1946 ಕ್ರೋಧಿ ನಾಮ ಸಂವತ್ಸರ, ದಕ್ಷಿಣಾಯನ

ಮನೆಮದ್ದು

ಎಳನೀರಿನಲ್ಲಿ ಕ್ಯಾಲ್ಸಿಯಂ ಹಾಗೂ ವಿಟಮಿನ್ ಜಾಸ್ತಿಯಿರುವುದರಿಂದ ಇದನ್ನು ಸೇವಿಸಿದರೆ ಮೂಳೆಗಳಿಗೆ ಉತ್ತಮ. ವಾರಕ್ಕೊಂದು ದಿವಸ ಬರೀ ಎಳನೀರು ಸೇವಿಸಿ ಉಪವಾಸ ಮಾಡಿದರೆ ದೇಹದಲ್ಲಿರುವ ಕೊಬ್ಬು ಕರಗುತ್ತದೆ. ದೇಹ ಹಗುರಾಗುತ್ತದೆ.

ಸೌಂದರ್ಯ ಸೂತ್ರ

ಬೆಣ್ಣೆ ಹಣ್ಣನ್ನು ಪೇಸ್ಟ್ ಮಾಡಿ. ಅದಕ್ಕೆ ಎರಡು ಚಮಚ ಮೊಸರನ್ನು ಬೆರೆಸಿ ಮುಖಕ್ಕೆ ಹಚ್ಚಿಕೊಳ್ಳಿ. 15 ನಿಮಿಷಗಳ ನಂತರ ತಣ್ಣೀರಿನಿಂದ ಮುಖ ತೊಳೆದರೆ ಸಾಕು. ಇದರಿಂದ ನಿಮ್ಮ ತ್ವಚೆಯ ಹೊಳಪು ಹೆಚ್ಚಾಗುತ್ತದೆ.

ದಿನ ಭವಿಷ್ಯ

ಮೇಷ: ಇಂದು ಉತ್ತಮ ದಿನವಾಗ ಲಿದೆ. ನಿಮ್ಮ ವ್ಯಕ್ತಿತ್ವವನ್ನು ಸುಧಾರಿಸಲು ನೀವು ಸ್ವಲ್ಪ ಹಣವನ್ನು ಖರ್ಚು ಮಾಡುತ್ತೀರಿ.

ವೃಷಭ: ಇಂದು ನೀವು ಮಾತಿನ ಮೂಲಕ ಜನರನ್ನು ನಿಮ್ಮದಾಗಿಸಿಕೊಳ್ಳಲು ಪ್ರಯತ್ನಿಸುವಿರಿ. ಹಿರಿಯರ ಆರೋಗ್ಯ ಹದಗೆಡಬಹುದು.

ಮಿಥುನ: ವ್ಯಾಪಾರದಲ್ಲಿ ಲಾಭದ ಸಾಧ್ಯತೆ ಇರುತ್ತದೆ. ಕೆಲಸಕ್ಕೆ ಸಂಬಂಧಿಸಿದಂತೆ ಬಲ ವನ್ನು ನೀಡುತ್ತದೆ. ಗುರು ಹಿರಿಯರ ಆಶೀರ್ವಾದ ಪಡೆಯಿರಿ.

ಕಟಕ: ಇಂದು ಪ್ರತಿಯೊಂದು ವಿಷಯದಲ್ಲೂ ಜಾಗರೂಕ ರಾಗಿರಬೇಕು. ನಿಮ್ಮ ಆರೋಗ್ಯದಲ್ಲಿ ಏರಿಳಿತಗಳು ಕಂಡುಬರುತ್ತವೆ.

ಸಿಂಹ: ಐಷಾರಾಮಿ ವಸ್ತುಗಳ ಕಡೆಗೆ ಮನಸು ವಾಲುವುದುದರಿಂದ ಇದು ನಿಮ್ಮನ್ನು ಆರ್ಥಿಕ ಸವಾಲುಗಳಲ್ಲಿ ಸಿಲುಕಿಸಬಹುದು.

ಕನ್ಯಾ: ಸಮಾಜದಲ್ಲಿ ನಿಮ್ಮ ಇಚ್ಛಾಶಕ್ತಿಯಿಂದಾಗಿ, ಹೊಸ ಕೆಲಸಗಳನ್ನು ಮಾಡುವುದ ರಿಂದ ನೀವು ಪ್ರಶಂಸೆಗೆ ಅರ್ಹರಾಗುತ್ತೀರಿ.

ತುಲಾ: ಉದ್ಯೋಗಸ್ಥರು ತಮ್ಮ ಕೆಲಸದಲ್ಲಿ ಯಶಸ್ಸ ಮತ್ತು ಪ್ರಶಂಸೆಯನ್ನು ಪಡೆಯುತ್ತಾರೆ. ಮನೆ ಮತ್ತು ಕುಟುಂಬದ ಬಗ್ಗೆ ಸಾಕಷ್ಟು ಯೋಚಿಸುವಿರಿ.

ವೃಶ್ಚಿಕ: ವ್ಯಾಪಾರದಲ್ಲಿ ಉತ್ತಮ ಲಾಭ ದೊರೆಯಲಿದೆ. ಉತ್ತಮ ಆದಾಯದಿಂದ ನಿಮ್ಮ ಮನಸ್ಸು ಸಂತೋಷ ದಿಂದ ಕೂಡಿರುತ್ತದೆ.

ಧನು: ಉದ್ಯೋಗದಲ್ಲಿ ಮಾಡಿದ ಪ್ರಯತ್ನಗಳು ಫಲ ನೀಡುತ್ತವೆ ಮತ್ತು ನೀವು ಉತ್ತಮ ಫಲಿತಾಂಶಗಳನ್ನು ಪಡೆಯುತ್ತೀರಿ.

ಮಕರ: ನಿಮ್ಮ ಖರ್ಚುಗಳಲ್ಲಿ ಉತ್ತಮ ಹೆಚ್ಚಳವಿದೆ, ಆದರೆ ಅಗತ್ಯವಿದ್ದರೆ ಮಾತ್ರ ಖರ್ಚು ಮಾಡಿ. ಮಾನಸಿಕ ಚಿಂತೆಗಳು ಹೆಚ್ಚಾಗುತ್ತವೆ.

ಕುಂಭ: ಅದೃಷ್ಟದ ಸಹಾಯ ದಿಂದ ಅನೇಕ ಕೆಲಸಗಳು ಆಗು ತ್ತವೆ. ತಂದೆಯ ಬೆಂಬಲ ಸಿಗಲಿದೆ. ಉತ್ತಮ ಲಾಭ ನಿರೀಕ್ಷಿಸಬೇಕು.

ಮೀನ: ವ್ಯವಹಾರಕ್ಕೆ ಈ ದಿನವು ಉತ್ತಮವಾಗಿರುತ್ತದೆ. ಮಕ್ಕಳ ಬಗ್ಗೆ ನೀವು ಯೋಚಿ ಸುತ್ತೀರಿ. ಅವರ ಭವಿಷ್ಯಕ್ಕಾಗಿ ಯೋಜನೆ ರೂಪಿಸುತ್ತೀರಿ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 1947: ಭಾರತೀಯ ಸ್ವಾತಂತ್ರ್ಯ ಕಾಯಿದೆ ಜಾರಿಗೆ ಬಂತು.
- 1914: ಮಹಾತ್ಮಾ ಗಾಂಧಿ ದಕ್ಷಿಣ ಆಫ್ರಿಕವನ್ನು ಬಿಟ್ಟು ಭಾರತಕ್ಕೆ ಬರುತ್ತಾರೆ.
- 1968: ಖ್ಯಾತ ಮಾಹಿತಿ ತಂತ್ರಜ್ಞಾನ ಸಂಸ್ಥೆ ಅಮೆರಿಕದಲ್ಲಿ ಶುರುವಾಯಿತು,
- ಖ್ಯಾತ ನಟಿ ಪ್ರಿಯಾಂಕಾ ಚೋಪ್ರಾ ಜೊಹಾನ್ಸ್ ಹುಟ್ಟುಹಬ್ಬ

ಚಿತ್ರಸ್ಫೂರ್ತಿ

150 ಕ್ಕು ಹೆಚ್ಚು ಅಡಿ ಎತ್ತರವಿರುವ ಸೇತುವೆ ಇದು. ಬಿದ್ದರೆ ಹೇಗಾದೀತು ಹೇಳಿ?! ಅದರಲ್ಲೂ ಸೇತುವೆಯ ಮೇಲೆ ಕೆಲವು ವಾಹನಗಳೂ ಇದ್ದಾವೆ. ಇದು ನಡೆದಿದ್ದು ಜನವರಿ 28 ರಂದು ಪೆನ್ಸಿಲ್ವೇನಿಯಾದ ಪಿಟ್ಸ್ ಬರ್ಗ್ನಲ್ಲಿ.

ಮೌನಕ್ಕಿರುವ ಸೂಕ್ಷ್ಮ ಶಕ್ತಿ..

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಬ್ಬ ರೈತ, ತನ್ನ ಮನೆಯ ಉಗ್ರಾಣವನ್ನು ಶುಚಿಗೊಳಿಸಿ, ದವಸ ಧಾನ್ಯ, ಬೇಳೆ ಕಾಳು ಸಾಮಾನು– ಸರಂಜಾಮುಗಳನ್ನು ವ್ಯವಸ್ಥಿತವಾಗಿ ಜೋಡಿಸುವ ಕೆಲಸ ಮಾಡುತ್ತಿದ್ದನು. ಶುಚಿ ಗೊಳಿಸುವಾಗ ಅದು ಹೇಗೋ ಅವನ ಕೈಯಲ್ಲಿದ್ದ ವಾಚು ಬಿದ್ದು ಹೋಯಿತು. ರೈತ ಚಿಕ್ಕವನಿರುವಾಗ ಅವನ ತಂದೆ ಪ್ರೀತಿಯಿಂದ ತೆಗೆದು ಕೊಟ್ಟ ವಾಚು. ರೈತನಿಗೆ ಅದರ ಮೇಲೆ ಬಹಳ ಅಭಿಮಾನ. ಕೆಲಸ ಬಿಟ್ಟು ಹುಡುಕ ತೊಡಗಿದ ಎಷ್ಟೇ ಹುಡುಕಿದರೂ ಸಿಗಲಿಲ್ಲ, ಅವನಿಗೆ ಕೆಲಸ ಮಾಡಿದ ಆಯಾಸ, ವಾಚು ಕಳೆದು ಹೋದ ಬೇಸರ ಆಗಿತ್ತು. ಕೆಲಸ ಮುಂದುವರಿಸಲಾಗದೆ ಉಗ್ರಾಣ ಬಿಟ್ಟು ಹೊರಗೆ ಬರುತ್ತಾನೆ. ಮನೆಯ ಮುಂದಿನ ಅಂಗಳದಲ್ಲಿ ನಾಲ್ಕಾರು ಮಕ್ಕಳು ಸೇರಿಕೊಂಡು ಬುಗುರಿ ಆಡುತ್ತಿದ್ದರು. ಯೋಚಿಸಿದ ರೈತ, ಆ ಮಕ್ಕಳನ್ನು ಕರೆದು, ನೋಡಿ ಮಕ್ಕಳೇ ಉಗ್ರಾಣದಲ್ಲಿ ಕೆಲಸ ಮಾಡುವಾಗ ನನ್ನ ಕೈ ಗಡಿಯಾರ ಬಿದ್ದು ಕಳೆದು ಹೋಗಿದೆ. ನಾನು ಹುಡುಕಿದೆ ಸಿಗಲಿಲ್ಲ, ನೀವೆಲ್ಲ ಸೇರಿ ಹುಡುಕಿಕೊಟ್ಟರೆ ನಿಮಗೆ ಒಳ್ಳೆಯ ಬಹುಮಾನ ಕೊಡುವೆ ಎಂದನು.

ಮಕ್ಕಳು ಬಹುಮಾನದಾಸೆಗೆ ಉಗ್ರಾಣದೊಳಗೆ ಹೋಗಿ ಎಲ್ಲಾ ಕಡೆ ಜಾಲಾಡಿ ಹುಡುಕಿದವು. ಯಾರಿಗೂ ವಾಚು ಸಿಗಲಿಲ್ಲ, ಮಕ್ಕಳಿಗೂ ಆಯಾಸ ವಾಗಿತ್ತು. ಸಂಜೆಯಾಗುತ್ತಿತ್ತು. ಮಕ್ಕಳು ಮನೆಗೆ ಹೊರಟವು. ಇನ್ನು ತನ್ನ ವಾಚು ಸಿಗುವುದಿಲ್ಲ ಎಂದು ರೈತ ಉಗ್ರಾಣದ ಬಾಗಿಲು ಹಾಕಲು ಹೊರಟಿದ್ದನು. ಅಲ್ಲೇ ನಿಂತಿದ್ದ ಒಬ್ಬ ಬಾಲಕ, ಅಣ್ಣ ನನಗೆ ಇನ್ನೊಮ್ಮೆ ಗಡಿಯಾರ ಹುಡುಕಿ ಕೊಡುವ ಅವಕಾಶ ಕೊಡುವಿರಾ? ಎಂದು ಕೇಳಿತು. ರೈತನು ಒಲ್ಲದ ಮನಸ್ಸಿನಿಂದ ಒಪ್ಪಿ ,ನಾನು ಸ್ವಲ್ಪ ಹೊತ್ತಿಗೆ ಬರುತ್ತೇನೆ. ಅಷ್ಟರೊಳಗೆ ಸಿಕ್ಕರೆ ಸರಿ ಎಂದು ಹೇಳಿ ಹೋದ.

ರೈತ ತನ್ನ ಕೆಲಸ ಮುಗಿಸಿ ಬಂದು ನೋಡು ತ್ತಾನೆ. ಹುಡುಗನ ಕೈಯಲ್ಲಿ ಗಡಿಯಾರ ಇತ್ತು. ರೈತನಿಗೆ ಸಂತೋಷವಾಯಿತು. ಇಷ್ಟು ಬೇಗ ನಿನಗೆ ಹೇಗೆ ಸಿಕ್ಕಿತು ಎಂದು. ಬಾಲಕನನ್ನು ಕೇಳಿದ, ಎಲ್ಲರೂ ಹೋಗಿದ್ದರಿಂದ ಉಗ್ರಾಣ ಪ್ರಶಾಂತವಾಗಿತ್ತು ಸದ್ದಿರಲಿಲ್ಲ, ನಾನು ನಿಧಾನವಾಗಿ ಎಚ್ಚರಿಕೆ ಯಿಂದ ಹುಡುಕುತ್ತಿದ್ದೆ ಏನಾದರೂ ಶಬ್ದ ಕಿವಿಗೆ ಬೀಳುತ್ತದೆಯೇ? ಎಂದು ಕಿವಿಗೊಟ್ಟು ಕೇಳುತ್ತಿದ್ದೆ. ನಿಶ್ಯಬ್ದದಲ್ಲಿ ಗಡಿಯಾರದ ಟಿಕ್ ಟಿಕ್ ಟಿಕ್ ಶಬ್ದ ಕೇಳಿತು. ನಿಮ್ಮ ಕೈಗಡಿಯಾರ ಸಿಕ್ಕಿತು ಎಂದ. ರೈತನು ಬಾಲಕನನ್ನು ಹೊಗಳಿ ಒಳ್ಳೆಯ ಬಹುಮಾನ ಕೊಟ್ಟು ಕಳಿಸಿದ.

ಒಮ್ಮೆ ಯೋಚಿಸಿ ನೋಡಿ ಜೀವನದಲ್ಲಿ ಕಷ್ಟಗಳು ಬಂದಾಗ ನಾವು ಅದರ ಬಗ್ಗೆ ಮತ್ತೆ ಮತ್ತೆ ಮಾತನಾಡುತ್ತಾ ಆತಂಕ ಗೊಳ್ಳುತ್ತಾ ಖಿನ್ನತೆಗೆ ಒಳಗಾಗುತ್ತೇವೆ. ಅದರ ಬಗ್ಗೆ ಎಷ್ಟೇ ಪ್ರಲಾಪ ಮಾಡಿದರೂ, ಆತಂಕಕ್ಕೊಳಗಾದರೂ ಸಮಾಧಾನವಾಗಿ ನಾವು ಕುಳಿತು, ನಮಗೆ ಆ ಕಷ್ಟದಿಂದ ಹೊರಬರುವ ಸುಳಿವು ಸಿಗುವುದಿಲ್ಲ. ಹಿರಿಯರು ಅನೇಕ ಬಾರಿ ಧ್ಯಾನದ ಮೊರೆ ಹೋಗಲು ನಮಗೆ ಸಲಹೆ ನೀಡುತ್ತಾರೆ. ಜಾನಕ್ಕೆ ಕುಳಿತಾಗ ನಮ್ಮೊಳಗೆ ನಾವು ಇಣುಕಿ ನೋಡಿ ಸಂವಾದವನ್ನು ನಡೆಸಲು ಸಾಧ್ಯವಾಗುತ್ತದೆ. ಆಗ ಪರ ವಿರೋಧದ ಚರ್ಚೆ ಎಲ್ಲಾ ನಮ್ಮ ಒಳಗೆ ನಡೆಯುತ್ತದೆ. ಈ ರೀತಿ ಮಾಡುವುದರಿಂದ ನಮ್ಮ ಸಮಸ್ಯೆಯ ಮೂಲ ಮತ್ತು ಅದರ ಪರಿಹಾರ ನಮಗೆ ಹೊಳೆಯುವ ಸಾಧ್ಯತೆಗಳು ಇನ್ನೂ ಹೆಚ್ಚು.

ಶಬ್ದಗಳು ಮಾಡದೇ ಇರುವ ಕೆಲಸವನ್ನು ಮೌನ ಮಾಡುತ್ತದೆ. ಮೌನದ ಶಕ್ತಿಗೆ

ಶರಣಾಗದವರಿಲ್ಲ. ಮೌನ' ಹೇಳುವುದು ಸುಲಭ ಆಚರಣೆ ಮಾಡುವುದು ಕಷ್ಟ. ಮನಸ್ಸು ಶಾಂತವಾಗಿದ್ದರೆ, ಬುದ್ಧಿ ಕೆಲಸ ಮಾಡುತ್ತದೆ. ಶಾಂತಿ ಮತ್ತು ತಾಳ್ಮೆಯಿಂದ ಬುದ್ಧಿ ಚುರುಕಾಗಿ ಮಾಡುವ ಕೆಲಸ ಸರಿಯಾಗುತ್ತದೆ. ನಿರ್ಧಾರಗಳನ್ನು ಸರಿಯಾಗಿ ತೆಗೆದುಕೊಳ್ಳುವ ಮಾರ್ಗದತ್ತ ಕೊಂಡಯ್ಯುತ್ತದೆ. ಮೌನದ ಮಹತ್ವ ನಮಗೆಲ್ಲಾ ತಿಳಿದಿರಲಿ.

ಪ ದ ಬಂ ಧ

1			2	■	3			4
	■	■		■		■	■	
	■	■		■		■	■	
5	6	■	7	8		■	9	
■	10		■		■	11		■
12		■	13		14	■	15	16
	■	■		■		■	■	
	■	■		■		■	■	
17				■	18			

ಎಡದಿಂದ ಬಲಕ್ಕೆ:
1. ಇದು ಚರಿತ್ರೆಗೆ ಸಂಬಂಧಿಸಿದ ಎಂದರ್ಥ (4)
3. ಹಸುಗಳನ್ನು ಕಾಯುವವನು (4)
5. ಹಣ್ಣಿನ ಸಾರ (2)
7. ಒಂದೆಡೆಯಿಂದ ಮತ್ತೊಂದೆಡೆಗೆ ಕಳುಹಿಸುವಿಕೆ (3)
9. ತೊಂದರೆ ಅಥವಾ ತಿವಿ (2)
10. ಇರುಳಿಗೆ ಮತ್ತೊಂದು ಹೆಸರು (2)
11. ಅಧೀನತೆ, ಅಂಕೆ (2)
12. ಎರಡಕ್ಷರದಲ್ಲಿ ತನಯ (2)
13. ಅರಿಯುವಂತೆ ಮಾಡು (3)
17. ತಾವರೆಯ ಕೊಳ (4)
18. ವಂಚನಗೆ ಮತ್ತೊಂದು ಹೆಸರು (4)

ಮೇಲಿನಿಂದ ಕೆಳಕ್ಕೆ:
1. ಚಾರನ ಮಧ್ಯೆ ಸಿಲುಕಿರುವ ಪಿಸುಣ (4)
2. ದಯೆ ಅಥವಾ ಕರುಣೆ (4)
3. ಆಸ್ಪತ್ರೆಗೆ ಹೀಗೆಯೂ ಹೇಳುವರು (4)
4. ತಂತ್ರ ಅಥವಾ ಸಂಚು ಎನ್ನುವ ಪದ (4)
6. ಸಲೀಸು ಎನ್ನುವ ಪದ (3)
8. ಅತಿಯಾಗಿ ಮಾತನಾಡುವವನು (3)
9. ಕ್ಷೇಮವನ್ನು ಸೂಚಿಸುವ ಪದ (3)
12. ಮನಸ್ಸುಗಳ ನಡುವಿನ ದ್ವೇಷ (4)
13. ಕಡೆಗಣಿಸುವಿಕೆ ಅಥವಾ ತಾತ್ಸಾರ (4)
14. ಒಳ್ಳೆಯ ಮಾತು (4)
16. ಶ್ರೇಷ್ಠನಾದ ಅಭಿನಯಕಾರ (4)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಚತುರ 4. ಕಾನನ 6. ಪರಕೀಯ 7. ಕಾಗದ 9. ಕವಲು 11. ಯಮಕ 13. ನೆಲ 16. ರವಿ 18. ನಮೂನೆ 20. ಮುಗಿಲು 22. ಪರುಸ 24. ಗುರುವಾರ 25. ಯಜನ 26. ಪರದೆ

ಮೇಲಿನಿಂದ ಕೆಳಕ್ಕೆ: 2. ತುರಗ 3. ಗೊರವಂಕ 4. ಕಾಯಕ 5. ನಕಲು 7. ಕಾಮನೆ 8. ದಯ 10. ವತ್ಸರ 12. ಮತ್ತು 14. ಲತಾಂಗಿ 15. ಢಮೂ 17. ವಿರಸ 18. ನಮಾವಾಹ 19. ನೆಪ 20. ಮುಕ್ತಾಯ 21. ಲುಗುನ 23. ರುಧಿರ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಹುಲಿ ಬಂತು ಹುಲಿ

ದಿನಕ್ಕೆ ಮೂರು ಅಥವಾ ನಾಲ್ಕು ಬಾರಿ ಊಟ ಮಾಡುವ ನಮಗೆಲ್ಲ, ಹುಲಿಯ ಊಟದ ಬಗ್ಗೆ ಕೇಳಿದರೆ ಆಶ್ಚರ್ಯವೆನಿಸಬಹುದು. ಹುಲಿ ವಾರಕ್ಕೆ ಒಂದೇ ಸಲ ಊಟಮಾ ಡುವುದು.

ಹಾಗೇ ಹುಲಿಗಳು ತಮ್ಮ ಕಿವಿಯನ್ನು ಬಳಸಿ, ಸಂಪರ್ಕವನ್ನು ಮಾಡುತ್ತದೆ. ಎಲ್ಲದಕ್ಕಿಂತ ಹೆಚ್ಚಾಗಿ ಪ್ರಪಂಚದಲ್ಲಿ ಕಾಡಿನಲ್ಲಿರುವಕ್ಕಿಂತ ಜಾಸ್ತಿ ಹುಲಿ ಗಳು ಬಂಧನದಲ್ಲಿವೆ, ಹೇಗೆಂದರೆ, ಕಾಡಿನಲ್ಲಿ ಹೆಚ್ಚೂ ಕಡಿಮೆ 3900 ರಷ್ಟು ಹುಲಿಗಳಿ ದ್ದರೆ, ಅಮೆರಿಕ ಮತ್ತು ಚೀನಾದ ಸೆರೆಮನೆಗಳಲ್ಲಿ 5000ಕ್ಕೂ ಹೆಚ್ಚು ಹುಲಿಗಳನ್ನು ಬಂಧಿಸಿಟ್ಟಿದ್ದಾರೆ. ಸಾಮ್ಯತೆಗೇ ಒಳಗಾಗದ ಪಟ್ಟಿಗಳನ್ನು ಇಟ್ಟುಕೊಂಡಿರುವ ಹುಲಿಗಳು ನಮ್ಮ ದೇಶದ ರಾಷ್ಟ್ರ ಪ್ರಾಣಿ ಅನ್ನುವುದನ್ನಂತೂ ಮರೆಯಬಾರದು.

ಪುಸ್ತಕ ಲೋಕ

ಲಂಡನ್ ಡೈರಿ



ಯೋಗೀಂದ್ರ ಮರವಂತೆ ಅವರ ಲೇಖನಗಳ ಸಂಗ್ರಹ ಲಂಡನ್ ಡೈರಿ– ಅನಿವಾಸಿಯ ಪುಟಗಳು. ಇಲ್ಲಿನ ನೆನವರಿಕೆ– ಕನವರಿಕೆಗಳು ಕೇವಲ ಹಳವಂಡವಲ್ಲ. ನಗೆ– ಕುಶಾಲು–ತಮಾಷೆ ಗುಚ್ಛದೊಂದಿಗೆ ತಿಳಿ ವ್ಯಂಗ್ಯ, ನವಿರು ಸೂಜಿಸೂಕ್ಷ್ಮತೆ, ಸಮಗ್ರತೆ, ಗಂಭೀರ ಚಿಂತನೆಯ ಇಲ್ಲಿನ ಲೇಖನಗಳು ಇಂಥ ಪ್ರಕಾರಕ್ಕೆ ಒಂದು ಹೊಸ ಕಾಂತಿ ನೀಡಿವೆ. ಓದುತ್ತಿದ್ದಂತೆ ಇವರು ಬೆಳೆದ ವಾತಾ ವರಣ ಮತ್ತು ಬೆಳೆಸಿದ ಹಿರಿಯರ ಮೇಲೆ ಎಲ್ಲಿ ಯಾರು ಇತ್ಯಾದಿ ತಿಳಿಯದೆಯೂ ಹಿನ್ನೆಲೆಯಲ್ಲಿ ಮನಸ್ಸಿಗೆ ತಾಕುತ್ತಿರುತ್ತದೆ. ಬೇರೆಯೇ ಸಂಸ್ಕೃತಿಯ ನೆಲದಲ್ಲಿ ನಡೆವ ಲೇಖಕರ ಅಂತರಂಗದ ಸಂವಾದದ ಭಾಷೆಯ ಸೊಬಗಂತೂ ಮನ ಸೆರೆಹಿಡಿಯುವಂತಿದೆ. ಈ ಕೃತಿಗೆ ಕ.ಸಾ.ಪ ಕೊಡಮಾಡುವ 2019ನೇ ಸಾಲಿನ ರತ್ನಾಕರ ವರ್ಣಿ–ಮುದ್ದಣ–ಅನಾಮಿಕ ದತ್ತಿ (ಗದ್ಯ) ಪ್ರಶಸ್ತಿ ದೊರೆತಿದೆ.

ಟ್ವೀಟ್‌ಮೆಂಟ್

ದಿ ಯುಜಿ ವರ್ಲ್ಡ್: ನಾವೆಲ್ಲರೂ ಸೇರಿ ಒಬ್ಬ ನಾಯಕನನ್ನು ಆರಿಸಿ ನಮ್ಮನ್ನು ಕಾಪಾಡಿ ಎನ್ನುವುದು ರಾಜಕೀಯ. ನಾವೆಲ್ಲರೂ ಸೇರಿ ಒಬ್ಬ ಕೆಲಸಗಾರನನ್ನು ಆರಿಸಿ ನಮ್ಮ ಕೆಲಸ ಮಾಡಿಕೊಡು ಎಂದು ಆಜ್ಞೆ ಮಾಡುವುದು ಪ್ರಜಾಕೀಯ. ಆಯ್ಕೆ ನಿಮಗೆ ಬಿಟ್ಟದ್ದು.

ಬಳ್ಳಾರಿ ರಾಯಣ್ಣ: ಪರ್ವಾಗಿಲ್ಲ ನಾವು ಬಿಜೆಪಿಗೆ ಜೈ ಅನ್ನೋದು. ನಮ್ಗೆ ದೋಸೆ ಮುಖ್ಯ. ಧರ್ಮ ಮುಖ್ಯ.

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ಕೇಂದ್ರ ಕೈಗಾರಿಕಾ ಭದ್ರತಾ ಪಡೆಯ (ಸಿಐಎಸ್ಎಫ್) ಮಹಾನಿರ್ದೇಶಕರಾಗಿ ನೇಮಕಗೊಂಡ ಮೊದಲ ಮಹಿಳಾ ಅಧಿಕಾರಿ ಯಾರು?

- ಎ. ನೀನಾ ಸಿಂಗ್.
- ಬಿ. ರೋಲಿ ಸಿಂಗ್.
- ಸಿ. ವಿನಿತಾ ಝಾ.
- ಡಿ. ಮಂಜರಿ ಟಾಕೂರ್.

ಉತ್ತರ: ಎ. ನೀನಾ ಸಿಂಗ್

ಮಾಹಿತಿ

ಹಿರಿಯ ಐಪಿಎಸ್ ಅಧಿಕಾರಿ ನೀನಾ ಸಿಂಗ್ ಅವರು ಸಿಐಎಸ್ಎಫ್‌ನ ಡೈರೆಕ್ಟರ್ ಜನರಲ್ ಆಗಿ ಮೊದಲ ಬಾರಿಗೆ 1.65 ಲಕ್ಷ ಬಲಶಾಲಿ ಪಡೆಗೆ ಪ್ರಮುಖ ಮೂಲಸೌಕರ್ಯಗಳನ್ನು ಭದ್ರಪಡಿಸುವ ಕಾರ್ಯವನ್ನು ವಹಿಸಿಕೊಂಡಿದ್ದಾರೆ. 1989 ರ ಬ್ಯಾಚ್‌ನ ರಾಜಸ್ಥಾನ ಕೇಡರ್ ಅಧಿಕಾರಿಯಾಗಿ, ಅವರು ಪ್ರತಿದಾಳಿ, ವಿವಿಐಪಿ ಭದ್ರತೆ, ತರಬೇತಿ ಮತ್ತು ಜಾಗರೂಕತೆಯಂತಹ ವೈವಿಧ್ಯಮಯ ಪೊಲೀಸ್ ಪಾತ್ರಗಳಲ್ಲಿ 3 ದಶಕಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಕಾರ್ಯವು ಕೆಳ ಶ್ರೇಣಿಯ ಸಿಬ್ಬಂದಿಗೆ ವೃತ್ತಿಪರತೆ ಮತ್ತು ಕಲ್ಯಾಣ ಉಪಕ್ರಮಗಳ ಹೊಸ ಯುಗವನ್ನು ಪ್ರಾರಂಭಿಸುತ್ತದೆ ಎಂದು ನಿರೀಕ್ಷಿಸಲಾಗಿದೆ. ತಂತ್ರಜ್ಞಾನ ಚಾಲಿತ ವ್ಯವಸ್ಥೆಗಳು, ಮಾನವ ಸಂಪನ್ಮೂಲ ಮತ್ತು ಕೈಗಾರಿಕಾ ಭದ್ರತೆಯಂತಹ ಡೊಮೇನ್‌ಗಳಾದ್ಯಂತ ವಿಶೇಷ ಅನುಭವದೊಂದಿಗೆ, ಸಿಂಗ್ ಅವರು ಸಿಐಎಸ್ಎಫ್ ಅನ್ನು ಮುನ್ನಡೆಸಲು ಸುಸಜ್ಜಿತರಾಗಿದ್ದಾರೆ.

ಸ್ಫೂರ್ತಿದಾಯಕ ನೀತಿ ಕಥೆ

ಒಂದು ಸಲ ಹಾಲು ದೇವರನ್ನು ಕುರಿತು ತಪಸ್ಸು ಮಾಡಿತಂತೆ.. ದೇವರು ಪ್ರತ್ಯಕ್ಷನಾಗಿ ಏನು ಸಮಸ್ಯೆ ಎಂದನಂತೆ.. ಆಗ ಹಾಲು ಹೇಳಿತಂತೆ.. ದೇವ ರೇ.. ನಾನು ಹಾಲು ಆಕಳು.. ಎಮ್ಮೆಯಿಂದ ಬಂದಾಗ ಶುದ್ಧವಾಗೇ ಇರುತ್ತೇನೆ... ಆದರೆ ಈ ಪಾಪಿ ಮಾನವ ನನಗೆ ಹುಳಿ ಹಿಂಡಿ ನನ್ನ ಮನಸ್ಸನ್ನು ಕೆಡಿಸಿಬಿಡುತ್ತಾನೆ.. ನನಗೆ ಹಾಲಾಗೇ ಇರುವಂತೆ ವರ ಕೊಡು' ಎಂದು ಬೇಡಿಕೊಂಡಿತಂತೆ.. ಆಗ ದೇವರು ನಕ್ಕು.' ಎಲೈ .. ಹಾಲೇ ಇಲ್ಲಿ ಕೇಳು.. ನೀನು ಹಾಲಾಗಿ ಇರುವ ಬದುಕಿಗೆ ಆಸೆ ಪಡುವ ಮೊದಲು ಈ ಮಾತನ್ನು ಕೇಳು..

ನೀನು ಹಾಲಾದರೆ ಒಂದು ದಿನ ಮಾತ್ರ ಬದುಕುವೆ.. ಹಾಲಿಗೆ ಹೆಪ್ಪಾಕಿದರೆ ಎರಡು ದಿನ ಬದುಕುವೆ.. ಮೊಸರಾಗಿ ಕಡೆದರೆ.. ಹುಳಿ ಹುಳಿಯಾಗಿ ಮೂರನೇ ದಿನ ಬದುಕುವೆ.. ಮಜ್ಜಿಗೆಯಿಂದ ಬಂದ ಬೆಣ್ಣೆಯಾದರೆ ವಾರಗಟ್ಟಲೆ ಬದುಕುವೆ... ಬೆಣ್ಣೆಯನ್ನು ಹದವಾಗಿ ಕಾಯಿಸಿ.. ಮೇಲೆ ಒಂದೆರೆಡು ವೀಳ್ಯದೆಲೆ ಹಾಕಿದರೆ ಘಮಗುಡುವ ತುಪ್ಪವಾಗುವೆ.. ಆ ತುಪ್ಪದಿಂದ ದೀಪ ಹಚ್ಚಿದರೆ ನನಗೆ ಬೆಳಕಾಗುವೆ.

ಈಗ ಹೇಳು ಒಂದು ದಿನ ಹಾಲಾಗಿಯೇ ಹುಟ್ಟಿ ಹಾಲಾಗಿಯೇ ಸಾಯುವೆಯಾ.. ಅಥವಾ ಕ್ಷಣ ಕ್ಷಣವೂ.. ಅನುದಿನವೂ .. ದಿನ ದಿನವೂ.. ಬೆಳೆದು.. ರೂಪಾಂತರ ಪಡೆದು .. ಭಗವಂತನಿಗೆ ಬೆಳಕಾಗುವೆಯಾ ' ಎಂದು ದೇವರು ಪ್ರಶ್ನಿಸಿದನಂತೆ... ದೇವರ ಮಾತಿಗೆ.. ಹಾಲು ಮೂಕವಾಯಿತು.. ಶರಣಾಯಿತು.. ತನ್ನ ಮನದ ಅಂಧಕಾರ.. ಮದದಿಂದ ಹೊರಬಂತು.. ದೇವರ ಮುಂದೆ ಪ್ರಜ್ವಲಿಸುವ ಬೆಳಕಾಯಿತು.. ನಾವು ಹಾಗೇ ಅಲ್ವಾ.. ನಮ್ಮ ಮನಸ್ಸಿಗೆ ಯಾರೋ ಹುಳಿ ಹಿಂಡಿದರೆಂದು ಕೊರಗದೆ.. ಹಾಲಾಗಿ ಮೊಸರಾಗಿ ಮಜ್ಜಿಗೆ ಬೆಣ್ಣೆ ತುಪ್ಪವಾಗಿ ದೇವರ ಮುಂದೆ ದೀಪವಾಗುವ ಸಾರ್ಥಕ ಬದುಕಿಗೆ ಬದಲಾಗೋಣ..

● ಕೃಷ್ಣಾರ್ಪಣಮಸ್ತು (ಫೇಸ್‌ಬುಕ್ ಬರಹ)

ಮಗಳಿಗೆ ಅಪ್ಪ ಹೇಳಿದ ಕಥೆ

ಹೀಗೊಂದು ಕಥೆ

ಮಗಳು ಅಪ್ಪನ ಬಳಿ ಅಳುತ್ತಾ ಬಂದಳು ಅಪ್ಪಾ ನಾನು ಇಷ್ಟು ಚೆನ್ನಾಗಿ ಡ್ಯಾನ್ಸ್ ಮಾಡಿದರೂ ನನ್ನನ್ನ ಡ್ಯಾನ್ಸ್ ಪ್ರೋಗ್ರಾಮ್‌ಗೆ ಸೇರಿಸಿಕೊಳ್ಳಲಿಲ್ಲ. ಬೇಕಂತಾನೆ ನನ್ನ ನಿರ್ಲಕ್ಷ ಮಾಡಿದ್ದಾರೆ ಅನಿಸುತ್ತೆ:

ಅಪ್ಪ ಹೇಳಿದ ಒಂದು ಕಥೆ ಹೇಳೇನೆ ಕೇಳಿಸ್ಕೊ ಆಮೇಲೂ ಅಳಬೇಕು ಅನಿಸಿದರೆ ಅಳು ಒಂದು ಒಡವೆ ಅಂಗಡಿ. ಅಲ್ಲಿ ಚಿನ್ನ ಬೆಳ್ಳಿ ಒಡವೆ ಎಲ್ಲವೂ ಇದ್ದವು. ಅಲ್ಲಿ ಒಂದು ಭಾರಿ ಕಂಗೊಳಿಸುವ ಚಿನ್ನದ ಕಿರೀಟವೂ ಇತ್ತು. ಕಡಿಮೆ ಹಣ ಇದ್ದ ಜನ ಸಣ್ಣ ಪುಟ್ಟ ಒಡವೆ ಪಡೆದು ಹೋದರು. ಇನ್ನೊಂದಷ್ಟು ಜನ ಇತರ ಸ್ವಲ್ಪ ದುಬಾರಿ ಒಡವೆಗಳನ್ನು ಕೊಂಡು ಹೋದರು. ಆದರೆ ಜನ ಈ ಚೆಂದದ ಕಿರೀಟ ನೋಡಿಯೂ ಹೊರಟು ಹೋಗುತ್ತಿದ್ದರು. ತನ್ನನ್ನ ಯಾರೂ ಕೊಳ್ಳುವುದಿರಲಿ ಮುಟ್ಟಿ ನೋಡಲೂ ಇಲ್ಲ ಎಂದು ಕಿರೀಟಕ್ಕೆ ಬೇಜಾರಾಗಿ ಹೋಗಿತ್ತು. ಸಾಯಂಕಾಲವಾಯ್ತು ಕಿರೀಟ ಬಿಟ್ಟು ಬಹುತೇಕ ಎಲ್ಲಾ ಒಡವೆಗಳು ವ್ಯಾಪಾರವಾಗಿ ಹೋಯ್ತು. ಕಿರೀಟಕ್ಕೆ ತನ್ನ ಚೆಲುವಿನ ಮೇಲೆ, ಗುಣಮಟ್ಟದ ಮೇಲೆಯೇ ಸಂಶಯ ಬರುವಂತಾಯ್ತು. ತಾನು ಯಾರಿಗೂ ಬೇಡವಾದವನೇನೋ ಎಂದಂದುಕೊಡು ಬೇಸರ ಪಟ್ಟುಕೊಂಡಿತು . ಒಂದೆರೆಡು ದಿನ ಕಳೆಯಿತು. ಅಂಗಡಿಯವ ಸಾಯಂಕಾಲ ದಿನಾ ಕಿರೀಟವನ್ನು ಒರೆಸಿ ಒರೆಸಿ ಇನ್ನೂ ಹೊಳಪು ಹೆಚ್ಚಿಸುತ್ತಿದ್ದ. ಆದರೂ ಕಿರೀಟವನ್ನು ಕೊಳ್ಳಲು ಯಾರೂ ಬರಲಿಲ್ಲ.

ಸ್ವಲ್ಪ ಹೊತ್ತಿನಲ್ಲಿ ಕಾರಿನಿಂದ ಒಂದು ಗುಂಪು ಬಂದಿತು. ಈ ಕಿರೀಟವನ್ನು ಅಕ್ಕಿಯ ತಟ್ಟೆಯಲ್ಲಿ ಇಟ್ಟರು ಕೈ ಮುಗಿದು ಅಕ್ಷತೆ ಹೂವು ಹಾಕಿ ನಮಸ್ಕರಿಸಿದರು. ಮರುದಿನ ಕಿರೀಟ ದೇವರತಲೆಯ ಮೇಲೆ ರಾರಾಜಿಸುತ್ತಿತ್ತು. ಇತರೆಲ್ಲಾ ಒಡವೆಗಳನ್ನು ಧರಿಸಿದವರೆಲ್ಲಾ ಬಂದು ನಮಸ್ಕರಿಸಿ ಅಡ್ಡ ಬಿದ್ದು ಹೋಗುತ್ತಿದ್ದರು. ಅದು ಆ ದೇವರಿಗೆಂದೇ ಹೇಳಿ ಮಾಡಿಸಿದ್ದ ಕಿರೀಟ ಹಾಗಾಗಿ ಅದನ್ನು ಯಾರಿಗೆಂದು ಮುಂಚೆಯೇ ನಿಗಧಿಯಾಗಿತ್ತು. ಆದ್ದರಿಂದ ಸಾಮಾನ್ಯರಿಗೆ ಅದು ಎಟುಕದ ಒಡವೆಯಾಗಿತ್ತು. ಕಥೆ ಮುಗಿಸಿ ಅಪ್ಪ ಕೇಳಿದ

ಇದು ಕಥೆ ಪುಟ್ಟಿ. ಹೀಗೆ ಬದುಕಲ್ಲಿ ನಿನಗೆ ಸದ್ಯಕ್ಕೆ ಅವಕಾಶ ಸಿಕ್ಕಿಲ್ಲ ಅಂದರೆ ನೀನು ಇನ್ನು ಯಾವುದೋ ಮುಖ್ಯವಾದ ಕೆಲಸಕ್ಕಾಗಿ ಇದ್ದೀಯ ಅಂತ. ನಿನ್ನನ್ನ ಬೇಕಂತಲೇ ನಿರ್ಲಕ್ಷಿಸ್ತಾರೆ ಅಂದರೆ ಅವರಿಗೆ ನಿನ್ನನ್ನ ಭರಿಸಲು ಸಾಧ್ಯ ಇಲ್ಲ ಅಂತ. ನಿನಗೆ ಅವಕಾಶ ಸಿಗಲು ತಡವಾಗುತ್ತಿದೆ ಅಂದರೆ ನಿನಗಾಗಿ ಅಂತಹ ಮಹತ್ತರ ಅವಕಾಶವೊಂದು ಕಾದಿದೆ ಅಂತ ಅರ್ಥ. ಈ ಕಾಯವಿಕೆಯ ಅವಧಿಯಲ್ಲಿ ಸುಮ್ಮನೇ ಕಾಯುವ ಬದಲು ನಿನ್ನ ಕೌಶಲ್ಯವನ್ನು ಅಭ್ಯಾಸ ಮಾಡಿ ಇನ್ನೂ ಹೆಚ್ಚಿಸಿಕೋ. ಅಷ್ಟೇ ಈಗಲೂ ಅಳುತ್ತೀಯ?

ಹುಡುಗಿ ಇಲ್ಲ ಎಂದು ತಲೆ ಆಡಿಸಿ ನಕ್ಕಳು.

(ಫೇಸ್‌ಬುಕ್ ಬರಹ)

ಆಗುಂಬೆ ಅಂದು–ಇಂದು

● ಕೆ. ಶ್ರೀನಿವಾಸ್ ರಾವ್, ಹರಪನಹಳ್ಳಿ

ಸುಮಾರು 1966 – 67ರ ನೆನಪಿನಂಗಳದ ರಂಗವಲ್ಲಿಯದು. ನಾನಾಗ 7ನೇ ತರಗತಿ ವಿದ್ಯಾರ್ಥಿ. ಪ್ರತಿವರ್ಷ ಬೇಸಿಗೆ ರಜೆಗೆ ಚಾತಕಪಕ್ಷಿಯಂತೆ ಕಾಯುತ್ತಿದ್ದೆ. ಕಾರಣ ದಕ್ಷಿಣ ಕನ್ನಡದ ನನ್ನ ಅಜ್ಜಿಮನೆ. ಅಪ್ಪ ವ್ಯವಹಾರದಲ್ಲಿ ಮುಳುಗಿರುತ್ತಿದ್ದುದರಿಂದ ಅಮ್ಮನೇ ಕರೆದುಕೊಂಡು ಹೋಗುತ್ತಿದ್ದರು. ಇಬ್ಬರು ತಂಗಿಯರು, ಅಮ್ಮನೊಂದಿಗೆ ನಾನೇ ಹೀರೋ! ಏಕಮಾತ್ರ ಗಂಡಲ್ಲವೇ ? ಬಟ್ಟೆ ಬ್ಯಾಗ್ ಹೊರುವುದರಿಂದ ಎಲ್ಲ ವೀರ ಕೆಲಸಗಳಿಗೂ ರಣಧೀರ ಕಂಠೀರವ ನಾನೇ ಮುಂದು. ಆಗೆಲ್ಲ ಈಗಿನಂತೆ ಅಧಿಕ ಸರ್ಕಾರಿ ಬಸ್ಸುಗಳಿರಲಿಲ್ಲ. ಹರಪನಹಳ್ಳಿಯಿಂದ ಕುಂದಾಪುರದ ನಮ್ಮ ಹಳ್ಳಿ ಆವರ್ಸೆಗೆ ಹೋಗಲು ಒಟ್ಟು 5 ಬಸ್ಸುಗಳನ್ನು ಬದಲಾಯಿಸಬೇಕಿತ್ತು. ಹೊನ್ನಾಳಿಯಿಂದ ಬೆಳಿಗ್ಗೆ 10ಕ್ಕೆ ಹೊರಡುವ ಹುತ್ತೇಶ ಎಕ್ಸ್‌ಪ್ರೆಸ್ ಹತ್ತಿ ಆಗುಂಬೆಗೆ ಹೋಗಬೇಕಿತ್ತು. ಅಲ್ಲಿನ ಸಿಪಿಸಿ ಮೋಟಾರ್ಸ್‌ನ ವ್ಯಾನುಗಳಲ್ಲಿ ಪಯಣಿಸಿ ಘಾಟಿ ಇಳಿದು ಸೋಮೇಶ್ವರ ತಲುಪಬೇಕಿತ್ತು. ಆ ವ್ಯಾನುಗಳೋ ಓಬಿರಾಯನ ಪಳೆಯುಳಿಕೆಗಳು. ಈಗಿನ ಟ್ರಾಕ್ಸ್ ಮಾದರಿಯ ಆ ವಾಹನಗಳನ್ನು ಸ್ಟಾರ್ಟ್ ಮಾಡಲು ಮುಂಭಾಗದಲ್ಲಿ ಹ್ಯಾಂಡಲ್ ಮೂಲಕ ಏಳೆಂಟು ಬಾರಿ ತಿರುವಬೇಕಿತ್ತು! ಆಗುಂಬೆ, ಸೋಮೇಶ್ವರ ಎರಡೂ ಕಡೆ ಅವರ ಆಫೀಸಿನಲ್ಲಿ ಟಿಕೆಟ್ ಬದಲಾಯಿಸಿಕೊಳ್ಳಬೇಕಿತ್ತು.

ಆಗುಂಬೆಯಿಂದ ಆ ವ್ಯಾನುಗಳಲ್ಲಿನ ಪ್ರಯಾಣ ನಿಜಕ್ಕೂ ಘೋರ ! ಕುರಿಗಳಂತೆ ತುಂಬುವಿಕೆ, ತಿರುವುಗಳಲ್ಲಿ ಒಬ್ಬರ ಮೇಲೊಬ್ಬರು ಬೀಳುವಿಕೆ, ಗಾಡಿಯ ಕೆಟ್ಟ ಶಬ್ದ, ವಾಂತಿ ಸಮಾರಾಧನೆ, ಕಿಮುಟು ಬೆವರಿನ ವಾಸನೆ, ಅಬ್ಬಬ್ಬಾ ! ಅಸಹನೀಯ. ಆಗುಂಬೆಯ ಬಸ್ ನಿಲ್ದಾಣದ ಏಕಮಾತ್ರ ಹೋಟೆಲಿನಲ್ಲಿ ಉದರಂಭರಣ ಮಾಡಿಕೊಳ್ಳಬೇಕಿತ್ತು. ಅದೂ ತಣ್ಣಗಾದ ತಿಂಡಿ, ಕಾಫಿ, ಟೀ ಹೆಸರಿನ ಕಲಗಚ್ಚು. ಒಂದೇ ಸ್ಮರಣೀಯ ಸಂಗತಿಯೆಂದರೆ ಘಾಟಿ ಇಳಿಯುವಾಗ, ಹತ್ತುವಾಗ ಅಕ್ಕಪಕ್ಕದಲ್ಲಿ ಕಿಟಕಿಯಿಂದ ಕಾಣುವ ಆಳೆತ್ತರದ ವೃಕ್ಷ ಸಮೂಹ, ಅಲ್ಲಲ್ಲಿ ಬಿಡಿಯಿದ್ದಾಗ ಹಣಿಕೆ ಹಾಕುವ ದಿನಕರನ ಕಿರಣಗಳು ! ಬೆಳಿಗ್ಗೆ 6ಕ್ಕೆ ಹೊರಟವರು ಸಂಜೆ 6 ಕ್ಕೆ ಅಜ್ಜಿಮನೆ ತಲುಪುವಾಗ ಮೈಕೈ ನೋವಿನಿಂದ ಅಕ್ರರಶಃ ಹೈರಾಣಾಗಿರುತ್ತಿದ್ದೆವು. ಆದರೇನು? ಅಜ್ಜಿ ಕೊಡುವ ತಿಳಿ ಬಾವಿನೀರು ಹಾಗೂ ನೀರುಬೆಲ್ಲ ಮೆದ್ದಾಗ ಸುಖಾನುಭವವಾಗುತ್ತಿತ್ತು.

ಆದರಿಂದು ಆಗುಂಬೆ ಸೌಂದರ್ಯವೇ ತೊನೆದಾಡುವ ಷೋಡಶಿಯಂತೆ ಕಂಗೊಳಿಸುತ್ತಿದೆ. ಶಿವಮೊಗ್ಗದಿಂದ ಅರ್ಧ ಗಂಟೆಗೊಂದರಂತೆ ಆಗುಂಬೆಯ ಮೂಲಕ ಉಡುಪಿ, ಮಂಗಳೂರಿಗೆ ಖಾಸಗಿ ಹಾಗೂ ಸರ್ಕಾರಿ ಬಸ್ಸುಗಳಿವೆ.ಪ್ರಯಾಸದ ಪ್ರಯಾಣ ಪ್ರಫುಲ್ಲತೆಯದಾಗಿ ಮಾರ್ಪಟ್ಟಿದೆ. ಘಾಟಿಯ ತಿರುವುಗಳ ರಸ್ತೆ ಸುಂದರವಾಗಿದೆ. ಆಗುಂಬೆಯಲ್ಲಿ ಹಲವು ಉತ್ತಮ ಹೋಟೆಲುಗಳು ಪ್ರಯಾಣಿಕರ ಜಿಹ್ವೆಯನ್ನು ತಣಿಸಲು ಸಜ್ಜಾಗಿವೆ. ವೃಕ್ಷ ಸಂಕುಲ ದಟ್ಟತೆ ಕೊಂಚ ಕಡಿಮೆಯೆನಿಸಿದರೂ ಕಣ್ತಣಿಸುತ್ತದೆ. ಸೂರ್ಯ ಮುಳುಗುವ ವೀಕ್ಷಣಾ ಸ್ಥಳ ಎಂದೇ ಜನಪ್ರಿಯವಾಗಿರುವ ಜಾಗ ಪ್ರವಾಸಿಗರ ಆಕರ್ಷಣೆಗೆ ಕಾರಣವಾಗಿದೆ. ಅತಿ ಹೆಚ್ಚು ಮಳೆ ಬೀಳುವ ಸ್ಥಳವಾದ ಆಗುಂಬೆ ಸದಾ ತಣ್ಣಗಿನ ವಾತಾವರಣದಿಂದ ನವ ದಂಪತಿಗಳಿಗೆ ಹನಿಮೂನ್ ಗೆ ಪ್ರಶಸ್ತ ಜಾಗವೆನಿಸಿದೆ.ಹಾಗೆಂದೇ ಇರಬೇಕು. ಅಣ್ಣಾವ್ರು ಮಾಧವಿಯೊಂದಿಗೆ ಆಕಸ್ಮಿಕ ಚಿತ್ರದಲ್ಲಿ 'ಆಗುಂಬೆಯಾ, ಪ್ರೇಮ ಸಂಜೆಯಾ...' ಎಂದು ಆಗುಂಬೆಯ ಗುಡ್ಡ, ಮರಗಳ ನಡುವೆ ನಲಿದಾಡಿದ್ದು !

ಸಮಾಚಾರ ಸಣ್ಣದಲ್ಲ

ಕುಟುಂಬದ ಎದುರೇ ಲಂಕಾ ಕ್ರಿಕೆಟಿಗನ ಹತ್ಯೆ

ಬೆಂಗಳೂರು: ಶ್ರೀಲಂಕಾದ ಮಾಜಿ ಕ್ರಿಕೆಟಿಗ ಧಮ್ಮಿಕಾ ನಿರೋಶನರನ್ನು ಮನೆಗೆ ನುಗ್ಗಿ ಹೆಂಡತಿ ಮಕ್ಕಳ ಮುಂದೆಯೇ ಗುಂಡಿಕ್ಕಿ ಹತ್ಯೆ ಮಾಡಲಾಗಿದೆ ಎಂದು ವರದಿಯಾಗಿದೆ. ಶ್ರೀಲಂಕಾ ಸಿನೀಯರ್ ತಂಡ ಆಟಗಾರನಾಗಿ ಹಾಗೂ ಅಂಡರ್ 19 ತಂಡದ ಕ್ಯಾಪ್ಟನ್ ಆಗಿದ್ದ ಧಮ್ಮಿಕಾ ನಿರೋಶನ ಅವರ ಮನೆಗೆ ನುಗ್ಗಿದ ದುಷ್ಕರ್ಮಿಗಳು ಪತ್ನಿ ಮತ್ತು ಮಕ್ಕಳ ಎದುರೇ ಅವರಿಗೆ ಗುಂಡಿಕ್ಕಿ ಹತ್ಯೆ ಮಾಡಿ ಎಸ್ಕೇಪ್ ಆಗಿದ್ದಾರೆ ಎಂದು ವರಿದಿಯಾಗಿದೆ. ಇನ್ನು ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಪರಿಶೀಲನೆ ನಡೆಸಿದ್ದು, ಪ್ರಕರಣದ ಬಗ್ಗೆ ತನಿಖೆ ಕೈಗೊಂಡಿದ್ದಾರೆ. ಹತ್ಯೆ ಮಾಡಿದ ಪರಾರಿಯಾಗಿರುವ ಆರೋಪಿಗಳ ಬಂಧನಕ್ಕೆ ಶೋಧ ಕಾರ್ಯ ನಡೆಸುತ್ತಿದ್ದಾರೆಂದು ತಿಳಿದುಬಂದಿದೆ. ನಿರೋಶನ ಅವರ ಕೊಲೆಗೆ ಕಾರಣ ಇನ್ನು ತಿಳಿದುಬಂದಿಲ್ಲವೆಂದು ಪೊಲೀಸರು ತಿಳಿಸಿದ್ದಾರೆ. ನಿರೋಶನರ ಮೇಲೆ ಗುಂಡಿನ ದಾಳಿ ನಡೆದಾಗ ಅವರ ಪತ್ನಿ ಮತ್ತು ಮಕ್ಕಳು ಮನೆಯಲ್ಲಿಯೇ ಇದ್ದರು ಎನ್ನಲಾಗಿದೆ. ಹಠಾತ್ ಮನೆಗೆ ನುಗ್ಗಿದ ದುಷ್ಕರ್ಮಿಗಳು ಗುಂಡಿ ಹಾರಿಸಿದ್ದಾರೆ. ಪರಿಣಾಮ ನಿರೋಶನ ಅವರು ಸ್ಥಳದಲ್ಲೇ ಪ್ರಾಣ ಬಿಟ್ಟಿದ್ದಾರೆ. ಇದುವರೆಗೂ ಆರೋಪಿಗಳ ಬಗ್ಗೆ ಸುಳಿವು ಸಿಕಿಲ್ಲವೆಂದು ವರದಿಯಾಗಿದೆ.

ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಶಮಿ ಕ್ರಿಕೆಟ್‌ಗೆ ವಾಪಸ್

ಬೆಂಗಳೂರು: ಏಕದಿನ ವಿಶ್ವಕಪ್‌ನಲ್ಲಿ ಆಗಿದ್ದ ಗಾಯದಿಂದ ಪಾದದ ಶಸ್ತ್ರಚಿಕಿತ್ಸೆಗೆ ಒಳಗಾಗಿ ಚೇತರಿಕೆ ಕಾಣುತ್ತಿರುವ ವೇಗಿ ಮೊಹಮ್ಮದ್ ಶಮಿ ಕ್ರಿಕೆಟ್‌ಗೆ

ಮರಳುವು ಸಿದ್ಧತೆ ನಡೆಸಿದ್ದು, ಬಾಂಗ್ಲಾ ಜತೆಗಿನ ಸರಣಿಗೆ ತಂಡವನ್ನು ಸೇರಲಿದ್ದಾರೆ ಎನ್ನಲಾಗಿದೆ.

ಗಾಯದಿಂದ ಸಂಪೂರ್ಣ ಚೇತರಿಸಿಕೊಂಡಿರುವ ಅವರು, ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ಬೌಲಿಂಗ್ ಅಭ್ಯಾಸ ಆರಂಭಿಸಿದ್ದು, ಈ ವಿಡಿಯೊವನ್ನು ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಅವರು ಹಂಚಿಕೊಂಡಿರುವ ವಿಡಿಯೊದಲ್ಲಿ ಶಮಿ ಬೌಲಿಂಗ್ ನಡೆಸುತ್ತಿರುವ ಮತ್ತು ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ವಿಕೆಟ್ ಉರುಳಿಸಿದ ವಿಡಿಯೊವನ್ನು ಕೂಡ ಎಡಿಟ್ ಮಾಡಿ ಹಾಕಿದ್ದಾರೆ. ಕೆಲವು ದಿನಗಳ ಹಿಂದಷ್ಟೇ ಶಮಿ ಇದೇ ತಿಂಗಳು ಲಂಕಾ ವಿರುದ್ಧ ಆಡಲಿರುವ ಏಕದಿನ ಮತ್ತು ಟಿ20 ಸರಣಿಗೆ ಆಯ್ಕೆಯಾಗುತ್ತಾರೆ ಎನ್ನಲಾಗಿತ್ತು. ಆದರೆ ಶಮಿ ಇನ್ನೂ ಫಿಟ್‌ನೆಸ್ ಕ್ಲೀಯರೆನ್ಸ್ ಪಡೆದಿಲ್ಲ. ಹೀಗಾಗಿ ಅವರು ಲಂಕಾ ಸರಣಿಗೆ ಆಯ್ಕೆಯಾಗುವುದು ಅನುಮಾನ ಎನ್ನಲಾಗಿದೆ.

ಎರಡನೇ ಸ್ಥಾನ ಉಳಿಸಿಕೊಂಡ ಸೂರ್ಯಕುಮಾರ್ | ಆರನೇ ಸ್ಥಾನಕ್ಕೆ ಕುಸಿದ ಹಾರ್ದಿಕ್

ಟಿ20 ರ‍್ಯಾಂಕಿಂಗ್‌ನಲ್ಲಿ ಭಾರತೀಯರ ದರ್ಬಾರ್

ಬೆಂಗಳೂರು: ಟಿ20 ವಿಶ್ವಕಪ್ ಮುಗಿದ ನಂತರ ಎರಡನೇ ಬಾರಿಗೆ ಐಸಿಸಿ ಟಿ20 ಶ್ರೇಯಾಂಕ ಪಟ್ಟಿಯನ್ನು ಪ್ರಕಟಿಸಿದ್ದು, ರ‍್ಯಾಂಕಿಂಗ್‌ಗಾಗಿ ತೀವ್ರ ಪೈಪೋಟಿ ಮುಂದುವರೆದಿದೆ. ಬುಧವಾರ ಪ್ರಕಟವಾದ ಐಸಿಸಿ ನೂತನ ರ‍್ಯಾಂಕಿಂಗ್ ಪಟ್ಟಿಯಲ್ಲಿ ಭಾರತದ ನಾಲ್ವರು ಆಟಗಾರರು ಅಗ್ರ ಹತ್ತರಲ್ಲಿ ಕಾಣಿಸಿಕೊಂಡಿದ್ದಾರೆ. ಆದರೆ ಆಲ್‌ರೌಂಡರ್ ವಿಭಾಗದಲ್ಲಿ ಕೆಲ ವಾರಗಳ ಹಿಂದೆ ಅಗ್ರಸ್ಥಾನ ಅಲಂಕರಿಸಿದ್ದ ಹಾರ್ದಿಕ್ ಪಾಂಡ್ಯ, ಈ ಬಾರಿ 4 ಸ್ಥಾನಗಳಲ್ಲಿ ಕುಸಿತ ಕಂಡಿದ್ದು, ಟಾಪ್ 5 ಪಟ್ಟಿಯಿಂದ ಹೊರಬಿದ್ದಿದ್ದಾರೆ.

ಅಗ್ರ ಬ್ಯಾಟರ್‌ಗಳಲ್ಲಿ ಮೂವರು ಭಾರತೀಯರು:

ಬ್ಯಾಟಿಂಗ್ ವಿಭಾಗದಲ್ಲಿ ಟೀಂ ಇಂಡಿಯಾದ ಮೂವರು ಆಟಗಾರರು ಟಾಪ್-10 ಪಟ್ಟಿಯಲ್ಲಿ ಕಾಣಿಸಿಕೊಂಡಿದ್ದಾರೆ. ಆದರೆ ಬಹು ದಿನಗಳಿಂದ ಸೂರ್ಯಕುಮಾರ್ ಯಾದವ್ ಅವರು ಕಾಯ್ದುಕೊಂಡಿದ್ದ ಅಗ್ರ ಸ್ಥಾನವನ್ನು ಈ ಹಿಂದೆ ವಿಶ್ವಕಪ್‌ನಲ್ಲಿ ಟ್ರಾವಿಸ್ ಹೆಡ್ ಕಸಿದುಕೊಂಡಿದ್ದರು. ಆದರೆ ಸೂರ್ಯಕುಮಾರ್ ಯಾದವ್ ಅವರಿಗೆ ಪಂದ್ಯಗಳು ಬಾಕಿ ಇರುವ ಕಾರಣ ಮತ್ತೆ ಅಗ್ರ ಸ್ಥಾನಕ್ಕೆ ಏರಬಹುದು ಎನ್ನಲಾಗಿತ್ತು. ಆದರೆ ವಿಶ್ವಕಪ್‌ನ ಫೈನಲ್ ಹಾಗೂ ಸೆಮಿಫೈನಲ್ ಪಂದ್ಯಗಳಲ್ಲಿ ಸೂರ್ಯಕುಮಾರ್ ಯಾದವ್ ಅವರು ವಿಫಲವಾದ ಕಾರಣ ಆಸ್ಟ್ರೇಲಿಯಾದ ಹೆಡ್ ಅಗ್ರ ಸ್ಥಾನದಲ್ಲಿ ಮುಂದುವರಿದಿದ್ದು, ದ್ವಿತೀಯ ಸ್ಥಾನದಲ್ಲಿ ಸೂರ್ಯಕುಮಾರ್ ಯಾದವ್ ಕಾಣಿಸಿಕೊಂಡಿದ್ದಾರೆ. ಹಾಗೆಯೇ ಜಿಂಬಾಬ್ವೆ ವಿರುದ್ಧದ ಸರಣಿಯಲ್ಲಿ ಭರ್ಜರಿ ಬ್ಯಾಟಿಂಗ್ ಪ್ರದರ್ಶಿಸಿದ್ದ ಟೀಂ ಇಂಡಿಯಾದ ಯುವ ಎಡಗೈ ದಾಂಡಿಗ ಯಶಸ್ವಿ ಜೈಸ್ವಾಲ್ 4 ಸ್ಥಾನ ಜಿಗಿತ ಕಂಡಿದ್ದು, 6ನೇ ಸ್ಥಾನ ಅಲಂಕರಿಸಿದ್ದಾರೆ. ಇನ್ನು ಋತುರಾಜ್ ಗಾಯಕ್‌ವಾಡ್ ಅಗ್ರ ಹತ್ತರಲ್ಲಿ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿದ್ದು ಏಳನೇ ಸ್ಥಾನ ಪಡೆದಿದ್ದಾರೆ.

ಬೌಲಿಂಗ್ ವಿಭಾಗದಲ್ಲಿ ಬ್ಲ್ಯೂ ಬಾಯ್ಸ್‌ಗೆ ಶಾಕ್

ಇನ್ನು ಬೌಲಿಂಗ್ ವಿಭಾಗದಲ್ಲಿ ಅಗ್ರ ಹತ್ತರಲ್ಲಿ ಭಾರತದ ಯಾವುದೇ ಬೌಲರ್ ಸ್ಥಾನ ಪಡೆದಿಲ್ಲ. ಕಳೆದ ಬಾರಿ ಟಾಪ್ 10 ಸ್ಥಾನ ಪಡೆದಿದ್ದ ಅಕ್ಷರ್ ಪಟೇಲ್ ಹಾಗೂ ಕುಲ್‌ದೀಪ್ ಯಾದವ್ ಈ ಬಾರಿ ಮೊದಲ ಹತ್ತರಿಂದ ಹೊರಬಿದ್ದಿದ್ದಾರೆ.

ಪಾಂಡ್ಯ ಶ್ರೇಯಾಂಕ ಕುಸಿತ

ಟಿ20 ವಿಶ್ವಕಪ್‌ನಲ್ಲಿ ಭರ್ಜರಿ ಪ್ರದರ್ಶನ ನೀಡಿ ಆಲ್‌ರೌಂಡರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ್ದ ಹಾರ್ದಿಕ್ ಪಾಂಡ್ಯ ಅವರು, ಈ ಬಾರಿ ಸ್ಥಾನ ಕುಸಿತ ಕಂಡಿದ್ದಾರೆ. ಆ ಮೂಲಕ ಆರನೇ ಸ್ಥಾನ ಅಲಂಕರಿಸಿದ್ದಾರೆ. ಹಾರ್ದಿಕ್ ಹೊರತಾಗಿ ಭಾರತದ ಯಾವುದೇ ಆಲ್‌ರೌಂಡರ್ ಟಾಪ್10 ಪಟ್ಟಿಯಲ್ಲಿ ಕಾಣಿಸಿಕೊಂಡಿಲ್ಲ.

ಟಿ20ಯ ಟಾಪ್-10 ಬ್ಯಾಟರ್‌ಗಳು

ಶ್ರೇಯಾಂಕ	ಆಟಗಾರ	ದೇಶ	ರೇಟಿಂಗ್
1.	ಟ್ರಾವಿಸ್ ಹೆಡ್	ಆಸ್ಟ್ರೇಲಿಯಾ	844
2.	ಸೂರ್ಯಕುಮಾರ್ ಯಾದವ್	ಭಾರತ	797
3.	ಫಿಲ್ ಸಾಲ್ಟ್	ಇಂಗ್ಲೆಂಡ್	797
4.	ಬಾಬರ್ ಆಝಂ	ಪಾಕಿಸ್ತಾನ್	755
5.	ಮೊಹಮ್ಮದ್ ರಿಝ್ವಾನ್	ಪಾಕಿಸ್ತಾನ್	746
6.	ಯಶಸ್ವಿ ಜೈಸ್ವಾಲ್	ಭಾರತ	743
7.	ಜೋಸ್ ಬಟ್ಲರ್	ಇಂಗ್ಲೆಂಡ್	716
8.	ಋತುರಾಜ್ ಗಾಯಕ್‌ವಾಡ್	ಭಾರತ	684
9.	ಬ್ರಾಂಡನ್ ಕಿಂಗ್	ವೆಸ್ಟ್ ಇಂಡೀಸ್	656
10.	ಜಾನ್ಸನ್ ಚಾರ್ಲ್ಸ್	ವೆಸ್ಟ್ ಇಂಡೀಸ್	655

ಟಿ20ಯ ಟಾಪ್ 10 ಆಲ್‌ರೌಂಡರ್‌ಗಳು

ಶ್ರೇಯಾಂಕ	ಆಟಗಾರ	ದೇಶ	ಶ್ರೇಯಾಂಕ
1.	ವನಿಂದು ಹಸರಂಗ	ಶ್ರೀಲಂಕಾ	222
2.	ಮಾರ್ಕಸ್ ಸ್ಟೋಯಿನಿಸ್	ಆಸ್ಟ್ರೇಲಿಯಾ	211
3.	ಸಿಕಂದರ್ ರಜಾ	ಜಿಂಬಾಬ್ವೆ	208
4.	ಶಕೀಬ್ ಅಲ್ ಹಸನ್	ಬಾಂಗ್ಲಾದೇಶ್	206
5.	ಮೊಹಮ್ಮದ್ ನಬಿ	ಅಫ್ಘಾನಿಸ್ತಾನ್	205
6.	ಹಾರ್ದಿಕ್ ಪಾಂಡ್ಯ	ಭಾರತ	201
7.	ದೀಪೇಂದ್ರ ಸಿಂಗ್ ಅರೀ	ನೇಪಾಳ	199
8.	ಲಿಯಾಮ್ ಲಿವಿಂಗ್‌ಸ್ಟೋನ್	ಇಂಗ್ಲೆಂಡ್	187
9.	ಐಡೆನ್ ಮಾರ್ಕ್ರಂ	ದ.ಆಫ್ರಿಕಾ	186
10.	ಮೊಯೀನ್ ಅಲಿ	ಇಂಗ್ಲೆಂಡ್	174

ವಿಶ್ವದ ಅತಿದೊಡ್ಡ ಕ್ರೀಡಾಕೂಟ: ಸ್ಪರ್ಧಾಳುಗಳ ಪಟ್ಟಿ ಬಿಡುಗಡೆ ಮಾಡಿದ ಭಾರತೀಯ ಒಲಿಂಪಿಕ್ಸ್ ಸಂಸ್ಥೆ

ಪ್ಯಾರಿಸ್ ಒಲಿಂಪಿಕ್ಸ್‌ಗೆ 117 ಸ್ಪರ್ಧಿಗಳು ಸಜ್ಜು

ಬೆಂಗಳೂರು: ಜುಲೈ 26 ರಿಂದ ಆರಂಭಗೊಳ್ಳಲಿರುವ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಲಿರುವ ಭಾರತೀಯ ಕ್ರೀಡಾಪಟುಗಳ ಖಚಿತ ಸಂಖ್ಯೆಯನ್ನು ಭಾರತೀಯ ಒಲಿಂಪಿಕ್ ಸಂಸ್ಥೆ ಬಿಡುಗಡೆ ಮಾಡಿದ್ದು, 117 ಭಾರತೀಯ ಕ್ರೀಡಾಪಟುಗಳು ಭಾರತವನ್ನು ಪ್ರತಿನಿಧಿಸಲಿದ್ದಾರೆ.

ಅಲ್ಲದೆ ಅವರೊಂದಿಗೆ 140 ಸಹಾಯಕ ಸಿಬ್ಬಂದಿ ಪ್ರಯಾಣಿಸಲಿದ್ದಾರೆ ಎಂದು ತಿಳಿದು ಬಂದಿದ್ದು, ಈ ಪೈಕಿ 72 ಸಹಾಯಕ ಸಿಬ್ಬಂದಿಯನ್ನು ಸರಕಾರಿ ವೆಚ್ಚದಲ್ಲಿ ಫ್ರಾನ್ಸ್‌ಗೆ ಕಳುಹಿಸಲಾಗಿದೆ ಎನ್ನಲಾಗಿದೆ. ಈ ಬಗ್ಗೆ ಭಾರತೀಯ ಒಲಿಂಪಿಕ್ ಅಸೋಸಿಯೇಷನ್‌ನ ಅಧ್ಯಕ್ಷೆ ಪಿಟಿ ಉಷಾ ಅವರಿಗೆ ಕ್ರೀಡಾ ಸಚಿವಾಲಯವು ಪತ್ರ ಬರೆದಿದ್ದು, ಒಲಿಂಪಿಕ್ ಕ್ರೀಡಾಕೂಟದ ಸಂಘಟನಾ ಸಮಿತಿಯ ಮಾರ್ಗಸೂಚಿಗಳ ಪ್ರಕಾರ, 11 ಐಒಎ ಅಧಿಕಾರಿಗಳನ್ನು ಒಳಗೊಂಡಿರುವ ಕ್ರೀಡಾ ಗ್ರಾಮದಲ್ಲಿ ಕೇವಲ 67 ಸಹಾಯಕ ಸಿಬ್ಬಂದಿ ಮಾತ್ರ ಉಳಿಯಬಹುದು. ಅಧಿಕಾರಿಗಳ ಪೈಕಿ ವೈದ್ಯಕೀಯ ತಂಡದಲ್ಲಿ 5 ಮಂದಿ ಇರುತ್ತಾರೆ. ಆದ್ದರಿಂದ, ಭಾರತೀಯ ಕ್ರೀಡಾಪಟುಗಳ ಅಗತ್ಯಗಳನ್ನು ಪೂರೈಸಲು, ಕ್ರೀಡಾ ಸಚಿವಾಲಯವು 72 ಹೆಚ್ಚುವರಿ ತರಬೇತುದಾರರು ಮತ್ತು ಸಹಾಯಕ ಸಿಬ್ಬಂದಿಯನ್ನು ಸರಕಾರಿ ವೆಚ್ಚದಲ್ಲಿ ಅನುಮೋದಿಸಿದೆ. ಇವರ ವಾಸ್ತವ್ಯದ ವ್ಯವಸ್ಥೆಯನ್ನು ಗೇಮ್ಸ್ ವಿಲೇಜ್ ಹೊರಗಿನ ಹೋಟೆಲ್‌ಗಳಲ್ಲಿ ಮಾಡಲಾಗಿದೆ ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಕಳೆದ ಬಾರಿಗಿಂತ ಕಮ್ಮಿ ಆಟಗಾರರು

ಟೊಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತವನ್ನು 119 ಕ್ರೀಡಾಪಟುಗಳು ಸ್ಪರ್ಧಿಸಿದ್ದರು. ಆದರೆ ಈ ಬಾರಿ 117 ಆಟಗಾರರು ಭಾಗಿಯಾಗಲಿದ್ದು, ಕಳೆದ ಬಾರಿಗೆ ಹೋಲಿಸಿದರೆ ಇಬ್ಬರು ಆಟಗಾರರು ಅರ್ಹತೆ ಕಳೆದುಕೊಂಡಿದ್ದಾರೆ. ಅಲ್ಲದೆ, ರ‍್ಯಾಂಕಿಂಗ್ ಕೋಟಾದಿಂದ ಅರ್ಹತೆ ಪಡೆದಿದ್ದ ಅಭಾ ಕಥುವಾ ಅವರ ಹೆಸರು ಲಿಸ್ಟ್‌ನಲ್ಲಿ ಇಲ್ಲದಿರುವ ಕಾರಣ ಭಾರತವನ್ನು 117 ಆಟಗಾರರು ಪ್ರತಿನಿಧಿಸಲಿದ್ದಾರೆ.

ಅಭಾ ಕಥುವಾ ಹೆಸರು ಮಿಸ್

117 ಕ್ರೀಡಾಪಟುಗಳ ಪಟ್ಟಿಯಲ್ಲಿ ವಿಶ್ವ ರ‍್ಯಾಂಕಿಂಗ್ ಕೋಟಾ ಮೂಲಕ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದ ಶಾಟ್‌ಪುಟ್ ಆಟಗಾರ್ತಿ ಅಭಾ ಕಥುವಾ ಹೆಸರು ಸೇರ್ಪಡೆ ಗೊಂಡಿಲ್ಲ. ಅಲ್ಲದೆ ಪಟ್ಟಿಯಲ್ಲಿ ಕಥುವಾ ಅವರ ಹೆಸರನ್ನು ಏಕೆ ಸೇರಿಸಲಾಗಿಲ್ಲ ಎಂಬುದಕ್ಕೆ ಯಾವು ದೇ ವಿವರಣೆಯನ್ನು ನೀಡಲಾಗಿಲ್ಲ. ಒಲಿಂಪಿಕ್ಸ್‌ನಲ್ಲಿ ಭಾರತೀಯ ತಂಡವನ್ನು ಅಥ್ಲೆಟಿಕ್ಸ್ ತಂಡವು ಮುನ್ನಡೆಸಲಿದೆ. ಇದರಲ್ಲಿ 11 ಮಹಿಳೆಯರು ಮತ್ತು 18 ಪುರುಷರು ಸೇರಿದಂತೆ 29 ಅಥ್ಲೀಟ್‌ಗಳಿದ್ದಾರೆ.

ಒಟ್ಟು 117 ಕ್ರೀಡಾಪಟುಗಳು

ಕ್ರೀಡೆ	ಆಟಗಾರರ ಸಂಖ್ಯೆ
ಶೂಟಿಂಗ್	21
ಹಾಕಿ	19
ಟೇಬಲ್ ಟೆನಿಸ್	8
ಬ್ಯಾಡ್ಮಿಂಟನ್	7
ಕುಸ್ತಿ	6
ಆರ್ಚರಿ	6
ಬಾಕ್ಸಿಂಗ್	6
ಗಾಲ್ಫ್	4
ಟೆನಿಸ್	3
ಈಜು	2
ಸೇಲಿಂಗ್	2
ಜೂಡೋ	1
ರೋವಿಂಗ್	1
ವೇಟ್‌ಲಿಫ್ಟಿಂಗ್	1
ಈಕ್ವೆಸ್ಟ್ರಿಯನ್	1

ಏಷ್ಯಾಕಪ್‌ಗೆ ಶ್ರೀಲಂಕಾ ತಲುಪಿದ ವನಿತೆಯರು

ದೆಹಲಿ: ಜುಲೈ 19 ರಿಂದ ಆರಂಭವಾಗಲಿರುವ ಮಹಿಳಾ ಏಷ್ಯಾಕಪ್‌ನಲ್ಲಿ ಭಾಗವಹಿಸಲು 19 ಸದಸ್ಯರ ಭಾರತ ವನಿತಾ ಪಡೆ ಶ್ರೀಲಂಕಾಗೆ ತಲುಪಿದೆ. ಈ ಬಾರಿಯ ಏಷ್ಯಾಕಪ್ ಶ್ರೀಲಂಕಾದಲ್ಲಿ ನಡೆಯುತ್ತಿದ್ದು, ಟೂರ್ನಿಯಲ್ಲಿ ಜುಲೈ 19 ರಂದು ಟೀಂ ಇಂಡಿಯಾ ತನ್ನ ಅಭಿಯಾನವನ್ನು ಪ್ರಾರಂಭಿಸಲಿದೆ. ಮೊದಲ ಪಂದ್ಯದಲ್ಲೇ ಟೀಂ ಇಂಡಿಯಾ ಬದ್ಧವೈರಿ ಪಾಕಿಸ್ತಾನವನ್ನು ಎದುರಿಸಲಿದೆ. ದ.ಆಫ್ರಿಕಾ ವಿರುದ್ಧದ ಸರಣಿಯನ್ನು ಗೆದ್ದುಕೊಂಡು ಇದೀಗ ಏಷ್ಯಾಕಪ್‌ಗೆ ಶ್ರೀಲಂಕಾ ತಲುಪಿರುವ ಭಾರತ ತಂಡದ ಫೋಟೋಗಳನ್ನು ಶ್ರೀಲಂಕಾ ಕ್ರಿಕೆಟ್ ಮಂಡಳಿ ತನ್ನ ಸೋಶೀಯಲ್ ಮೀಡಿಯಾ ಖಾತೆಯಲ್ಲಿ ಹಂಚಿಕೊಂಡಿದೆ.

ಶ್ರೀಲಂಕಾ ಕ್ರಿಕೆಟ್ ಮಂಡಳಿಯು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡ ಚಿತ್ರಗಳಲ್ಲಿ ಭಾರತ ಮತ್ತು ಬಾಂಗ್ಲಾದೇಶದ ಆಟಗಾರರು ಕಾಣಿಸಿಕೊಂಡಿದ್ದಾರೆ. ಕ್ಯಾಪ್ಟನ್ ಹರ್ಮನ್‌ಪ್ರೀತ್ ಕೌರ್, ಶ್ರೇಯಾಂಕಾ ಪಾಟೀಲ್ ಮತ್ತು ಜೆಮಿಮಾ ರೋಡ್ರಿಗಸ್ ವಿಮಾನ ನಿಲ್ದಾಣದಿಂದ ಹೊರಹೋಗುತ್ತಿರುವ ಫೋಟೋಗಳನ್ನು ಕಾಣಬಹುದಾಗಿದೆ.

ಟೀಂ ಇಂಡಿಯಾದ ವೇಳಾಪಟ್ಟಿ
ಭಾರತ ಡಿಂ ಪಾಕಿಸ್ತಾನ (19 ಜುಲೈ)
ಭಾರತ ಡಿಂ ಯುಎಇ (21 ಜುಲೈ)
ಭಾರತ ಡಿಂ ನೇಪಾಳ (23 ಜುಲೈ)

ಟ್ರೇಲರ್‌ನಲ್ಲೇ ಮನಗೆದ್ದ ರೂಪಾಂತರ

ರಾಜ್ ಬಿ ಶೆಟ್ಟಿ ಪ್ರಮುಖಪಾತ್ರದಲ್ಲಿ ನಟಿಸಿರುವ ರೂಪಾಂತರ ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ. ಟ್ರೇಲರ್‌ನಲ್ಲೇ ಸಾಕಷ್ಟು ಕುತೂಹಲ ಮೂಡಿಸಿದೆ.

ಇಲ್ಲಿ ಹಸೊತನದ ಕಥೆ ಇದೆ. ರಾಜ್ ಬಿ ಶೆಟ್ಟಿ ಅವರನ್ನು ಹೊರತು ಪಡಿಸಿ ಮಿಕ್ಕೆಲ್ಲ ನಟರು ಬೇರೆ ಬೇರೆ ಪ್ರಾಂತ್ಯದವರು ಎಂದರು ನಿರ್ಮಾಪಕ ಸುಹಾನ್ ಪ್ರಸಾದ್.

ಐದು ಪ್ರಮುಖ ಪಾತ್ರಗಳ ಸುತ್ತ ಈ ಚಿತ್ರದ ಕಥೆ ಸಾಗುತ್ತದೆ. ಎಲ್ಲಾ ಪಾತ್ರಗಳಿಗೂ ಪ್ರಾಮುಖ್ಯತೆ ನೀಡಲಾಗಿದೆ. ಎಲ್ಲರ ಸಹಕಾರದಿಂದ ನಮ್ಮ ಚಿತ್ರದ

ಅಂದುಕೊಂಡಂತೆ ಮೂಡಿಬಂದಿದೆ ಎನ್ನುತ್ತಾರೆ ನಿರ್ದೇಶಕ ಮಿಥಿಲೇಶ್ ಎಡವಲತ್.

ಸೋಮಶೇಖರ್ ಬೋಲೇಗಾಂವ್, ಲೇಖಾ ನಾಯ್ಡು, ಹನುಮಕ್ಕ, ಭರತ್ , ಅಂಜನ್ ಭಾರಧ್ವಾಜ್ ಮತ್ತಿರರ ತಾರಾಗಣದಲ್ಲಿದ್ದಾರೆ. ಭುವನೇಶ್ ಮಣಿವಣ್ಣನ್ ಸಂಕಲನ , ಪ್ರವೀಣ್ ಶ್ರೀಯಾನ್ ಛಾಯಾಗ್ರಹಣ ಈ ಚಿತ್ರಕ್ಕಿದೆ.

ರೂಪಾಂತರ ನನಗೆ ಬಹಳ ಇಷ್ಟವಾದ ಸಿನಿಮಾ. ಏಕೆಂದರೆ ಈ ಚಿತ್ರದಲ್ಲಿ ನಾನು ನಟ ಮಾತ್ರ. ಸಂಭಾಷಣೆಯನ್ನು ಬರೆದಿದ್ದೇನೆ. ನನ್ನ ಬಿಟ್ಟು ಬೇರೆ ಮುಖ್ಯಪಾತ್ರಗಳು ಈ ಚಿತ್ರದಲ್ಲಿವೆ, ಅವರೆಲ್ಲಾ ರೂಪಾಂತರ ಗೊಳ್ಳುವುದೆ ಚಿತ್ರದ ಕಥೆ. ಒಂದು ಮೊಟ್ಟೆಯ ಕಥೆ ಚಿತ್ರ ಮಾಡಿದ ತಂಡದೊಂದಿಗೆ ಈ ಚಿತ್ರ ಮಾಡಿರುವುದು ಖುಷಿಯಾಗಿದೆ.
-ರಾಜ್ ಬಿ ಶೆಟ್ಟಿ ನಟ

ಗೌರಿಯ ಮುದ್ದಾದ ಗಾನ

ಇಂದ್ರಜಿತ್ ಲಂಕೇಶ್ ನಿರ್ದೇಶನದಲ್ಲಿ ಮೂಡಿಬಂದಿರುವ ಗೌರಿ ಚಿತ್ರ ವರಮಹಾಲಕ್ಷಿ ಹಬ್ಬದ ಸಮಯದಲ್ಲಿ ತೆರೆಗೆ ಬರಲಿದೆ. ಇಂದ್ರಜಿತ್ ಪುತ್ರ, ಸಮರ್ಜಿತ್ ಲಂಕೇಶ್ ನಾಯಕನಾಗಿ ನಟಿಸಿದ್ದು, ಈ ಚಿತ್ರದ ಮೂಲಕ ಚಂದನವನಕ್ಕೆ ಎಂಟ್ರಿಕೊಡುತ್ತಿದ್ದಾರೆ. ಸದ್ಯ ಗೌರಿ ಚಿತ್ರದ ಎರಡು ಹಾಡುಗಳು ಬಿಡುಗಡೆಯಾಗಿದ್ದು, ಕೇಳಲು ಬಲು ಮಧುರವಾಗಿವೆ. ಖ್ಯಾತ ಸಂಗೀತ ನಿರ್ದೇಶಕ ಹಂಸಲೇಖ, ಗೌರಿ ಚಿತ್ರದ ಹಾಡು ಬಿಡುಗಡೆ ಮಾಡಿ ಶುಭಕೋರಿದರು. ಕೆ.ಕಲ್ಯಾಣ್ ಹಾಗೂ ಕವಿರಾಜ್ ಹಾಡಿಗೆ ಸಾಹಿತ್ಯ ರಚಿಸಿದ್ದಾರೆ. ಈ ಹಾಡನ್ನು ಇಂದ್ರಜಿತ್ ಅವರ ಸಹೋದರಿ ಗೌರಿ ಲಂಕೇಶ್ ಅವರಿಗೆ ಅರ್ಪಿಸಲಾಗಿದೆ. ಆ್ಯಕ್ಷನ್, ಡ್ಯಾನ್ಸ್ ಮೂಲಕವೇ ಮನಗೆದ್ದಿರುವ ಸಮರ್ಜಿತ್ ಹೊಸ ಭರವಸೆಯನ್ನು ಮೂಡಿಸಿದ್ದಾರೆ.

ಗೌರಿ ಚಿತ್ರದಲ್ಲಿ ಏಳು ಹಾಡುಗಳಿದ್ದು, ಇದೊಂದು ಸಂಗೀತ ಪ್ರಧಾನ ಚಿತ್ರವಾಗಿದೆ. ಮುದ್ದಾದ ಹಾಡನ್ನು ಕವಿರಾಜ್ ಅವರು ಬರೆದಿದ್ದು, ನಿಹಾಲ್ ತವ್ರು ಹಾಡಿದ್ದಾರೆ. ಜೆಸ್ಸಿ ಗಿಫ್ಟ್ ಸಂಗೀತ ಸಂಯೋಜಿಸಿದ್ದಾರೆ. ಮತ್ತೊಂದು ಹಾಡನ್ನು ಕೆ.ಕಲ್ಯಾಣ್ ಬರೆದಿದ್ದಾರೆ ಎಂದು ನಿರ್ದೇಶಕ ಇಂದ್ರಜಿತ್ ಲಂಕೇಶ್ ತಿಳಿಸಿದರು. ನನ್ನ ಬಹು ದಿನಗಳ ಕನಸು ನನಸ್ಸಾಗುವ ಸಮಯ ಸಮೀಪಿಸಿದೆ ಎಂದು ನಟ ಸಮರ್ಜಿತ್ ಲಂಕೇಶ್ ಸಂತಸ ಹಂಚಿಕೊಂಡರು.

ಸಾನ್ಯಾ ಅಯ್ಯರ್ ನಾಯಕಿ ಯಾಗಿ ಬಣ್ಣಹಚ್ಚಿದ್ದಾರೆ. ಸೆನ್ಸಾರ್ ಪಾಸ್ ಆಗಿರುವ ಗೌರಿ ಚಿತ್ರಕ್ಕೆ ಯು ಪ್ರಮಾ ಣ ಪತ್ರ ಸಿಕ್ಕಿದೆ.



ಬಿಗ್‌ಬಾಸ್ ಸೀಸನ್ 11 ಶೀಘ್ರ ಆರಂಭ

ಕನ್ನಡ ಕಿರುತೆರೆಯ ಪ್ರಸಿದ್ಧ ರಿಯಾಲಿಟಿ ಶೋ ಬಿಗ್‌ಬಾಸ್ ಹತ್ತು ಸಿಸನ್‌ಗಳನ್ನು ಯಶಸ್ವಿಯಾಗಿ ಪೂರೈಸಿದ್ದು, ಈಗ ಸೀಸನ್ 11ರ ಪ್ರಾರಂಭಕ್ಕೆ ದಿನಗಣನೆ ಆರಂಭವಾಗಿದೆ. ಸೆಪ್ಟೆಂಬರ್‌ನಲ್ಲಿ ಬಿಗ್‌ಬಾಸ್ ಹೊಸ ಸೀಸನ್ ಆರಂಭಗೊಳ್ಳಲಿದ್ದು, ಈ ಬಾರಿ ಇನ್ನೂ ಒಂದಷ್ಟು ಹೊಸತನದಿಂದ ಕೂಡಿರಲಿದೆ. ಬಿಗ್‌ಬಾಸ್ ಮಹಾಮನೆಯೂ ವಿನೋತನವಾಗಿರಲಿದೆ. ಸಿನಿಮಾ, ಕಿರುತೆರೆಯ ಕಲಾವಿದರ ಜತೆಗೆ ವಿವಾದದಿಂದ ಸುದ್ದಿಯಾದ ವ್ಯಕ್ತಿಗಳು, ರಾಜಕೀಯ ಕ್ಷೇತ್ರದಲ್ಲಿ ಗುರುತಿಸಿಕೊಂಡವರೂ ಕೂಡ ಸೀಸನ್ 11ರಲ್ಲಿ ಸ್ಪರ್ಧಿಗಳಾಗಿ ಮಹಾಮನೆಗೆ ಪ್ರವೇಶಿಸಲಿದ್ದಾರೆ. ಎಂದಿನಂತೆಯೂ ಈ ಬಾರಿಯೂ ಕೂಡ ಕಿಚ್ಚ ಸುದೀಪ್ ಅವರೇ ಬಿಗ್‌ಬಾಸ್ ನಡೆಸಿಕೊಡಲಿದ್ದಾರೆ. ಕಳೆದ ಬಾರಿಯಂತೆ ಒಟಿಟಿಯಲ್ಲಿ ಬಿಗ್‌ಬಾಸ್ ನೇರ ಪ್ರಸಾರವೂ ಇರಲಿದೆ. ಟಾಸ್ಕ್‌ಗಳು, ವಾರದ ಕಥೆ ಕಿಚ್ಚನ ಜತೆಯೂ ಇರಲಿದೆ.

ಬ್ಯಾಕ್ ಬೆಂಚರ್ಸ್ ತರ್ಲೆ ತುಂಟಾಟ

ವಿಭಿನ್ನ ಕಂಟೆಂಟಿನಲ್ಲಿಯೇ ಮನಗೆದ್ದಿರುವ ಬ್ಯಾಕ್ ಬೆಂಚರ್ಸ್ ಈ ವಾರ ಚಿತ್ರಮಂದಿರದಲ್ಲಿ ಪ್ರತ್ಯಕ್ಷವಾಗಲಿದ್ದಾರೆ. ಕಾಲೇಜು ಕೇಂದ್ರಿತ ಕಥೆ ಮತ್ತು ಬೇರೆ ಹೊಸತನದ ನಿರೂಪಣೆ ಚಿತ್ರದಲ್ಲಿದೆ. ಬ್ಯಾಕ್ ಬೆಂಚರ್ಸ್‌ನ ತರಲೆ ತುಂಟಾಟಗಳೇ ಚಿತ್ರದ ಹೈಲೈಟ್ಸ್, ಇದು ಕಾಲೇಜು ಕಥೆಯಾಗಿರುವುದುರಿಂದ ಎಲ್ಲರಿಗೂ ಕನೆಕ್ಟ್ ಆಗಲಿದೆ. ಹಲವು ಸಿನಿಮಾಗಳನ್ನು ನಿರ್ಮಿಸಿ ಯಶಸ್ಸು ಪಡೆದಿರುವ ಪಿ.ರಾಜಶೇಖರ್ ಈ ಚಿತ್ರವನ್ನು ನಿರ್ದೇಶಿಸುವ ಜತೆಗೆ ಪಿಪಿ ಪ್ರೊಡಕ್ಷನ್ಸ್ ಲಾಂಛನದಲ್ಲಿ ನಿರ್ಮಾಣ ಮಾಡಿದ್ದಾರೆ.

ರಂಜನ್, ಜತಿನ್ ಆರ್ಯನ್, ಆಕಾಶ್ ಎಂ.ಪಿ, ಶಶಾಂಕ್ ಸಿಂಹ, ಸುಚೇಂದ್ರ ಪ್ರಸಾದ್, ಅರವಿಂದ್ ಕುಪ್ಳೀಕರ್, ಮಾನ್ಯಾ ಗೌಡ, ಅನುಷಾ ಸುರೇಶ್, ವಿಯೋಮಿ ವನಿತಾ, ಮನೋಜ್ ಶೆಟ್ಟಿ, ನಮಿತಾ ಗೌಡ, ವಿಕಾಸ್, ರನ್ನ, ವಿಜಯ್ ಪ್ರಸಾದ್, ಚತುರ್ಥಿ ರಾಜ್, ಗೌರವ್ ಮುಂತಾದವರು ತಾರಾಗಣದಲ್ಲಿದ್ದಾರೆ. ನಕುಲ್ ಅಭಯಂಕರ್ ಸಂಗೀತ ನಿರ್ದೇಶನ, ಮನೋಹರ್ ಜೋಶಿ ಛಾಯಾಗ್ರಹಣ, ರಂಜನ್ ಮತ್ತು ಅಮರ್ ಗೌಡ ಸಂಕಲನ ಈ ಚಿತ್ರಕ್ಕಿದೆ.

ಇದರಲ್ಲಿ ಹದಿಹರೆಯದವರ ತವಕ ಮತ್ತು ತಾಕಲಾಟಗಳನ್ನು ಕಟ್ಟಿಕೊಡಲಾಗಿದೆ. ಇವತ್ತಿನ ವಿದ್ಯಾರ್ಥಿಗಳು, ಪೋಷಕರು, ಶಿಕ್ಷಣ ವ್ಯವಸ್ಥೆ ಇದೆಲ್ಲದರ ಕುರಿತಾದ ಒಂದು ಕಥೆ ಇದು. ಈ ಚಿತ್ರದಲ್ಲಿ ನಟಿಸಿರುವ ಬಹುತೇಕ ಕಲವಿದರು ಈ ಸಿನಿಮಾಗಾಗಿ ಮೂರು ವರ್ಷ ಮೀಸಲಿಟ್ಟಿದ್ದಾರೆ ಎಂದು ಹಿರಿಯ ನಟ ಸುಚೇಂದ್ರ ಪ್ರಸಾದ್ ಹೇಳಿದರು.

ನನ್ನ ವೃತ್ತಿ ಜೀವನದ ಹಾದಿಯಲ್ಲಿ ಸಾಕಷ್ಟು ಸೋಲು, ಗೆಲುವುಗಳನ್ನು ಕಂಡಿದ್ದೇನೆ. ನನಗೆ ಸೋಲು ಹೊಸತಲ್ಲ. ಆದರೆ ಈ ಚಿತ್ರ ಈ ಹುಡುಗರಿಗಾಗಿ ಗೆಲ್ಲಬೇಕು. ಯಾಕೆಂದರೆ, ಈ ಹುಡುಗರು ಕಳೆದ ಮೂರು ವರ್ಷಗಳನ್ನು ಈ ಚಿತ್ರಕ್ಕಾಗಿ ಮೀಸಲಿಟ್ಟಿದ್ದಾರೆ. ಬರೀ ನಟನೆ ಅಷ್ಟೇ ಅಲ್ಲ, ಸಿನಿಮಾದ ವಿವಿಧ ವಿಭಾಗಗಳಲ್ಲಿಯೂ ಕಾರ್ಯನಿರ್ವಹಿಸಿದ್ದಾರೆ.
-ರಾಜಶೇಖರ್ ನಿರ್ದೇಶಕ, ನಿರ್ಮಾಪಕ

ಸೆಪ್ಟೆಂಬರ್‌ನಲ್ಲಿ ಭೈರತಿ ರಣಗಲ್ ಯುಐ ತೆರೆಗೆ

ಜೂನ್, ಜುಲೈನಲ್ಲಿ ಕನ್ನಡ ಚಿತ್ರರಂಗದಲ್ಲಿ ಹೇಳಿಕೊಳ್ಳುವಂತಹ ಸಿನಿಮಾಗಳು ತೆರೆಗೆ ಬರಲಿಲ್ಲ. ಒಂದಷ್ಟು ಹೊಸಬರ ಸಿನಿಮಾಗಳು ತೆರೆಗೆ ಬಂದರೂ ಹೇಳಿಕೊಳ್ಳುವಂತಹ ಸದ್ದು ಮಾಡಲಿಲ್ಲ. ಕೆಲವು ಸಿನಿಮಾಗಳು ಹೀಗೆ ಬಂದು ಮರೆಯಾದವು. ಆಗಸ್ಟ್‌ನಲ್ಲಿ ಸಾಲು ಸಾಲು ಸಿನಿಮಾಗಳು ತೆರೆಗೆ ಬರಲು ಸಿದ್ಧವಾಗಿವೆ. ಅದರಲ್ಲಿಯೂ ಭೀಮ, ಗೌರಿ, ಕೃಷ್ಣಂ ಪ್ರಣಯ ಸಖಿ ನಿರೀಕ್ಷೆ ಹೆಚ್ಚಿಸಿವೆ. ಇನ್ನು ಸೆಪ್ಟೆಂಬರ್‌ನಲ್ಲಿ ಹೈವೋಲ್ಟೇಜ್ ಸಿನಿಮಾಗಳು ರಿಲೀಸ್ ಆಗಲಿವೆ. ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಅಭಿನಯದ ಭೈರತಿ ರಣಗಲ್ ಸೆಪ್ಟೆಂಬರ್ 9 ರಂದು ಬಿಡುಗಡೆಯಾಗುವ ಸಾಧ್ಯತೆ ಇದೆ. ಪೋಸ್ಟರ್ ಮೂಲಕವೇ ಕುತೂಹಲ ಕೆರಳಿಸಿದ್ದ ಭೈರತಿ ರಣಗಲ್, ಟೀಸರ್ ಮೂಲಖ ಸಖತ್ ಸದ್ದು ಮಾಡುತ್ತಿದೆ. ಟೀಸರ್‌ನಲ್ಲಿ ಸೆಪ್ಟೆಂಬರ್‌ನಲ್ಲಿಯೇ ಚಿತ್ರ ರಿಲೀಸ್ ಎಂದು ಚಿತ್ರತಂಡ ಘೋಷಿಸಿತ್ತು. ಅಂತೆಯೇ ಶಿವಣ್ಣ, ಭೈರತಿ ರಣಗಲ್ ಅವತಾರದಲ್ಲಿ ತೆರೆಗೆ ಭರ್ಜರಿಯಾಗಿ



ಎಂಟ್ರಿಕೊಡಲಿದ್ದಾರೆ. ಈ ಹಿಂದೆ ತೆರೆಗೆ ಬಂದು ಯಶಸ್ಸು ಕಂಡು ಮಫ್ತಿ ಚಿತ್ರದ ಸೀಕ್ವೆಲ್ ಆಧರಿಸಿ ಈ ಚಿತ್ರ ಸಿದ್ದವಾಗಿದೆ. ನಿರ್ದೇಶಕ ನರ್ತನ್ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ.

ಉಪ್ಪಿ ಬರ್ತ್‌ಡೇಗೆ ಯುಐ

ಇನ್ನು ಉಪೇಂದ್ರ ನಟಿಸಿ, ನಿರ್ದೇಶಿಸಿರುವ ಯುಐ ಸೆಟ್ಟೇರಿದಾಗಿನಿಂದಲೂ ಸಖತ್ ಸದ್ದು ಮಾಡುತ್ತಿದೆ. ಯುಐ ಎಂಬ ವಿಭಿನ್ನ ಶೀರ್ಷಿಕೆಯಲ್ಲಿಯೇ ಉಪ್ಪಿ ಸಿನಿಪ್ರಿಯರ ತಲೆಗೆ ಹುಳ ಬಿಟ್ಟಿದ್ದರು. ಟೀಸರ್, ಹಾಡಿನ ಮೂಲಕ ಮತ್ತಷ್ಟು ಕುತೂಹಕಲ ಕೆರಳಿಸಿದ್ದರು. ಟೀಸರ್ ಅಂತು ಪ್ರೇಕ್ಷಕರನ್ನು ಹೊಸ ಲೋಕಕ್ಕೆ ಕೊಂಡೊಯ್ದಿತ್ತು. ಸಿನಿಮಾ ನೋಡಲೇಬೇಕು ಎಂದು ಸಿನಿಪ್ರಿಯರು ಕಾದು ಕುಳಿತ್ತಿದ್ದರು. ಆದರೆ ಯುಐ ಯಾವಾಗ ತೆರೆಗೆ ಬರಲಿದೆ ಎಂದು ಚಿತ್ರತಂಡ ರಿವಿಲ್ ಮಾಡಿರಲಿಲ್ಲ. ಅಂತು ಈಗ ಯುಐ ಬಿಡುಗಡೆಗೆ ದಿನಾಂಕ ನಿಗಧಿಯಾಗಿದೆ. ಯುಐ. ಸೆಪ್ಟೆಂಬರ್ 18 ರಂದು ಉಪ್ಪಿ ಹುಟ್ಟು ಹಬ್ಬದಂದೇ ರಿಲೀಸ್ ಆಗುವುದು ಬಹುತೇಕ ಖಚಿತವಾಗಿದೆ. ಉಪೇಂದ್ರ ಈ ಚಿತ್ರದಲ್ಲಿ ನಾಯಕನಾಗಿ ನಟಿಸುವ ಜತೆಗೆ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಇದು ಚಿತ್ರದ ಬಗ್ಗೆ ನಿರೀಕ್ಷೆ ಹೆಚ್ಚಲು ಪ್ರಮುಖ ಕಾರಣವಾಗಿದೆ. ಬಹುದಿನಗಳ ಬಳಿಕ ನಿರ್ದೇಶನಕ್ಕೆ ಮರಳಿರುವ ಉಪ್ಪಿ, ಹೊಸತನದ ಸಿನಿಮಾವನ್ನು ಕಟ್ಟಿಕೊಡಲಿದ್ದಾರೆ ಎಂಬ ನಿರೀಕ್ಷೆ ಹೆಚ್ಚಾಗಿದೆ. ರೀಷ್ಮಾ ನಾಣಯ್ಯ, ನಿಧಿ, ಅಚ್ಯುತ್ ಕುಮಾರ್, ಸಾಧುಕೋಕಿಲ ಚಿತ್ರದ ತಾರಾಬಳ ಗದಲ್ಲಿದ್ದಾರೆ.